

ಬಿ. ಎಂ. ಶ್ರೀ.: ಬದುಕು ಬರೆಹ

ವಿ. ಎಂ. ಇನಾಂದಾರ್

"ನಮ್ಮ ದಿನದಲ್ಲಿ ನಮ್ಮ ಜನಾಂಗ ಎರಡು ಶಕ್ತಿಗಳ ಹೋರಾಟಕ್ಕೊಳಗಾಗಿದೆ. ಒಂದು, ಪಶ್ಚಿಮದಿಂದ ಬಂದ ಇಂಗ್ಲಿಷ್ ವಿದ್ಯೆಯ ಸೆಳೆತ; ಇನ್ನೊಂದು, ನಮ್ಮ ಹಿರಿಯರ ಪುಣ್ಯಾರ್ಜನೆಯಾದ ಭಾರತ ವಿದ್ಯೆಯ ಹೆಮ್ಮೆ. ಈ ಹೋರಾಟದಲ್ಲಿ ಹೊರಗಿನದನ್ನು ಹೊರಕ್ಕೆ ತಳ್ಳಿ, ನಮ್ಮದನ್ನೇ ನಾವು ಮುಂದಕ್ಕೆ ಬೆಳಸಿಕೊಳ್ಳಬೇಕೆಂಬವರು ಇದ್ದಾರೆ; ಹೆಚ್ಚುತ್ತಿದ್ದಾರೆ. ಚಿಕ್ಕಂದಿನಿಂದಲೂ ನನಗೆ ಬೇರೊಂದು ನೋಟ, ದರ್ಶನ, ಧ್ಯೇಯ. ಅದೇನೆಂದರೆ ಎರಡನ್ನೂ ಕೂಡಿಸಿಕೊಳ್ಳುವುದು; ಎರಡು ವಿದ್ಯೆಗಳೂ, ಸಂಸ್ಕಾರಗಳೂ, ಶಕ್ತಿಗಳೂ ಒಂದಾಗಿ ಸಾಮರಸ್ಯಕ್ಕೆ ಬರಬೇಕೆನ್ನುವುದು. ಇಂಗ್ಲಿಷ್ ವಿದ್ಯೆ, ಸಾಹಿತ್ಯ ನನ್ನ ಜೀವಕ್ಕೆ ರಸವನ್ನು ತುಂಬಿದೆ; ಕಡೆಗೆ ಭಾರತದಲ್ಲಿ, ಕರ್ನಾಟಕದಲ್ಲಿ ಪೂಜ್ಯ ಬುದ್ಧಿಗೆ ಅದೇ ಕಣ್ಣು ತೆರೆದುಕೊಟ್ಟದ್ದಾಗಿದೆ. ಕಿಟಕಿಗಳಿಲ್ಲದೆ ಉಸಿರು ಕಟ್ಟಿ ಕೆಟ್ಟದ್ದಾಯಿತು; ಕಿಟಕಿಗಳನ್ನು ವಿಶ್ವದ ಎಲ್ಲಾ ದಿಕ್ಕುಗಳಲ್ಲಿಯೂ ತೆರೆದು ಹೊಸ ಗಾಳಿ, ಹೊಸ ಬೆಳಕು ತುಂಬಿ ಹೊಸ ಉಸಿರು ಹೊಮ್ಮಲಿ. ಪೂರ್ವ ಪಶ್ಚಿಮ ಎರಡು ಬೇರುಗಳೂ ಹೆಣೆದುಕೊಂಡು ಒಂದು ತಾಯಿ ಬೇರಾಗಿ ಭಾರತ ಮಹಾವೃಕ್ಷ ಆಕಾಶಕ್ಕೆ ಚಿಮ್ಮಲಿ."

—ಬಿ. ಎಂ. ಶ್ರೀ.

ಪಡಿಯಚ್ಚು : ಸೌಜನ್ಯ : ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ

ಅರಿಕೆ

ಕರ್ನಾಟಕ ರಾಜ್ಯ ಸಾಹಿತ್ಯ ಅಕಾದಮಿಯ ಅಧ್ಯಕ್ಷರೂ ಪ್ರಿಯ ಸ್ನೇಹಿತರೂ ಆದ ಡಾ. ಹಾ. ಮಾ. ನಾಯಕರು ಶ್ರೀಕಂಠಯ್ಯನವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಅಕಾದಮಿಗಾಗಿ ಅವರನ್ನು ಕುರಿತಂತೆ ಚಿಕ್ಕ ಹೊತ್ತಗೆಯೊಂದನ್ನು ಬರೆದು ಕೊಡುವಂತೆ ಸೂಚಿಸಿದರು. ಅದನ್ನು ಒಪ್ಪಿ ಕೆಲಸಕ್ಕೆ ತೊಡಗಿದಾಗ ವಿಷಯಕ್ಕೆ ತಕ್ಕಂತೆ ಬರವಣಿಗೆ ವಿಸ್ತರಿಸಿ ಈ ಪುಸ್ತಕದ ಗಾತ್ರದ್ದಾಯಿತು. ಅಕಾದಮಿಯು ಯೋಜಿಸಿಕೊಂಡ ಪರಿಮಿತಿಗೆ ಇದು ಹೊಂದಲಾರದ್ದಾದ್ದರಿಂದ ಈ ಬರಹವನ್ನು ಬೇರೆಯಾಗಿ ಪ್ರಕಟಿಸಬೇಕಾಯಿತು. ಸೂಚಿಸಿದ ಪರಿಮಿತಿಯಲ್ಲಿ ಅವರಿಗಾಗಿ ಬೇರೆಯಾಗಿ ಸಂಗ್ರಹಿಸಿಕೊಡಬೇಕಾಯಿತು. ಆ ಚಿಕ್ಕ ಪುಸ್ತಕವನ್ನು ಅಕಾದಮಿಯವರು ಪ್ರಕಟಿಸುತ್ತಿದ್ದಾರೆ. ನನ್ನ ಬರವಣಿಗೆಯ ವಿಷಯದಲ್ಲಿ ನಿಡುಗಾಲದ ಆಸಕ್ತಿಯನ್ನು ಬೆಳೆಸಿಕೊಂಡಿದ್ದ ಶ್ರೀ ಹಬ್ಬು ರಾಘವೇಂದ್ರರಾಯರು ಹಾಗೂ ಅವರ ಚಿರಂಜೀವಿ ರಮೇಶ ಅವರು ನನ್ನನ್ನು ಕುರಿತ ಸ್ನೇಹದಿಂದಲೂ ಬಿ. ಎಂ. ಶ್ರೀ. ಅವರನ್ನು ಕುರಿತ ಗೌರವ ಭಾವನೆಯಿಂದಲೂ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ ಪ್ರಕಟಿಸುತ್ತಿದ್ದಾರೆ. ಇದನ್ನು ನನ್ನಿಂದ ಬರೆಯಿಸಿದ ಡಾ. ನಾಯಕರಿಗೂ, ಪ್ರಕಟಿಸಿದ ಉಷಾ ಸಾಹಿತ್ಯ ಮಾಲೆಗೂ ಜನ್ಮ ಶತಾಬ್ದಿಯ ಸಂದರ್ಭದಲ್ಲಿ ಶ್ರೀಯವರಿಗೆ ನನ್ನ ಗೌರವದ ಕಾಣಿಕೆಯನ್ನು ಸಲ್ಲಿಸುವ ಅವಕಾಶವನ್ನು ಒದಗಿಸಿ ಕೊಟ್ಟದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಪುಸ್ತಕದ ಮೇಲು ಹೊದಿಕೆಗಾಗಿ ಶ್ರೀಯವರ ಭಾವಚಿತ್ರದ ಪಡಿಯಚ್ಚನ್ನು ದಯಪಾಲಿಸಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಅಧಿಕಾರಿಗಳು ಉಪಕಾರ ಮಾಡಿದ್ದಾರೆ. ಅವರಿಗೆ ವಂದನೆಗಳು. ಇಲ್ಲಿಯ ಬರವಣಿಗೆ ಶ್ರೀಕಂಠಯ್ಯನವರ ಬದುಕು ಬರೆಹಗಳ ಪರಿಚಯವನ್ನು ತಕ್ಕ ಮಟ್ಟಿಗೆ ಮಾಡಿ ಕೊಡುತ್ತದೆ ಎಂದು ನಂಬಿದ್ದೇನೆ. ಅವರನ್ನು ಕುರಿತು ಈ ಮೊದಲು ಬರೆದ ಮಹನೀಯರೆಲ್ಲರ ಕೃತಿಗಳಿಗೆ ನಾನು ಋಣಿಯಾಗಿದ್ದೇನೆನ್ನುವುದನ್ನು ಬೇರೆಯಾಗಿ ಹೇಳಬೇಕಿಲ್ಲ.

೧೦-೧೨-೧೯೮೩

"ಕಲ್ಪ" ೪೦೬/ಬಿ, ಮೂರನೆಯ ಮೇನ್ **ವಿ. ಎಂ. ಇನಾಂದಾರ್**

ಸರಸ್ವತಿಪುರಂ, ಮೈಸೂರು-೫೭೦ ೦೦೯

B. M. Srikantaiah: Baduku Bareha, By Prof. V. M. Inamdar, Published by Usha Sahitya Male, Chandragupta Road, Mysore-1, First Edition 1983. Pp. iv+115, Price : Rs. 13-00.

ಬೆಲೆ: ರೂ. 13-00

ಮುದ್ರಕರು :
ಉಷಾ ಪ್ರೆಸ್, ಚಂದ್ರಗುಪ್ತ ರಸ್ತೆ, ಮೈಸೂರು-೫೭೦ ೦೦೧

ಅರಿಕೆ

ಕರ್ನಾಟಕ ರಾಜ್ಯ ಸಾಹಿತ್ಯ ಅಕಾದಮಿಯ ಅಧ್ಯಕ್ಷರೂ ಪ್ರಿಯ ಸ್ನೇಹಿತರೂ ಆದ ಡಾ. ಹಾ. ಮಾ. ನಾಯಕರು ಶ್ರೀಕಂಠಯ್ಯನವರ ಜನ್ಮ ಶತಮಾನೋತ್ಸವದ ಸಂದರ್ಭ ದಲ್ಲಿ ಅಕಾದಮಿಗಾಗಿ ಅವರನ್ನು ಕುರಿತಂತೆ ಚಿಕ್ಕ ಹೊತ್ತಗೆಯೊಂದನ್ನು ಬರೆದು ಕೊಡು ವಂತೆ ಸೂಚಿಸಿದರು. ಅದನ್ನು ಒಪ್ಪಿ ಕೆಲಸಕ್ಕೆ ತೊಡಗಿದಾಗ ವಿಷಯಕ್ಕೆ ತಕ್ಕಂತೆ ಬರ ವಣಿಗೆ ವಿಸ್ತರಿಸಿ ಈ ಪುಸ್ತಕದ ಗಾತ್ರದ್ದಾಯಿತು. ಅಕಾದಮಿಯು ಯೋಜಿಸಿಕೊಂಡ ಪರಿಮಿತಿಗೆ ಇದು ಹೊಂದಲಾರದ್ದಾದ್ದರಿಂದ ಈ ಬರಹವನ್ನು ಬೇರೆಯಾಗಿ ಪ್ರಕಟಿಸ ಬೇಕಾಯಿತು. ಸೂಚಿಸಿದ ಪರಿಮಿತಿಯಲ್ಲಿ ಅವರಿಗಾಗಿ ಬೇರೆಯಾಗಿ ಸಂಗ್ರಹಿಸಿಕೊಡ ಬೇಕಾಯಿತು. ಆ ಚಿಕ್ಕ ಪುಸ್ತಕವನ್ನು ಅಕಾದಮಿಯವರು ಪ್ರಕಟಿಸುತ್ತಿದ್ದಾರೆ. ನನ್ನ ಬರವಣಿಗೆಯ ವಿಷಯದಲ್ಲಿ ನಿಡುಗಾಲದ ಆಸಕ್ತಿಯನ್ನು ಬೆಳೆಸಿಕೊಂಡಿದ್ದ ಶ್ರೀ ಹಬ್ಬು ರಾಘವೇಂದ್ರರಾಯರು ಹಾಗೂ ಅವರ ಚಿರಂಜೀವಿ ರಮೇಶ ಅವರು ನನ್ನನ್ನು ಕುರಿತ ಸ್ನೇಹದಿಂದಲೂ ಬಿ. ಎಂ. ಶ್ರೀ. ಅವರನ್ನು ಕುರಿತ ಗೌರವ ಭಾವನೆಯಿಂದಲೂ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ ಪ್ರಕಟಿಸುತ್ತಿದ್ದಾರೆ. ಇದನ್ನು ನನ್ನಿಂದ ಬರೆಯಿಸಿದ ಡಾ. ನಾಯಕರಿಗೂ, ಪ್ರಕಟಿಸಿದ ಉಷಾ ಸಾಹಿತ್ಯ ಮಾಲೆಗೂ ಜನ್ಮ ಶತಾಬ್ದಿಯ ಸಂದರ್ಭದಲ್ಲಿ ಶ್ರೀಯವರಿಗೆ ನನ್ನ ಗೌರವದ ಕಾಣಿಕೆಯನ್ನು ಸಲ್ಲಿಸುವ ಅವಕಾಶವನ್ನು ಒದಗಿಸಿ ಕೊಟ್ಟದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಪುಸ್ತಕದ ಮೇಲು ಹೊದಿಕೆಗಾಗಿ ಶ್ರೀಯವರ ಭಾವಚಿತ್ರದ ಪಡಿಯಚ್ಚನ್ನು ದಯಪಾಲಿಸಿ ಮೈಸೂರು ವಿಶ್ವವಿದ್ಯಾ ನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಅಧಿಕಾರಿಗಳು ಉಪಕಾರ ಮಾಡಿದ್ದಾರೆ. ಅವರಿಗೆ ವಂದನೆಗಳು. ಇಲ್ಲಿಯ ಬರವಣಿಗೆ ಶ್ರೀಕಂಠಯ್ಯನವರ ಬದುಕು ಬರೆಹಗಳ ಪರಿಚಯವನ್ನು ತಕ್ಕ ಮಟ್ಟಿಗೆ ಮಾಡಿ ಕೊಡುತ್ತದೆ ಎಂದು ನಂಬಿದ್ದೇನೆ. ಅವರನ್ನು ಕುರಿತು ಈ ಮೊದಲು ಬರೆದ ಮಹನೀಯರೆಲ್ಲರ ಕೃತಿಗಳಿಗೆ ನಾನು ಋಣಿಯಾಗಿದ್ದೇ ನೆನ್ನುವುದನ್ನು ಬೇರೆಯಾಗಿ ಹೇಳಬೇಕಿಲ್ಲ.

೧೦–೧೨–೧೯೮೩

"ಕಲ್ಪ" ೪೦೬/ಬಿ, ಮೂರನೆಯ ಮೇನ್
ಸರಸ್ವತಿಪುರಂ, ಮೈಸೂರು-೫೭೦ ೦೦೯

ವಿ. ಎಂ. ಇನಾಂದಾರ್

ಬಿ. ಎಂ. ಶ್ರೀ. : ಬದುಕು, ಬರೆಹ

೧

ಯಾವ ಸಾಹಿತ್ಯದ ಚರಿತ್ರೆಯಲ್ಲಿಯೂ ಬದಲಾವಣೆ ಇದ್ದಕ್ಕಿದ್ದಹಾಗೆ ಸಿದ್ಧಿಸುವುದಿಲ್ಲ. ಅದಕ್ಕಾಗಿ ಹಿಂದಿನಿಂದ ಸಿದ್ಧತೆ ನಡೆದಿರುತ್ತದೆ. ಬದಲಾವಣೆ ನಿಧಾನವಾಗಿ ರೂಪುಗೊಳ್ಳುತ್ತಿರುತ್ತದೆ. ಜನಜೀವನದಲ್ಲಿಯ ನೂರಾರು ಪ್ರಭಾವಗಳ ಪರಿಣಾಮವಾಗಿ ಸ್ಥಿರವಾಗಿ ನೆಲೆನಿಂತ ಸಂಪ್ರದಾಯ ತಾನಾಗಿಯೇ ಬಣ್ಣಗೆಡುತ್ತ ಸಮಕಾಲೀನ ಅಗತ್ಯಗಳಿಗೆ ಅದು ಸಾಲದು ಎಂಬ ಭಾವನೆಗೆ ಅವಕಾಶವುಂಟಾಗಿರುತ್ತದೆ. ಅಂಥ ಭಾವನೆಯ ಮೂಲಕವೇ ಹಲಕೆಲವರ ಮುನ್ನೋಟ ಹೊಸದರತ್ತ ಹಾತೊರೆಯುತ್ತಿರುತ್ತದೆ. ಬೆಳೆದು ನಿಂತ ಪರಂಪರೆ ತನ್ನ ಶಕ್ತಿಯನ್ನು ಕಳೆದುಕೊಂಡು ಹೊಸ ಪರಂಪರೆಯೊಂದು ಏರ್ಪಡುವುದಕ್ಕೆ ಅನಿವಾರ್ಯವಾಗಿ ದಾರಿ ಮಾಡಿ ಕೊಡುತ್ತಿರುತ್ತದೆ. ಈ ಕ್ರಮ ತುಂಬ ನಿಧಾನವಾಗಿ ನಡೆಯುವಂಥದಾದ್ದರಿಂದ ಅದು ನಡೆಯುವ ಕಾಲಾವಧಿ ಸಾಹಿತ್ಯದ ಚರಿತ್ರೆಯಲ್ಲಿ ಒಂದು ಸಂಧಿಕಾಲವಾಗುತ್ತದೆ. ಇಂಥ ಸಂಧಿಕಾಲದ ಮುಖ್ಯ ಲಕ್ಷಣವೆಂದರೆ ತನ್ನ ಶಕ್ತಿಯನ್ನು ಪೂರ್ತಿಯಾಗಿ ಕಳದುಕೊಂಡಿರದ ಪರಂಪರೆ ಒಂದು ಕಡೆಯಾಗಿ, ಪೂರ್ತಿಯಾಗಿ ರೂಪುಗೊಳ್ಳದ ಹೊಸ ಆಕಾಂಕ್ಷೆಗಳು ಇನ್ನೊಂದು ಕಡೆಯಾಗಿ ಇವೆರಡರ ನಡುವೆ ಒಂದು ಬಗೆಯ ಸೆಣಸಾಟ ನಡೆದಿರುತ್ತದೆ ಎನ್ನುವುದು. ಹಳೆಯದರ ಹಿರಿಮೆಗೆ ಮನಸೋತವರು; ಅದನ್ನು ಬಿಟ್ಟುಕೊಡಲಾಗದವರು, ಪರಂಪರೆಗೆ ಪರವಾಗಿ ನಿಲ್ಲುತ್ತಾರಾದರೆ ಅದರಿಂದ ಅತೃಪ್ತಿಗೊಂಡವರು, ಅದರಿಂದ ದೂರಸರಿದು ಹೊಸದನ್ನು ಸಾಧಿಸಬೇಕೆಂದರೂ ಸಾಧಿಸಬೇಕೆಂದದ್ದರ ನಿಷ್ಕೃಷ್ಟವಾದ ಕಲ್ಪನೆ ಇಲ್ಲದೆ ತಮ್ಮ ಆಕಾಂಕ್ಷೆಗಳಿಗೆ ಸ್ಪಷ್ಟವಾದ ರೂಪವನ್ನು ಕೊಡಲಾಗದೆ ಹೊಸದರತ್ತ ಹಾತೊರೆಯುವವರು, ಅವರಿಗೆ ಇದಿರಾಗಿ ನಿಲ್ಲುತ್ತಾರೆ. ಇವರ ಅತೃಪ್ತಿ ಸುತ್ತಲಿನ ಬದುಕನ್ನು ಅವರಿಸಿದ ಬದಲಾವಣೆಗಳಲ್ಲಿಯೇ ಮೂಡಿ ನಿಂತಿರುವುದರಿಂದ ಕಾಲಕ್ರಮದಲ್ಲಿ ಹೊಸ ಆಕಾಂಕ್ಷೆಗಳೇ ಪ್ರಬಲಿಸುತ್ತವೆ. ತಮ್ಮ ದಿಕ್ಕು ದಾರಿಗಳನ್ನು ಕಂಡುಕೊಳ್ಳುವುದರಲ್ಲಿ ತೊಡಗಿರುತ್ತವೆ. ಇಂಥ ಸಂದಿಗ್ಧದಲ್ಲಿ ಒಂದರ ಇತಿಮಿತಿಗಳ, ಇನ್ನೊಂದರ ಆಶೋತ್ತರಗಳ, ಸ್ಪಷ್ಟವಾದ ಕಲ್ಪನೆಯನ್ನುಳ್ಳ ಒಬ್ಬರು, ಮುನ್ನಡೆಯಬೇಕಾದ ದಾರಿ ಯಾವುದು, ತಲುಪಬೇಕಾದ

ಗುರಿ ಯಾವುದು ಎನ್ನುವುದನ್ನು ನಿಸ್ಸಂದಿಗ್ಧವಾಗಿ ತಿಳಿದುಕೊಂಡ ಒಬ್ಬರು ಅವತರಿಸು ತ್ತಾರೆ. ಮಾರ್ಗಶೋಧಕರು ಮಾತ್ರವಲ್ಲದೆ ಮಾರ್ಗದರ್ಶಕರೂ ಆಗಿ ಅರೆಬೆಳಕಿನಲ್ಲಿ ದಾರಿಯನ್ನು ಕಾಣಲಾಗದ ಅನೇಕರಿಗೆ ದಾರಿಯನ್ನು ಮಾತ್ರವಲ್ಲದೆ ಗುರಿಯನ್ನೂ ತೋರಿಸಿ ಕೊಡುತ್ತಾರೆ. ಇಂಥವರ ಮಾರ್ಗದರ್ಶನ ಹೊಸ ಪರಂಪರೆಯೊಂದನ್ನು ಸ್ಥಾಪಿಸುತ್ತದೆ. ಈ ಶತಮಾನದ ಮೊದಲಿನ ಎರಡು ದಶಕಗಳಲ್ಲಿ ಕನ್ನಡ ಸಾಹಿತ್ಯ ಹಳೆ ಹೊಸತುಗಳ ನಡುವಿನ ಇಂಥ ಎಳೆತಸೆಳೆತಗಳ ಸಂದಿಗ್ಧಕ್ಕೆ ಸಿಲುಕಿದ್ದಾಗ ಹೊಸ ಆಶೋ ತ್ತರಗಳನ್ನು ಸ್ಪಷ್ಟವಾಗಿಸಿ ಮುನ್ನಡೆಯ ದಿಕ್ಕುದಾರಿಗಳನ್ನು ತೋರಿಸಬಲ್ಲವರ ಅಗತ್ಯ ಕಾಣಿಸಿಕೊಂಡಿತ್ತು. ಅಂಥ ಅಗತ್ಯವನ್ನು ಬಿ. ಎಂ. ಶ್ರೀಕಂಠಯ್ಯನವರು ಅನನ್ಯ ಸಾಧಾರಣವಾಗಿ ಪೂರೈಸಿದರು. ನವೋದಯ ಕಾವ್ಯದ ಆಚಾರ್ಯ ಪುರುಷರಾದರು.

ಕಳೆದ ಶತಮಾನದ ಉತ್ತರಾರ್ಧದಲ್ಲಿಯೇ ಹೊಸ ಹಾರೈಕೆಗಳು ತಲೆದೋರ ತೊಡಗಿದ್ದವು. ಹೊಸ ವಿದ್ಯಾಭ್ಯಾಸ ಕ್ರಮದ ಫಲವಾಗಿ ಒದಗಿದ ಪಾಶ್ಚಾತ್ಯ ಸಾಹಿತ್ಯ ಕೃತಿಗಳ ಸಂಪರ್ಕ ಒಂದು ಬೇರೆಯಾದ, ವಿಸ್ತಾರವಾದ, ಪ್ರಪಂಚಕ್ಕೆ ಪ್ರವೇಶವನ್ನು ಒದಗಿಸಿಕೊಟ್ಟಿತ್ತು. ಆ ಕಾಲದಲ್ಲಿ ಕನ್ನಡಕ್ಕೆ ಅನುವಾದವಾಗಿ ಬಂದ ಷೇಕ್ಸಪಿಯರ್ ನಾಟಕಗಳು, ಗದ್ಯಕೃತಿಗಳು, ಕಥೆಕಾದಂಬರಿಗಳು ಹೊಸ ಆಕಾಂಕ್ಷೆಗಳನ್ನು ಮೂಡಿಸಿದ್ದವು. ಇಂಗ್ಲಿಷ್‌ನಿಂದ ಬಂದ ಅನುವಾದಗಳು ಒಂದು ಕಡೆಯಿಂದಾದರೆ ಈ ಶತಮಾನದ ಉದಯದ ಆಸುಪಾಸಿನಲ್ಲಿ ವೆಂಕಟಾಚಾರ್ಯರಿಂದ ಅನುವಾದಿತವಾಗಿ ಬಂದ ಬಂಗಾಲಿ ಕಾದಂಬರಿಗಳು, ಗಳಗನಾಥರಿಂದ ಅನುವಾದಗಳೂ ರೂಪಾಂತರಗಳೂ ಆಗಿ ಬಂದ ಆಪಟೆಯವರ ಮರಾಠಿ ಕಾದಂಬರಿಗಳು ಒಂದು ಹೊಸ ಸಾಹಿತ್ಯಪ್ರಕಾರವನ್ನು ಕನ್ನಡದಲ್ಲಿ ರೂಢಿಸುವುದಕ್ಕೆ ಅನುಕೂಲವಾಗಿದ್ದವು. ಮುದ್ದಣ ಹೇಳಿದಂತೆ ಗದ್ಯ ಹೆಚ್ಚುಹೆಚ್ಚು ಜನಗಳಿಗೆ ಹೃದ್ಯವಾಗತೊಡಗಿತ್ತು. ಮೊದಲ ಎರಡು ದಶಕಗಳಲ್ಲಿ ಗುಳವಾಡಿ, ಬೋಳಾರ, ಕೆರೂರ ವಾಸುದೇವಾಚಾರ್ಯರು, ಎಂ. ಎಸ್. ಪುಟ್ಟಣ್ಣ ಅವರು ಕಾದಂಬರಿಯ ವಿಷಯ ವನ್ನು ಜನಜೀವನಕ್ಕೆ ಹತ್ತಿರವಾಗಿಸಿ ಅದನ್ನು ವಾಸ್ತವತೆಯ ದಾರಿಯಲ್ಲಿ ಮುನ್ನಡೆಸುವ ಯತ್ನದಲ್ಲಿ ತೊಡಗಿದ್ದರು. ಆದರೆ ಪದ್ಯರಚನೆ ಮಾತ್ರ ಪರಂಪರೆಯ ಸಂಕೋಲೆಗಳಲ್ಲಿ ತೊಳಲಾಡುತ್ತಿತ್ತು. ವೃತ್ತಬಂಧಗಳ ಹಿಡಿತ ಬಲವಾಗಿತ್ತು. ಇಂಗ್ಲಿಷ್ ಕಾವ್ಯದ ಸೊಗ ಸನ್ನು ಅನುಭವಿಸಿದ ಕೆಲವು ಹಿರಿಯರು ಕೆಲವು ಪದ್ಯಗಳ ಅನುವಾದವನ್ನು ಮಾಡಿ ಅವುಗಳ ರುಚಿಯನ್ನು ಕನ್ನಡ ಓದುಗರಿಗೆ ತೋರಿಸಿಕೊಡುತ್ತಿದ್ದರೂ ಆ ಕೆಲಸ ವ್ಯಾಪಕವಾಗಿ ನಡೆ ಯುತ್ತಿರಲಿಲ್ಲ. ಅವುಗಳ ಪ್ರಭಾವ ಪರಿಣಾಮಕಾರಿಯಾಗಿ ಕಾಣಿಸಿಕೊಂಡಿರಲಿಲ್ಲ. ಒಂದು ಕಡೆ ಪಂಜೆ, ಕಾಮತ್, ಗೋವಿಂದ ಪೈಗಳಾದರೆ ಇನ್ನೊಂದು ಕಡೆ ಶಾಂತಕವಿಗಳು ಕನ್ನಡ ಕವಿತೆಯಲ್ಲಿ ಹೊಸಮಟ್ಟುಗಳನ್ನು ಹುಟ್ಟು ಹಾಕುತಿದ್ದರೂ ಎಲ್ಲ ಪ್ರಯತ್ನಗಳು ಪ್ರಾಯೋಗಿಕವಾಗಿರುತ್ತಿದ್ದುವಲ್ಲದೆ ಹಳೆಯ ಪರಂಪರೆಯ ಪುರಸ್ಕರ್ತರ ಟೀಕೆಗೆ ಗುರಿ

ಯಾಗುತ್ತಿದ್ದವು. ರೂಪ, ರಚನೆ, ಬಂಧ, ಭಾವಪ್ರಕಾಶನದ ರೀತಿ, ಎಂಬೆಲ್ಲದರಲ್ಲಿಯೂ ಕಾವ್ಯ ತನ್ನನ್ನು ಬಿಗಿದಿದ್ದ ಸಂಕೋಲೆಗಳನ್ನು ಕೊಡವಿ ಕಡಿದುಕೊಳ್ಳುವುದರಲ್ಲಿತ್ತು. ಒಂದು ದೃಷ್ಟಿಯಿಂದ ಮುದ್ದಣ ಕಾವ್ಯಪ್ರಪಂಚದಲ್ಲಿಯ ಈ ಸಂದಿಗ್ಧ ಸನ್ನಿವೇಶದ ಪ್ರಮುಖ ಪ್ರತಿನಿಧಿಯಾಗಿದ್ದಾನೆ. ಹಳೆಯದರ ಬಿಗಿಹಿಡಿತ ಹೊಸತರ ಸ್ವತಂತ್ರ ಸಂಚಾರ ಎರಡೂ ಆತನಲ್ಲಿ ಕಾಣಿಸುತ್ತವೆ. ಹೀಗೆ ಗದ್ಯಪದ್ಯಗಳೆರಡರಲ್ಲಿಯೂ ಹೊಸ ಹವಣಿಕೆಗಳು ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದರೂ ಅವೆಲ್ಲವೂ ನಿಯಮಕ್ಕೆ ಅಪವಾದಗಳಂತೆ ಕಾಣಿಸಿಕೊಳ್ಳುತ್ತಿದ್ದುವೇ ಹೊರತು ಯಾವ ಒಂದು ನಿರ್ದಿಷ್ಟವಾದ ಧೋರಣೆಗೆ ಅನುಗುಣವಾಗಿಯಾಗಲಿ, ಸ್ಪಷ್ಟವಾಗಿ ಕಂಡುಕೊಂಡ ಒಂದು ಗುರಿಯ ಸಾಧನೆಯ ಮಾರ್ಗದಲ್ಲಿಯ ಪ್ರಯತ್ನಗಳಾಗಿಯಾಗಲಿ ಕಾಣುತ್ತಿರಲಿಲ್ಲ. ನಡೆದ ಪ್ರಯತ್ನಗಳು ಸಫಲವಾಗಿ ಮುಂದುವರಿಯಬೇಕಾದರೆ ಹೊಸ ಸಾಹಿತ್ಯದ ಆಶೋತ್ತರಗಳನ್ನು ನಿಚ್ಚಳವಾಗಿ ಕಂಡುಕೊಂಡು ಧೋರಣೆಯನ್ನು ನಿರ್ದಿಷ್ಟವಾಗಿಸಬೇಕಾಗಿತ್ತು. ಅಸ್ಪಷ್ಟವಾಗಿದ್ದ ಗುರಿಯನ್ನು ಸ್ಪಷ್ಟವಾಗಿಸಿ ಅದರತ್ತ ಸಾಗುವ ದಾರಿಯನ್ನು ತೋರಿಸಬೇಕಾಗಿತ್ತು. ಆ ಕೆಲಸವನ್ನು ಶ್ರೀಕಂಠಯ್ಯನವರು ಮಾಡಿದರು.

ಇದು ಸುಲಭದ ಕೆಲಸವಾಗಿರಲಿಲ್ಲ. ಕನ್ನಡ ತಲೆ ಎತ್ತುವುದಕ್ಕೆ ಪರಿಸ್ಥಿತಿ ಅನುಕೂಲವಾಗಿರಲಿಲ್ಲ. ಮೂರುನಾಲ್ಕು ಕಡೆಗಳಿಂದ ಆತಂಕಗಳು ಕನ್ನಡದ ಬೆಳವಣಿಗೆಯನ್ನು ತಡೆಯುತ್ತಿದ್ದವು. ಒಂದುಕಡೆ ಸಂಸ್ಕೃತವೇ ನಮ್ಮ ಸಂಸ್ಕೃತಿಯ ಸಾರಸರ್ವಸ್ವವನ್ನು ಒಳಗೊಂಡಿರುವಾಗ ಕನ್ನಡದಲ್ಲೇನು ಎಂದು ಬೀಗುವ, ಕನ್ನಡವನ್ನು ಕಡೆಗಣಿಸುವ ಪಂಡಿತ ವರ್ಗ ; ಇನ್ನೊಂದು ಕಡೆ ವೈವಿಧ್ಯಪೂರ್ಣವಾದ ಆಧುನಿಕ ಜ್ಞಾನವನ್ನೂ, ಹಲವಾರು ಬಗೆಯ ಹಿರಿಯ ಸಾಹಿತ್ಯಾನುಭವವನ್ನೂ ತಂದುಕೊಡಬಲ್ಲ ಇಂಗ್ಲೀಷೇ ನಮಗೆ ಲಭ್ಯವಾಗಿರುವಾಗ ಕನ್ನಡ ಯಾವುದಕ್ಕೆ ಎಂದು ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳಿಗೆ ಮಾರುಹೋದವರು. ಹೊಸ ಪ್ರೇರಣೆಗಳನ್ನು ಒದಗಿಸಿದ ಇಂಗ್ಲೀಷೇ ಕನ್ನಡದ ಬೆಳವಣಿಗೆಗೆ ಆತಂಕವಾಗುವ ವಿರೋಧಾಭಾಸದ ಸನ್ನಿವೇಶ ಅದಾಗಿತ್ತು. ಸಂಸ್ಕೃತಕ್ಕೆ ಹಿಂದಿನ ಹೆಗ್ಗಳಿಕೆಯಾದರೆ ರಾಜಭಾಷೆಯಾಗಿದ್ದ ಇಂಗ್ಲೀಷಿಗೆ ಇಂದಿನ ಅನುಕೂಲ ಸಮರ್ಥನೆಯಾಗಿ ನಿಲ್ಲುತ್ತಿದ್ದವು. ಇವರಿಗೆ ಹೊರತಾಗಿ ಕನ್ನಡದ ವಿಷಯದಲ್ಲಿ ಅಭಿಮಾನ ಉಳ್ಳವರು ಆಗಿಹೋದ ಹಿರಿಯ ಕವಿಗಳನ್ನು ನೆನೆಯುತ್ತಿದ್ದರೇ ಹೊರತು ಹೊಸ ಪ್ರಯತ್ನಗಳನ್ನು ವಿಶ್ವಾಸದಿಂದ ಕಾಣುತ್ತಿರಲಿಲ್ಲ. ವಿಷಯರೀತಿಗಳಲ್ಲಿಯ ಸಂಪ್ರದಾಯದ ಕಟ್ಟುಪಾಡುಗಳನ್ನು ಕಡೆಗಣಿಸುವುದು ಅವರ ದೃಷ್ಟಿಯಲ್ಲಿ ಅಪರಾಧವಾಗಿ ಕಾಣುತ್ತಿತ್ತು. ಸಂಸ್ಕೃತದ ಅಭಿಮಾನಿಗಳಿಗೆ ಕನ್ನಡ ಪಾಮರರ ಭಾಷೆಯಾಗಿ ಕಾಣುತ್ತಿತ್ತು. ಇಂಗ್ಲಿಷ್ ಓದಿದವರಿಗೆ ಕನ್ನಡ ಪ್ರಯೋಜನದ್ದಾಗಿ ಕಾಣುತ್ತಿರಲಿಲ್ಲ. ಹಿಂದಿನ ಕನ್ನಡ ಕಾವ್ಯ ಪರಂಪರೆಯಲ್ಲಿ ಅಭಿಮಾನ ಉಳ್ಳವರಿಗೆ ಹೊಸ ಪ್ರಯೋಗಗಳು ಸಾಹಿತ್ಯವನ್ನು ಹಾಳು ಮಾಡುವಂಥವಾಗಿ ಕಾಣುತ್ತಿ

ದ್ದವು. ಇಂಥ ಪರಿಸ್ಥಿತಿಯಲ್ಲಿ ಕನ್ನಡಕ್ಕೆ ಯಾವ ಸ್ಥಾನವೂ ಇರಲಿಲ್ಲ. ಮನ್ನಣೆಯೂ ಸಿಕ್ಕುವಂತಿರಲಿಲ್ಲ. ಹೊಸ ಕನ್ನಡ ಭಾಷೆ ಮತ್ತು ಸಾಹಿತ್ಯ ಮತ್ತೆ ಸಮೃದ್ಧವಾಗಿ ಬೆಳೆಯ ಬೇಕೆಂಬ ಹಂಬಲವನ್ನಿರಿಸಿಕೊಂಡವರು ಇಂಥ ಆಕ್ಷೇಪಣೆಗಳನ್ನು ಎದುರಿಸಿಯೊ, ಅವಕ್ಕೆ ಸಮರ್ಪಕವಾದ ಸಮಾಧಾನಗಳನ್ನು ಹೇಳಿಯೊ, ಮುಂದುವರಿಯಬೇಕಾದ ಸನ್ನಿವೇಶ ಆದಾಗಿತ್ತು. ಈ ಶತಮಾನದ ಮೊದಲ ದಶಕದಲ್ಲಿ ಕನ್ನಡವನ್ನು ಕುರಿತಂತೆ ಸಾಮಾನ್ಯ ಮಾನಸಿಕ ವಾತಾವರಣ ಈ ಬಗೆಯದಾಗಿತ್ತು.

ಶ್ರೀಕಂಠಯ್ಯನವರು ಕನ್ನಡದ ಪುನರುಜ್ಜೀವನಕ್ಕೆ ತೊಡಗಿದ್ದು ಇಂಥ ನಿರುತ್ಸಾಹದ ವಾತಾವರಣದಲ್ಲಿ. ಮುಂದಿನ ಕಾಲು ಶತಮಾನದಲ್ಲಿ ಕನ್ನಡ ಬೆಳೆದ ಬಗೆಯನ್ನು ನೆನೆದಾಗ, ಹೊಸ ಸಾಹಿತ್ಯ ರೂಪುಗೊಂಡು ನವೋದಯವೆಂದು ಹೆಸರುಗೊಂಡು ವಿಜೃಂಭಿಸುವಂತಾದದ್ದನ್ನು ಕಂಡಾಗ ಅವರು ಮಾಡಿದ ಕಾರ್ಯದ ಮಹತ್ವ ಎದ್ದು ಕಾಣುತ್ತದೆ. ಅಲ್ಪಾವಧಿಯಲ್ಲಿ ಸಾಧಿಸಬಹುದಾದ ಕಾರ್ಯ ಅದಾಗಿರಲಿಲ್ಲ. ಯಾರೊಬ್ಬರಿಂದಲೇ ಆಗಬಹುದಾದ ಕಾರ್ಯವೂ ಅದಾಗಿರಲಿಲ್ಲ. ಸಾರ್ವತ್ರಿಕವಾಗಿ ಕನ್ನಡದ ಬಗೆಯಲ್ಲಿ, ಅದರ ಬೆಳವಣಿಗೆಯ ಸಾಧ್ಯತೆಗಳ ಬಗೆಯಲ್ಲಿ ಕನ್ನಡ ನಾಡಿನುದ್ದಕ್ಕೂ ಜಾಗೃತಿಯುಂಟಾಗಬೇಕಿತ್ತು. ಅರೆಮರ್ಧದ ಆಸಕ್ತಿಯುಳ್ಳವರಿಂದ ಈ ಕೆಲಸ ಆಗುವಂತಿರಲಿಲ್ಲ. ಅಚಲ ಶ್ರದ್ಧೆಯಿಂದ, ಆತ್ಮವಿಶ್ವಾಸದಿಂದ, ಅದಕ್ಕಾಗಿ ದೀಕ್ಷೆತೊಟ್ಟು, ಅದನ್ನೇ ತಮ್ಮ ಜೀವದುಸಿರಾಗಿಸಿಕೊಂಡು ದುಡಿಯದೆ ಜಾಗೃತಿ ಸಾಧ್ಯವಿರಲಿಲ್ಲ. ಶ್ರೀಕಂಠಯ್ಯನವರು ಅಂಥ ದೀಕ್ಷೆಯನ್ನು ತೊಟ್ಟರು. ಕನ್ನಡದ ಏಳ್ಗೆಯನ್ನು ತಮ್ಮ ಜೀವನದ ಧ್ಯೇಯವನ್ನಾಗಿಸಿಕೊಂಡರು. ಅವಿಶ್ರಾಂತವಾಗಿ ದುಡಿದರು. ಯಶಸ್ಸನ್ನು ಗಳಿಸಿದರು. ಕನ್ನಡದ ಬಗೆಯಲ್ಲಿಯ ಶ್ರದ್ಧೆ, ಏಕಾಗ್ರವಾದ ಧ್ಯೇಯನಿಷ್ಠೆ ಅವರ ಬದುಕನ್ನು ರೂಪಿಸಿದವು. ಹಾಗೆ ಅವರು ತಮ್ಮ ಬದುಕನ್ನು ರೂಪಿಸಿಕೊಂಡರು ಎಂದರೂ ಆದೀತು. ಇಂಗ್ಲಿಷ್ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದ ಅವರು ಇಂಗ್ಲಿಷ್ ಸಾಹಿತ್ಯದ ಪ್ರಮುಖ ಪ್ರಾಧ್ಯಾಪಕರಾಗಿ ನಿವೃತ್ತರಾಗುವವರೆಗೂ ಸುಮಾರು ಮೂವತ್ತುಮೂರು ವರ್ಷಗಳ ಕಾಲ ಅವರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಾಹಿತ್ಯದ ಪಾಠ ಹೇಳುವುದನ್ನು ತಮ್ಮ ವೃತ್ತಿಯನ್ನಾಗಿಸಿಕೊಂಡರೂ ಆ ಅವಧಿಯುದ್ದಕ್ಕೂ, ಅದರ ನಂತರವೂ ಅವರು ಕನ್ನಡದ ಪುನರುಜ್ಜೀವನದ ಕಾರ್ಯವನ್ನು ಸತತವಾಗಿ ನಡಸಿಕೊಂಡು ಹೋದರೆನ್ನುವುದು ಅವರ ಜೀವನದ ಒಂದು ಅರ್ಥಪೂರ್ಣವಾದ ವಿಶೇಷ. ಇಂಗ್ಲಿಷ್ ಪ್ರಾಧ್ಯಾಪಕರಾಗಿ ನೇಮಕವಾಗುವುದಕ್ಕೆ ಹತ್ತು ವರ್ಷ ಮೊದಲು ಕನ್ನಡ ಪ್ರಾಧ್ಯಾಪಕರಾಗುವ ಅವಕಾಶವನ್ನು ಬಿಟ್ಟು ಇಂಗ್ಲಿಷ್ ಪ್ರಾಧ್ಯಾಪಕರಾಗಿಯೇ ಉಳಿದರೆನ್ನುವುದು ಇನ್ನೂ ಅರ್ಥಪೂರ್ಣವಾದ ಸಂಗತಿಯಾಗಿದೆ. ವೃತ್ತಿ ಯಾವುದೇ ಆದರೂ ತಮ್ಮ ಕಾರ್ಯರಂಗ ಕನ್ನಡವೆ ಎನ್ನುವುದನ್ನು ಎಂ. ಎ. ಪರೀಕ್ಷೆಗಾಗಿ ಮದರಾಸಿನಲ್ಲಿ ಓದುತ್ತಿರುವಾಗಲೆ, ತಮಗೆ ಇಪ್ಪತ್ತೆರಡು-ಇಪ್ಪತ್ತುಮೂರು

ವಯಸ್ಸಾಗುವಾಗಲೆ, ಅವರು ನಿರ್ಧರಿಸಿಕೊಂಡಿದ್ದರು. ಆ ನಿರ್ಧಾರವನ್ನು ಕೊನೆಯು ವರೆಗೂ ನಡಸಿಕೊಂಡು ಹೋದರು.

೨

ಶ್ರೀಕಂಠಯ್ಯನವರು ಜನ್ಮ ತಾಳಿದ್ದು ೧೮೮೪ ಇಸವಿಯ ಜನವರಿ ೩ ರಂದು ; ತಾಯಿ ಭಾಗೀರಥಮ್ಮನವರ ತವರಾದ ತುಮಕೂರು ಜಿಲ್ಲೆಯ ನಾಗಮಂಗಲ ತಾಲೂಕಿನ ಸಂಪಿಗೆ ಗ್ರಾಮದಲ್ಲಿ. ತಂದೆ ಬೆಳ್ಳೂರ ಮೈಲಾರಯ್ಯನವರು ಶ್ರೀರಂಗಪಟ್ಟಣದಲ್ಲಿ ಅನು ಕೂಲವಂತ ನ್ಯಾಯವಾದಿಗಳಾಗಿದ್ದರು. ಮೂವರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳಲ್ಲಿ ಹಿರಿಯರಾಗಿ ಹುಟ್ಟಿದ ಶ್ರೀಕಂಠಯ್ಯನವರಿಗೆ ಅಕ್ಷರಾಭ್ಯಾಸ ಸಂಪಿಗೆಯಲ್ಲಿಯೇ ಆಯಿತು. ಹುಡುಗರಾಗಿದ್ದಾಗ ನೆರೆಹೊರೆಯ ತೋಟಗಳಿಂದ ಹಣ್ಣುಗಳನ್ನು ಕಿತ್ತು ಕೊಳ್ಳುವುದು, ತೋಟಗಳಲ್ಲಿ ದನಗಳನ್ನು ಹೊಗ್ಗಿಸುವುದು ಮುಂತಾದ ಪುಂಡಾಟಗಳಲ್ಲಿ ತೊಡಗಿರುತ್ತಿದ್ದರೆಂದೂ ಅದಕ್ಕಾಗಿ ಸೋದರಮಾವ ಉಮಾಪತಿಯವರಿಂದ ಏಟು ತಿನ್ನ ಬೇಕಾಗುತ್ತಿತ್ತೆಂದೂ ಹೇಳಲಾಗಿದೆ. ಅಕ್ಷರಾಭ್ಯಾಸ ಸಂಪಿಗೆಯಲ್ಲಾದರೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಶ್ರೀರಂಗಪಟ್ಟಣದಲ್ಲಿ ಮುಗಿಸಿ ಪ್ರೌಢ ವ್ಯಾಸಂಗಕ್ಕಾಗಿ ಮೈಸೂರಿಗೆ ತೆರಳಿದರು. ಮೈಸೂರಿನಲ್ಲಿ ಶ್ರೀಕಂಠಯ್ಯನವರ ಸಹಪಾಠಿಗಳಾಗಿದ್ದವರು ಮುಂದೆ ಕೇಂಬ್ರಿಜ್ ಪದವೀಧರರಾಗಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಗಳಾದ ಎನ್. ಎಸ್. ಸುಬ್ಬರಾಯರು, ಬೆಂಗಳೂರಿನ ಪ್ರಸಿದ್ಧ ವಕೀಲರೂ ವಾಗ್ಮಿಗಳೂ ಎಂದು ಮುಂದೆ ಹೆಸರು ಗಳಿಸಿದ ಎಂ.ಜಿ. ವರದಾಚಾರ್ಯರು, ಪ್ರಾಧ್ಯಾಪಕ ಅಣ್ಣಾಜೀ ರಾಯರು ಮತ್ತು ಎಂಜಿನಿಯರರಾದ ಎಚ್. ಆರ್. ವೆಂಕಟಸುಬ್ಬರಾಯರು. ಇವರೆಲ್ಲರೂ ಶ್ರೀರಂಗಪಟ್ಟಣದವರೇ ಆಗಿದ್ದರಿಂದ ಮೈಸೂರಿನಲ್ಲಿ ಮೇಧಾವಿಗಳಾದ ಅವರದೇ ಒಂದು ಗುಂಪು ಏರ್ಪಟ್ಟಿತ್ತು. ಆಗಿನ ಕಾಲದಲ್ಲಿ ಅಷ್ಟೇನೂ ಸುಲಭವಾಗಿರದ ಎಫ್. ಎ. ಪರೀಕ್ಷೆಯನ್ನು ೧೯೦೩ರಲ್ಲಿ ಪಾಸು ಮಾಡಿದರು. ಅದೇ ಸುಮಾರಿಗೆ ಚಿತ್ರದುರ್ಗದಲ್ಲಿ ಅಮಲ್ದಾರರಾಗಿದ್ದ ಬೆಳ್ಳೂರ ರಾಮಸ್ವಾಮಯ್ಯನವರ ಹಿರಿಯ ಮಗಳು ಗುಂಡಮ್ಮ ನವರೊಂದಿಗೆ ಶ್ರೀಕಂಠಯ್ಯನವರಿಗೆ ಮದುವೆಯಾಯಿತು. ಮುಂದೆ ದೇವಮ್ಮನೆಂದು ಹೆಸರು ಪಡೆದ ಆಕಗೆ ಆಗ ಒಂಬತ್ತು ವರ್ಷ ವಯಸ್ಸು. ಎಫ್. ಎ. ನಂತರ ಶ್ರೀಕಂಠಯ್ಯ ನವರು ಬೆಂಗಳೂರು ಸೆಂಟ್ರಲ್ ಕಾಲೇಜನ್ನು ಸೇರಿ ೧೯೦೬ರಲ್ಲಿ ಬಿ. ಎ. ಪದವಿಯನ್ನು ತಮ್ಮದಾಗಿಸಿಕೊಂಡರು.

ಮೈಸೂರು ವಿಶ್ವವಿದ್ಯಾನಿಲಯ ಆಗ ಇನ್ನೂ ಸ್ಥಾಪನೆಯಾಗಿರಲಿಲ್ಲವಾದ್ದರಿಂದ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ವಿದ್ಯಾರ್ಥಿಗಳು ಮದರಾಸಿಗೆ ಹೋಗಬೇಕಾಗುತ್ತಿತ್ತು. ಶ್ರೀಕಂಠಯ್ಯನವರು ಮದರಾಸಿಗೆ ತೆರಳಿ ೧೯೦೭ರಲ್ಲಿ ಬಿ. ಎಲ್. ಪಾಸು ಮಾಡಿದರು. ತಮ್ಮ ವೃತ್ತಿಯಲ್ಲಿ ಮುಂದುವರಿಯುವುದು ತಂದೆಗೆ ಬೇಡವಾಗಿದ್ದರೂ, ಅವರ ಅಪೇಕ್ಷೆಯೂ ಅದಾಗಿರದಿದ್ದರೂ, ಬೇರೆ ಯಾವ ಕೆಲಸ ಸಿಕ್ಕದಿದ್ದರೆ ಅದೊಂದಿರಲಿ ಎಂದು ಶ್ರೀಕಂಠಯ್ಯನವರು ಕಾನೂನಿನ ವ್ಯಾಸಂಗ ಮಾಡಿದರೆಂದು ಕಾಣುತ್ತದೆ. ತುಂಬ ಪ್ರೀತಿ ಆಸಕ್ತಿಗಳಿಂದ ಆಗ ಅವರು ಓದುತ್ತಿದ್ದದ್ದು ಸಾಹಿತ್ಯವನ್ನು. ಆಗಲೆ ಕನ್ನಡದ ಯೋಚನೆ ಅವರನ್ನು ಹಿಡಿದುಕೊಂಡಿತ್ತೆಂದು ಕಾಣುತ್ತದೆ. ಹಳಗನ್ನಡ ಮತ್ತು ತಮಿಳಿನ ನಡುವಿನ ನಿಕಟ ಬಾಂಧವ್ಯವನ್ನು ಗುರುತಿಸಿದ್ದ ಅವರು ಕಾನೂನಿನ ಜೊತೆಯಲ್ಲಿ ತಮಿಳು ಭಾಷೆಯ ವ್ಯಾಸಂಗವನ್ನೂ ಪೂರೈಸಿಕೊಂಡರಲ್ಲದೆ ಕನ್ನಡ ಹಾಗೂ ತಮಿಳಿಗೆ ಸಮಾನವಾದ ವ್ಯಾಕರಣವೊಂದನ್ನು ರಚಿಸುವ ಆಲೋಚನೆಯಿಂದ ಟಿಪ್ಪಣಿಗಳನ್ನು ಮಾಡಿಕೊಂಡರು. ಎಂ. ಎ. ಗಾಗಿ ಇಂಗ್ಲೀಷ್ ಸಾಹಿತ್ಯದ ವ್ಯಾಸಂಗ ಮುಂದುವರಿದಂತೆ ಕನ್ನಡದ ಯೋಚನೆಯೂ ಬಲಿಯುತ್ತಿತ್ತು. ಮದರಾಸಿನಲ್ಲಿದ್ದ ಅವಧಿಯಲ್ಲಿ ಸಮಕಾಲೀನ ಕನ್ನಡದ ಶೋಚನೀಯ ಸ್ಥಿತಿಯ ಅರಿವು ಆಳವಾಗುತ್ತಿದ್ದಂತೆ ಷೇಕ್ಸ್‌ಪಿಯರ್ ಕೃತಿಗಳನ್ನು, ಪುರಾತನ ಗ್ರೀಕ್ ನಾಟಕಕಾರರ ಕೃತಿಗಳನ್ನು, ಪ್ಲೇಟೋನ ಸಂವಾದಗಳನ್ನು, ಕನ್ನಡಕ್ಕೇಕೆ ತರಬಾರದು, ಅಂಥ ಅನುವಾದಗಳಿಂದ ಕನ್ನಡಕ್ಕೆ ಹೊಸ ಚೈತನ್ಯವನ್ನು ಹೇಗೆ ತಂದು ಕೊಡುವುದು ಎಂಬ ಯೋಚನೆಗಳಲ್ಲಿ ಅವರು ತೊಡಗಿರುತ್ತಿದ್ದರು. ೧೯೦೯ರಲ್ಲಿ ಎಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹಿಂದಿರುಗಿದಾಗ ಕನ್ನಡದ ಪುನರುಜ್ಜೀವನವನ್ನು ಕುರಿತ ಅವರ ಆಲೋಚನೆಗಳು ಸ್ಪಷ್ಟವಾದ ಒಂದು ಕಾರ್ಯಧೋರಣೆಯಾಗಿ ರೂಪುಗೊಳ್ಳುತ್ತಿದ್ದವು. ಮುಂದೆ ಎರಡು ವರ್ಷಗಳಾಗುವಷ್ಟರಲ್ಲಿ, ತಮ್ಮ ವಯಸ್ಸಿನ ಇಪ್ಪತ್ತೇಳನೆಯ ವರ್ಷದಲ್ಲಿ, ಅವರು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ "ಕನ್ನಡ ಮಾತು ತಲೆಯೆತ್ತುವ ಬಗೆ" ಎಂಬ ಶೀರ್ಷಿಕೆಯಲ್ಲಿ ೧೯೧೧ರಲ್ಲಿ ನೀಡಿದ ಉಪನ್ಯಾಸ ಅವರ ಆಲೋಚನೆಗಳು ಎಷ್ಟು ಖಚಿತವಾಗಿದ್ದವು, ಎಷ್ಟು ದೂರದೃಷ್ಟಿಯುವಾಗಿದ್ದವು ಎನ್ನುವುದನ್ನು ತೋರಿಸುತ್ತದೆ. (ಅದರಲ್ಲಿಯ ವಿಚಾರಗಳ ಪರಿಶೀಲನೆ ಮತ್ತೆ ಬರುತ್ತದೆ.) ಕನ್ನಡದ ಏಳ್ಗೆಗಾಗಿ ಅವರು ಆಗಲೆ ಕಂಕಣಬದ್ಧರಾಗಿದ್ದರೆನ್ನುವುದಕ್ಕೆ ಆ ಉಪನ್ಯಾಸ ಸಾಕ್ಷಿ ಹೇಳುತ್ತದೆ.

ಎಂ. ಎ. ಪಾಸುಮಾಡಿದ ವರ್ಷವೇ ಮೈಸೂರು ಸರಕಾರ ಶ್ರೀಕಂಠಯ್ಯನವರನ್ನು ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಮತ್ತು ಕನ್ನಡದ ಪ್ರೊಬೇಷನರಿ ಅಧ್ಯಾಪಕರೆಂದು ನೇಮಕ ಮಾಡಿತು. ಮರುವರ್ಷ ಆ ಕೆಲಸದಲ್ಲಿ ಅವರನ್ನು ಕಾಯಂಗೊಳಿಸಿ ಅವರಿಗೆ ಪ್ರಿಯವಾಗಿದ್ದ ಸಾಹಿತ್ಯದ ಅಧ್ಯಾಪಕವೃತ್ತಿ ಅವರದಾಗುವ ಅವಕಾಶವನ್ನು ಒದಗಿಸಿತು.

ಅಲ್ಪಾವಧಿಯಲ್ಲಿಯೇ ಶ್ರೀಕಂಠಯ್ಯನವರು ಶ್ರೇಷ್ಠ ದರ್ಜೆಯ ಉಪನ್ಯಾಸಕರೆಂದು, ಸಾಹಿತ್ಯಬೋಧಕರೆಂದು, ಹೆಸರು ಗಳಿಸಿದರು. ಮುಖ್ಯವಾಗಿ ಪಾಠ ಹೇಳಬೇಕಾದದ್ದು ಇಂಗ್ಲಿಷ್ ಸಾಹಿತ್ಯವಾದರೂ ಕನ್ನಡವನ್ನು ಕುರಿತ ಯೋಜನೆಯನ್ನು, ಮುಂದುವರಿಸುತ್ತಲೇ ಇದ್ದರು. ತಮ್ಮ ಅಧ್ಯಾಪನದ ಅಂಗವಾಗಿ ಅವರು ಭಾಷಾಂತರದ ಪಾಠಗಳನ್ನು ಹೇಳಬೇಕಾಗಿತ್ತು. ಆಗ ಅವರ ಶಿಷ್ಯವರ್ಗದಲ್ಲಿದ್ದ ಮಾಸ್ತಿಯವರು ಭಾಷಾಂತರಕ್ಕಾಗಿ ಶ್ರೀಕಂಠಯ್ಯನವರು ಮಿಲ್ಟನ್ ಕವಿಯ ' ಲಿಸಿಡಾಸ್ ' ನಿಂದ, ವರ್ಡ್ಸ್‌ವರ್ತ್‌ನ ಅಷ್ಟಷಟ್ಪದಿಗಳಿಂದ ಪಂಕ್ತಿಗಳನ್ನು ಉದ್ಧರಿಸಿ, ವಿವರಿಸಿ, ಅವನ್ನು ಕನ್ನಡಕ್ಕೆ ತರ್ಜುಮೆಮಾಡಿ ಎಂದು ಹೇಳುತ್ತಿದ್ದುದನ್ನು ತಿಳಿಸಿದ್ದಾರೆ. ಇಂಗ್ಲಿಷ್ ಪದ್ಯಗಳನ್ನು ಕನ್ನಡಕ್ಕೆ ತಂದು ಅವುಗಳಲ್ಲಿಯ ಭಾವವೈವಿಧ್ಯವನ್ನೂ ಭಾಷೆಯ ಬೆಡಗನ್ನೂ ಕನ್ನಡಿಗರಿಗೆ ಪರಿಚಯಿಸಬೇಕೆಂಬ ಅವರ ಯೋಜನೆ ಆಗಲೆ ರೂಪುಗೊಳ್ಳುತ್ತಿತ್ತೆಂದು ಇದರ ಮೇಲಿಂದ ಊಹಿಸಬಹುದಾಗಿದೆ. ಅಧ್ಯಾಪಕರೆಂದು ನೇಮಕವಾದ ಐದು ವರ್ಷಗಳಲ್ಲಿ ಉಪಪ್ರಾಧ್ಯಾಪಕರೆಂದು ಬಡತಿಯಾಯಿತು. ಅಷ್ಟರಲ್ಲಿ ಮೂವರು ಮಕ್ಕಳಾಗಿದ್ದರು. ಹಿರಿಯವಳು ಮಗಳು, ಶಾರದಮ್ಮ ; ನಂತರ ಒಬ್ಬ ಮಗ ತಮ್ಮಯ್ಯ ; ಕಿರಿಯ ಮಗಳಾಗಿ ತಂಗಮ್ಮ ಎಂದು· ಮೆಚ್ಚಿಕೊಂಡ ಕೆಲಸದಲ್ಲಿ ಯಶಸ್ಸು, ಅನುಕೂಲದಾಂಪತ್ಯ, ಮೂವರು ಮಕ್ಕಳು; ಶ್ರೀಕಂಠಯ್ಯನವರ ಬದುಕಿನಲ್ಲಿಯ ವಸಂತಕಾಲ ಅದಾಗಿತ್ತು.

ಆದರೆ ವಸಂತಕಾಲ ಎಷ್ಟು ದಿನ ಉಳಿದೀತು? ಅವರ ದೈವಕ್ಕೆ ಮತ್ಸರವೆನಿಸಿರಬೇಕು. ಒಂದಾದ ಮೇಲೊಂದರಂತೆ ಎರಡು ಆಘಾತಗಳು ಆ ವರ್ಷ ಅವರ ಬದುಕನ್ನು ಕವಿದವು. ಮಗ ತಮ್ಮಯ್ಯನಿಗೆ ಕಣ್ಣು ನೋವಾಗಿತ್ತು. ಅಚಾತುರ್ಯದಿಂದ ಹಾಕಿದ ಔಷಧದ ಪರಿಣಾಮವಾಗಿಯೊ, ನೋವನ್ನು ತಡೆಯಲಾಗದೆ ಕಣ್ಣನ್ನು ಉಜ್ಜಿಕೊಂಡದ್ದರಿಂದ ನಂಜಾಗಿಯೊ ಅಂತೂ ಎರಡೂ ಕಣ್ಣು ಕಳೆದುಕೊಂಡು ಕುರುಡಾದ. ಮುಂದೆ ಕೆಲವೇ ಸಮಯದಲ್ಲಿ ಹೆರಿಗೆಗೆಂದು ಆಸ್ಪತ್ರೆಗೆ ಸೇರಿಸಲಾದ ಹೆಂಡತಿ ದೇವಮ್ಮ ಹೆರಿಗೆಯ ನಂತರ ಬಾಣಂತಿಜ್ವರದಿಂದ ಕಾಲವಾದರು. ಹೆತ್ತ ಗಂಡು ಮಗುವೂ ಉಳಿಯಲಿಲ್ಲ. ಇದ್ದ ಒಬ್ಬ ಮಗನಿಗೆ ಬಂದ ಕುರುಡುತನದ ವಿಪತ್ತು, ಅಕಾಲವಾದ ಪತ್ನೀವಿಯೋಗದ ದುಃಖ ಯಾರನ್ನೂ ಧೃತಿಗೆಡಿಸಬಹುದು. ಬದುಕನ್ನು ಕಹಿಯಾಗಿಸಬಹುದು. ಆದರೆ ಶ್ರೀಕಂಠಯ್ಯನವರು ಪಾಲಿಗೆ ಬಂದದ್ದನ್ನು ಕಷ್ಟದಿಂದಾದರೂ ತಾಳ್ಮೆಯಿಂದ ಅಂಗೀಕರಿಸಿದರು. ಮತ್ತೆ ಕೆಲವು ವರ್ಷಗಳನಂತರ ದುರ್ದೈವ ಅವರ ಸಂಸಾರವನ್ನು ಮತ್ತೊಮ್ಮೆ ಎರಗಿತು. ಯುವಕರೂ ಮೇಧಾವಿಗಳೆಂದು ಹೆಸರು ಪಡೆದವರೂ ಆಗಿದ್ದ ಅವರ ಹಿರಿಯ ಅಳಿಯಂದಿರಾದ ಎಸ್.ಆರ್. ಗುಂಡಪ್ಪನವರು ವಿಷಮಶೀತಜ್ವರದಿಂದ ಅಕಾಲಮರಣಕ್ಕೆ ತುತ್ತಾದರು. ಆತನ ಉತ್ತರ ಕ್ರಿಯೆಗಳು ಮುಗಿದ ದಿನವೇ ಶ್ರೀಕಂಠಯ್ಯನವರ ತಾಯಿ ಭಾಗೀರಥಮ್ಮನವರು ಅದೇ ವ್ಯಾಧಿಗೆ ಬಲಿಯಾದರು. ಈ ದುರಂತ ಪರಂಪರೆಯನ್ನು

ಅವರು ಹೇಗೆ ಸಹಿಸಿಕೊಂಡು ಬದುಕಿನಲ್ಲಿಯ ಆಸಕ್ತಿಯನ್ನು ಉಳಿಸಿಕೊಂಡರೊ ಎಂದು ನೆನೆದರೆ ಆಶ್ಚರ್ಯವೆನಿಸುತ್ತದೆ. ಸಹಿಸಿಕೊಂಡರು, ಆದರೆ ಗಾಯಗಳು ಪೂರ್ತಿಯಾಗಿ ಮಾಯಲಿಲ್ಲ. ಆ ನೋವುಗಳ ನೆನಹು ಒಂದೊಂದು ಸಂದರ್ಭದಲ್ಲಿ ಕಹಿಯಾಗಿ ಕಾಣಿಸಿಕೊಳ್ಳುತ್ತಿತ್ತು. ಅವ್ಯಕ್ತ ಆತ್ಮಾನುಕಂಪಕ್ಕೆ ಎಡೆಕೊಡುತ್ತಿತ್ತು. ಓದಿನಲ್ಲಿಯೇ ಆಗಲಿ, ನಿತ್ಯದ ಜೀವನದಲ್ಲಿ ಯೇ ಆಗಲಿ, ಮರುಕದ ಸನ್ನಿವೇಶಗಳಲ್ಲಿ ನೋವಿನ ನೆನಹು ಮರುಕಳಿಸಿ ಅವರ ಹೃದಯವನ್ನು ಗಾಸಿಮಾಡುತ್ತಿತ್ತು. ಒಂದು ಸಲ ವಿಶ್ವವಿದ್ಯಾಲಯ ಸಂಘದ ವಾರ್ಷಿಕೋತ್ಸವದಲ್ಲಿ ಮನೋರಂಜನೆಯ ಕಾರ್ಯಕ್ರಮದಲ್ಲಿ ಅಂಗವಿಕಲ ಮಕ್ಕಳನ್ನು ಕರೆತರಬೇಕೆಂದು ಸಹೋದ್ಯೋಗಿಯೊಬ್ಬರು ಸೂಚಿಸಿದಾಗ "ಅಯ್ಯೋ ಆ ಕುರುಡು ಮಕ್ಕಳು" ಎಂಬ ಅವರ ಉದ್ಗಾರದಲ್ಲಿ ಕಂಡ ನೋವನ್ನು ನೋಡಿದವರು ಹೇಳಿದ್ದಾರೆ. ತನ್ನ ಕುರುಡುತನವನ್ನು ಕುರಿತು ಬರೆದ ಮಿಲ್ಟನ್ ಕವಿಯ ಚತುರ್ದಶಪದಿಯನ್ನು ಅವರಿಂದ ಓದಲಾಗುತ್ತಿರಲಿಲ್ಲವಂತೆ. ಯಾರನ್ನೂ ಗದ್ಗದಿತರನ್ನಾಗಿ ಮಾಡಬಲ್ಲ ಆ ಪದ್ಯ ಶ್ರೀಕಂಠಯ್ಯನವರನ್ನು ಅತೀವವಾಗಿ ನೋಯಿಸಬಹುದಾದದ್ದರಲ್ಲಿ ಆಶ್ಚರ್ಯವಿಲ್ಲ. ಹೆಂಡತಿ ತೀರಿದ ಮಿಶನ್ ಆಸ್ಪತ್ರೆಯಲ್ಲಿ ಅವರು (ತಮ್ಮನ ಮಗಳನ್ನು ನೋಡುವುದಕ್ಕೆ ಒಮ್ಮೆಯಲ್ಲದಿದ್ದರೆ) ಮತ್ತೆ ಕಾಲಿರಿಸಲಿಲ್ಲವಂತೆ.

ಹೆಂಡತಿಯನ್ನು ಕಳೆದುಕೊಂಡಾಗ ಅವರಿಗೆ ಮೂವತ್ತರ ವಯಸ್ಸು. ದೇವಮ್ಮನ ತಂಗಿಯೊಬ್ಬಳನ್ನು ಮದುವೆಯಾಗಬೇಕೆಂದು ಮಾವ ರಾಮಸ್ವಾಮಯ್ಯನವರೇ ಮಾಡಿದ ಸೂಚನೆಯನ್ನು ನಯವಾಗಿ ನಿರಾಕರಿಸಿ ಮರುಮದುವೆಯ ಯೋಚನೆಯನ್ನು ತಳ್ಳಿಹಾಕಿದರು. ತಮ್ಮ ಜೀವನದ ಧ್ಯೇಯವೇನೆನ್ನುವುದನ್ನು ಆಗಲೆ ನಿರ್ಧರಿಸಿಕೊಂಡಿದ್ದರಿಂದ ಮನಸ್ಸನ್ನು ಪೂರ್ತಿಯಾಗಿ ಅತ್ತ ತಿರುಗಿಸಿದರು. ಕನ್ನಡಕ್ಕೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನವನ್ನು ಇಂಗ್ಲಿಷ್ ಆಕ್ರಮಿಸಿತ್ತು. ಅದನ್ನು ಮತ್ತೆ ಕನ್ನಡಕ್ಕೆ ಒದಗಿಸಬೇಕು ; ಸಂಪ್ರದಾಯದ ಸಂಕೋಲೆಗಳನ್ನು ಕಳಚಿ ಕನ್ನಡ ಸಾಹಿತ್ಯ ಹೊಸ ಜೀವಂತಿಕೆಯಿಂದ ಬೆಳೆಯಬೇಕು ; ಮನೆಮಾತು ಕನ್ನಡವಾಗಿರುವ ಕಡೆಯೆಲ್ಲವೂ ಈ ಜಾಗೃತಿಯಾಗಬೇಕಾದ್ದರಿಂದ ಹತ್ತಾರು ಆಡಳಿತಗಳಿಗೆ ಒಳಪಟ್ಟಿದ್ದ ಕನ್ನಡನಾಡು ಒಂದಾಗಬೇಕು. ಈ ಘನೋದ್ದೇಶಗಳ ಸಾಧನೆಗಾಗಿ ಅವಶ್ಯವಾಗಿದ್ದ ಸಿದ್ಧತೆಗಳಿಗೆ ತೊಡಗಿದರು. ಮುಂದಿನ ಹನ್ನೆರಡು ವರ್ಷಗಳ ಕಾಲವನ್ನು ಅವರು ಒಂದು ತಪಸ್ಸನ್ನು ಕೈಕೊಂಡವರಂತೆ ಅಧ್ಯಯನಕ್ಕೆ ಮೀಸಲಾಗಿಸಿದರು. ಆ ಕಾಲಾವಧಿಯಲ್ಲಿ "ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಂ" ಎಂಬ ಉಪನಿಷದುಪದೇಶದಂತೆ ಬೇರೆ ಯಾವುದರ ಕಡೆಗೂ ಗಮನವನ್ನು ಹರಿಯಿಸದೆ ತಮ್ಮ ದುಃಖಗಳನ್ನು ಅಧ್ಯಯನದಲ್ಲಿ ಮುಳುಗಿಸಿದರು. ಇಂಗ್ಲಿಷ್ ಸಾಹಿತ್ಯದ ಆಳವಾದ ವ್ಯಾಸಂಗಕ್ಕೆ ಅವಶ್ಯಕವಾದ ಯುರೋಪಿಯನ್ ಸಾಹಿತ್ಯದ ಪರಿಚಯವನ್ನು ಭಾಷಾಂತರಗಳ ಮೂಲಕವಾದರೆ ಗ್ರೀಕರ ಸಾಹಿತ್ಯವನ್ನು ಗ್ರೀಕ್ ಭಾಷೆ

ಯನ್ನು ಕಲಿತುಕೊಂಡು ಮೂಲದಲ್ಲಿಯೇ ಮಾಡಿಕೊಂಡರು. ಈಸ್ಕಿಲಸ್, ಸೊಫೊಕ್ಲೀಸರ ನಾಟಕಗಳನ್ನು ಅವರು ಮೂಲ ಗ್ರೀಕ್‌ನಲ್ಲಿಯೇ ಓದಬಲ್ಲವರಾಗಿದ್ದರಿಂದ ಅವುಗಳಲ್ಲಿಯ ಭಾವಸೂಕ್ಷ್ಮಗಳನ್ನೂ ಮಾತಿನ ಹಿಂದಿನ ಧ್ವನಿಯನ್ನೂ ಗ್ರಹಿಸಬಲ್ಲವರಾಗಿದ್ದರು. ಇಂಥ ಅವಿರತ ಅಧ್ಯಯನ, ಮಾಡಬೇಕೆಂದುಕೊಂಡ ಕೆಲಸದ ಅರಿವು, ಕನ್ನಡ ನಾಡು ನುಡಿಗಳ ಬಗೆಯಲ್ಲಿಯ ಅಖಂಡವಾದ ಪ್ರೀತಿ—ಇವುಗಳ ಮೂಲಕವೇ ಒದಗಿಬಂದ ವಿಪತ್ಪರಂಪರೆಯನ್ನು ಗೆದ್ದು ನಿಲ್ಲುವುದು ಶ್ರೀಕಂಠಯ್ಯನವರಿಗೆ ಸಾಧ್ಯವಾಯಿತು, ಮರುಭೂಮಿಯಲ್ಲಿ ಅಡಗಿಹೋಗಬಹುದಾಗಿದ್ದ ಕನ್ನಡ ಸಾಹಿತ್ಯವಾಹಿನಿಯನ್ನು ಅವರು ಉಳಿಸಿದರು ಎಂದು ಅವರ ಶಿಷ್ಯರೂ ಸಹೋದ್ಯೋಗಿಗಳೂ ಆಗಿದ್ದ ಪ್ರೊ. ಮೂರ್ತಿರಾಯರು ಹೇಳಿದಾಗ ಅವರ ಇನ್ನೊಬ್ಬ ಶಿಷ್ಯರೂ ಸಹೋದ್ಯೋಗಿಗಳೂ ಆಗಿದ್ದ ಪ್ರೊ. ತೀ ನಂ ಶ್ರೀ ಅವರು ಆತ್ಮಾನುಕಂಪದ ಮರುಭೂಮಿಯಲ್ಲಿ ವಿಫಲವಾಗಬಹುದಾಗಿದ್ದ ಅವರ ಜೀವನವನ್ನು ಕನ್ನಡ ಉಳಿಸಿತು ಎಂದು ಹೇಳಿದರಂತೆ. ಇಲ್ಲಿಯ ಎರಡೂ ಮಾತು ನಿಜ. ಶ್ರೀಕಂಠಯ್ಯನವರು ಕನ್ನಡವನ್ನು ಉಳಿಸಿದರು ; ಕನ್ನಡ ಶ್ರೀಕಂಠಯ್ಯನವರನ್ನು ಉಳಿಸಿತು. " ಸೈಲಾಸ್ ಮಾರ್ನರ್ " ಕಾದಂಬರಿಯಲ್ಲಿಯ ಎಪ್ಪಿ ಎಂಬ ಚಿಕ್ಕ ಮಗುವಿನ ಮೂಲಕ ಸೈಲಾಸನ ಜೀವನಶ್ರದ್ಧೆ ಮರುಕಳಿಸಿದಂತೆ ಅವರಕನ್ನಡ ಪ್ರೀತಿ ಬದುಕಿನಲ್ಲಿ ಎದುರಿಸಬೇಕಾಗಿಬಂದ ದುರಂತಗಳನ್ನು ಮರೆಯುವಂತೆ ಅಲ್ಲದಿದ್ದರೂ ಅವನ್ನು ಬದಿಗಿರಿಸಿ ಮೆಚ್ಚಿದ ಕೆಲಸವನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡಿತು.

ಸಾವಿರದೊಂಬೈನೂರ ಹತ್ತೊಂಬತ್ತರಲ್ಲಿ ಶ್ರೀಕಂಠಯ್ಯನವರಿಗೆ ಪ್ರಾಧ್ಯಾಪಕ ಪದವಿಯನ್ನು ಕೊಡಬೇಕಾಗಿ ಬಂದಾಗ ಮೇಲುದರ್ಜೆಯ ಕನ್ನಡ ಪ್ರಾಧ್ಯಾಪಕ ಸ್ಥಾನವನ್ನಾಗಲಿ ಕೆಳದರ್ಜೆಯ ಇಂಗ್ಲಿಷ್ ಪ್ರಾಧ್ಯಾಪಕ ಸ್ಥಾನವನ್ನಾಗಲಿ ಆಯ್ದುಕೊಳ್ಳುವ ಅವಕಾಶವನ್ನು ಒದಗಿಸಲಾಯಿತು. ಶ್ರೀಕಂಠಯ್ಯನವರು ಕೆಳದರ್ಜೆಯ ಇಂಗ್ಲಿಷ್ ಪ್ರಾಧ್ಯಾಪಕ ಸ್ಥಾನವನ್ನು ಆಯ್ದುಕೊಂಡದ್ದು ಅವರ ಜೀವನದಲ್ಲಿಯ ಒಂದು ಅರ್ಥಪೂರ್ಣವಾದ ಸಂಗತಿಯಾಗಿದೆ. ಅವರು ಹಾಗೆ ಮಾಡಿದ್ದು ಇಂಗ್ಲೀಷಿನ ಮೇಲಿನ ಮೋಹದಿಂದಲ್ಲ. ಅದಕ್ಕೆ ಬೇರೆ ಕಾರಣಗಳಿದ್ದವು. ಕನ್ನಡದ ಕೆಲಸವನ್ನು ಅವರು ಕನ್ನಡ ಪ್ರಾಧ್ಯಾಪಕರಾಗಿಯೇ ಮಾಡಬೇಕಿರಲಿಲ್ಲ, ಇಂಗ್ಲೀಷ್ ಪ್ರಾಧ್ಯಾಪಕರಿಗೆ ಇದ್ದ ಸ್ಥಾನಮಾನಗಳು ಕನ್ನಡದವರಿಗೆ ಸಿಕ್ಕಲಾರದ ಅಂದಿನ ಪರಿಸ್ಥಿತಿಯಲ್ಲಿ ಕೆಳದರ್ಜೆಯದಾದರೂ ಇಂಗ್ಲೀಷಿನ ಪ್ರಾಧ್ಯಾಪಕತ್ವ ತಂದುಕೊಡುವ ಸ್ಥಾನಮಾನ ಕನ್ನಡದ ಕೆಲಸಕ್ಕೆ ಹೆಚ್ಚಿನ ತೂಕವನ್ನು, ಮನ್ನಣೆಯನ್ನು ಒದಗಿಸಬಲ್ಲದೆಂಬ ಎಣಿಕೆ ಅವರದಾಗಿತ್ತು. ಅದೊಂದಲ್ಲದೆ ವಿದೇಶೀಯ ಅಥವಾ ವಿದೇಶೀಯ ಪದವಿಗಳನ್ನು ಪಡೆದು ಬಂದ ಯಾವ ಪ್ರಾಧ್ಯಾಪಕನಿಗೂ ತಾವು ಕಡಿಮೆಯಲ್ಲ ಎಂದು ತೋರಿಸಿಕೊಡುವ ಹಟವೂ ಅವರಲ್ಲಿದ್ದಿರಬಹುದಾಗಿದೆ

ಅವರ ಬಾಲ್ಯ ಸ್ನೇಹಿತರೂ ಸಹಪಾಠಿಗಳೂ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಮಾನ್ಯತೆ ಪಡೆದು ಬಂದವರೂ ಆಗಿದ್ದ ಎನ್. ಎಸ್. ಸುಬ್ಬರಾಯರು ಒಂದು ಸಂದರ್ಭದಲ್ಲಿ, ಯಾವುದಾದರೊಂದು ಇಂಗ್ಲಿಷ್ ವಿಶ್ವವಿದ್ಯಾನಿಲಯದ ಪದವಿಯನ್ನು ಪಡೆಯದೆ ವಿಶ್ವವಿದ್ಯಾನಿಲಯದಲ್ಲಿ, ವಿಶೇಷವಾಗಿ ಇಂಗ್ಲಿಷ್ ಇಲಾಖೆಯಲ್ಲಿ, ಮೇಲಕ್ಕೇರುವುದು ಸಾಧ್ಯವಿಲ್ಲ ಎಂದು ಹೇಳಿದ ಮಾತನ್ನು ಶ್ರೀಕಂಠಯ್ಯನವರು ಗುಪ್ತವಾಗಿಯೇ ಬಂದು ಸವಾಲಾಗಿ ಸ್ವೀಕರಿಸಿದ್ದರೆಂದು ಕಾಣುತ್ತದೆ.

ಅಂದಿನ ಸನ್ನಿವೇಶದಲ್ಲಿ ಸುಬ್ಬರಾಯರು ಹೇಳಿದ ಮಾತು ನಿಜವಾಗಿತ್ತು. ಇಂಗ್ಲಿಷ್ ಸಾಹಿತ್ಯ ಪಾಠವನ್ನು ಸರಿಯಾಗಿ ಹೇಳಬಲ್ಲವರು ಇಂಗ್ಲಿಷ್ ಜನವೇ ಆಗಿದ್ದ ಪ್ರಾಧ್ಯಾಪಕರು, ಭಾರತೀಯ ವಿದ್ಯಾಲಯಗಳಲ್ಲಿ ಓದಿದವರಿಂದ ಆದಾಗದು, ಎಂಬ ಕುರುಡು ನಂಬಿಕೆ ಅಂದು ಸರ್ವಸಾಮಾನ್ಯವಾಗಿತ್ತು. ಇದರಿಂದಾಗಿ ಪ್ರಾಧ್ಯಾಪಕವರ್ಗದಲ್ಲಿ ಒಂದು ಬಗೆಯ ಶ್ರೇಣಿವ್ಯವಸ್ಥೆ ಏರ್ಪಟ್ಟಿತ್ತು. ಇಲಾಖೆಯ ಮುಖ್ಯಾಧಿಕಾರಿಗಳು, ಕಾಲೇಜಿನ ಪ್ರಾಚಾರ್ಯರು, ಇಂಗ್ಲೆಂಡಿನಿಂದ ಬಂದವರೇ ಆಗಿರುತ್ತಿದ್ದರು. ಅವರಲ್ಲಿ ಕೆಲವರು ಯೋಗ್ಯತೆಯುಳ್ಳವರಾಗಿರುತ್ತಿದ್ದರೇನೋ ನಿಜ. ಆದರೆ ಹಲವರಿಗೆ ಅವರು ಆಳರಸರ ದೇಶದವರೆಂಬ ಒಂದೇ ಕಾರಣಕ್ಕಾಗಿ ಅಂಥ ಸ್ಥಾನಮಾನಗಳು ಸಿಕ್ಕುತ್ತಿದ್ದದ್ದೂ ಇತ್ತು. ಇದು ಸಾಮಾನ್ಯವಾಗಿ ಭಾರತದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಅಂದು ಇದ್ದ ಪರಿಸ್ಥಿತಿ. ರಾಜಕೀಯ ದಾಸ್ಯ ವಿದ್ಯಾಪ್ರಪಂಚದ ಮೇಲೆ ಚಾಚಿದ ಪಡಿನೆಳಲಿನ ಪರಿಣಾಮವಾಗಿ ಅಂಥವರು ಉಚ್ಚಸ್ಥಾನಗಳಲ್ಲಿಯೇ ಇರುತ್ತಿದ್ದರು. ಇವರಿಗೆ ಎರಡನೆಯ ಸ್ಥಾನದಲ್ಲಿ ವಿದೇಶೀ ವಿಶ್ವವಿದ್ಯಾನಿಲಯಗಳ ಪದವಿಗಳನ್ನು ಪಡೆದು ಬಂದವರು ನಿಲ್ಲುತ್ತಿದ್ದರು. ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡಿದವರು ಎಂಥ ವಿದ್ವಾಂಸರಾಗಿದ್ದರೂ ಮೂರನೆಯ ದರ್ಜೆಯವರಾಗಿಯೇ ಪರಿಗಣಿಸಲ್ಪಡುತ್ತಿದ್ದರು. ನಿಜವಾದ ವಿದ್ವತ್ತು, ಬೋಧನಸಾಮರ್ಥ್ಯ ನಿಕಷವಾಗಿರಬೇಕಾದ ಕ್ಷೇತ್ರದಲ್ಲಿಯ ಇಂಥ ತಾರತಮ್ಯ ಶ್ರೀಕಂಠಯ್ಯನವರಿಗೆ ಬೇಸರ ತಂದಿದ್ದರೆ ಆಶ್ಚರ್ಯವಲ್ಲ. ಇಂಗ್ಲೆಂಡಿನಿಂದ ಬಂದ ಯಾವ ಪ್ರಾಧ್ಯಾಪಕನಿಗೂ ತಾವು ವಿದ್ವತ್ತಿನಲ್ಲಿ, ಬೋಧನಸಾಮರ್ಥ್ಯದಲ್ಲಿ, ಕಡಿಮೆಯವರಲ್ಲ ಎಂದು ತೋರಿಸಿಕೊಡಬೇಕೆಂಬ ಆಕಾಂಕ್ಷೆ ಅವರಲ್ಲಿ ಮೂಡಿ ಬೆಳೆದಿದ್ದರೆ ಅದೂ ಸ್ವಾಭಾವಿಕವೆಂದೇ ಹೇಳಬೇಕು. ಸುಬ್ಬರಾಯರ ಮಾತಿನ ಮೂಲಕವೇ ಆಗಲಿ, ಪ್ರಾಧ್ಯಾಪಕ ಶ್ರೇಣಿಯಲ್ಲಿಯ ತರತಮಗಳ ಮೂಲಕವಾದ ಅಸಮಾಧಾನದಿಂದಲೇ ಆಗಲಿ, ಶ್ರೀಕಂಠಯ್ಯನವರು ಒಂದು ಆಹ್ವಾನವನ್ನು ಸ್ವೀಕರಿಸಿದವರಂತೆ ಅಸಾಧಾರಣವಾದ ಪಾಂಡಿತ್ಯವನ್ನೂ ಚಿರಕಾಲವೂ ಅವರ ವಿದ್ಯಾರ್ಥಿ ಸಮೂಹದ ಸ್ಮರಣೆಯಲ್ಲಿ ಉಳಿಯುವಂಥ ಬೋಧನ ಸಾಮರ್ಥ್ಯವನ್ನೂ ತಮ್ಮದಾಗಿಸಿಕೊಂಡರು. ಅಲ್ಲಲ್ಲಿ ಒಡಕು ದನಿಗಳು ಕೇಳಬಂದರೂ ಅವರು ಅತ್ಯುಚ್ಚ ಮಟ್ಟದ ಪ್ರಾಧ್ಯಾಪಕರೆಂದು ಅಸಮಾನವಾದ ಜನಪ್ರಿಯತೆಯನ್ನು

ಗಳಿಸಿದರು. ಶ್ರೀಕಂಠಯ್ಯನವರು ಆಕ್ಸಫರ್ಡಿಗೆ ಹೋದರೆ ಅಲ್ಲಿಯವರು ಅವರನ್ನು ಹಿಂದಕ್ಕೆ ಹೋಗಗೊಡುವುದಿಲ್ಲ ಎಂದು ಒಬ್ಬ ಆಂಗ್ಲಪ್ರಾಧ್ಯಾಪಕರೇ ಹೇಳಿದರು. ಅತ್ಯುಕ್ತಿಗೆ ಎಡೆಕೊಡದವರೂ ಮೇಲ್ಮೋರಿಕೆಯ ಮಾತುಗಳನ್ನು ಆಡುವವರಲ್ಲವೆಂದು ಹೆಸರಾದ ಇನ್ನೊಬ್ಬ ಆಂಗ್ಲಪ್ರಾಧ್ಯಾಪಕರಾಗಿದ್ದ ಮೆಕಿಂಟಾಷ್ ಅವರು "ನಿಮ್ಮ ದೇಶದ ನಂಬಿಕೆಗಳು ನಿಜವಾದರೆ ಪ್ರೊಫೆಸರ್ ಶ್ರೀಕಂಠಯ್ಯನವರು ಇಂಗ್ಲೇಂಡಿನಲ್ಲಿ ಆಕ್ಸಫರ್ಡ್ ಅಥವಾ ಕೇಂಬ್ರಿಜ್‌ನಲ್ಲಿ ಪ್ರಾಧ್ಯಾಪಕರಾಗಿ ಇದ್ದಿರಬೇಕು, ಹಿಂದಿನ ಜನ್ಮದಲ್ಲಿ" ಎಂದು ಹೇಳಿದ್ದರಂತೆ. ಮಾತು ಬರಿಯ ಉಪಚಾರದ್ದಾಗಿರಲಿಲ್ಲ. ಶ್ರೀಕಂಠಯ್ಯನವರು ತಾವು ಓದಿದ್ದನ್ನು ಪರಿಷ್ಕಾರವಾಗಿ ಓದಿದ್ದರು. ಮೂಲಗ್ರಂಥಗಳನ್ನು, ಅವುಗಳ ಮೇಲಿನ ವ್ಯಾಖ್ಯಾನ ವಿಮರ್ಶೆಗಳನ್ನು, ಸಾದ್ಯಂತವಾಗಿ ಓದಿರುತ್ತಿದ್ದರಲ್ಲದೆ ಅವೆಲ್ಲವನ್ನು ಕುರಿತು ಸ್ವತಂತ್ರವಾಗಿ ಆಲೋಚನೆಯನ್ನು ಮಾಡಿರುತ್ತಿದ್ದರು. ಇದನ್ನು ತಿಳಿದಿದ್ದ ಅವರ ಇಲಾಖೆಯ ಮುಖ್ಯಸ್ಥರಾದ ಆಂಗ್ಲ ಪ್ರಾಧ್ಯಾಪಕರೇ ಮೇಲಿನಂಥ ಮಾತುಗಳನ್ನು ಹೇಳಿರಬೇಕಾದರೆ ಶ್ರೀಕಂಠಯ್ಯನವರ ವಿದ್ವತ್ಸಾಧನೆ ಯಾವ ಮಟ್ಟದ್ದು ಎನ್ನುವುದರ ಕಲ್ಪನೆ ಅವರಿಗೆ ಇದ್ದಿರಬೇಕು. ಅವರ ವಿದ್ವತ್ತಿಗೆ ಪರಕೀಯರ ಪ್ರಶಸ್ತಿಪತ್ರ ಬೇಕಿರಲಿಲ್ಲ. ಅದು ಸ್ವಯಂಸಿದ್ಧವಾಗಿತ್ತು, ಸಹಜವೇದ್ಯವಾಗಿತ್ತು, ಪರಿಶ್ರಮಪೂರ್ವಕವಾಗಿ ಗಳಿಸಿಕೊಂಡದ್ದಾಗಿತ್ತು.

ತುಂಬು ಆಸಕ್ತಿಯಿಂದ ಸಾಹಿತ್ಯದ ಪಾಠಪ್ರವಚನಗಳನ್ನು ಮಾಡುವುದನ್ನೇ ಮೆಚ್ಚಿಕೊಂಡಿದ್ದ ಶ್ರೀಕಂಠಯ್ಯನವರನ್ನು ೧೯೨೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ರಜಿಸ್ಟ್ರಾರ್ ಎಂದು ನೇಮಕ ಮಾಡಿದಾಗ ಅದನ್ನು ಅವರು ಒಪ್ಪಿಕೊಂಡದ್ದು ಆ ಸ್ಥಾನದಲ್ಲಿದ್ದು ಕನ್ನಡಕ್ಕೆ ಪ್ರಯೋಜನವಾಗಬಲ್ಲ ಕೆಲಸಗಳನ್ನು ಮಾಡಬಹುದು ಎಂಬ ದೃಷ್ಟಿಯಿಂದಲೇ. ಅವರು ಆಡಳಿತವನ್ನು ವಹಿಸಿಕೊಂಡ ಒಂದು ವರ್ಷದಲ್ಲಿಯೇ ಅವರ ನಿರೀಕ್ಷೆಲಿ ಪೇಕ್ಷೆಗಳು ಸಫಲವಾದುವು. ಮಹಾರಾಜಾ ಕಾಲೇಜಿನಲ್ಲಿ ಸ್ನಾತಕೋತ್ತರ ಕನ್ನಡ ವಿಭಾಗವನ್ನು ತೆರೆಯಲಾಯಿತು. ಕನ್ನಡ ಇಲಾಖೆಯ ಮುಖ್ಯಸ್ಥರಾಗಿ ಪ್ರಾಧ್ಯಾಪಕ ಸ್ಥಾನವನ್ನು ಒಪ್ಪಿಕೊಳ್ಳಬೇಕೆಂಬ ಶರತ್ತಿಗೆ ಅನುಗುಣವಾಗಿ ತಮ್ಮ ಕೆಲಸದ ಜೊತೆಯಲ್ಲಿ ಅದನ್ನೂ ಒಪ್ಪಿಕೊಂಡರು. ಉಚ್ಚಮಟ್ಟದ ಕನ್ನಡ ವ್ಯಾಸಂಗ ಇದರಿಂದ ಸಾಧ್ಯವಾಯಿತು. ಕನ್ನಡದ ಮುನ್ನಡೆಯಲ್ಲಿ ಇದೊಂದು ಮಹತ್ವದ ಹೆಜ್ಜೆಯಾಯಿತು. ಹೊಸದಾಗಿ ತೆರೆಯಲಾದ ಈ ವಿಭಾಗಕ್ಕೆ ಕುವೆಂಪು ಅವರು, ತೀ.ನಂ. ಶ್ರೀಕಂಠಯ್ಯನವರು, ಡಿ. ಎಲ್. ನರಸಿಂಹಾಚಾರ್ಯರು, ಕೆ. ವಿ. ರಾಘವಾಚಾರ್ಯರು, ಮತ್ತಿತರರು ಸೇರಿಕೊಂಡು ಇಲಾಖೆಯನ್ನು ಪ್ರಾರಂಭಿಸಿದ ಶ್ರೀಕಂಠಯ್ಯನವರ ಆಕಾಂಕ್ಷೆಗಳನ್ನು ಈಡೇರಿಸುವಂತೆ ಬೆಳೆದರು. ರಜಿಸ್ಟ್ರಾರ್ ಆದ ಶ್ರೀಕಂಠಯ್ಯನವರು ಕನ್ನಡಕ್ಕಾಗಿ ಮಾಡಿದ ಈ ಕೆಲಸ ಎಷ್ಟು ಮಹತ್ವದ್ದು ಎನ್ನುವುದು ಕಾಲಕ್ರಮದಲ್ಲಿ ಸ್ಪಷ್ಟವಾಯಿತು.

ಉಚ್ಚವ್ಯಾಸಂಗಕ್ರಮದಲ್ಲಿ ಕನ್ನಡಕ್ಕೆ ಒಂದು ಸ್ಥಾನ ದೊರಕಿದ್ದು ಅವರಿಂದ. ಇದು ನಡೆದದ್ದು ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿ ಹತ್ತು ವರ್ಷಗಳ ನಂತರ. ಹತ್ತು ವರ್ಷಗಳ ನಂತರವಾದರೂ ಸಾಧ್ಯವಾದದ್ದು ಶ್ರೀಕಂಠಯ್ಯನವರ ಪ್ರಯತ್ನದ ಫಲವಾಗಿ ಎನ್ನುವುದನ್ನು ಯಾರೂ ಮರೆಯುವಹಾಗಿಲ್ಲ. ತಮ್ಮ ಆಡಳಿತ ಕಾರ್ಯಗಳ ಮಧ್ಯದಲ್ಲಿಯೂ ಅವರು ಕನ್ನಡದ ಗೌರವ ಪ್ರಾಧ್ಯಾಪಕರೆಂದು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು. ಮಾರ್ಗದರ್ಶನ ಮಾಡುತ್ತಿದ್ದರು. ಅಂಥ ಒಂದು ಸಂದರ್ಭದಲ್ಲಿ ತಮ್ಮ "ಇಂಗ್ಲಿಷ್ ಗೀತಗಳ"ಲಿಯ ಕೆಲವನ್ನು ಸ್ಮರಣೀಯವಾಗಿ ಓದಿ ಹೇಳಿ ಅನೇಕ ವಿವರಗಳನ್ನು ತಿಳಿಸಿದ್ದನ್ನು ತೀ. ನಂ. ಶ್ರೀ. ಅವರು ನೆನೆದುಕೊಂಡಿದ್ದಾರೆ.

ರಜಿಸ್ಟ್ರಾರ್ ಆಗಿದ್ದ ಅವಧಿಯಲ್ಲಿ ಅವರು ಕನ್ನಡಕ್ಕಾಗಿ ಮಾಡಿದ ಮತ್ತೊಂದು ಮಹತ್ವದ ಕೆಲಸವೆಂದರೆ ವಿಶ್ವವಿದ್ಯಾಲಯದ ಕನ್ನಡ ಗ್ರಂಥಮಾಲೆಯ ಯೋಜನೆ. ಅದು ಪ್ರಾರಂಭವಾದದ್ದು ೧೯೩೧ ರಲ್ಲಾದರೂ ಅದಕ್ಕೆ ಬೇಕಾದ ಪೂರ್ವಸಿದ್ಧತೆಯನ್ನೆಲ್ಲ ಶ್ರೀಕಂಠಯ್ಯನವರು ತಮ್ಮ ಆಡಳಿತಾಧಿಕಾರದ ಅವಧಿಯಲ್ಲಿಯೇ ಮಾಡಿ ಪೂರೈಸಿದ್ದರು. ಕನ್ನಡಕ್ಕಾಗಿ ಆನರ್ಸ್ ಹಾಗೂ ಸ್ನಾತಕೋತ್ತರ ತರಗತಿಗಳನ್ನು ಪ್ರಾರಂಭಿಸುವುದರಲ್ಲಿ, ಹಾಗೆಯೆ ಕನ್ನಡ ಗ್ರಂಥಮಾಲೆಯ ಯೋಜನೆಯನ್ನು ಮಾಡುವುದರಲ್ಲಿ, ದೇಶೀಯ ಭಾಷೆಗಳ ವಿಚಾರದಲ್ಲಿ ವಿಶ್ವಾಸವುಳ್ಳವರಾಗಿದ್ದ ವೈಸ್‌ಚಾನ್ಸಲರ್ ಬ್ರಜೇಂದ್ರನಾಥ ಶೀಲರ ಅನುಮೋದನೆಯನ್ನು ಗಳಿಸಿಕೊಂಡಿದ್ದರು. ಗ್ರಂಥಮಾಲೆಗೆ ಮೊದಲ ಅಧ್ಯಕ್ಷರಾಗಿ ಅದರ ಧ್ಯೇಯೋದ್ದೇಶಗಳನ್ನು ಸ್ಪಷ್ಟವಾಗಿ ರೂಪಿಸಿ ಕಾರ್ಯಗತವಾಗಿಸಿದರು. ಹಿಂದಿನ ಕಾವ್ಯಗಳ ಸಮಗ್ರ ಪರಿಚಯ ವಿದ್ಯಾರ್ಥಿಗಳಿಗಾಗುವಂತೆ ಮುಖ್ಯವಾದ ಕಾವ್ಯಗಳೆಲ್ಲ ಸಂಗ್ರಹವಾಗಿ ಪ್ರಕಟವಾಗಬೇಕು ಎಂಬ ಏರ್ಪಾಡನ್ನು ಮಾಡಿದರು. ಅದುವರೆಗೆ ಕಾವ್ಯಗಳಲ್ಲಿಯ ಒಂದೆರಡು ಆಶ್ವಾಸಗಳನ್ನೊ, ಆಯ್ದ ಭಾಗಗಳನ್ನೊ, ಪಾಠ್ಯಗಳಾಗಿರಿಸುವ ರೂಢಿ ಬೆಳೆದಿದ್ದಿತು. ಆ ಪದ್ಧತಿ ಕಾವ್ಯಕ್ಕೆ ಅಪಚಾರ, ಒಟ್ಟು ಕಾವ್ಯ ಹೇಗಿದೆ ಎಂದು ತಿಳಿಯದೆ ಓದುವವರಿಗೂ ಅಪಚಾರ, ಇಡೀ ಕಾವ್ಯದ ಬಗೆಯಲ್ಲಿ ತಿಳುವಳಿಕೆ ಇಲ್ಲದೆ ಸಾಹಿತ್ಯ ಕೃತಿಯನ್ನು ವ್ಯಾಸಂಗಮಾಡಬಾರದು, ವಿಮರ್ಶಿಸಬಾರದು, ಎಂಬ ದೃಷ್ಟಿಯಿಂದ ಅನಗತ್ಯದ ವಿಸ್ತಾರಗಳನ್ನು, ಉಪಕಥೆಗಳನ್ನು ಬದಿಗಿರಿಸಿ ಕಾವ್ಯದ ಪ್ರಧಾನ ಆಕೃತಿ ಯಾವುದು, ಕವಿ ಮಾಡಬೇಕೆಂದದ್ದು ಏನನ್ನು ಎನ್ನುವುದು ಮನದಟ್ಟಾಗುವಂತೆ ಸಂಗ್ರಹಗಳು ರೂಪುಗೊಳ್ಳಬೇಕೆಂದು ನಿರ್ಣಯಿಸಿದರು. ಇದರ ಜೊತೆಯಲ್ಲಿ ಕವಿ-ಕಾಲ-ಕೃತಿಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಲ್ಲಿ ವಿಮರ್ಶನವಿವೇಕವನ್ನು ಬೆಳಗಿಸುವಂತೆ ತಕ್ಕಮಟ್ಟಿಗಿನ ವಿಸ್ತಾರವಾದ ಪ್ರಸ್ತಾವನೆ, ಕೊನೆಯಲ್ಲಿ ಕ್ಲಿಷ್ಟಪದಗಳ ಅರ್ಥ ಇರಬೇಕೆಂದೂ ವಿಧಿಸಿದರು. ಹಿಂದಿನ ಕಾವ್ಯಗಳನ್ನು ಪರಿಚಯಿಸುವುದರಲ್ಲಿ, ಅವುಗಳ ಬಗೆಯಲ್ಲಿ ಸರಿಯಾದ ತಿಳುವಳಿಕೆಯನ್ನು ಉಂಟುಮಾಡುವುದರಲ್ಲಿ ಇಂಥ ಕಾವ್ಯಸಂಗ್ರಹ

ಗಳು ಎಷ್ಟು ಉಪಕಾರ ಮಾಡಬಲ್ಲವು, ಮಾಡಿದವು, ಎನ್ನುವುದನ್ನು ಬೇರೆ ಹೇಳಬೇಕಿಲ್ಲ. ಇಂಥವನ್ನು ಕಾಲೇಜು ತರಗತಿಗಳಿಗೆ ಪಾಠ್ಯಗಳನ್ನಾಗಿ ನಿಯಮಿಸಿ, ಹಳಗನ್ನಡ, ನಡುಗನ್ನಡ ಕಾವ್ಯಗಳನ್ನು ಪ್ರಚಾರಕ್ಕೆ ತರುವುದು ಸಾಧ್ಯವಾಯಿತು. ಅದಲ್ಲದೆ ಗ್ರಂಥಮಾಲೆ ಸಾಹಿತ್ಯಕ್ಕೆ ಮಾತ್ರ ಪರಿಮಿತವಾಗಿರಲಿಲ್ಲ. ಜ್ಞಾನ, ವಿಜ್ಞಾನ, ಸಂಸ್ಕೃತಿ ಪ್ರಪಂಚಕ್ಕೆ ಸೇರಿದ ವಿಷಯಗಳನ್ನು ಕುರಿತು ಅವವುಗಳ ಸ್ವರೂಪ ಪ್ರತಿಪಾದನೆಯನ್ನು ಅಧಿಕಾರಯುತವಾಗಿ ಮಾಡಬಲ್ಲವರಿಗೂ ಅದು ತೆರೆದಿತ್ತು. ಈ ಗ್ರಂಥಮಾಲೆ ಬೇರೆಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಬರೆಯುವವರ ಒಂದು ಹೊಸ ಪಡೆಯನ್ನೇ ನಿರ್ಮಿಸಿತು ಎನ್ನುವುದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಸುಲಭ ಬೆಲೆಗೆ ಸಿಕ್ಕುತ್ತಿದ್ದ ಈ ಪುಸ್ತಕಗಳು ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಸಾಮಾನ್ಯ ಸಾಹಿತ್ಯಪ್ರಿಯರ ಪ್ರೀತಿಗೂ ಪಾತ್ರವಾದವು. ಪ್ರಮಾಣ ಗ್ರಂಥಗಳ ಅಧಿಕಾರವನ್ನು ಪಡೆದವು.

ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಇಲಾಖೆಯ ಸ್ಥಾಪನೆ ಮತ್ತು ಗ್ರಂಥಮಾಲೆಯ ಯೋಜನೆ ಕನ್ನಡದ ಪ್ರಸಾರಕ್ಕೆ ಅನುಕೂಲವಾದ ವಾತಾವರಣವನ್ನು ನಿರ್ಮಿಸಿದವು. ಇದರ ಒಂದು ಪರಿಣಾಮವಾಗಿ ಶ್ರೀಕಂಠಯ್ಯನವರ ಶಿಷ್ಯಂದಿರಲ್ಲಿ ಒಬ್ಬರಾಗಿದ್ದ ತತ್ವಶಾಸ್ತ್ರ ಇಲಾಖೆಯಲ್ಲಿ ಅಧ್ಯಾಪಕರಾಗಿದ್ದ ಜಿ. ಹನುಮಂತರಾಯರು ಅಧ್ಯಾಪಕರ ಸಂಘವೊಂದನ್ನು ಪ್ರಾರಂಭಿಸಿ ಪ್ರತಿವರ್ಷ ಎರಡು ಮೂರು ಬಾರಿ ಜಿಲ್ಲಾ ತಾಲೂಕು ಕೇಂದ್ರಗಳಲ್ಲಿ ವಿವಿಧ ವಿಷಯಗಳನ್ನು ಕುರಿತಂತೆ ಕನ್ನಡದಲ್ಲಿ ಉಪನ್ಯಾಸಗಳ ಏರ್ಪಾಡನ್ನು ಮಾಡಿದರು. ಕನ್ನಡ, ಇಂಗ್ಲಿಷ್, ಗ್ರೀಕ್, ಸಾಹಿತ್ಯ, ತತ್ವಶಾಸ್ತ್ರ, ಸಮಾಜವಿಜ್ಞಾನ, ತಂತ್ರಜ್ಞಾನ, ಎಂಬೆಲ್ಲ ವಿಷಯಗಳನ್ನು ಸರಳವಾಗಿ ವಿವರಿಸುತ್ತಿದ್ದ ಈ ವ್ಯಾಖ್ಯಾನ ಮಾಲಿಕೆಯನ್ನು ಕಿರುಹೊತ್ತಿಗೆಗಳಾಗಿ ಪ್ರಕಟಿಸುವ ಯೋಜನೆ ರೂಪುಗೊಂಡಿತು. ಇದೀಗ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದ್ದ ಪ್ರಸಾರಾಂಗದ ಕಾರ್ಯ ಈ ರೀತಿ ನಿಧಾನವಾಗಿ ರೂಪತಾಳಿತು. ಎರಡಾಣೆ ಬೆಲೆಯ ಈ ಪ್ರಚಾರ ಪುಸ್ತಕಮಾಲೆ ವಿಶ್ವವಿದ್ಯಾನಿಲಯದ ಕಾರ್ಯವನ್ನು ವಿಶ್ವವಿದ್ಯಾನಿಲಯದ ಆವರಣದ ಆಚೆಯಲ್ಲಿ ಜನಸಾಮಾನ್ಯರ ವರೆಗೆ ತಲುಪಿಸುವ ಮಹತ್ಕಾರ್ಯವನ್ನು ಸಾಧಿಸಿತು. ಇದರ ಯಶಸ್ಸು ಶ್ರೇಯಸ್ಸು ಬಹುಮಟ್ಟಿಗೆ ಹನುಮಂತರಾಯರಿಗೆ ಸಲ್ಲಬೇಕಾದಲವಾದರೂ ಅದಕ್ಕೆ ಅನುಕೂಲವಾದ ವಾತಾವರಣವನ್ನು, ಕಾರ್ಯಮುಖವಾದ ಉತ್ತೇಜಕ ಪ್ರೇರಣೆಯನ್ನು, ಒದಗಿಸಿಕೊಟ್ಟವರು ಶ್ರೀಕಂಠಯ್ಯನವರೇ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಈ ಎಲ್ಲ ಕೆಲಸಗಳಿಗೆ ಇನ್ನೊಂದು ಬಗೆಯ ಮಹತ್ವವಿದ್ದಿತು. ಹತ್ತಾರು ಆಡಳಿತಗಳಿಗೆ ಒಳಪಟ್ಟಿದ್ದ ಕನ್ನಡನಾಡಿನಲ್ಲಿ ಬೇರೊಂದು ವಿಶ್ವವಿದ್ಯಾನಿಲಯವಿರಲಿಲ್ಲ. ಉತ್ತರ ಕರ್ನಾಟಕದಲ್ಲಿದ್ದ ಒಂದೇ ಒಂದು ಕಾಲೇಜು ಮುಂಬಯಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟದ್ದಾಗಿತ್ತು.

ಕನ್ನಡ ಅಲ್ಲಿ ಒಂದು ಐಚ್ಛಿಕ ವಿಷಯವಾಗಿತ್ತಲ್ಲದೆ ಹೆಚ್ಚಿನ ವ್ಯಾಸಂಗಕ್ಕೆ ಅವಕಾಶವಿರಲಿಲ್ಲ. ಮದರಾಸು ಆಧಿಪತ್ಯಕ್ಕೆ ಸೇರಿದ್ದ ಬಳ್ಳಾರಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯ ಪರಿಸ್ಥಿತಿಯಾದರೂ ಬೇರೆಯಾಗಿರಲಿಲ್ಲ. ಹೈದರಾಬಾದ ಕರ್ನಾಟಕದಲ್ಲಿಯಂತೂ ಕನ್ನಡವನ್ನು ಕೇಳುವವರೇ ಇರಲಿಲ್ಲ. ಹೀಗಾಗಿ ಕನ್ನಡ ವ್ಯಾಸಂಗಾವಕಾಶಗಳು, ಅವರ ಪ್ರಸಾರದ ಕಾರ್ಯ. ವಿಸ್ತರಿಸಬೇಕಾಗಿದ್ದರೆ ಅದು ಮೈಸೂರು ವಿಶ್ವವಿದ್ಯಾನಿಲಯದ ಮುಖಾಂತರ ಮಾತ್ರ ಸಾಧ್ಯವಿದ್ದಿತು. ಬೇರೆಡೆಗಳಲ್ಲಿ ಉತ್ಸಾಹವಿದ್ದರೂ ಕಾರ್ಯಾವಕಾಶವಿರಲಿಲ್ಲವಾದ್ದರಿಂದ ಮೈಸೂರು ವಿಶ್ವವಿದ್ಯಾನಿಲಯವೇ ಕನ್ನಡದ ಪ್ರಗತಿಕೇಂದ್ರವಾಯಿತು. ಹೊರಗಿನವರು ಅಲ್ಲಿಂದಲೇ ಸ್ಫೂರ್ತಿ ಪಡೆಯುವಂತಾಯಿತು. ಸ್ನಾತಕೋತ್ತರ ವಿಭಾಗದ ಸ್ಥಾಪನೆ, ಗ್ರಂಥಮಾಲೆಯ ಯೋಜನೆ, ಪ್ರಸಾರಾಂಗದ ಕಾರ್ಯ, ಈ ಮೂರರಿಂದಲೂ ಇಡೀ ಕನ್ನಡ ನಾಡು ಪ್ರಯೋಜನವನ್ನು ಪಡೆಯುವಂತಾಯಿತು. ಈ ಮೂರರ ಹಿಂದಿನಿಂದ ಶ್ರೀಕಂಠಯ್ಯನವರ ಪ್ರೇರಕ ಶಕ್ತಿ ಕೆಲಸಮಾಡುತ್ತಿತ್ತು. ಮಾಡಬೇಕಾಗಿದ್ದ ಕೆಲಸ ಇಡೀ ಕನ್ನಡ ನಾಡಿಗಾಗಿ ಎಂಬ ಅವರ ಧ್ಯೇಯೋದ್ದೇಶಕ್ಕೆ ಅಂದಿನ ಚಾರಿತ್ರಿಕ ಸನ್ನಿವೇಶ ಒಂದು ಬಗೆಯ ಪುಷ್ಟಿಯನ್ನು, ಸಮರ್ಥನೆಯನ್ನು, ತಂದುಕೊಟ್ಟಿತು.

೩

ಶ್ರೀಕಂಠಯ್ಯನವರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆಗಿ ಅಧಿಕಾರವಹಿಸಿಕೊಂಡ ವರ್ಷ, ೧೯೨೬, ಇಂದಿನ ಹಿನ್ನೋಟದ ಎಣಿಕೆಯಲ್ಲಿ ಒಂದು ಶುಭಸಂದರ್ಭವಾಗಿ, ಕನ್ನಡದ ಪುನರುಜ್ಜೀವನದ ಚರಿತ್ರೆಯಲ್ಲಿ ಒಂದು ಘಟ್ಟವಾಗಿ ಕಾಣುತ್ತದೆ. ಕನ್ನಡ ನವೋದಯದ ಸ್ಪಷ್ಟವಾದ ಆವಿರ್ಭಾವಕ್ಕೆ ಒಂದು ವರ್ಷವನ್ನು ನಿಗದಿಮಾಡಬಹುದಾದರೆ ಅದು ಆ ವರ್ಷ ಎನ್ನಬೇಕು. ಕನ್ನಡ ಕಾವ್ಯಪ್ರಪಂಚದಲ್ಲಿ ಒಂದು ಹೊಸ ಯುಗಮಾನವನ್ನೇ ತೆರೆದ "ಇಂಗ್ಲಿಷ್ ಗೀತಗಳು" ಆ ವರ್ಷ ಪೂರ್ತಿಯಾಗಿ ಪುಸ್ತಕ ರೂಪದಲ್ಲಿ ಹೊರಬಂದಿತು. ಶ್ರೀಕಂಠಯ್ಯನವರ ವೈಯಕ್ತಿಕ ಜೀವನದಲ್ಲಿಯೂ ಆ ವರ್ಷ ಒಂದು ಘಟ್ಟವನ್ನು ನಿರ್ದೇಶಿಸುವುದಾಗಿದೆ. ಹಿಂದಿನ ಹನ್ನೆರಡು ಹದಿನಾಲ್ಕು ವರ್ಷಗಳುದ್ದಕ್ಕೂ ಅವರು ಅವಿಶ್ರಾಂತವಾಗಿ ನಡೆಸಿದ್ದ ಏಕಾಂತ ಅಧ್ಯಯನದ ತಪಸ್ಸು ಒಂದು ಪರಿಣತಿಯ ಹಂತವನ್ನು ತಲುಪಿತ್ತು. ಕನ್ನಡದ ಕೆಲಸಕ್ಕಾಗಿ ನಡೆಯಬೇಕಾದ ಸಿದ್ಧತೆ

ಮಾಡಿಕೊಂಡವರ ಆತ್ಮವಿಶ್ವಾಸ ಪ್ರಕಟವಾಗುವುದರಲ್ಲಿತ್ತು. ಅವರ ಇಂಗ್ಲಿಷ್ ಸಾಹಿತ್ಯದ ಪಾಠಪ್ರವಚನಗಳ ಖ್ಯಾತಿ ಒಂದು ಕಡೆಯಿಂದಾದರೆ ಮಾಸ್ತಿ, ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರಿಗಳಂಥ ಕನ್ನಡದ ದಿಗ್ಗಜಗಳಿಗೆ ಕನ್ನಡ ಸಾಹಿತ್ಯದ ಚರಿತ್ರೆ ಛಂದಸ್ಸು' ವ್ಯಾಕರಣ ಪಾಠ ಹೇಳಿದ ಕೀರ್ತಿ ಇನ್ನೊಂದು ಕಡೆಯಿಂದ ಅವರದಾಗಿತ್ತು. ಕಳೆದ ಹತ್ತಾರು ವರ್ಷಗಳಲ್ಲಿ ಇಂಗ್ಲಿಷ್ ಗೀತಗಳನ್ನು ಅನುವಾದಿಸಿದ್ದರೂ ಸ್ವತಂತ್ರವಾಗಿ ಸಾಹಿತ್ಯ ನಿರ್ಮಿತಿಗೆ ಕೈಹಾಕಿರಲಿಲ್ಲ. ಪ್ರಾಧ್ಯಾಪಕರ ಹೃದಯದಲ್ಲಿ ಹುದುಗಿದ್ದ ಕಾವ್ಯ ಪ್ರತಿಭೆ ಇಂಗ್ಲಿಷ್ ಗೀತಗಳಲ್ಲಿ ಇಣುಕುತ್ತದಾದರೂ ಸ್ವತಂತ್ರ ಸಂಚಾರಕ್ಕೆಂದು ಅದು ಹೊರಬಂದಿರಲಿಲ್ಲ. ಶ್ರೀಕಂಠಯ್ಯನವರು ಬರೆದದ್ದೆಲ್ಲವೂ ಮುಂದಿನ ಹತ್ತು ವರ್ಷಗಳಲ್ಲಿ ಎನ್ನುವುದನ್ನು ನೆನೆದರೆ ಅವರ ಕಾವ್ಯಪ್ರತಿಭೆಯಾದರೂ ಅದೇ ವರ್ಷ ತನ್ನ ಚೈತ್ರ ಯಾತ್ರೆಯನ್ನು ಪ್ರಾರಂಭಿಸಿತೆಂದು ಹೇಳಬೇಕಾಗುತ್ತದೆ. ಅದುವರೆಗೆ ವಿಶ್ವವಿದ್ಯಾ ನಿಲಯಕ್ಕೆ ಸೀಮಿತವಾಗಿದ್ದ ಅವರ ಪ್ರವಚನಗಳು ಕನ್ನಡನಾಡಿಗೆಲ್ಲ ವಿಸ್ತರಿಸತೊಡಗಿದವು. ಮುಂದಿನ ಇಪ್ಪತ್ತು ವರ್ಷಗಳಕಾಲ ಕನ್ನಡದ ಪ್ರಚಾರಕ್ಕಾಗಿ ಅವರು ಕನ್ನಡನಾಡಿನ ಗಲವೂ ಕೈಕೊಂಡ ಸಂಚಾರಗಳು, ಮಾಡಿದ ಭಾಷಣಗಳು, ಹೆಚ್ಚುಕಡಿಮೆ ಅದೇ ವರ್ಷ ಪ್ರಾರಂಭವಾದುವೆಂದು ಹೇಳಬಹುದಾಗಿದೆ. ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಬಿ. ಎಂ. ಶ್ರೀಕಂಠಯ್ಯನರು ಕನ್ನಡದ "ಶ್ರೀ" ಎಂದು ಹೊರಬಂದ ವರ್ಷ ಅದು. ಹಾಗೆ ಹೊರ ಬಂದ ಅವರು ಕನ್ನಡದ ಸಿರಿಯಾದರು. ಕನ್ನಡದ ಸಿರಿಯನ್ನು ಬೆಳೆಸಿದರು.

ಶ್ರೀಕಂಠಯ್ಯನವರ ಮುಖ್ಯ ಬರವಣಿಗೆ ಎಲ್ಲವೂ ೧೯೨೬ರಿಂದ ೧೯೩೫ರ ನಡುವಿನ ಹತ್ತು ವರ್ಷಗಳಲ್ಲಿ ನಡೆಯಿತು. ಹಿಂದಿನ ಹತ್ತು ಹನ್ನೆರಡು ವರ್ಷಗಳಲ್ಲಿ ಇಂಗ್ಲಿಷ್ ಕಾವ್ಯ ಪ್ರಪಂಚದಿಂದ ಆಯ್ದುಕೊಂಡ ಭಾವಗೀತೆಗಳ ಅನುವಾದ ಕಾರ್ಯವನ್ನು ಮಾಡಿದ್ದರೂ ಅವೆಲ್ಲವನ್ನೂ ಒಂದೆಡೆ ಸೇರಿಸಿ "ಇಂಗ್ಲಿಷ್ ಗೀತಗಳು" ಎಂದು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದು ೧೯೨೬ರಲ್ಲಿ. ಮೈಸೂರು ವಿಶ್ವವಿದ್ಯಾನಿಲಯ ಸಂಘದವರು ೧೯೨೫ರಲ್ಲಿ ಒಂದು ನಾಟಕವನ್ನು ಆಡಬೇಕೆಂದಾಗ ಸಂಘದ ಅಧ್ಯಕ್ಷರಾಗಿದ್ದ ಶ್ರೀಕಂಠಯ್ಯ ನವರು ರನ್ನನ ಗದಾಯುದ್ಧವನ್ನು ನಾಟಕವನ್ನಾಗಿ ರೂಪಾಂತರಿಸಿ ಕೊಟ್ಟಿದ್ದರು. ಆ ನಾಟಕವಾದರೂ "ಗದಾಯುದ್ಧನಾಟಕಂ" ಎಂಬ ಹೆಸರಿನಿಂದ ೧೯೨೬ರಲ್ಲಿ ಪ್ರಕಟ ವಾಯಿತು. ಅವರ ಅತ್ಯುತ್ತಮ ಕೃತಿಯಾದ "ಅಶ್ವತ್ಥಾಮನ್" ನಾಟಕ ಮೊದಲು ೧೯೨೯ರಲ್ಲಿ ರಂಗಸ್ಥಳದ ಮೇಲೆ ಪ್ರದರ್ಶಿತವಾಗಿ ಪುಸ್ತಕನಾಗಿ ಮರುವರ್ಷ ಹೊರ ಬಂದಿತು. ಅವರು ಬರೆದ ಮೂರನೆಯ ನಾಟಕ "ಪಾರಸಿಕರು" ೧೯೩೫ರಲ್ಲಿ ಪ್ರಕಟ ವಾಯಿತು. ಇದಾದ ಮೇಲೆ ಯಾವ ಹೊಸ ಪೂರ್ಣಕೃತಿ ಯಾವುದನ್ನೂ ಬರೆಯಲಿಲ್ಲ ವಾದರೂ ಕನ್ನಡ ಕೈಪಿಡಿಗಾಗಿ ಕನ್ನಡ ಛಂದಸ್ಸಿನ ಚರಿತ್ರೆಯನ್ನು ೧೯೩೮ರಲ್ಲಿ ಮತ್ತು (೧೯೪೭ರಲ್ಲಿ ಪ್ರಕಟವಾದ) ಕನ್ನಡ ಸಾಹಿತ್ಯಚರಿತ್ರೆಯ ಮೊದಲ ಭಾಗವನ್ನು ಬರೆದರು.

ಅವರ ಸಂಪಾದಕತ್ವದಲ್ಲಿ ''ಕನ್ನಡ ಬಾವುಟ'' ಎಂಬ ಕವನಸಂಗ್ರಹ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಹೊರಬಂದಿತು. ವಿಶೇಷ ಸಂದರ್ಭಗಳಿಗಾಗಿ ಅವರು ಆಗೀಗ ಬರೆದ ಪದ್ಯಗಳು ಮೊದಲು ೧೯೪೩ರಲ್ಲಿಯೂ ಮತ್ತೆ ಅವರು ನಿಧನವಾದನಂತರ ೧೯೪೭ರಲ್ಲಿಯೂ " ಹೊಂಗನಸುಗಳು " ಎಂಬ ಹೆಸರಿನಲ್ಲಿ ಸಂಕಲಿತವಾದವು. ವಿದ್ಯಾವರ್ಧಕ ಸಂಘದಲ್ಲಿ ಮಾಡಿದ ಭಾಷಣ " ಕನ್ನಡ ಮಾತು ತಲೆ ಎತ್ತುವ ಬಗೆ " ಮತ್ತು ೧೯೨೮ರಲ್ಲಿ ಕಲಬುರ್ಗಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಮಾಡಿದ ಭಾಷಣ ಮತ್ತೆ ಆಗೀಗ ನೀಡಿದ ಉಪನ್ಯಾಸಗಳು, ಬರೆದ ಮುನ್ನುಡಿಗಳು, ವಿಮರ್ಶೆಗಳು, ೧೯೪೮ರಲ್ಲಿ " ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ " ಎಂಬ ಅರ್ಥಪೂರ್ಣವಾದ ಶೀರ್ಷಿಕೆಯನ್ನು ಪಡೆದು ಪುಸ್ತಕರೂಪದಲ್ಲಿ ಪ್ರಕಟವಾದವು. " ಪಾರಸಿಕರು " ನಾಟಕದ ನಂತರ ಯಾವ ಸ್ವತಂತ್ರ ಕೃತಿ ರಚನೆಗೂ ಶ್ರೀಕಂಠಯ್ಯನವರು ಕೈಹಾಕಲಿಲ್ಲ.

೪

ಮೊದಲ ದರ್ಜೆಯ ಇಂಗ್ಲಿಷ್ ಪ್ರಾಧ್ಯಾಪಕರೆಂದು ಬಡತಿಯನ್ನು ಕೊಟ್ಟು ಶ್ರೀಕಂಠಯ್ಯನವರನ್ನು ೧೯೩೦ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ವರ್ಗಮಾಡಲಾಯಿತ್ತು. ಅಲ್ಲಿಯ ಇಂಗ್ಲಿಷ್ ಇಲಾಖೆಯನ್ನು ಮೇಲ್ಪಡಿಸುವ ಉದ್ದೇಶದಿಂದ ಅವರನ್ನು ವರ್ಗಾಯಿಸಲಾಗಿತ್ತು. ಆನರ್ಸ್ ತರಗತಿಯ ಏರ್ಪಾಡು ಅಲ್ಲಿರಲಿಲ್ಲವಾದ್ದರಿಂದ ಉಚ್ಚ ಮಟ್ಟದ ಪಾಠಪ್ರವಚನಗಳಿಗೆ ಅವಕಾಶವಿರಲಿಲ್ಲ. ಕೆಲಮಟ್ಟಿಗಾದರೂ ಅಂಥ ಅವಕಾಶವನ್ನು ಒದಗಿಸುವ ದೃಷ್ಟಿಯಿಂದ ಶ್ರೀಕಂಠಯ್ಯನವರ ವಿದ್ವತ್ತು ಹಾಗೂ ಬೋಧನ ಸಾಮರ್ಥ್ಯದ ಬಗೆಯಲ್ಲಿ ತುಂಬು ಗೌರವಭಾವವನ್ನು ಬೆಳೆಯಿಸಿಕೊಂಡಿದ್ದ ಉಪಕುಲಪತಿ ಮೆಟ್ಕಾಫ್ ಅವರು ಸೆಂಟ್ರಲ್ ಕಾಲೇಜಿನಲ್ಲಿ ಭೌತವಿಜ್ಞಾನ ಹಾಗೂ ಗಣಿತದ ಜೊತೆಯಲ್ಲಿ ಇಂಗ್ಲಿಷನ್ನು ಪ್ರಧಾನ ಐಚ್ಛಿಕ ವಿಷಯವನ್ನಾಗಿ ತೆಗೆದುಕೊಳ್ಳುವಂತೆ ಏರ್ಪಾಡು ಮಾಡಿದರು. ಮೈಸೂರಿನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದ ಶ್ರೀಕಂಠಯ್ಯನವರಿಗೆ ಅದರಿಂದ ಕೆಲಮಟ್ಟಿಗಿನ ಅನುಕೂಲಾವಕಾಶವಾದರೂ ಅವರ ಯೋಗ್ಯತೆಗೆ ತಕ್ಕ ಅವಕಾಶ ಆದಾಗಲಿಲ್ಲ. ತುಂಬಿದ ಅರವತ್ತು ಬಂಡಿಗಳನ್ನು ಲೀಲಾಜಾಲವಾಗಿ ಎಳೆದುಕೊಂಡು ಮುನ್ನುಗ್ಗಬಲ್ಲ ಬೃಹಚ್ಛಕ್ತಿಯ ಎಂಜಿನ್ನಿಗೆ ನಾಲ್ಕಾರು ಡಬ್ಬಿಗಳನ್ನು ಜೋಡಿಸಿದಂತಾಯಿತು. ಅಷ್ಟಲ್ಲದೆ ಮೊದಲಿನಿಂದಲೂ ವಿಜ್ಞಾನ ಹಾಗು ತಂತ್ರ ವಿದ್ಯೆಗಳ ಕಡೆಗೆಯೇ ಹೆಚ್ಚಿನ ಒಲವನ್ನು ಬೆಳೆಯಿಸಿಕೊಂಡಿದ್ದ ಬೆಂಗಳೂರಿನ

ವಾತಾವರಣ ಮೈಸೂರಿನ ಪ್ರಶಾಂತವಾದ, ವ್ಯಾಸಂಗಾನುಕೂಲವಾದ ವಾತಾವರಣ ದಿಂದ ಬೇರೆಯಾಗಿತ್ತು. ಅಂಥದರಲ್ಲಿ ಅಥವಾ ಅಂಥದಕ್ಕೆ ಒಂದು ಪರಿಹಾರವೆಂದು ಶ್ರೀಕಂಠಯ್ಯನವರು "ಇಂಗ್ಲಿಷ್ ಸೆಮಿನಾರ್" ಎಂಬ ಸಂಸ್ಥೆಯನ್ನು ಕಾಲೇಜಿನಲ್ಲಿ ಪ್ರಾರಂಭಿಸಿದರು. ಮೈಸೂರಿನಲ್ಲಿ ವಿದ್ಯಾರ್ಥಿಗಳಿಗಾಗಿ "ಸ್ಟಡಿ ಸರ್ಕಲ್" (ವ್ಯಾಸಂಗ ಗೋಷ್ಠಿ) ನಡೆಸುತ್ತಿದ್ದರೂ ಅದರ ಕಾರ್ಯವ್ಯಾಪ್ತಿ ವಿದ್ಯಾರ್ಥಿಗಳ ವ್ಯಾಸಂಗವಿಷಯ ಗಳಿಗೆ ಸಂಬಂಧಿಸಿದಂತೆ ಮಾತ್ರ ಪರಿಮಿತವಾಗಿರುತ್ತಿತ್ತು. ಹೆಸರು "ಇಂಗ್ಲಿಷ್ ಸೆಮಿನಾರ್" ಎಂದಿದ್ದರೂ ಇಂಗ್ಲಿಷ್ ಸಾಹಿತ್ಯ ಒಂದೇ ಅಲ್ಲಿಯ ಚರ್ಚೆಗಳಿಗೆ ವಿಷಯ ವಾಗಿರಲಿಲ್ಲ. ಅದರ ಉದ್ದೇಶವ್ಯಾಪ್ತಿ ತುಂಬಾ ವಿಸ್ತಾರವಾಗಿತ್ತು. ವ್ಯಾಸಂಗ ವಿಸ್ತರಣ, ಮಾನವ ಸಂಸ್ಕೃತಿಗೆ ಸಂಬಂಧಪಟ್ಟ ವಿಷಯಗಳ ಅಧ್ಯಯನ, ಪರಿಶೀಲನ, ಚರ್ಚೆ, ಅಭಿ ಪ್ರಾಯರೂಪಣ, ಸೆಮಿನಾರಿನ ಗುರಿಯಾಗಿತ್ತು. ಒಟ್ಟಿನಲ್ಲಿ ವಿದ್ಯಾರ್ಥಿ ಹಾಗೂ ಅಧ್ಯಾ ಪಕರು ಪಾಠಕ್ರಮದ ಪರಿಮಿತಿಗಳಿಂದ ದೂರವಾಗಿ ಯಾವಯಾವುದರಿಂದ ಆಲೋಚನೆ ವಿಸ್ತರಿಸಬಹುದೊ, ವಿಮರ್ಶೆಯ ವಿವೇಕ ಬೆಳೆದು ಧರ್ಮ, ನೀತಿ, ಶಾಸ್ತ್ರ, ಸಾಹಿತ್ಯ, ಎಂಬೆಲ್ಲ ವಿಚಾರಗಳಲ್ಲಿಯೂ ಒಂದು ಸಮತೂಕದ ದೃಷ್ಟಿಯನ್ನು ತಂದು ಕೊಡ ಬಹುದೊ, ಅಂಥ ವಿಷಯಗಳನ್ನು ಚರ್ಚಿಸುವ, ತಿಳಿದುಕೊಳ್ಳುವ ಅವಕಾಶವನ್ನು ಈ ಸೆಮಿನಾರ್ ಒದಗಿಸುತ್ತಿತ್ತು. ವಾರಕ್ಕೊಂದಾವರ್ತಿ ವಿದ್ಯಾರ್ಥಿಗಳು, ಅಧ್ಯಾಪಕರು, ಆಸಕ್ತಿ ಉಳ್ಳವರು ಒಂದೆಡೆ ಸೇರುವುದು, ಮೊದಲೇ ಗೊತ್ತುಪಡಿಸಲಾದ ಯಾವುದಾದ ರೊಂದು ವಿಖ್ಯಾತ ಗ್ರಂಥವನ್ನು ಚರ್ಚೆ ಮಾಡುವುದು, ಕಾರ್ಯಕ್ರಮದ ಮುಖ್ಯಾಂಶ ವಾಗಿರುತ್ತಿತ್ತು. ಪ್ರಾಸ್ತಾವಿಕವಾಗಿ ಶ್ರೀಕಂಠಯ್ಯನವರು ವಿಷಯ ಪ್ರವೇಶವನ್ನು ಮಾಡಿಕೊಟ್ಟಮೇಲೆ ಮೂರು ನಾಲ್ಕು ಜನ ಗ್ರಂಥವನ್ನು ಕುರಿತು ಮಾತನಾಡುವುದು, ಕೊನೆಯಲ್ಲಿ ಶ್ರೀಕಂಠಯ್ಯನವರು ಸಮಾರೋಪ ಮಾಡುವುದು, ಈ ರೀತಿ ದಿನದ ಕಾರ್ಯ ಕ್ರಮ ನಡೆಯುತ್ತಿತ್ತು. ಅವರ ಸಮಾರೋಪ ಭಾಷಣ ಎತ್ತಿಕೊಂಡ ವಿಷಯವನ್ನು ನಾಲ್ಕಾರು ಕಡೆಯಿಂದ `ನೋಡಿ, ಕೂಲಂಕಷವಾಗಿ, ವಿವರವಾಗಿ, ವಿಸ್ತರಿಸುವ ಒಂದು ವಿಚಾರವಿಲಾಸವಾಗುತ್ತಿತ್ತು ಎಂದು ಅವನ್ನು ಕೇಳಿದ ಅನೇಕರು ಇಂದಿಗೂ ನೆನೆದು ಕೊಳ್ಳುತ್ತಾರೆ. ಚರ್ಚಿಸಿದ ಗ್ರಂಥಗಳ ಹೆಸರುಗಳನ್ನು ನೆನೆದರೆ ವಿಚಾರಗಳ ವ್ಯಾಪ್ತಿ ಎಷ್ಟು ವ್ಯಾಪಕವಾಗಿರುತ್ತಿತ್ತು ಎನ್ನುವುದರ ಅರಿವು ಉಂಟಾಗುತ್ತದೆ. ಬೈಬಲಿನಲ್ಲಿ ಸೇಂಟ್ ಮಾರ್ಕ್; ಬುಕ್ ಆಫ್ ಜೊಬ್ : ಕನ್‌ಫೂಷಿಯಸ್ : ಮಹಾಭಾರತದಲ್ಲಿಯ ನಳ ದಮಯಂತಿ ಸಾವಿತ್ರಿ ಪ್ರಸಂಗಗಳು : ಧಮ್ಮಪದ, ಶಾಕುಂತಲ, ಭಗವದ್ಗೀತೆ, ಕುರಾನ್, ಕಠೋಪನಿಷತ್ತು. ಇಕ್ಲೆಯಿಥಿಯಾಸ್ಟಿಸ್. ಹಿಟ್ಲರ್ ನೆಹರು ಅವರ ಆತ್ಮಚರಿತ್ರೆಗಳು, ಗಾಂಧೀಜಿಯವರ ಹಿಂದ್ ಸ್ವರಾಜ್. ಜಾರ್ಜ್‌ಎಲಿಯಟ್ಟಳ ರೊಮೊಲಾ, ಟಾಲ್‌ಸ್ಟಾಯ್ ಅವರ ವಾರ್ ಎಂಡ್ ಪೀಸ್, ರಸ್ಕಿನ್ ಗ್ರಂಥಗಳು. ಈಡಿಪಸ್, ಒರೆಸ್ಟಿಯಾ.

ಆರ್ನಾಲ್ಡನ ಕಲ್ಚರ್ ಎಂಡ್ ಅನಾರ್ಕಿ. ಡಾಂಟೆಯ ಡಿವೈನ್ ಕಾಮೆಡಿ, ಗಯಟೆಯ ಫೌಸ್ಟ್ ಮುಂತಾದುವನ್ನು ಕುರಿತು ಚರ್ಚೆ ನಡೆಯುತ್ತಿತೆಂದರೆ ಸೆಮಿನಾರ್‌ನಲ್ಲಿ ಎಷ್ಟು ಬಗೆಯ ವಿದ್ಯಾವಿಲಾಸ ಬೆಳೆಯುತ್ತಿತ್ತು, ಎಷ್ಟು ಬಗೆಯಲ್ಲಿ ವಿಚಾರ ವಿಸ್ತರಿಸುತ್ತಿತ್ತು, ಎನ್ನುವುದು ಗೊತ್ತಾಗಬಹುದು. ಅಲ್ಲದೆ ಶ್ರೀಕಂಠಯ್ಯನವರ ಆಸಕ್ತಿಗಳ ವೈವಿಧ್ಯ, ವಿದ್ವತ್ತಿನ ಆಳ ವಿಸ್ತಾರಗಳು ; ವಿದ್ಯಾರ್ಥಿಗಳು ಬರೀ ಪಾಠ್ಯಗನಳ್ನು ಓದಿ ಪರೀಕ್ಷೆ ಪಾಸು ಮಾಡಿದರೆ ಸಾಲದು; ಅಧ್ಯಾಪಕರ ಗಮನವಾದರೂ ತಾವು ಓದಿದ, ಪಾಠ ಹೇಳಬೇಕಾದ ವಿಷಯಗಳಾಚೆ ಹರಿಯಬೇಕು ಎಂಬ ಅವರ ಆಕಾಂಕ್ಷೆ ; ಮನಸ್ಸು ಹದವಾಗಿ, ವಿಶಾಲ ವಾಗಿ ಬೆಳೆಯಬೇಕು. ಅದೇ ವಿದ್ಯಾರ್ಜನೆಯ ನಿಜವಾದ ಪ್ರಯೋಜನ ಎಂಬ ನಂಬಿಕೆ, ಎಲ್ಲವೂ ಈ ಸೆಮಿನಾರಿನ ಕಾರ್ಯಕ್ರಮಗಳಲ್ಲಿ ವ್ಯಕ್ತವಾಗುತ್ತಿದ್ದವು.

ಸೆಮಿನಾರಿನ ಈ ಕಾರ್ಯಯೋಜನೆ ಮತ್ತು ಅದನ್ನು ಅವರು ನಿರ್ವಹಿಸಿಕೊಂಡು ಹೋದ ರೀತಿ ಅವರ ಆಳವಾದ ವಿದ್ವತ್ತಿಗೆ, ವಿಸ್ತಾರವಾದ ಆಸಕ್ತಿಗಳಿಗೆ, ಸಂಸ್ಕೃತಿ ಪ್ರಸಾರದ ಬಗೆಯಲ್ಲಿಯ ಅವರ ಆಕಾಂಕ್ಷೆಗೆ ಕನ್ನಡಿ ಹಿಡಿಯುತ್ತವೆ. ಎಷ್ಟು ಬಗೆಯ ಗ್ರಂಥಗಳನ್ನು ಅವರು ಎಷ್ಟು ಓದಿದ್ದರೋ ಊಹಿಸುವುದು ಕಷ್ಟ. ಮನುಷ್ಯನ ಮನಸ್ಸು ಒಳ್ಳೆಯದರತ್ತ ಒಲಿಯುವಂತೆ ಸಂಸ್ಕರಿಸಬಲ್ಲ ಯಾವುದೂ ಅವರ ಆಸಕ್ತಿ ಆಲೋಚನೆ ಗಳಿಗೆ ಹೊರತಾಗಿರಲಿಲ್ಲ. ಸಾಹಿತ್ಯದ ಪ್ರಾಧ್ಯಾಪಕರಾಗಿದ್ದರೂ ಸಾಹಿತ್ಯವೊಂದೇ ಅವರ ಅಧ್ಯಯನದ ವಿಷಯವಾಗಿರಲಿಲ್ಲ. ನ್ಯಾಯನೀತಿಗಳ ವಿಚಾರ, ಧರ್ಮಶ್ರದ್ಧೆಯ ಹಲವಾರು ಬಗೆಗಳು, ನಮ್ಮ ಪ್ರಾಚೀನ ಪುರಾಣೇತಿಹಾಸಗಳು, ಪುರಾತನ ಕಾಲದಿಂದ ಆಧುನಿಕ ಯುಗದವರೆಗೆ ಮನುಷ್ಯನ ನಿಷ್ಠೆನಂಬಿಕೆಗಳನ್ನು ರೂಪಿಸಿದ ಸಂಗತಿಗಳು, ಎಲ್ಲವೂ ಅವರಿಗೆ ಆಹಾರ್ಯವಾಗಿದ್ದವು. ಸಾಹಿತ್ಯವಂತೂ ಸರಿಯೇ. ಇಂಗ್ಲಿಷ್ ಸಾಹಿತ್ಯವನ್ನು ಆಮೂಲಾಗ್ರವಾಗಿ, ಕೂಲಂಕಷವಾಗಿ, ಅವರಷ್ಟು ವಿಚಕ್ಷಣೆಯಿಂದ ಓದಿದವರು ತೀರ ಅಪರೂಪ. ಇಲ್ಲವೆಂದರೂ ಆದೀತು. ಅದಕ್ಕೆ ಹಿನ್ನೆಲೆಯೆಂದು ಗ್ರೀಕ್ ಸಾಹಿತ್ಯವನ್ನು, ವಿಶೇಷವಾಗಿ ಗ್ರೀಕ್ ನಾಟಕಗಳನ್ನು, ಮೂಲದಲ್ಲಿಯೇ ಓದಿಕೊಂಡಿದ್ದರು. ಭಾಷಾಂ ತರಗಳ ಮೂಲಕ ಯುರೋಪಿನ ಇತರ ಸಾಹಿತ್ಯಗಳ ಪರಿಚಯವನ್ನು ಮಾಡಿಕೊಂಡಿ ದ್ದರು. ಕನ್ನಡದೊಡನೆ ಪ್ರಾಚೀನ ಸಂಬಂಧವನ್ನುಳ್ಳ ತಮಿಳು ಭಾಷೆಯ ವ್ಯಾಕರಣ, ಛಂದಸ್ಸುಗಳನ್ನು ಒಳಗೊಂಡಂತೆ ಆ ಸಾಹಿತ್ಯವನ್ನು ಹೃದ್ಗತವಾಗಿಸಿಕೊಂಡಿದ್ದರು. ಶಾಸ್ತ್ರೀಯವಾಗಿ ಸಂಸ್ಕೃತವನ್ನು ಓದಿದವರಲ್ಲವಾದರೂ ಅವರಲ್ಲಿ ಸಾಕಷ್ಟು ಪರಿಶ್ರಮ ವನ್ನು ಹೊಂದಿದ್ದರು. ಸಂದರ್ಭ ಬಂದಾಗ ಪಂಡಿತರ ಸಹಾಯ ಪಡೆದು ಮೂಲವನ್ನು ತಿಳಿದುಕೊಳ್ಳದೆ ಮುಂದುವರಿಯುತ್ತಿರಲಿಲ್ಲ. ತಮ್ಮ ''ಅಶ್ವತ್ಥಾಮನ್'' ನಾಟಕವನ್ನು ಬರೆಯುವ ಮೊದಲು ಸಂಬಂಧಪಟ್ಟ ಮಹಾಭಾರತದ ಭಾಗಗಳನ್ನು ಡಿ. ವಿ. ಜಿ. ಯವರೊಡನೆ ಓದಿಕೊಂಡದ್ದನ್ನು ಗುಂಡಪ್ಪನವರೇ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯವನ್ನು ಕುರಿತಂತೂ ಹೇಳಬೇಕಾದದ್ದೇ ಇಲ್ಲ. ಹಿರಿಯ ಕವಿಕೃತಿಗಳೆಲ್ಲವೂ ಅವರಿಗೆ ಕರತಲಾಮಲಕವಾಗಿದ್ದವು. ಎಷ್ಟು ವಿವರವಾಗಿ, ಎಂಥ ಸಹೃದಯತೆಯಿಂದ ಅವರು ಹಳಗನ್ನಡ ಕಾವ್ಯಗಳನ್ನು ಓದಿದ್ದರೆನ್ನುವುದಕ್ಕೆ ಅವರು ಬರೆದ ಸಾಹಿತ್ಯ ಚರಿತ್ರೆಯ ಭಾಗ ಸಾಕ್ಷ್ಯ ಹೇಳುತ್ತದೆ. ಆದರೆ ಕನ್ನಡ ಕಾವ್ಯಗಳಲ್ಲಿಯ ಅವರ ಆಸಕ್ತಿ ಹೃದ್ಯವಾದ ರಸಸ್ಥಾನಗಳಿಗೆ ಮಾತ್ರ ಪರಿಮಿತವಾಗಿರಲಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಅವರು ಕನ್ನಡ ಪಾಠ ಮಾಡುತ್ತಿದ್ದಾಗ, ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿಗಳು ಮುಂತಾದವರಿಗೆ ಡಿಗ್ರಿ ತರಗತಿಗಳಲ್ಲಿ ಕನ್ನಡ ಸಾಹಿತ್ಯಚರಿತ್ರೆ ಮಾತ್ರವಲ್ಲದೆ ಭಾಷಾಚರಿತ್ರೆ, ತೌಲನಿಕ ವ್ಯಾಕರಣ, ಭಾಷಾವಿಜ್ಞಾನ, ದ್ರಾವಿಡ ಛಂದಸ್ಸು ಮುಂತಾದವುಗಳನ್ನು ಪಾಠ ಹೇಳಿದ್ದರು. ಕಾವ್ಯದ ಸೊಗಸು ಅದರ ನುಡಿಗಳ ನಡೆಯಲ್ಲಿ, ಛಂದ ಅಥವಾ ಕುಣಿತದಲ್ಲಿ ಎನ್ನುವುದನ್ನು ಗುರುತಿಸಿದ್ದ ಅವರಿಗೆ ಛಂದೋರೂಪಗಳಲ್ಲಿ ವಿಶೇಷವಾದ ಆಸಕ್ತಿ ಇದ್ದಿದ್ದರಿಂದ ಆ ವಿಷಯದಲ್ಲಿ ವಿಶೇಷವಾದ ಪರಿಶ್ರಮವನ್ನು ಹೊಂದಿದ್ದರು. ಸುಭಗವಾದ ಪದ್ಯರಚನೆಯಲ್ಲಿ, ಪಾದಸಂಯೋಜನೆಯಲ್ಲಿ, ಯಾವ ಯಾವ ಅಂಶಗಳು ಸೇರಿಕೊಂಡು ಎಂಥ ಪರಿಣಾಮಗಳನ್ನುಂಟುಮಾಡುತ್ತವೆ, ಪಾದಗಳಲ್ಲಿ ಜೊತೆ, ಸಮ, ಅಸಮ ಗಣಗಳು ಯಾವ ಯಾವ ವಿನ್ಯಾಸಗಳಲ್ಲಿ ಯಾವ ರೀತಿ ಭಾವವ್ಯಂಜಕ ಸಾಮರ್ಥ್ಯವನ್ನು ಪಡೆಯುತ್ತವೆ, ಪದ್ಯದಲ್ಲಿ ಛಂದೋಲಯ, ಅಥವಾ ನಾದಗತಿ ಹೇಗೆ ಭಾವದ ಏರಿಳಿತಗಳಿಗೆ ಸಮನಾಗಿ ದುಡಿಯಬಲ್ಲದು, ಪದ್ಯದ ಮಧ್ಯದಲ್ಲಿಯ ಯತಿ, ಅಥವಾ ಪಂಕ್ತಿಯ ಕೊನೆಯಲ್ಲಿಯ ನಿಲುಗಡೆ ಭಾವದ ಒತ್ತಾಸೆಯನ್ನು ಹೇಗೆ ಸೂಚಿಸಬಲ್ಲದ್ದಾಗುತ್ತದೆ, ಒಟ್ಟಿನಲ್ಲಿ ಲಯಗತಿಯಲ್ಲಿಯ ಖಚಿತತೆ, ನಿಯತಿ, ಓಟ, ಇವೇ ವಿವಿಧ ನಡೆಯ ಛಂದೋರೂಪಗಳಿಗೆ ಮೂಲಾಧಾರವಾಗುತ್ತವೆ ಎಂಬೆಲ್ಲ ಅಂಶಗಳನ್ನು ಅವರು ಕಾವ್ಯದ ರಸಾಸ್ವಾದದ ಅಂಗವಾಗಿ ಗುರುತಿಸುತ್ತಿದ್ದರು. ಕೈಪಿಡಿಗಾಗಿ ಅವರು ಬರೆದ ಛಂದಸ್ಸಿನ ಚರಿತ್ರೆ ತಲಸ್ಪರ್ಶಿಯಾಗಿದೆ. ಪ್ರಾಚೀನ ಕಾಲದಿಂದ ಇಂದಿನವರೆಗೆ ಛಂದೋರೂಪಗಳು ಆವಿಷ್ಕಾರಗೊಂಡ ಬಗೆಯನ್ನು ಭಾವವ್ಯಂಜಕತೆಯ ಅಗತ್ಯಗಳ ದೃಷ್ಟಿಯಿಂದ ವಿವರಿಸಿದ್ದನ್ನು ನೋಡಿದರೆ ಆ ವಿಷಯವನ್ನು ಅವರು ಎಷ್ಟು ಆಳವಾಗಿ ತಿಳಿದುಕೊಂಡಿದ್ದರೆನ್ನುವುದು ಗೊತ್ತಾಗುತ್ತದೆ. ಅವರ ಪಾಲಿಗೆ ಛಂದಸ್ಸು ಒಂದು ಶಾಸ್ತ್ರವಿಷಯವಾಗಿರಲಿಲ್ಲ; ಕಾವ್ಯಾನುಭವದ ಒಂದು ಅಂಗವಾಗಿತ್ತು. ಪದಗಳಲ್ಲಿಯ "ಶಬ್ದಭಾಗ" ಆ ಅನುಭವಕ್ಕೆ ಹೇಗೆ ಇಂಬು ಕೊಡುತ್ತದೆ ಎಂಬ ಜಿಜ್ಞಾಸೆಯು ಒಂದು ಭಾಗವಾಗಿತ್ತು. ಬಹುಮುಖವಾದ ಸಾರಗ್ರಾಹಿಯಾದ ವಿದ್ವತ್ತು ಅವರದು.

೫

ಇಂಥ ವಿದ್ವತ್ತಿನ ಸಾರಸಂಗ್ರಹವೆಲ್ಲ ಅವರ ಪಾಠಪ್ರವಚನಗಳಲ್ಲಿ ವಿನಿಯೋಗವಾಗುತ್ತಿತ್ತು. ಅವರ ವಿದ್ಯಾರ್ಥಿಗಳಾಗಿದ್ದ ನೂರಾರು ಜನ ಅವರ ಪಾಠಪ್ರವಚನಗಳನ್ನು ಕೇಳುವ ಅವಕಾಶ ತಮ್ಮದಾಯಿತಲ್ಲ ಎಂದು ಕೃತಜ್ಞತೆಯಿಂದ, ಗಾಢಗೌರವಭಾವದಿಂದ ಇಂದಿಗೂ ಸ್ಮರಿಸಿಕೊಳ್ಳುತ್ತಾರೆ. ಅದೊಂದು ಜ್ಞಾನಸತ್ರ, ಅಷ್ಟೇ ಗಂಭೀರವಾಗಿ ಪರಿಷ್ಕಾರವಾಗಿ ನಡೆಯಬೇಕಾದ ಕೆಲಸ ಎಂಬಂತಿರುತ್ತಿದ್ದವು ಅವರ ತರಗತಿಗಳು ಎಂದು ಹೇಳುತ್ತಾರೆ. ಸಾರ್ವಜನಿಕ ಭಾಷಣಗಳಲ್ಲಿಯ ಅವರ ವಾಗ್ವೈಭವ ತರಗತಿಯ ಪ್ರವಚನಗಳಲ್ಲಿ ಇರುತ್ತಿರಲಿಲ್ಲವಾದರೂ ವಿಷಯ ಪ್ರತಿಪಾದನೆಯ ರೀತಿ ಎಂದಿಗೂ ಸೊಗಸಾಗಿಯೇ ಇರುತ್ತಿತ್ತು. ವಿಸ್ತಾರವಾಗಿರುತ್ತಿತ್ತು. ಕಾವ್ಯದ ಪಾಠ ಹೇಳುವಾಗಲಂತೂ ಅದರ ರಸವನ್ನು ತಾವೇ ಅನುಭವಿಸುತ್ತಿದ್ದವರಂತೆ, ಅದರೊಡನೆ ಒಂದಾಗಿ ತಮ್ಮ ರಸಾನುಭವವನ್ನು ತಮಗೆ ತಾವೇ ವಿವರಿಸಿಕೊಳ್ಳುತ್ತಿರುವಂತೆ ಸರಾಗವಾಗಿ ವಿವರಣೆ ಮುಂದುವರಿಯುತ್ತಿತ್ತು. ಪಾಠ ನಡೆಯುತ್ತಿರುವಾಗ ಅಡೆತಡೆಗಳನ್ನು ಸಹಿಸಲಾಗುತ್ತಿರಲಿಲ್ಲ. ಮಧ್ಯದಲ್ಲಿ ಯಾರೂ ಏನನ್ನೂ ಕೇಳುವ ಅವಕಾಶವಿರುತ್ತಿರಲಿಲ್ಲ. ಗಂಟೆ ಬಾರಿಸಿದ್ದೂ ಅನೇಕ ಸಲ ಗೊತ್ತಾಗುತ್ತಿರಲಿಲ್ಲ. ಸಹೃದಯರಾದ ವಿದ್ಯಾರ್ಥಿಗಳಿಗೆ ತಾವು ಬೇರೊಂದು ಪ್ರಪಂಚದಲ್ಲಿ ಓಲಾಡುತ್ತಿದ್ದ ಅನುಭವವಾಗುತ್ತಿತ್ತು. ಅವರ ಮಾತಿನ ಮಾಯಾಜಾಲ ಅಷ್ಟೊಂದು ಪ್ರಬಲವಾಗಿರುತ್ತಿತ್ತು.

ಪಾಠದ ವಿಷಯ ಯಾವುದೇ ಆದರೂ ಅದನ್ನು ಸಮಗ್ರವಾಗಿ ವಿಶ್ಲೇಷಿಸಿ ವಿವರಿಸುವುದು ಅವರ ಕ್ರಮವಾಗಿತ್ತು. ಪಾಠ್ಯವೆಂದು ನೇಮಕವಾದ ಒಂದು ಕೃತಿಯನ್ನು ಎತ್ತಿಕೊಳ್ಳುವ ಮೊದಲು ಅದಕ್ಕೆ ಹಿನ್ನೆಲೆಯಾಗಿ ಅದರ ಚಾರಿತ್ರಿಕ ಸನ್ನಿವೇಶ, ಅದನ್ನು ಬರೆದವರ ಜೀವನದ ವಿವರ, ಕೃತಿಗೂ ಸನ್ನಿವೇಶಕ್ಕೂ ಆ ಜೀವನಕ್ಕೂ ಇದ್ದಿರಬಹುದಾದ ಸಂಬಂಧ ; ಓದಬೇಕಾದ ಕೃತಿ ಕಥಾನಕವೊ ಕಾದಂಬರಿಯೊ ಆಗಿದ್ದರೆ ಆ ಸಾಹಿತ್ಯ ಪ್ರಕಾರ ನಮ್ಮಲ್ಲಿ, ಪಾಶ್ಚಾತ್ಯರಲ್ಲಿ ಹೇಗೆ ರೂಪುಗೊಂಡು ಬೆಳೆಯಿತು, ಎಂಥೆಂಥ ಆವಿಷ್ಕಾರಗಳನ್ನು ಸಾಧಿಸಿತು ಎಂಬೆಲ್ಲ ವಿಸ್ತಾರವಾದ ವಿವರಣೆಯಲ್ಲಿಯೇ ಹೇಗೆ ಮೊದಲಿನ ಮೂರು ನಾಲ್ಕು ತಿಂಗಳುಗಳು ಸರಿಯುತ್ತಿದ್ದವು ಎನ್ನುವುದನ್ನು ಅವರ ವಿದ್ಯಾರ್ಥಿಗಳಾಗಿದ್ದ ವಿ. ಸೀತಾರಾಮಯ್ಯನವರು, ಮೂರ್ತಿರಾಯರು ವಿವರಿಸಿದ್ದಾರೆ. ಆಧುನಿಕ ಭಾವಗೀತ ಸಂಗ್ರಹಗಳಲ್ಲಿಯ ಕವನಗಳನ್ನು ಕುರಿತು ಪಾಠಮಾಡಬೇಕಾದಾಗ, ಒಂದೊಂದು ಕವನವೂ ಒಂದೊಂದು ಬಗೆಯದಾಗಿರುವಾಗ, ಪಾಠ ಹೇಳುವ ಕಷ್ಟ ಹೇಳುವವನಿಗೆ ಗೊತ್ತು. ಗೋಲ್ಡನ್ ಟ್ರೆಝರಿಯಲ್ಲಿಯ ಕವನಗಳನ್ನು ಪಾಠ ಹೇಳುವಾಗ ಅವರು ಒಂದೊಂದು ಪದ್ಯವನ್ನು ಕ್ರಮವಾಗಿ ಎತ್ತಿಕೊಂಡು ವಿವರಿಸುವ ಬದಲು ಅಲ್ಲಿಯ ಪದ್ಯಗಳನ್ನೆಲ್ಲ

ನಾಲ್ಕಾರು ಗುಂಪುಗಳನ್ನಾಗಿ ವಿಂಗಡಿಸಿ ಕಾವ್ಯದಲ್ಲಿ ಪ್ರೇಮ, ವೀರ, ಮತ, ಅಧ್ಯಾತ್ಮ, ನಿಸರ್ಗದ ಮತ್ತು ಸ್ವದೇಶದ ಪ್ರೀತಿ ಹೇಗೆ ನುಡಿಯುತ್ತವೆ ; ಅಭಿವ್ಯಕ್ತಿಗಾಗಿ ಕವಿ ಸಂದರ್ಭ ಗಳನ್ನು ಕಾಲಕ್ಕೆ ತಕ್ಕಂತೆ ಹೇಗೆ ಅನಿವಾರ್ಯವಾಗಿ ಆಯ್ದುಕೊಳ್ಳುತ್ತಾನೆ, ಎಂದು ಮುಂತಾಗಿ ಒಂದು ಕಡೆಯಿಂದ ಕವಿಯ ವ್ಯಕ್ತಿತ್ವಕ್ಕೂ ಇನ್ನೊಂದು ಕಡೆಯಿಂದ ಸಮ ಕಾಲೀನ ಪರಿಸರಕ್ಕೂ ಕವಿಯ ಅನುಭವ ಹೇಗೆ ಸಂಬಂಧ ಪಡೆದಿರುತ್ತದೆ, ಇಂಥ ಎಲ್ಲ ಅಂಶಗಳ ಪರಿಜ್ಞಾನವಿಲ್ಲದೆ ಕಾವ್ಯಾನುಭವ ಆಳವಾಗಲಾರದು, ಅರ್ಥಪೂರ್ಣವಾಗ ಲಾರದು, ಎಂಬ ತಿಳುವಳಿಕೆಯನ್ನು ಕೊಡುವ ರೀತಿಯಲ್ಲಿ ಅವರ ಕಾವ್ಯಪಾಠಗಳು ನಡೆ ಯುತ್ತಿದ್ದವು ಎಂದು ಅವರ ಅನೇಕ ಶಿಷ್ಯರು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ. ಗಣಿತ, ತತ್ವಶಾಸ್ತ್ರ, ವಿಜ್ಞಾನ ವಿಷಯಗಳ ಪಾಠಕ್ರಮ ಬೇರೆಯಾಗಿರಬಲ್ಲದು. ಅಲ್ಲಿ ಎಲ್ಲವೂ ಖಚಿತವಾಗಿರುತ್ತದೆ. ಅದಕ್ಕೆ ತಕ್ಕಂತೆ ವಿವರಣೆಯೂ ನಿಖರವಾಗಿರಬೇಕಾಗು ತ್ತದೆ. ಸಾಹಿತ್ಯ ಮನುಷ್ಯನ ಭಾವಪ್ರಪಂಚಕ್ಕೆ ಸೇರಿದ ವಿಷಯ. ಅಲ್ಲಿಯ ವೈವಿಧ್ಯಗಳು, ವಿಲಾಸಗಳು, ಒಂದು ಚೌಕಟ್ಟಿನಲ್ಲಿ ಕಟ್ಟಿ ನಿಲ್ಲಲಾರವು ; ಅವೆಲ್ಲವೂ ಓದುವವರ, ವಿದ್ಯಾರ್ಥಿ ಗಳ ಅನುಭವಗಳಾಗಿ ನಿಲ್ಲಬೇಕಾದಾಗ, ಅಧ್ಯಾಪಕನಾದವನು ಅವನ್ನು ಹಾಗೆ ನಿಲ್ಲಿಸ ಬೇಕಾದಾಗ, ಪಾಠದ ರೀತಿ ಬೇರೆಯಾಗಿರಬೇಕಾಗುತ್ತದೆ. ಈ ಅರಿವೇ ಶ್ರೀಕಂಠಯ್ಯನವರ ಪಾಠಕ್ರಮವನ್ನು ವಿಶಿಷ್ಟವಾಗಿಸುತ್ತಿತ್ತು. ಹೃದಯ ಸಂವಾದದ ಒಂದು ಬಗೆಯಾಗಿ ಪರಿಣಮಿಸುವಂತೆ ಮಾಡುತ್ತಿತ್ತು.

ಈ ಸಂದರ್ಭದಲ್ಲಿ ಸಮಾಂತರ ಸನ್ನಿವೇಶವೊಂದನ್ನು ನೆನೆಯಬಹುದಾಗಿದೆ. ಇಂಗ್ಲೆಂಡಿನ ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದ ವ್ಯಾಸಂಗಕ್ಕೆ ಅವಕಾಶ ದೊರಕಿದ್ದು ಈ ಶತಮಾನದ ಮೊದಲ ಭಾಗದಲ್ಲಿ. ನಮ್ಮಲ್ಲಿಯ ಕನ್ನಡದ ಸ್ಥಿತಿಯೇ ಇಂಗ್ಲಿಷಿನದಾಗಿತ್ತು. ಸಾಹಿತ್ಯವ್ಯಾಸಂಗವೆಂದರೆ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿಯದೇ. ನಮ್ಮಲ್ಲಿಯವರು ಕನ್ನಡವನ್ನು ಪಾಮರರ ಭಾಷೆ ಎಂದ ಹಾಗೆ ಅಲ್ಲಿಯ ವಿದ್ವಾಂಸರು ಇಂಗ್ಲಿಷ್ ಇರುವುದು ಹೆಂಗಸರಿಗಾಗಿ ಎನ್ನುತ್ತಿದ್ದರು. ಕೊನೆಗೆ ಮಹಿಳೆಯರೇ ಇದನ್ನು ಪ್ರತಿಭಟಿಸಿ ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲಿಷ್ ಸಾಹಿತ್ಯದ ಅಭ್ಯಾಸಕ್ಕೆ ಸ್ಥಾನವನ್ನು ತಂದುಕೊಟ್ಟರು. ಆಕ್ಸಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷಿ ಗಾಗಿ ಪ್ರಾಧ್ಯಾಪಕರನ್ನು ನೇಮಕ ಮಾಡಬೇಕಾದಾಗ ಸೇಂಟ್ಸಬೆರಿ, ಚರ್ಟನ್ ಕಾಲಿನ್ಸರಂಥ ಮಹಾವಿದ್ವಾಂಸರನ್ನು ಬದಿಗಿರಿಸಿ ವಾಲ್ಟೆರ್ ರ್‍ಯಾಲೆಯವರನ್ನು ನಿಯಮಿಸಲಾಯಿತು. ಕಾರಣ : ಸಾಹಿತ್ಯಪಾಠ ಹೇಳಬೇಕಾದವರಲ್ಲಿ ಇರಬೇಕಾದದ್ದು ಪಾಂಡಿತ್ಯಕ್ಕಿಂತ ಹೆಚ್ಚಾಗಿ ಸಾಹಿತ್ಯದ ಬಗೆಯಲ್ಲಿ ಉತ್ಸಾಹ ; ವಿದ್ಯಾರ್ಥಿಗಳಲ್ಲಿ ಆ ಉತ್ಸಾಹವನ್ನು ಮೂಡಿಸುವ ಸಾಮರ್ಥ್ಯ. ರ್‍ಯಾಲೆ ಆ ಬಗೆಯಲ್ಲಿ ನಿಸ್ಸೀಮರೆಂದು ಅವರನ್ನು ಆಯ್ಕೆ ಮಾಡಲಾಯಿತು. ಶ್ರೀಕಂಠಯ್ಯನವರು ಅಂಥ ಸಾಮರ್ಥ್ಯಕ್ಕೆ ಇನ್ನೊಂದು ಹೆಸರು. ಜೊತೆಗೆ ಆಳವಾದ

ವಿದ್ವತ್ತೂ ಅವರದಾಗಿತ್ತೆನ್ನುವುದೊಂದು ವಿಶೇಷ. ಆಕ್ಸ್‌ಫರ್ಡಿನ ಪ್ರಾಧ್ಯಾಪಕ ರ್‍ಯಾಲಿಯವರಿಗೂ ಮೈಸೂರಿನ ಶ್ರೀಕಂಠಯ್ಯನವರಿಗೂ ಇನ್ನೊಂದು ಬಗೆಯ ಹೋಲಿಕೆ ಇತ್ತು. ವಿದ್ಯಾರ್ಥಿಗಳು ಓದಿ ಮನನ ಮಾಡಬೇಕಾದದ್ದು ನಿಯಮಿಸಲಾದ ಗ್ರಂಥಗಳನ್ನು, ಗ್ರಂಥಗಳನ್ನು ಕುರಿತ ಗ್ರಂಥಗಳನ್ನಲ್ಲ, ಓದಬೇಕಾದ ಗ್ರಂಥವೇ ಎಲ್ಲದಕ್ಕೂ ಮೂಲಾಧಾರವಾಗಿರಬೇಕು ಎನ್ನುವುದು ರ್‍ಯಾಲಿಯವರ ಧೋರಣೆಯಾಗಿತ್ತು. ಶ್ರೀಕಂಠಯ್ಯನವರಾವರೂ ಪಾಠ ಹೇಳುವಾಗ ಗ್ರಂಥದ ಬೆಲೆಗಾಣ್ಕೆಗಾಗಿ ಯಾವೊಬ್ಬ ವಿಮರ್ಶಕನ ಹೆಸರನ್ನಾಗಲಿ, ಬೇರೆಯವರ ಅಭಿಪ್ರಾಯಗಳನ್ನಾಗಲಿ ಎತ್ತಿಹೇಳುತ್ತಿರಲಿಲ್ಲ. ಎಲ್ಲವನ್ನೂ ಓದಿರುತ್ತಿದ್ದರು. ಷೇಕ್ಸ್‌ಪಿಯರ್ ಪಾಠಹೇಳುವಾಗ ವೇರಿಯೋರಂ ಆವೃತ್ತಿಯಲ್ಲಿಯ ಪಾಠಾಂತರಗಳನ್ನು ಹಾಗೂ ವಿಮರ್ಶೆಗಳನ್ನು ಮೊದಲ್ಗೊಂಡು ತಮ್ಮ ಕಾಲದಲ್ಲಿ ಆದೇ ಹೊರಬಂದಿದ್ದ ಗ್ರಾನ್‌ವಿಲ್ ಬಾರ್ಕರ್ ಮುಂತಾದವರ ವಿಮರ್ಶೆಗಳನ್ನು ಸಮಗ್ರವಾಗಿ ಓದಿಕೊಂಡಿರುತ್ತಿದ್ದರೂ ತರಗತಿಗಳಲ್ಲಿ ಯಾವೊಂದರ ನಿರ್ದೇಶವೂ ಬರುತ್ತಿರಲಿಲ್ಲ. ಬೇರೆಯವರ ವಿಮರ್ಶೆಗಳನ್ನು ಓದಬಾರದೆಂದಲ್ಲ: ಎಲ್ಲವನ್ನೂ ಓದಿದರೂ ಸ್ವಂತದ ಅಭಿಪ್ರಾಯವನ್ನು ರೂಪಿಸಿಕೊಳ್ಳುವುದು ಮುಖ್ಯ ಎನ್ನುವುದು ಅವರ ಆಶಯವಾಗಿರುತ್ತಿತ್ತು. ಬೇರೆಯವರ ಅಭಿಪ್ರಾಯ ತಮಗೆ ಒಪ್ಪಿಗೆಯಾಗದಾಗ ಅದನ್ನು ನೇರವಾಗಿ ಪ್ರತಿಭಟಿಸದೆ ನಯವಾಗಿ, ವ್ಯಂಗ್ಯವಾಗಿ, ತಮ್ಮ ಅಸಮ್ಮತಿಯನ್ನು ಸೂಚಿಸುತ್ತಿದ್ದರು.

ಅವರ ಆಳವಾದ ಪಾಂಡಿತ್ಯ ಹಾಗೂ ಸ್ವಭಾವಸಹಜವಾದ ಉತ್ಸಾಹ ಎರಡೂ ಸೇರಿ ಅವರ ಪಾಠಕ್ರಮವನ್ನು ವಿಸ್ತಾರವಾಗಿಸುತ್ತಿದ್ದವು. ಕೃತಿಯ, ಕೃತಿಕಾರನ, ಸಾಹಿತ್ಯಪ್ರಕಾರದ ಬೆಳವಣಿಗೆಗಳೆಲ್ಲವನ್ನೂ ವಿಸ್ತಾರವಾಗಿ ಮೊದಲು ವಿವರಿಸುತ್ತಿದ್ದರು ಎನ್ನುವುದನ್ನು ಆಗಲೆ ಹೇಳಿಯಾಗಿದೆ. ಅನೇಕ ಸಲ ಒಂದು ಗಂಟೆಯ ಪಾಠ ಎರಡು ಮೂರು ಗಂಟೆಗಳವರೆಗೂ ಬೆಳೆಯುತ್ತಿತ್ತು. ಕೆಲವರಿಗೆ ಇದು ಆಪ್ಯಾಯಮಾನವಾಗುತ್ತಿದ್ದರೂ ಹಲವರಿಗೆ—ವಿಶೇಷವಾಗಿ ಪರೀಕ್ಷೆಗಳ ಮೇಲೆಯೇ ಕಣ್ಣಿಟ್ಟು ಓದಬೇಕೆಂದವರಿಗೆ, ಅಥವಾ ಕೇವಲ "ಅಟೆಂಡೆನ್ಸ್"ಗಾಗಿಯೇ ತರಗತಿಗಳಿಗೆ ಬರುತ್ತಿದ್ದವರಿಗೆ ಅಥವಾ ಸ್ವಯಂಪ್ರತಿಷ್ಠಿತರಿಗೆ—ಇದೆಲ್ಲ ಅನಗತ್ಯ ಕಾಲಹರಣವಾಗಿ ಕಾಣುತ್ತಿತ್ತು. ಪಾಠ್ಯವನ್ನು ಬಿಟ್ಟು ಏನೇನೋ ಹೇಳುತ್ತಿದ್ದಾರೆ ಎನ್ನಿಸುತ್ತಿತ್ತು. ಹಾಗೆಂದುಕೊಂಡ ಕೆಲವರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್‌ವರೆಗೆ ದೂರನ್ನೂ ಹೊತ್ತಿದ್ದರು. ಶ್ರೀಕಂಠಯ್ಯನವರು ತಮಗೆ ಬಂದ ಆ ದೂರಿನ ಪ್ರತಿಯನ್ನು ತರಗತಿಯಲ್ಲಿ ಓದಿ ಹೇಳಿ ಬೋಧನದ ಮೂಲಕ ವಿದ್ಯಾರ್ಥಿಗಳಿಗೆ ಮನಸ್ಸಂಸ್ಕಾರವನ್ನು ಒದಗಿಸುವುದು ತಮ್ಮ ಕೆಲಸ, ಪರೀಕ್ಷೆಗಳಿಗಾಗಿ ಅವರನ್ನು ತಯಾರು ಮಾಡುವುದಲ್ಲ ಎಂದು ಹೇಳಿದರಂತೆ. ಉತ್ಸಾಹದಿಂದ ಸಾಹಿತ್ಯ ಪಾಠ ಹೇಳಬೇಕಾದ ಅಧ್ಯಾಪಕ ಇಂಥ ಸನ್ನಿವೇಶವನ್ನು ಯಾವಾಗಲೂ ಎದುರಿಸಬೇಕಾಗುತ್ತದೆ. ಎಲ್ಲ ವಿದ್ಯಾರ್ಥಿಗಳೂ ಒಂದೇ ಮಟ್ಟದವರಾಗಿರುವುದಿಲ್ಲ. ಒಂದೇ ಬಗೆಯ

ನಿರೀಕ್ಷೆಯನ್ನು ಇರಿಸಿಕೊಂಡಿರುವುದಿಲ್ಲ. ಹೆಚ್ಚಿನವರ ದೃಷ್ಟಿ ಪ್ರಯೋಜನಪರವಾದದ್ದೇ ಆಗಿರುತ್ತದೆ. ಕಳೆದ ಐವತ್ತು ವರ್ಷಗಳಲ್ಲಿ ಇಂಥ ದೃಷ್ಟಿ ಇನ್ನೂ ಬಲಿತಿದೆ. ಅಂಥ ಪಾಠ ಹೇಳುವವರೂ ಅಪರೂಪವಾಗಿದ್ದಾರೆ. ವಿದ್ಯಾರ್ಥಿಗಳಿಗಂತೂ ಮೊದಲೇ ಬೇಡ. ಪರೀಕ್ಷೆಗಳಿಗೆ ಎಷ್ಟು ಬೇಕೋ ಅಷ್ಟಾದರೆ ಹೆಚ್ಚಾಯಿತು ಎನ್ನುವ ಸ್ಥಿತಿ ಬೆಳೆಯುತ್ತಿದೆ. ಒಂದು ಸನ್ನಿವೇಶ ನೆನಪಾಗುತ್ತದೆ. ಮೂವತ್ತೆರಡು ವರ್ಷಗಳ ಹಿಂದೆ ಅಹಮ್ಮದಾಬಾದಿನ ಗುಜರಾತ ಕಾಲೇಜಿನಲ್ಲಿ ಪದವಿ ತರಗತಿಗೆ ಷೇಕ್ಸಪಿಯರನ ಒಥೆಲ್ಲೋ ನಾಟಕದ ಪಾಠ ಹೇಳಿ ವರ್ಷದ ಕೊನೆಯಲ್ಲಿ ಆ ನಾಟಕದಲ್ಲಿಯ ಖಲನಾಯಕನಾದ ಆಯಾಗೋನ ಪಾತ್ರವಿಶ್ಲೇಷಣೆಯನ್ನು ದಿನಕ್ಕೊಂದು ಗಂಟೆಯಂತೆ ಐದು ದಿನ ವಿಸ್ತರಿಸಿದೆ. ಉಪನ್ಯಾಸಗಳು ಮುಗಿದಾಗ ಇಬ್ಬರು ಮೂವರು ವಿದ್ಯಾರ್ಥಿಗಳು "ಪರೀಕ್ಷೆಗೆ ಇಷ್ಟೆಲ್ಲ ಬೇಕಾಗುತ್ತದೆಯೆ?" ಎಂದು ಕೇಳಿದರು. "ಹೇಳಿದಷ್ಟನ್ನು ತಿಳಿದುಕೊಂಡರೆ ಯಾವ ಪ್ರಶ್ನೆಗೂ ಉತ್ತರ ಬರೆಯಬಹುದು. ಹೇಳಿದ ಹತ್ತರಲ್ಲಿ ಅರ್ಧದಷ್ಟಾದರೂ ತಲೆಯಲ್ಲಿ ಉಳಿದರೆ ಬೇಕಾದಷ್ಟಾಯಿತು" ಎಂದು ಸಮಾಧಾನ ಹೇಳಬೇಕಾಯಿತು. ೧೯೬೦ರಲ್ಲಿ ಅದೇ ನಾಟಕದ ಅದೇ ಪಾತ್ರವನ್ನು ಅದೇ ರೀತಿ ಶಿವಮೊಗ್ಗೆಯ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ವಿಸ್ತರಿಸಿ ವಿವರಿಸಿದಾಗ ಅಂಥವೇ ಪ್ರಶ್ನೆಗಳನ್ನು ಎದುರಿಸಿ ಅಂಥದೇ ಉತ್ತರವನ್ನು ಹೇಳಬೇಕಾಯಿತು. ಶ್ರೀಕಂಠಯ್ಯನವರನ್ನು ಅಂದಿನ ವಿದ್ಯಾರ್ಥಿಗಳು ಅಂಥ ಪ್ರಶ್ನೆಯನ್ನು ಕೇಳುವ ಧೈರ್ಯಮಾಡಿರಲಾರರು. ತರಗತಿ ವಿಸ್ತರಿಸಿದಾಗ ಬೇಸರವೆನಿಸಿದವರು ಹೊರಟು ಹೋಗಬಹುದು ಎಂಬ ರಿಯಾಯಿತಿಯನ್ನೂ ಅವರು ಹೇಳುತ್ತಿದ್ದರು. ಆದರೆ ನಡುವೆಯೇ ಎದ್ದು ಹೋಗುವ ಧಾರ್ಷ್ಟ್ಯ ಯಾರಿಗಿದ್ದಿತು ?

ಶ್ರೀಕಂಠಯ್ಯನವರ ಪಾಠಕ್ರಮದ ವಿಷಯದಲ್ಲಿ ಇನ್ನೂ ಒಂದೆರಡು ಸಂಗತಿಗಳನ್ನು ನೆನೆಯಬೇಕು. ವಿದ್ವತ್ತಿನ ಜೊತೆಯಲ್ಲಿ ಕವಿಪ್ರತಿಭೆಯೂ ಅವರಲ್ಲಿ ಇದ್ದಿತಾದ್ದರಿಂದ ಅವರ ಕಾವ್ಯದ ಪಾಠ ಇನ್ನೂ ಸೊಗಯಿಸುತ್ತಿತ್ತು. ಷೇಕ್ಸಪಿಯರನ ಕೃತಿಗಳೇ ಆಗಲಿ, ಇತರ ಕವಿಗಳ ಕವನಗಳೇ ಆಗಲಿ, ಪಂಪಭಾರತವೇ ಆಗಲಿ, ಪ್ರಭುಲಿಂಗಲೀಲೆಯೇ ಆಗಲಿ, ಅವರು ಕಾವ್ಯವನ್ನು ಓದುವ ರೀತಿಯಲ್ಲಿಯೇ ಅದರ ಅರ್ಥ, ಭಾವ ಪ್ರಕಟವಾಗುತ್ತಿದ್ದವು. " ಅವರ ಓದಿನಲ್ಲಿ ಕವಿತೆಯ ಆನಂದಾನುಭವದ ಧ್ವನಿಯಿರುತ್ತಿತ್ತು. ಅದರಲ್ಲಿ ಅಭಿನಯದ ಆಡಂಬರವಿಲ್ಲ. ಕೂಗಾಟವಿಲ್ಲ. ದನಿಯ ಸೂಕ್ಷ್ಮವಾದ ಏರಿಳಿತಗಳಲ್ಲಿ ಅವರು ಕವಿತೆಯ ಜೀವಾಳವನ್ನು ಹೊರಗೆಡಹುತ್ತಿದ್ದರು. ಓದುವಾಗ ಕತ್ತು ಒಂದು ಕಡೆಗೆ ಬಾಗಿ ಸ್ವಾಭಾವಿಕವಾಗಿ ಅವರ ಕಣ್ಣುಗಳು ಆಗಾಗ್ಗೆ ಮುಚ್ಚುತ್ತಿದ್ದವು. ಇದು ಭಾವಪ್ರದರ್ಶನಕ್ಕೆ ಒಂದು ವಿಲಕ್ಷಣವಾದ ಪುಷ್ಟಿ ಕೊಡುತ್ತಿತ್ತು. ಶ್ರೀಯವರು ಒಂದು ಕವಿತೆ ಓದಿದ್ದನ್ನು ಕೇಳಿದಮೇಲೆ, ನಮ್ಮ ಜೀವಾವಧಿ ಆ ಕವಿತೆಯನ್ನು ನಮಗೆ ಪ್ರಿಯವನ್ನಾಗಿ ಮಾಡಿಕೊಂಡತೆಯೇ " ಎಂದು ಅವರ ಶಿಷ್ಯರಲ್ಲೊಬ್ಬರಾದ ಎಸ್. ವಿ.

ಶ್ರೀನಿವಾಸರಾಯರು ಉಲ್ಲೇಖಿಸಿದ್ದಾರೆ. ಇನ್ನೂ ಒಂದೆರಡು ವಿಷಯಗಳನ್ನು (ಇಂದಿನ ಅಧ್ಯಾಪಕರು. ವಿಶೇಷವಾಗಿ) ನೆನೆಯಬೇಕಾದುವಾಗಿವೆ. ಅವರು ತರಗತಿಗಳಿಗೆ ಎಂದೂ ತಡಮಾಡಿ ಹೋಗುತ್ತಿರಲಿಲ್ಲ. ತಪ್ಪಿಸುವುದೊ, ರದ್ದುಮಾಡುವುದೊ, ಅದಂತೂ ದೂರವೇ. ಹೆಂಡತಿ ತೀರಿದ ಮರುದಿನವೂ ಅವರು ತಮ್ಮ ಪಾಠವನ್ನು ಬಿಡಲಿಲ್ಲವಂತೆ. ಒಮ್ಮೆ ಬಿದ್ದು ಕೈಮೂಳೆಗೆ ಪ್ಲಾಸ್ಟರ್ ಹಾಕಿದಾಗಲೂ ನೋವಾದ ಕೈಯನ್ನು ತೂಗು ಪಟ್ಟಿಯಲ್ಲಿರಿಸಿಕೊಂಡು ಇನ್ನೊಂದರಲ್ಲಿ ಪುಸ್ತಕವನ್ನು ಹಿಡಿದು ಪಾಠ ಹೇಳಿದ್ದುಂಟು. ಹೇಳಬೇಕಾದ ಪಾಠ್ಯವನ್ನು ಆ ಮೊದಲು ಹತ್ತಾರು ಬಾರಿ ಬೋಧಿಸಿದ್ದರೂ ಪಾಠದ ದಿನ ಅದನ್ನು ಮತ್ತೊಮ್ಮೆ ನೋಡಿಕೊಳ್ಳದ ಹೊರತು ತರಗತಿಯನ್ನು ಪ್ರವೇಶಿಸುತ್ತಿರಲಿಲ್ಲ. ಹತ್ತಾರು ವರ್ಷ ಪಾಠ ಹೇಳಿದ "ಹ್ಯಾಮ್ಲೆಟ್" ನಾಟಕದ ಪುಟಗಳನ್ನು ಕಾರಿನಲ್ಲಿ ಕುಳಿತು ಕಾಲೇಜಿಗೆ ಬರುವವರೆಗೂ ಏಕಾಗ್ರಚಿತ್ತದಿಂದ ತಿರುವಿ ಹಾಕುತ್ತಿದ್ದ ಸನ್ನಿವೇಶವನ್ನು ಪ್ರೊ. ರಂಗಣ್ಣನವರು ವಿವರಿಸಿದ್ದಾರೆ.

ಶ್ರೀಕಂಠಯ್ಯನವರ ಷೇಕ್ಸ್‌ಪಿಯರ್ ಪ್ರೀತಿ ಎಲ್ಲರಿಗೂ ತಿಳಿದ ವಿಷಯ. ಅವನನ್ನು ಕುರಿತು ಏನು ಹೇಳಿದರೂ, ಎಷ್ಟು ಉಪನ್ಯಾಸಗಳನ್ನು ನೀಡಿದರೂ ಅವರಿಗೆ ತೃಪ್ತಿ ಇರಲಿಲ್ಲ. ಆತನಲ್ಲಿಯ ಕಾವ್ಯಸತ್ವ, ಜೀವನಾನುಭವದ ಆಳವಿಸ್ತಾರ. ಎತ್ತಿತೋರಿಸುವ ಅರ್ಥವಂತಿಕೆ ಇಷ್ಟು ಎಂದು ಹೇಳಿ ಮುಗಿಸುವಂಥವಲ್ಲ. ಆತ ಒಂದು ಕಾಲಕ್ಕೆ ಸೇರಿದವನಲ್ಲ, ಒಂದು ದೇಶಕ್ಕೆ ಸೇರಿದವನಲ್ಲ, ಎಲ್ಲಿಯೂ ಯಾವಾಗಲೂ ಸಲ್ಲುವ ಶುದ್ಧ ಕಾವ್ಯಪ್ರತಿಭೆಯ ಮೂರ್ತಸ್ವರೂಪ ಎಂದು ಗೌರವಿಸುತ್ತಿದ್ದರು. ಪೂಜಿಸುತ್ತಿದ್ದರು ಎಂದರೂ ಆದೀತು. ಅವನ ತರುವಾಯ ಅವರಿಗೆ ಪ್ರಿಯರಾಗಿದ್ದ ಇಂಗ್ಲಿಷ್ ಕವಿಗಳೆಂದರೆ ವರ್ಡ್ಸ್‌ವರ್ತ್, ಬ್ರೌನಿಂಗ್ ಮತ್ತು ಮ್ಯಾಥ್ಯೂ ಅರ್ನಾಲ್ಡ್. ಈ ಮೂವರ ಕೃತಿಗಳು ಅವರ ಅಂತರ್ಯದಲ್ಲಿಯ ಆಳವಾದ ಆಧ್ಯಾತ್ಮಿಕ ಚಿಂತನದ ತಂತಿಗಳನ್ನು ಮೀಟುತ್ತಿದ್ದಹಾಗಿತ್ತು. ನಿಸರ್ಗಪ್ರೀತಿಯಂತೂ ಸರಿಯೇ. ಕನ್ನಡನಾಡಿನ ಸಿರಿಯನ್ನು ಕುರಿತು (ಪಂಪನ ವಿಖ್ಯಾತ ವರ್ಣನೆಗೆ ಸಂವಾದಿಯಾಗಿ) ಅಶ್ವತ್ಥಾಮನ್ ನಾಟಕದಲ್ಲಿ ಹೃದಯಸ್ಪರ್ಶಿಯಾಗಿ ನುಡಿದಿದ್ದಾರೆ, ಪ್ರಕೃತಿಸತ್ವದ ಚೆಲುವು ಅವರನ್ನು ಮೈಮರೆಯಿಸುತ್ತಿತ್ತಲ್ಲದೆ ವರ್ಡ್ಸ್‌ವರ್ತ್‌ನಂತೆಯೆ ಲೋಕದ ಆವಿಷ್ಕಾರಗಳ ಹಿಂದಿನ ನಿಗೂಢ ಸತ್ವದ ಬಗೆಯಲ್ಲಿಯ ಆಧ್ಯಾತ್ಮಿಕ ಚಿಂತನೆಗೆ ತೊಡಗಿಸುತ್ತಿತ್ತು. "The spirit that dwells in the light of setting suns" ಅಥವಾ "The still sad music of humanity" ಎಂಬಂಥ ಮಾತುಗಳನ್ನು ವ್ಯಾಖ್ಯಾನಿಸುವಾಗ ಅವರು ಮೈಮರೆಯುತ್ತಿದ್ದರು. ಗುರಿಯನ್ನು ಗೆಲ್ಲುವುದು ಬಿಡುವುದು ತಮ್ಮ ಕೈಯಲ್ಲಿಯದಲ್ಲ. ನಿಯತವಾದ ನಿಷ್ಠೆ, ಸತತವಾದ ಪ್ರಯತ್ನ ಮಾತ್ರ ತಮ್ಮದು ಎಂಬ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದ ಅವರಿಗೆ ಬ್ರೌನಿಂಗ್‌ನ ಅದಮ್ಯ ಆಶಾವಾದ, ಧ್ಯೇಯನಿಷ್ಠೆ ಪ್ರಿಯವಾಗಿದ್ದರೆ ಆಶ್ಚರ್ಯವಲ್ಲ. ಸಣ್ಣ ಗುರಿಯನ್ನೋ ಧ್ಯೇಯವನ್ನೋ

ಇರಿಸಿಕೊಂಡು ಗೆಲ್ಲುವುದಕ್ಕಿಂತ ದೊಡ್ಡ ಗುರಿಯನ್ನಿರಿಸಿಕೊಂಡು ಸೋಲುವುದು ಮೇಲು ಎಂಬ ಆತನ ನಂಬಿಕೆ ಇವರದೂ ಆಗಿತ್ತು. ಬ್ರೌನಿಂಗನ ವಿಖ್ಯಾತವಾದ "ಪಿಪ್ಪಾ ಪಾಸಿಸ್" ಎಂಬ ಕಾವ್ಯನಾಟಕವನ್ನು ಕುರಿತು ಶ್ರೀಕಂಠಯ್ಯನವರು ಒಂದು ಸುದೀರ್ಘವಾದ ಪ್ರಬಂಧವನ್ನು ಬರೆದಿದ್ದರೆಂದೂ ಅದನ್ನು ಅಚ್ಚುಮಾಡಿಯೂ ಆಗಿತ್ತೆಂದು ವಿ. ಸೀತಾ ರಾಮಯ್ಯನವರು ಹೇಳಿದ್ದಾರೆ. ಆಧ್ಯಾತ್ಮಿಕವಾಗಿ ಒಂದು ನೆಲೆಯನ್ನು ನಿಲುಕಬೇಕಾದಾಗ ಅವರ ಅಂತರಂಗದ ಆಳವನ್ನು ಕಲಕಿದ ಒಂದು ಬಗೆಯ ಅಸ್ಪಷ್ಟ ಕಳವಳ ಬಹುಶಃ ಅವರು ಆರ್ನಾಲ್ಡ್‌ನನ್ನು ಮೆಚ್ಚುವುದಕ್ಕೆ ಕಾರಣವಾಗಿದ್ದಿತು. ಮನುಷ್ಯನ ಬದುಕನ್ನು ಆವರಿಸಿರುವ ಅನಂತ ಏಕಾಂತದ ಭಾವನೆಯನ್ನು, ನಿರಂತರವಾಗಿ ಪರಿಪೂರ್ಣತೆಯೆಡೆಗೆ ಸಾಗುತ್ತಿರಬೇಕೆಂಬ ಆಕಾಂಕ್ಷೆಯನ್ನು ಅವನಂತೆಯೆ ಶ್ರೀಕಂಠಯ್ಯನವರು ಹೃತ್ಪೂರ್ವಕ ವಾಗಿ ಮೆಚ್ಚಿಕೊಂಡಿದ್ದರು. ಒಂದು ಸಲ ಆರ್ನಾಲ್ಡ್ ಪಾಠ ಹೇಳುವಾಗ ಆತ ಡಾಂಟೆ ಯಿಂದ ಉದ್ಧರಿಸಿದ "In His will is our peace" ಎಂಬ ಪಂಕ್ತಿಯನ್ನು ಒಂದು ಬಾರಿ ಓದಿ, ಮತ್ತೆರಡು ಬಾರಿ ತಮ್ಮಷ್ಟಕ್ಕೆಯೆ ಎಂಬಂತೆ ಆ ಮಾತುಗಳನ್ನು ಹೇಳಿ ಕೊಂಡು ಅದರ ಆಶಯವನ್ನು ತಮ್ಮ ಹೃದಯದಲ್ಲಿ ತುಂಬಿಕೊಳ್ಳುತ್ತಿರುವಂತೆ ಕಣ್ಣು ಮುಚ್ಚಿಕೊಂಡು ಕ್ಷಣಕಾಲ ಮೌನವಾಗಿ ನಿಂತ ಸನ್ನಿವೇಶವನ್ನು ಪ್ರೊ. ಮೂರ್ತಿರಾಯರು ವಿವರಿಸಿದ್ದಾರೆ. ಒಟ್ಟಿನಲ್ಲಿ ಅವರ ಪಾಠಕ್ರಮವೆಂದರೆ ಸಾಹಿತ್ಯದ ಜೀವಜೀವಾಳವನ್ನು ಅನುಭವಿಸುವ. ಆ ಅನುಭವವನ್ನು ವಿದ್ಯಾರ್ಥಿಗಳಿಗಾಗಿ ವಿಶದಪಡಿಸುವ ಒಂದು ಕ್ರಿಯಾ ವಿಶೇಷವಾಗಿರುತ್ತಿತ್ತು. ಅದರಲ್ಲಿ ವಿಮರ್ಶೆಯ ಸಾರಸತ್ವವಿರುತ್ತಿತ್ತು. ಎಂಥವರ ಹೃದಯವನ್ನೂ ಕರಗಿಸುವ ಮೋಡಿ ಇರುತ್ತಿತ್ತು. ಆಳವಾದ ಅನುಭವವನ್ನು ಹೃದ್ಯ ವಾಗಿ ವ್ಯಕ್ತಪಡಿಸಬಲ್ಲ ವಾಕ್‌ಸಾಮರ್ಥ್ಯವೂ ಅವರಲ್ಲಿದ್ದಿತು. ಇವೆಲ್ಲವೂ ಸೇರಿ ಸಾಹಿತ್ಯ ಪ್ರಾಧ್ಯಾಪಕ ಎಂದರೆ ಇವರು ಎನ್ನುವಂತೆ ಮಾಡುತ್ತಿತ್ತು. ಇಂಥವರನ್ನು ಅವರ ಶಿಷ್ಯ ಕೋಟಿ ಇಂದಿಗೂ ಗೌರವಭಾವನೆಯಿಂದ, ಕೃತಜ್ಞತೆಯಿಂದ ನೆನೆಯುತ್ತಿದ್ದರೆ ಅದೊಂದು ಆಶ್ಚರ್ಯಪಡಬೇಕಾದ ಸಂಗತಿಯಲ್ಲ. ಅಧ್ಯಾಪಕನಾಗಿರುವವನಿಗೆ ಇದು ಪರಮಾ ವಧಿಯ ಕೃತಾರ್ಥತೆ. ಇಂಥ ಕೃತಾರ್ಥತೆ ಶ್ರೀಕಂಠಯ್ಯನವರದಾಗಿತ್ತು.

೬

ವಿದ್ಯಾರ್ಥಿಗಳೇ ಆಗಲಿ, ಬೇರೆಯವರೇ ಆಗಲಿ, ಶ್ರೀಕಂಠಯ್ಯನವರ ಮಾತು ಬಂದಾಗ ಲೆಲ್ಲ ಎಲ್ಲರೂ ಮೊದಲು ನೆನೆಯುವುದು ಅವರ ಭಾಷಣಗಳನ್ನು. ತುಂಬಿ ತುಳುಕುತ್ತಿದ್ದ ಅವರ ವಾಗ್ವಿಲಾಸವನ್ನು. ಬೆಂಗಳೂರಿಗೆ ವರ್ಗವಾಗಿ ಬಂದನಂತರದ ಹತ್ತು ಹದಿನೈದು

ವರ್ಷಗಳಲ್ಲಿ ಕನ್ನಡನಾಡಿನ ಉದ್ದಗಲದಲ್ಲಿಯೂ ಸಂಚರಿಸಿ ಅವರು ಮಾಡಿದ ಭಾಷಣಗಳಿಗೆ ಲೆಕ್ಕವಿಲ್ಲ. ಅವರ ಮಾತನ್ನು ಕೇಳುವುದಕ್ಕೆ ಜನಗಳು ಗಂಟೆಗಟ್ಟಲೆ ಕಾಯುತ್ತಿದ್ದರು. ಸಾಯಂಕಾಲದ ಆರು ಗಂಟೆಗೆ ನಡೆಯಬೇಕಾದ ಭಾಷಣ ಅನಿವಾರ್ಯ ಕಾರಣಗಳಿಗಾಗಿ ಅವರು ಬರುವುದು ತಡವಾದಾಗ ಮಧ್ಯರಾತ್ರಿಯವರೆಗೂ ಜನಗಳು ಕಾಯ್ದು ಕುಳಿತದ್ದುಂಟು. ರಾಯಚೂರಿನಲ್ಲಿ ಒಂದು ಸಲ ಅವರು ಅಲ್ಲಿಗೆ ತಲುಪುವುದಕ್ಕೆ ತೀರ ತಡವಾಗಿದ್ದರಿಂದ ಚೆದುರಿಹೋದ ಸಭಿಕರು ಅವರು ಬಂದ ತಿಳುವಳಿಕೆಯನ್ನು ಕೊಟ್ಟಾಗ ರಾತ್ರಿ ಎರಡು ಗಂಟೆಯ ಸಮಯದಲ್ಲಿಯೂ ಮತ್ತೆ ಸೇರಿ ಅವರ ಭಾಷಣವನ್ನು ಕೇಳಿದರಂತೆ. ಅತ್ಯುಚ್ಚ ದರ್ಜೆಯ ವಾಗ್ಮಿಗಳೆಂಬ ಕೀರ್ತಿ ಅವರಿಗೆ ಅಪಾರವಾದ ಜನಪ್ರಿಯತೆಯನ್ನು ತಂದುಕೊಟ್ಟಿತು. ಅದಕ್ಕೆ ಸರಿಯಾಗಿ ಎಲ್ಲಿಂದ ಕರೆ ಬಂದರೂ ತೀರ ಅನಿವಾರ್ಯ ಕಾರಣಗಳಿಲ್ಲದಿದ್ದರೆ ಅವರು ಆಹ್ವಾನವನ್ನು ನಿರಾಕರಿಸುತ್ತಿರಲಿಲ್ಲ. ಅವರ ಭಾಷಣವನ್ನು ಏರ್ಪಡಿಸುವುದಕ್ಕಾಗಿಯೇ ಹೊಸ ಸಂಘಸಂಸ್ಥೆಗಳು ಹುಟ್ಟಿಕೊಂಡದ್ದುಂಟೆಂದು ಹೇಳುತ್ತಾರೆ. ಷೇಕ್ಸ್‌ಪಿಯರನನ್ನು ಕುರಿತ ಅವರ ಭಾಷಣಗಳಂತೂ ವಾಗ್ಮಿತೆಯ ಪರಮೋಚ್ಚ ಸಿದ್ಧಿಗಳಾಗಿ ಪರಿಣಮಿಸುತ್ತಿದ್ದವು. ಇಂಗ್ಲಿಷನಲ್ಲಿ ಹೇಗೋ ಹಾಗೆ ಕನ್ನಡದಲ್ಲಿ, ಕನ್ನಡದಲ್ಲಿ ಹೇಗೋ ಹಾಗೆ ಇಂಗ್ಲೀಷಿನಲ್ಲಿ, ಅವರ ವಾಕ್ಪ್ರವಾಹ ನಿರರ್ಗಳವಾಗಿ, ಅಸ್ಖಲಿತವಾಗಿ, ಲಲಿತಮನೋಹರವಾಗಿ ಮುಂದುವರಿಯುತ್ತಿತ್ತು. ಅಂಥ ವಾಕ್ಪ್ರಭುತ್ವ ಒಂದು ದೈವದತ್ತ ವರ. ಸರಸ್ವತೀಪ್ರಸಾದ. ಕನ್ನಡ ಇಂಗ್ಲಿಷ್ ಎರಡು ಭಾಷೆಗಳ ಮೇಲೂ ಅಂಥ ಪ್ರಭುತ್ವವನ್ನು ಪಡೆದವರು, ಸಭಿಕರನ್ನು ಒಂದು ಬಗೆಯ ಸಮ್ಮೋಹನಕ್ಕೆ ಒಳಪಡಿಸಬಲ್ಲವರು, ಎರಡು ಗಂಟೆ ಮೂರು ಗಂಟೆ ಶ್ರೋತೃಗಳನ್ನು ಮಂತ್ರಮುಗ್ಧರಂತೆ ಸೆರೆಹಿಡಿಯ ಬಲ್ಲವರು, ಅವರಿಗೆ ಮೊದಲು ಕರ್ನಾಟಕದಲ್ಲಿ ಯಾರೂ ಇರಲಿಲ್ಲ; ಅವರ ನಂತರವೂ ಬರಲಿಲ್ಲ. ಅಂಥ ವಾಕ್ಪರಿಣತಿ ಅವರದಾಗಿತ್ತು.

ಭಾಷಣಗಳಿಗಾಗಿ ವಿಷಯದ ಕೊರತೆ ಅವರಿಗಿರಲಿಲ್ಲ. ಷೇಕ್ಸ್‌ಪಿಯರ್ ಅವರಿಗೆ ಜೀವನಸಂಗಾತಿ. ಅವರ ಷೇಕ್ಸ್‌ಪಿಯರ್ ಭಾಷಣಗಳ ಖ್ಯಾತಿ ಸುಪರಿಚಿತವಾಗಿದ್ದರಿಂದ ಅನೇಕ ಸಲ ಕನ್ನಡ ಭಾಷಣ ಮುಗಿದ ಮೇಲೆ ಅಥವಾ ಮರುದಿನ ಇಂಗ್ಲಿಷಿನ ಅಭಿಮಾನಿಗಳ ಅಪೇಕ್ಷೆಯಂತೆ ಆ ಭಾಷಣವೂ ನಡೆಯಬೇಕಾಗುತ್ತಿತ್ತು. ಜನಗಳು ತೋರಿಸುತ್ತಿದ್ದ ಗೌರವಕ್ಕೆ ಸಮನಾದ ಪ್ರೀತಿಯಿಂದ ಅವರಾದರೂ ಸಂತೋಷದಿಂದ ಒಪ್ಪಿ ಇಂಗ್ಲಿಷಿನಲ್ಲಿ ಭಾಷಣವನ್ನು ನಡೆಸಿಕೊಡುತ್ತಿದ್ದರು. ಸಾಮಾನ್ಯವಾಗಿ ಕನ್ನಡದ ಮಹಾಕಾವ್ಯಗಳಲ್ಲಿಯ ಯಾವುದಾದರೊಂದು ಸನ್ನಿವೇಶವನ್ನು ಕುರಿತಂತೆ ಅವರ ಕನ್ನಡ ಭಾಷಣಗಳು ನಡೆಯುತ್ತಿದ್ದವು. ಇಂಗ್ಲಿಷೇ ಆಗಲಿ, ಕನ್ನಡವೇ ಆಗಲಿ, ಆಯ್ದುಕೊಂಡ ನಾಟಕದಿಂದ ಅಥವಾ ಕಾವ್ಯದಿಂದ ಉದ್ದಕ್ಕೂ ಪಂಕ್ತಿಗಳನ್ನು ಉದ್ಧರಿಸಿಕೊಂಡು, ಯಾವ ಕೃತಿಯೇ ಆದರೂ ಅವರಿಗೆ ಸಮಗ್ರವಾಗಿ ನಾಲಗೆಯ ತುದಿಯಲ್ಲಿದ್ದಂತೆ ಲೀಲಾಜಾಲವಾಗಿ ಹೇಳಿ ವಿವರಿಸಿ

ಕೊಂಡು ಹೋಗುವ ಅವರ ಕ್ರಮ ಎಂದಿಗೂ ಆಶ್ಚರ್ಯವನ್ನುಂಟು ಮಾಡುತ್ತಿತ್ತು. ಭಾಷಣಗಳ ವಿಷಯವಸ್ತು ಅವರು ಮೊದಲಿಗೆಯೇ ನಿರ್ಧರಿಸಿಕೊಂಡಿರುತ್ತಿರಲಿಲ್ಲ. ಅಂದಂದಿನ ಸನ್ನಿವೇಶವೋ ಇನ್ನು ಯಾವುದೋ ಒಂದು ಪ್ರಚೋದನೆಯೋ ಭಾಷಣದ ವಿಷಯವನ್ನು ನಿರ್ಧರಿಸುತ್ತಿತ್ತು. ಇಂಥದನ್ನು ಕುರಿತು ಮಾತನಾಡುವುದು ಎಂದು ನಿಶ್ಚಯಿಸಿಕೊಂಡಮೇಲೆ ಅದನ್ನು ಮನಸ್ಸಿನಲ್ಲಿಯೇ ತಿರುವಿಹಾಕಿ ಅಲ್ಲಿಯೇ ಗುರುತು ಹಾಕಿಕೊಳ್ಳುತ್ತಿದ್ದರೆಂದು ಕಾಣುತ್ತದೆ. ಟಿಪ್ಪಣಿಗಳನ್ನು ಬರೆದಿರಿಸಿಕೊಂಡು ಅವರು ಎಂದೂ ಯಾವ ಭಾಷಣವನ್ನೂ ಮಾಡಿದ್ದಿಲ್ಲ. ಅಪ್ರಯತ್ನಿತವೆಂಬಂತೆ, ಯಾವ ಅಡೆತಡೆಯೂ ಇಲ್ಲದೆ ಹೊಮ್ಮುತ್ತಿದ್ದ ಮಾತಿನ ಪ್ರಸಾದ ಗುಣ, ಆಯ್ದುಕೊಂಡ ವಿಷಯವನ್ನು ವಿವರವಾಗಿ ವಿಸ್ತರಿಸುವ ರೀತಿ, ಅದ್ವಿತೀಯವಾಗಿರುತ್ತಿದ್ದವು. ಅವರ ಭಾಷಣಗಳ ರೀತಿ ಅವರದೇ ಎಂದು ಹೇಳದೆ ವಿಧಿಯಿಲ್ಲ.

ಅಂದಂದಿನ ಸನ್ನಿವೇಶ, ಅಥವಾ ಯಾವುದೋ ಒಂದು ಪ್ರಚೋದನೆ ಅವರ ಭಾಷಣಕ್ಕೆ ಹೇಗೆ ಪ್ರೇರಕವಾಗುತ್ತಿತ್ತು ಎನ್ನುವುದಕ್ಕೆ ಬೆಳಗಾಂವಿಯಲ್ಲಿ ಅವರು ಮಾಡಿದ ಒಂದು ಇಂಗ್ಲಿಷ್ ಭಾಷಣವನ್ನು ಕುರಿತು ವಿ. ಸೀತಾರಾಮಯ್ಯನವರು ವಿವರಿಸಿದ್ದಾರೆ. ಸ್ವಾತಂತ್ರ್ಯಾಂದೋಲನ ನಡೆಯುತ್ತಿದ್ದಾಗ ಒಂದು ಸಲ ಅಲ್ಲಿಗೆ ಹೋಗಿದ್ದಾಗ ನಾಡು ಒಂದು ದೊಡ್ಡ ಹೋರಾಟದಲ್ಲಿ ತೊಡಗಿರುವಾಗ, ಕಲೆ, ಕವಿತೆಯಂಥ ವಿಷಯಗಳಿಗಾಗಿ ವೇಳೆ ಕಳೆಯುವುದು ವ್ಯರ್ಥ ಕಾಲಹರಣ ಎಂಬ ಆಶಯದ ಮಾತುಗಳನ್ನು ಹಿರಿಯರೊಬ್ಬರು ಆಡಿದ್ದು ಶ್ರೀಕಂಠಯ್ಯನವರವರೆಗೆ ಬಂದಿತ್ತು. ಆಗಲೆ ಎರಡು ಕಡೆಗಳಲ್ಲಿ ಕನ್ನಡದಲ್ಲಿ ಮಾತನಾಡಿಯಾಗಿತ್ತು. ಅಭಿಮಾನಿಗಳು ಇಂಗ್ಲಿಷ್ ಭಾಷಣವೊಂದನ್ನು ಅಪೇಕ್ಷೆ ಮಾಡಿದರು. ರಾತ್ರಿ ಅಲ್ಲಿಯ ಸರ್ದಾರ್ ಹೈಸ್ಕೂಲಿನ ಆವರಣದಲ್ಲಿ ಸಭೆ ನಡೆಯಿತು. ಶ್ರೀಕಂಠಯ್ಯನವರು ಮಿಲ್ಟನ್ ಪಾಠ ಹೇಳಿದ್ದರೂ ಆತನ ವಿಷಯದಲ್ಲಿ ಅವರಿಗೆ ಅತಿಶಯವಾದ ಪ್ರೀತಿ ಇರಲಿಲ್ಲ. ಆದರೂ ಅಂದು ಕೇಳಿಬಂದ ಮಾತಿನ ಪ್ರಚೋದನೆಯಿಂದಾಗಿ ಕವಿಯಾದವನೂ ರಾಷ್ಟ್ರಕನೇ : ಯುದ್ಧ ಮಾಡುವ ಸೈನಿಕನೊಬ್ಬನೇ ಅಲ್ಲ ; ಅವರವರ ಕಾರ್ಯ, ಮಾರ್ಗ, ಬೇರೆ. ಆದರೆ ಕವಿ ಯಾವುದಕ್ಕೂ ಮನಸ್ಸನ್ನು ರೂಪಿಸಬಲ್ಲ, ಸ್ಫೂರ್ತಿಯನ್ನು ಒದಗಿಸಬಲ್ಲ, ಎಂದು ವಿವರಿಸುವುದಕ್ಕೆ ಮಿಲ್ಟನ್‌ಕವಿಯ ಜೀವನವನ್ನೂ ಕಾರ್ಯವನ್ನೂ ಉದಾಹರಣೆಯಾಗಿ ತೆಗೆದುಕೊಂಡರು. ಆತನ ಮಹಾಕಾವ್ಯದಿಂದ, ಸ್ಯಾಮ್‌ಸನ್ ನಾಟಕದಿಂದ, ಅಷ್ಟಷಟ್ಪದಿಗಳಿಂದ, ಕೊನೆಯಲ್ಲಿ ಎರಿಯೋಪೆಜಿಟಿಕಾದಿಂದ ಲೀಲಾಜಾಲವಾಗಿ ಉದ್ಧರಿಸಿ ಹೇಳಿ ರಾಷ್ಟ್ರಕನ ಸ್ವಾತಂತ್ರ್ಯವನ್ನು ಮಿಲ್ಟನ್ ಎಷ್ಟು ಬಗೆಯಾಗಿ ಎತ್ತಿ ಹಿಡಿದ, ರಾಜಪಕ್ಷಕ್ಕೆ ಇದಿರಾಗಿ ಕ್ರಾಮ್‌ವೆಲ್ಲನ ಕಾರ್ಯದರ್ಶಿಯಾಗಿ ಹೇಗೆ ಎಷ್ಟು ಕೆಲಸಮಾಡಿದ ಎಂದು ಸಾದ್ಯಂತವಾಗಿ ವಿವರಿಸಿ, ಸ್ವಾತಂತ್ರ್ಯಚಳುವಳಿಯಲ್ಲಿ ಕವಿಯನ್ನು ಅಲ್ಲಗಳೆಯ ಬೇಕಾಗಿಲ್ಲ, ತನ್ನ ರೀತಿಯಲ್ಲಿ ಆತ ಕೆಲಸಮಾಡುತ್ತಾನೆ, ದೇಶಾಭಿ

ಮಾನವನ್ನು ತೋರಿಸುತ್ತಾನೆ, ಇನ್ನೊಬ್ಬರಲ್ಲಿ ಅದನ್ನು ಪ್ರೇರೇಪಿಸುತ್ತಾನೆ ಎಂದು ಕವಿ ಕಾರ್ಯವನ್ನು ಸಮರ್ಥಿಸಿದರು. ಮೂರು ಗಂಟೆ ನಡೆದ ಭಾಷಣವನ್ನು ಊರಿನ ವಿದ್ಯಾವಂತರು, ಪ್ರತಿಷ್ಠಿತರು ಚಿತ್ರಾರ್ಪಿತರೆಂಬಂತೆ ಕುಳಿತು ಕೇಳಿದರು. ಭಾಷಣ ಮುಗಿದಾಗ ಮೆಚ್ಚಿಕೆಯ ಸುರಿಮಳೆಯನ್ನು ಸುರಿಸಿದರು.

ಎಂಥವರಿಗೂ ಎಂಥ ವಿಷಯವನ್ನೂ ತಿಳಿಯಾಗಿ ವಿಶದಪಡಿಸಬಲ್ಲ ಅವರ ಮಾತುಗಾರಿಕೆಯ ಮಾಟ ಅವರ ಒಳಮನಸ್ಸಿನ ತಿಳಿಯ, ತಿಳುವಳಿಕೆಯ ಪ್ರತೀಕವಾಗಿ ಶ್ರೋತೃಗಳನ್ನು ಸೆರೆಹಿಡಿಯುತ್ತಿತ್ತು. ಹೇಳುವ ಕೇಳುವ ಇಬ್ಬರಿಗೂ ಅವರ ವಿದ್ವತ್ತು ಎಂದಿಗೂ ಹೊರೆಯಾಗುತ್ತಿರಲಿಲ್ಲ. ಹಳಗನ್ನಡದ ಪರಿಚಯವಿರದ ಸಭಿಕರಿಗಾಗಿ, ಕನ್ನಡದ ಜೊತೆಯಲ್ಲಿ ಉರ್ದು ತೆಲುಗು ಬಳಕೆಯಲ್ಲಿದ್ದ ಜನಗಳಿಗಾಗಿ ಅವರು ಪಂಪನ ಆದಿ ಪುರಾಣವನ್ನು ಕುರಿತು ಭಾಷಣ ಮಾಡಿದ್ದುಂಟು! ಒಂದು ಜೀವ ಧರ್ಮದ ಕಡೆಗೆ ಒಲಿದು, ಕರ್ಮಗಳನ್ನು ನೀಗಿಕೊಂಡು, ಸತ್ಕಾರ್ಯಗಳಿಂದ ಜಿನಸಿದ್ಧಿಯನ್ನು ಪಡೆದ ಕಥೆಯನ್ನು ಹೃದಯಂಗಮವಾಗಿ ಹೇಳಿ ಅಂಥ ಒಬ್ಬ ಮಹಾತ್ಮನ ಮೂರು ನಾಲ್ಕು ಜನ್ಮಗಳ ಕಥಾಭಾಗವನ್ನು ಓದಿ ತೋರಿಸಿದರಂತೆ. ತಿಳಿಯಾಗಿ, ಸರಸವಾಗಿ, ಸುಲಭವಾಗಿ, ಕೇಳುವವರ ಕುತೂಹಲ ಕೆಡದಂತೆ ಸುಮಾರು ಒಂದು ಒಂದೂವರೆ ಗಂಟೆ ಸಾಮಾನ್ಯ ಶ್ರೋತೃಗಳಿಗೆ ಆ ಹಳಗನ್ನಡ ಕಾವ್ಯವನ್ನು ಹೇಳಬೇಕಾದರೆ,—ಅದೊಂದು ಸಾಮಾನ್ಯ ಸಾಧನೆಯಲ್ಲ. ಅವರ ಕೊರಲಿನ ನಾದಶಕ್ತಿ ಅದು. ಅವರ ನಾಲಗೆಯನ್ನು ನಡೆಸುತ್ತಿದ್ದ ಮನಸ್ಸಿನ ಹದ ಅದು. ಅರ್ಥ ತಾನೇ ವಿಶದವಾಗುವಂತೆ ಓದುವ, ಹೇಳುವ, ರೀತಿಯ ವಿಶೇಷ ಅದು. ಈ ಭಾಷಣ, ಓದು, ನಡೆದದ್ದು ರಾತ್ರಿಯ ಎರಡು ಗಂಟೆಗೆ ಎನ್ನುವುದಾದರೂ ನೆನೆಯಬೇಕಾದ ಸಂಗತಿಯೇ. ಆದಿಪುರಾಣವೇ ಆಗಲಿ, ಯಶೋಧರ ಚರಿತೆಯೇ ಆಗಲಿ, ಶಾಂತಿಪುರಾಣವೇ ಆಗಲಿ, ಅಥವಾ ಮಾರ್ಕಸ್ ಆರೀಲಿಯಸ್, ರಿಪಬ್ಲಿಕ್, ಸೇಂಟ್ ಮಾರ್ಕ್, ಗಯಟೆ, ಯಾವುದೇ ಆಗಲಿ, ಒಂದು ಸಂಪೂರ್ಣ ದೃಷ್ಟಿ, ಸಮಗ್ರವಾದ ಯೋಚನಾವಿಲಾಸ, ಒಂದೊಂದು ಪ್ರಪಂಚವನ್ನೂ ವಿವರವಾಗಿ, ವಿಶದವಾಗಿ ಪರಿಚಯ ಮಾಡಿಕೊಡುತ್ತಿದ್ದವು. ಎತ್ತಿಕೊಂಡ ವಿಷಯದ ಚಾರಿತ್ರಿಕ ಆವರಣ, ಅದರ ಇತಿಮಿತಿಗಳು, ಅದಕ್ಕೆ ಸಂಬಂಧಿಸಿದ ತತ್ವದರ್ಶನ, ಯಾವುದು ಮುಖ್ಯ, ಯಾವುದು ಅಲ್ಲ, ಎನ್ನುವುದೆಲ್ಲ ಅವರ ಮನಸ್ಸಿನಲ್ಲಿ ನಿಚ್ಚಳವಾಗಿರುತ್ತಿತ್ತು. ಅಂತೆಯೇ ಅದು ಮಾತಿನಲ್ಲಿ ತಿಳಿಯಾಗಿ ಹೊರಬರುತ್ತಿತ್ತು. ಗುಪ್ತ ವಿದ್ವತ್ತಿನ ಸಂಸ್ಕಾರವನ್ನು ಪಡೆದು ಮಾತು ಬೆಡಗು ಪಡೆಯುತ್ತಿತ್ತು.

ಉತ್ತಮ ಭಾಷಣಕಾರರಾಗವುದಕ್ಕೆಂದೇ ಸೃಷ್ಟಿಯಾದರೇನೋ ಎಂದುಕೊಳ್ಳುವಂಥದಾಗಿತ್ತು ಅವರ ವ್ಯಕ್ತಿತ್ವ, ನಿಲುವು, ನೋಟ, ಧೀಶಕ್ತಿ, ಕೊರಲಗುಣ. ನಡುವೆತ್ತರದ ನಿಲುವು, ತುಂಬಿಕೊಂಡ ಮೈಮಾಟ, ಪ್ರಸನ್ನವಾದ, ಶಾಂತಗಂಭೀರವಾದ

ಮುಖಮುದ್ರೆ. ಇವೆಲ್ಲವನ್ನು ಎತ್ತಿತೋರಿಸುವಂತೆ ಆಡಂಬರವಿಲ್ಲದೆಯೂ ಅಚ್ಚುಕಟ್ಟಾಗಿರುವ ವೇಷ. ಮುಚ್ಚುಕೋಟು. ಪಟ್ಟೆಜರಿಯ ರುಮಾಲು. ಅವರು ಭಾಷಣಕ್ಕೆಂದು ಎದ್ದು ನಿಲ್ಲುತ್ತಿರುವಂತಯೇ ಒಂದು ವಾತಾವರಣ ನಿರ್ಮಾಣವಾಗುತ್ತಿತ್ತು. ಶಾಂತಗಂಭೀರವಾಗಿ ಮೊದಲಾದ ಮಾತುಗಳು ಶಾಂತ ಗಂಭೀರವಾಗಿಯೇ ಮುಂದುವರಿಯುತ್ತಿದ್ದವು. ಎಂಥ ಆವೇಶದ ಸನ್ನಿವೇಶದಲ್ಲಿಯೂ ಅವರು ತಮ್ಮ ದನಿಯನ್ನು ಎತ್ತರಿಸಿ ಮಾತನಾಡುತ್ತಿದ್ದಿಲ್ಲ. "ಉರಸ್ಥಂ ಕಂಠಗಂ ವಾಕ್ಯಂ ವರ್ತತೆ ಮಧ್ಯಮಸ್ವರಂ" ಎನ್ನುವಂತೆ ದನಿ ತನ್ನ ನಡುವಿನ ಸ್ವರದಲ್ಲಿಯೇ ಬೇಕಾದ ಏರಿಳಿತಗಳನ್ನು ಸಾಧಿಸಿಕೊಂಡು ಭಾವಪ್ರಕಾಶನಕ್ಕೆ ಅನುಕೂಲವಾಗಿ ಬಳಕೆಯಾಗುತ್ತಿತ್ತು. ವಿಷಯ, ಸನ್ನಿವೇಶ, ಮಾತು, ಎಲ್ಲದರ ಮೇಲೆಯೂ ಪೂರ್ತಿಯಾಗಿ ಪ್ರಭುತ್ವವಿಲ್ಲದೆ ಇಂಥ ಆತ್ಮವಿಶ್ವಾಸ ಹುಟ್ಟಲಾರದು. ಅಂಥ ಆತ್ಮವಿಶ್ವಾಸವಿಲ್ಲದೆ ಮಾತು ಆ ರೀತಿ ಬೆಳೆಯಲಾರದು. ಅಪೇಕ್ಷಿತವಾದ ಪರಿಣಾಮವನ್ನು ಸಾಧಿಸಲಾರದು. ತರಗತಿಗಳಲ್ಲಿ ಅವರು ಪಾಠದಲ್ಲಿ ತನ್ಮಯರಾಗಿರುತ್ತಿದ್ದರು. ಅದೊಂದು ಬಗೆಯ ತನ್ಮಯತೆಯಾದರೆ ಸಾರ್ವಜನಿಕ ಭಾಷಣಗಳಲ್ಲಿಯ ತನ್ಮಯತೆ ಇನ್ನೊಂದು ಬಗೆಯದಾಗಿರುತ್ತಿತ್ತು. ವಿವರಿಸಬೇಕೆಂದ ಸನ್ನಿವೇಶವನ್ನು ವಿವರವಾಗಿ, ಪೂರ್ತಿಯಾಗಿ ಕಣ್ಣೆದುರು ನಿಲ್ಲುವಂತೆ ಚಿತ್ರಿಸುವುದಕ್ಕೆ ಬೇಕಾಗುವಷ್ಟರ ಮಟ್ಟಿಗಿನ ತನ್ಮಯತೆ ಅದು. ವಿಷಯಕ್ಕೆ ಸರಿಸಮನಾಗಿ ಸಭಿಕರೊಡನೆ ತನ್ಮಯರಾಗಿರುತ್ತಿದ್ದರು. ಅವರ ಪ್ರತಿಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಅಸಮಾಧಾನದ ಸುಳಿವು ಕೂಡ ಅವರಿಗೆ ಸಹನವಾಗುತ್ತಿರಲಿಲ್ಲ. ಪ್ರಾರಂಭದಲ್ಲಿಯೋ ನಡುವೆಯೋ ಯಾರಾದರೂ ಎಂಥದಾದರೂ ಕೆಣಕುನುಡಿಯನ್ನಾಡಿದ್ದರಂತೂ ಅಂದಿನ ಭಾಷಣದ ಬಗೆಯೇ ಬೇರೆಯಾಗುತ್ತಿತ್ತು. ಮನಸ್ಸಿನ ತೂಕವನ್ನು ಅವರು ಎಂದಿಗೂ ಕಳೆದುಕೊಳ್ಳುತ್ತಿರಲಿಲ್ಲವಾದರೂ ತಡೆಹಿಡಿದ ಒಳಗಿನ ಉದ್ವೇಗ ಮಾತಿಗೆ ಎಲ್ಲಿಲ್ಲದ ಕಾವನ್ನು ತಂದುಕೊಡುತ್ತಿತ್ತು. ವ್ಯಂಗ್ಯದ ಮೊನೆ ಇರಿಯುತ್ತಿತ್ತು. ಅಂಥ ಸಂದರ್ಭಗಳಲ್ಲಿ ತೋರುತ್ತಿದ್ದ ಅವರ ಸಂಯಮವೇ ಒಂದು ಶಕ್ತಿಯಾಗುತ್ತಿತ್ತು. ಎಂಥ ಭಾವನೆಯ ಸೂಕ್ಷ್ಮಾತಿಸೂಕ್ಷ್ಮಗಳನ್ನೂ ಮಾತಿನಲ್ಲಿ ಮೂಡಿಸುವ, ಕೇಳುವವರ ಹೃದಯವನ್ನು ತಟ್ಟುವಂತೆ ಒತ್ತಿಹೇಳುವ ಕೌಶಲ ಅವರ ಭಾಷಣಗಳಿಗೆ ಬೇರೊಂದು ಬಗೆಯ ಬೆಡಗನ್ನು ತಂದುಕೊಡುತ್ತಿತ್ತು. ಯಾವುದೋ ಒಂದು ಸಂದರ್ಭದಲ್ಲಿ ಬೆಳಗಾಂವಿಯಲ್ಲಿ ನಡೆದ ಸಭೆಯೊಂದರಲ್ಲಿ ಸಭಿಕರೆಲ್ಲರ ಕಣ್ಣು ಹನಿಗೂಡುವಂತೆ ಮಾಡಿದ್ದನ್ನು ನಾನು ನೋಡಿದ್ದೇನೆ, ಅನುಭವಿಸಿದ್ದೇನೆ.

ಶ್ರೀಕಂಠಯ್ಯನವರ ಭಾಷಣಕಲೆಯನ್ನು ಕುರಿತು ಪ್ರೊ. ಮೂರ್ತಿರಾಯರು ಹೇಳುವ ಮಾತುಗಳು ಅವರ ಗುಣವಿಶೇಷಗಳನ್ನು ಸಂಗ್ರಹವಾಗಿ ತಿಳಿಸುತ್ತವೆ. "ಅಧ್ಯಕ್ಷರಾಗಲೆಂದೋ ಯಾವುದೋ ಸಮಾರಂಭದ ಉದ್ಘಾಟಕರಾಗಲೆಂದೋ ಜನ ಅವರನ್ನು ಕಾಡು

ತ್ತಿದ್ದುದಕ್ಕೆ ಕಾರಣ ಅವರ ಸ್ಥಾನಮಾನ ಪಾಂಡಿತ್ಯಗಳು ಮಾತ್ರವಲ್ಲ. ಅವರ ಭಾಷಣ ವನ್ನು ಕೇಳುವುದೇ ಒಂದು ಆನಂದ. ಅವರ ಕಂಠದ ಸಂಪತ್ತನ್ನು ಶ್ರೀ. ಆಲೂರು ವೆಂಕಟರಾಯರು ಶ್ರೀಕಂಠಯ್ಯನವರ ಕಂಠಶ್ರೀ ಎಂಬ ಮಾತಿನಲ್ಲಿ ಅಡಕ ಮಾಡಿದರು. ಭಾಷಣ ಮಾಡುವುದಕ್ಕಾಗಿಯೇ ಇವರು ಸೃಷ್ಟಿಯಾದರೇನೋ ಎನ್ನುವಂತಿತ್ತು. ಅವರು ಮಾತಾಡಲು ನಿಂತರೆ. ಅವರ ವಾಕ್ಯಗಳು ಒಮ್ಮೆ ನಿರರ್ಗಳದಾಗಿ, ದೀರ್ಘವಾಗಿ ಹರಿಯು ವುವು; ಮತ್ತೊಮ್ಮೆ ಯಾವುದೋ ಶಬ್ದದೊಡನೆ. ಪ್ರತಿಮೆಯೊಡನೆ, ಭಾವದೊಡನೆ, ಪ್ರಾಸದೊಡನೆ ಸರಸವಾಡಿ ಒಂದು ಕ್ಷಣ ನಿಂತಂತೆ ಮಾಡಿ ಮತ್ತೆ ಮುನ್ನುಗ್ಗುವುವು. ಪದ ಗಳಿಗಾಗಿ ಅವರು ಎಂದೂ ಕಾಯಬೇಕಾಗಿರಲಿಲ್ಲ; ಅವರಿಂದ ಕರೆ ಬರುವುದಕ್ಕಿಂತ ಮುಂಚೇ ಅವು ಓಡಿ ಬಂದು ನಿಂತಿರುತ್ತಿದ್ದವೆನ್ನಬಹುದು. ಹತ್ತು ಪರ್ಯಾಯ ಪದಗಳು ಅವರ ಅನುಗ್ರಹಕ್ಕಾಗಿ ಕಾದು ನಿಂತಿರುತ್ತಿದ್ದವು. ಕಲವು ವೇಳೆ ಅವರು ಅವೆಲ್ಲವನ್ನೂ ಉಪಯೋಗಿಸುತ್ತಿದ್ದುದುಂಟು. ಆದರಿಂದಾಗಿ ನಿಷ್ಕೃಷ್ಟತೆ ಕಡಿಮೆಯಾದರೂ ವಾತ ವರಣದ ಸಂಪತ್ತು ಹೆಚ್ಚುತ್ತಿತ್ತು. ಅವರ ಭಾಷಣದ ತರ್ಕ ತತ್ವಶಾಸ್ತ್ರಕ್ಕೆ ಹೊಂದು ವಂಥದಲ್ಲ, ಕಾವ್ಯಕ್ಕೆ ಹೊಂದುವಂಥಾದ್ದು. ಮಧ್ಯೆ ಮಧ್ಯೆ ಭಾಷಣದ ಮುಖ್ಯ ವಿಷಯಕ್ಕೆ ಅಷ್ಟಾಗಿ ಸಂಬಂಧ ಪಡದ ಯಾವುದೋ ಯೋಚನೆಯ ಬೆನ್ನಟ್ಟಿ ಮಾತು ರಾಜಮಾರ್ಗವನ್ನು ಬಿಟ್ಟು ಸ್ವಲ್ಪ ಅಲೆದು ಅನಂತರ ಮತ್ತೆ ಮಾರ್ಗಕ್ಕೆ ಬಂದು ಸೇರುವುದು. ಇದರಿಂದ 'ಇವರು ಭಾಷಣ ಮಾಡುತ್ತಿಲ್ಲ. ನಮ್ಮೊಡನೆ ಲೋಕಾಭಿರಾಮ ವಾಗಿ ಮಾತಾಡುತ್ತಿದ್ದಾರೆ' ಎನ್ನಿಸುವಂಥ ಹಿತವಾದ ಪರಿಣಾಮವಾಗುತ್ತಿತ್ತು."

ಅವರ ಮೂರುನಾಲ್ಕು ಭಾಷಣಗಳನ್ನು ಕೇಳಿದ ಅನುಭವ ನನ್ನದಾಗಿದೆ. ಮೊದಲ ಬಾರಿಗೆ ಈಗ ಐವತ್ತೆರಡು ವರ್ಷಗಳ ಹಿಂದೆ ಕೇಳಿದ ಷೇಕ್ಸಪಿಯರನನ್ನು ಕುರಿತ ಒಂದು ಭಾಷಣ ಇಂದಿಗೂ ಅಳಿಯದ ಒಂದು ನೆನಹಾಗಿ ನನ್ನ ಸ್ಮರಣೆಯಲ್ಲಿ ಉಳಿದಿದೆ. ಶ್ರೀಕಂಠಯ್ಯನವರನ್ನು ನಾನು ನೋಡಿದ್ದು ಅದೇ ಮೊದಲು. ಯಾವುದೋ ಬೇರೆ ಕಾರ್ಯಕ್ರಮಕ್ಕಾಗಿ ಧಾರವಾಡಕ್ಕೆ ಬಂದಿದ್ದರು. ಸಾಯಂಕಾಲ ಕನ್ನಡದಲ್ಲಿ ಭಾಷಣ ವಾಗಿತ್ತು. ಕರ್ನಾಟಕ ಕಾಲೇಜಿನ ಇಂಗ್ಲಿಷ್ ವಿದ್ಯಾರ್ಥಿ ಸಂಘದವರು ಅಂದೇ ರಾತ್ರಿ (ಮರುದಿನ ಅವರು ಹೊರಟು ಹೋಗುವವರಿದ್ದರಿಂದ) ಇಂಗ್ಲಿಷ್ ಭಾಷಣದ ಏರ್ಪಾಡು ಮಾಡಿದರು. ಕಾಲೇಜಿನ ಮುಖ್ಯ ಕಟ್ಟಡದ ಬಲಗಡೆಯಲ್ಲಿಯ ಜೋಡು ಟೆನ್ನಿಸ್ ಅಂಗಳಗಳ ಮೇಲೆ ವೇದಿಕೆಯನ್ನು ತಯಾರಿಸಲಾಗಿತ್ತು. ಕಾಲೇಜಿನ ಸಭಾಮಂದಿರದಲ್ಲಿ ದೀಪದ ವ್ಯವಸ್ಥೆ ಇರಲಿಲ್ಲವೆನ್ನುವುದರ ಜೊತೆಗೆ ಊರಲ್ಲಿಯ ಜನಗಳು ಬರುವುದೂ ನಿಶ್ಚಿತವಿದ್ದದ್ದರಿಂದ ಹಾಗೆ ಹೊರಗಡೆಯಲ್ಲಿ ಏರ್ಪಾಡು ಮಾಡಲಾಗಿತ್ತು. ತುಂಬು ಬೆಳುದಿಂಗಳ ರಾತ್ರಿ. ಒಂಬತ್ತು ಗಂಟೆಗೆ ಭಾಷಣ ಪ್ರಾರಂಭವಾಯಿತು. ಭಾಷಣದ ವಿಷಯ ಷೇಕ್ಸಪಿಯರ್ ಎಂದು ಗೊತ್ತಿದ್ದರೂ ಯಾವ ನಾಟಕವನ್ನು ಎತ್ತಿಕೊಳ್ಳುತ್ತಾರೆ

ಎನ್ನುವುದು ಗೊತ್ತಿರಲಿಲ್ಲ. ಪ್ರಾಸ್ತಾವಿಕವಾಗಿ ಕವಿಯ ವಿಷಯ ನಾಲ್ಕು ಮಾತು ಹೇಳಿ ತಾವು ಅಂದು "ಮರ್ಚೆಂಟ್ ಆಫ್ ವೆನೀಸ್" ನಾಟಕವನ್ನು ಕುರಿತು ಮಾತ ನಾಡುವುದಾಗಿ ತಿಳಿಸಿದರು. ಸಭಾಧ್ಯಕ್ಷರು ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಎ. ಸಿ. ಫ್ಯಾರನ್ ಅವರು. ಐರಿಷ್ ಜನ. ಚರಿತ್ರೆಯ ಪ್ರಾಧ್ಯಾಪಕರಾಗಿದ್ದರು. ಅವರ ಮೆಚ್ಚಿಕೆಯ ನಾಟಕ ಯಾವುದೆಂದು ಆವರನ್ನೇ ಮೊದಲು ಕೇಳಿ ತಿಳಿದುಕೊಂಡಿದ್ದರೆಂದು ಕಾಣುತ್ತದೆ. ಸರಿ. ಒಂಬತ್ತು ಗಂಟೆಗೆ ಪ್ರಾರಂಭವಾದ ಭಾಷಣ ಹನ್ನೆರಡು ಗಂಟೆಯ ವರೆಗೆ ನಡೆಯಿತು. ಕುಳಿತ ಜನ ಮಂತ್ರಮುಗ್ಧರಾಗಿ ಕೇಳಿದರು. ಮೊದಲಿನಿಂದ ಕೊನೆಯವರೆಗೆ ನಾಟಕದ ಒಂದೊಂದು ದೃಶ್ಯವನ್ನು ಎತ್ತಿಕೊಂಡು ಒಂದೊಂದೂ ಕಣ್ಣೆದುರಿನಲ್ಲಿಯೇ ನಡೆಯುತ್ತಿದೆ ಎನ್ನುವಂತೆ ಮೂಲದಲ್ಲಿಯ ಪಂಕ್ತಿಗಳನ್ನು ಉದ್ಧರಿಸಿ ಹೇಳಿಕೊಂಡು ಹೋಗುತ್ತಿದ್ದರು. ಇಡೀ ನಾಟಕ ಅವರ ತುದಿನಾಲಗೆಯ ಮೇಲೆ ಇದ್ದಹಾಗಿತ್ತು. ಬಹುಶಃ ಷೇಕ್ಸಪಿಯರನ ಎಲ್ಲ ವಿಖ್ಯಾತ ನಾಟಕಗಳಲ್ಲಿಯ ಹೆಚ್ಚಿನ ಭಾಗಗಳನ್ನು ಅವರು ಹಾಗೆ ಹೇಳಬಲ್ಲವರಾಗಿದ್ದರು. ಆದೇ ಕಾಲೇಜು ಸೇರಿದ್ದ ನಮಗೆಲ್ಲ ಅವರ ಮಾತುಗಳನ್ನು ಕೇಳುತ್ತಿದ್ದ ಹಾಗೆ ಒಂದು ಬಗೆಯ ದಿಗ್ಭ್ರಮೆ, ಆಶ್ಚರ್ಯ, ಸಂತೋಷ. ನಡುರಾತ್ರಿಯ ಬೆಳುದಿಂಗಳು ತಾನೇತಾನಾಗಿ ಮೆರೆಯುತ್ತಿರುವಾಗ ಕೊನೆಯ ಅಂಕದಲ್ಲಿಯ ಲೊರೆಂರ್ಝೊ ಜೆಸಿಕಾ ನಡುವಿನ ಸರಸ ಸಲ್ಲಾಪದ ಸನ್ನಿವೇಶಕ್ಕೆ ಬಂದಿದ್ದರು. ಸುತ್ತಲಿನ ಬೆಳುದಿಂಗಳನ್ನು ನಿರ್ದೇಶಿಸುತ್ತ

How sweet the moonlight sleeps upon this bank!
Here will we sit, and let the sounds of music
Creep in our ears...

ಎಂದು ಲೊರೆಂರ್ಝೋನ ಮಾತುಗಳನ್ನು ಅರ್ಥಪೂರ್ಣವಾಗಿ ಒತ್ತಿ ಹೇಳಿ ಆ ಪ್ರಣಯಿ ಗಳಿಬ್ಬರೂ ಮೊದಲು ನೆನೆದುಕೊಂಡಿದ್ದ ಟ್ರೊಯ್ಲಸ್-ಕ್ರೆಸಿಡಾ, ಥಿಸ್ಬೆ-ಪಿರ್‍ಯಾಮಸ್, ಡಿಡೊ-ಈನಿಯಾಸ್, ಜೇಸನ್-ಮೀಡಿಯಾ ಅವರ ನಡುವಿನ ಪುರಾತನ ಪ್ರಣಯಪ್ರಸಂಗ ಗಳನ್ನು ವಿವರಿಸಿ ಉಂಗುರದ ಪ್ರಸಂಗದೊಂದಿಗೆ ಮುಕ್ತಾಯಕ್ಕೆ ಬಂದರು. ಮಾತನ್ನು ಮುಗಿಸುತ್ತ ಅಂಥ ಒಂದು ಕವಿಯನ್ನು ಪಡೆಯುವುದು ಒಂದು ನಾಡಿನ ಪುಣ್ಯವಿಶೇಷ. ಒಂದು ನಾಡಿನದು ಮಾತ್ರವಲ್ಲ. ಇಡೀ ಲೋಕದ ಪುಣ್ಯವಿಶೇಷವೆನ್ನಬೇಕು. ಆತನ ಒಂದೊಂದು ಕೃತಿಯೂ ಭುವನಭಾಗ್ಯ. ನಾಡು ಮುಳುಗಿ ಹೋದರೂ ಆತನ ಕೃತಿಗಳು ಉಳಿಯಲಿ ಎಂದು ಅವನ ನಾಡಿನವನೇ ಆಗಿದ್ದ ಇನ್ನೊಬ್ಬ ಮಹಾನುಭಾವ ಹೇಳಿದ. ಅಂಥವನ ಕೃತಿಗಳನ್ನು ಓದುವುದೆಂದರೆ ಸಂತೋಷ ಮಾತ್ರವಲ್ಲ, ಅದೊಂದು ಆತ್ಮ ಸಂಸ್ಕಾರ. ಎಷ್ಟು ಸಲ ಓದಿದರೂ ತೃಪ್ತಿಯಾಗುವುದಿಲ್ಲ. ಓದಿದಷ್ಟು ಸಲವೂ ಅರ್ಥ ಆಳವಾಗುತ್ತದೆ. ಅಂಥ ಮಹಾನುಭಾವನ ಸಮಾಧಿಯ ಮೇಲೆ ಹಣೆಯನ್ನಿರಿಸಿಯೇ

ಈ ಜನ್ಮ ಸಾರ್ಥಕವಾಯಿತೆಂದು ಕೃತಜ್ಞತೆಯನ್ನು ಹೇಳಬೇಕು, ಎಂಬಾಶಯದ ಮಾತುಗಳನ್ನು ಹೇಳಿ ಭಾಷಣವನ್ನು ಮುಕ್ತಾಯಗೊಳಿಸಿದಾಗ ಯಾರು ಏನು ಹೇಳುವುದಕ್ಕಿತ್ತು?' ಆ ಸಮ್ಮೋಹನದಿಂದ ಬಿಡುಗಡೆಯಾಗಿ ಚಪ್ಪಾಳೆ ತಟ್ಟುವುದಕ್ಕೂ ಒಂದು ಕ್ಷಣ ತಡೆಯಬೇಕಾಯಿತು. ಅದೊಂದು ಚಿರಸ್ಮರಣೀಯವಾದ ಅನುಭವ. ಇಂದಿಗೂ ಹಸಿರಾಗಿ ಉಳಿದಿದೆ.

೭

ಕನ್ನಡದ ಬಗೆಯಲ್ಲಿ ಅಭಿಮಾನವನ್ನು ಜಾಗೃತವಾಗಿಸುವುದನ್ನೇ ತಮ್ಮ ಜೀವನದ ಮಂತ್ರವನ್ನಾಗಿಸಿಕೊಂಡಿದ್ದ ಶ್ರೀಕಂಠಯ್ಯನವರು ಕನ್ನಡನಾಡಿನ ಉದ್ದಗಲದಲ್ಲಿಯೂ ಹತ್ತಾರು ಬಾರಿ ಸಂಚರಿಸಿದರು, ಭಾಷಣಗಳನ್ನು ಮಾಡಿದರು. ಎಲ್ಲಿಂದ ಕರೆ ಬಂದರೂ ಅವರು ಅದನ್ನು ನಿರಾಕರಿಸುತ್ತಿರಲಿಲ್ಲ. ಪ್ರವಾಸಕಾಲದಲ್ಲಿ ಎಂಥ ಕಷ್ಟ ಅನನುಕೂಲಗಳನ್ನು ಎದುರಿಸಬೇಕಾಗಿ ಬಂದರೂ ಹಿಂಜರಿಯುತ್ತಿದ್ದಿಲ್ಲ. ಅವರು ಹಾಗೆ ಸಂಚಾರಗಳನ್ನು ಕೈಕೊಳ್ಳುತ್ತಿದ್ದದ್ದು ಎಲ್ಲೆಡೆಯಲ್ಲಿಯೂ ಜನಗಳು ಗೌರವವನ್ನು ತೋರುತ್ತಿದ್ದರೆನ್ನುವುದಕ್ಕಲ್ಲ. ಅವರು ಹೋಗುತ್ತಿದ್ದದ್ದು ಕನ್ನಡದ ಪ್ರೀತಿಗಾಗಿ, ಕನ್ನಡ ನಾಡಿನ ಬಗೆಯಲ್ಲಿ ಅವರು ಬೆಳೆಯಿಸಿಕೊಂಡಿದ್ದ ಆಳವಾದ ಪ್ರೀತಿಗಾಗಿ. ಒಂದೊಂದು ಪ್ರವಾಸವೂ ಅವರ ಪಾಲಿಗೆ ತೀರ್ಥಯಾತ್ರೆಯಂತಿರುತ್ತಿತ್ತು. ಅದರಲ್ಲಿಯೂ ಉತ್ತರ ಕರ್ನಾಟಕದ ಪ್ರವಾಸವೆಂದರೆ ಅವರಿಗೆ ಅಚ್ಚುಮೆಚ್ಚು. ಒಂದೊಂದು ಸ್ಥಳವೂ ಒಂದೊಂದು ಬಗೆಯ ಭಾವಕೇಂದ್ರವಾಗುತ್ತಿತ್ತು. ಪಂಪನ ಹೃದಯವನ್ನು ಸೂರೆಗೊಂಡ ಬನವಾಸಿ, ಕುಮಾರವ್ಯಾಸನ ವೀರನಾರಾಯಣ ದೇವಸ್ಥಾನದ ಗದಗು, ವಿಜಯನಗರದ ಸಾಮ್ರಾಜ್ಯ ವೈಭವವನ್ನು ಮೆರೆದುದಲ್ಲದೆ ಹರಿಹರ ರಾಘವಾಂಕರಿಗೆ ನೆಲೆವೀಡಾಗಿದ್ದ ಹಂಪೆ. ಚಾಲುಕ್ಯಚಕ್ರವರ್ತಿ ಸತ್ಯಾಶ್ರಯ ಪುಲಿಕೇಶಿಯ ರಾಜಧಾನಿಯಾಗಿದ್ದ ಬಾದಾಮಿ, ಬಸವೇಶ್ವರನ ಬಾಗೇವಾಡಿ, ಸಂಗಮ, ಚಾಲುಕ್ಯ ಶಿಲ್ಪವೈಭವದ ಐಹೊಳೆ, ಪಟ್ಟದಕಲ್ಲು ಎಂದು ಒಂದಲ್ಲ ಎರಡಲ್ಲ, ಎಲ್ಲೆಲ್ಲಿ ಕನ್ನಡನಾಡಿನ ಚರಿತ್ರೆ, ಸಾಹಿತ್ಯ ಶಿಲ್ಪ, ಧರ್ಮಜಾಗೃತಿ ತನ್ನ ಅವಶೇಷಗಳನ್ನು ಉಳಿಸಿದೆಯೋ ಅವೆಲ್ಲವೂ ಅವರಿಗೆ ಪುಣ್ಯಕ್ಷೇತ್ರಗಳಾಗಿ ಕಾಣುತ್ತಿದ್ದವು. ಅವೆಲ್ಲವನ್ನು ನೋಡುವ, ಅವಕ್ಕೆ ಸಂಬಂಧಪಟ್ಟ ಚರಿತ್ರಾಂಶಗಳನ್ನು ನೆನೆದುಕೊಳ್ಳುವ. ಕನ್ನಡದ ಹಿರಿಮೆಯನ್ನು ಮತ್ತೆಮತ್ತೆ ಹೃದಯದಲ್ಲಿ ತುಂಬಿಕೊಳ್ಳುವ ಅವಕಾಶಗಳನ್ನು ಅವರು ಕೈಕೊಂಡ ಸಂಚಾರಗಳು ತಂದುಕೊಡುತ್ತಿದ್ದವು.

ಇಂಥ ಪ್ರವಾಸಗಳಲ್ಲಿ ಯಾವ ಅನನುಕೂಲಗಳನ್ನೂ ಅವರು ಸಹಿಸಿಕೊಂಡಿರುತ್ತಿದ್ದರೆನ್ನುವುದಕ್ಕೆ ಅವರ ಜೊತೆಯಲ್ಲಿ ಪ್ರವಾಸ ಮಾಡಿದ ಸೀತಾರಾಮಯ್ಯನವರು ಒಂದೆರಡು ಸಂದರ್ಭಗಳನ್ನು ವಿವರಿಸಿದ್ದಾರೆ. ಒಂದು ಸಲ, ೧೯೩೫-೬ರ ಸುಮಾರಿನಲ್ಲಿ, ವಿಜಾಪುರದಿಂದ ಸೊಲ್ಲಾಪುರಕ್ಕೆ (ಸಿದ್ಧರಾಮನ ಸೊನ್ನಲಿಗೆ ಅದು) ಬಂದಾಗ, ಏನು ಕಾರಣವಾಯಿತೋ, ಎದುರುಗೊಳ್ಳಬೇಕಾದವರು ಸಿಕ್ಕದಿದ್ದಾಗ ಯಾವುದೋ ಒಂದು ಹೊಟಲಿನ ಜಗಲಿಯ ಮೇಲೆ ಕುಳಿತು ಮುಖ ತೊಳೆದು ಉಪಾಹಾರ ಮುಗಿಸಿಕೊಂಡು ಬಸ್ಸಿನಲ್ಲಿ ಪಂಢರಪುರಕ್ಕೆ ಹೋದರು. ಅಲ್ಲಿಯ ವಿಟ್ಠಲ, ಕನ್ನಡ ದೇವರು, ಪುರಂದರ ದಾಸರ ಆರಾಧ್ಯ. ನದಿಯಲ್ಲಿ ಸ್ನಾನ ಮಾಡಿ, ಪೂಜಾರಿಯಿಂದ ವಿಟ್ಠಲನ ಪಾದಗಳ ಮೇಲೆ ತಲೆಯನ್ನು ಚಚ್ಚಿಸಿಕೊಂಡು ಹತ್ತಿರದಲ್ಲಿಯೇ ಯಾವಳೋ ವಿಧವೆ ಇರಿಸಿಕೊಂಡಿದ್ದ ಊಟದ ಮನೆಯಲ್ಲಿ ಊಟ ಮುಗಿಸಿಕೊಂಡು ನೇರವಾಗಿ ದೂರದ ಬಸವೇಶ್ವರನ ಬಾಗೇವಾಡಿಯನ್ನು ಬಂದು ಸೇರಿದರಂತೆ. ಅಲ್ಲಿಯ ದೇವಸ್ಥಾನವನ್ನು ಸುತ್ತಿಯಾದಮೇಲೆ ಮತ್ತೆ ಬಸ್ ಹಿಡಿದು, ಸಂಗಮಕ್ಕೆ ಹೋಗುವುದೆಂದು ಮುದ್ದೇಬಿಹಾಳ, ತಂಗಡಗಿಯ ಮಾರ್ಗವಾಗಿ ಸಂಗಮಕ್ಕೆ ಬಂದಾಗ ಸರಿ ಮಧ್ಯಾಹ್ನ. ಕೃಷ್ಣಾನದಿ ನಮ್ಮ ''ಪೆರ್ದೊರೆ'' ಎಂಬ ಅಭಿಮಾನದಿಂದ ಎರಡು ಫರ್ಲಾಂಗು ದೂರದ ಬೆಣಚುಗಲ್ಲಿನ ದಾರಿಯನ್ನು ಬರಿಗಾಲಿನಿಂದ ತುಳಿದು, ಪಾದದಿಂದ ರಕ್ತ ಹರಿಯುವಂತಾದರೂ ಲೆಕ್ಕಿಸದೆ, ಸ್ನಾನ ಮಾಡಿಕೊಂಡು ಬಂದರು. ದೇವಸ್ಥಾನದಲ್ಲಿಯ ಗಲೀಜು, ಪೂಜಾರಿಯ ಅನಾಸ್ಥೆ, ಕಿವಿಯ ಹಿಂದೆ ಆತ ಇರಿಸಿಕೊಂಡಿದ್ದ ಅರೆಸುಟ್ಟ ಬೀಡಿ, ಬೇಸರವನ್ನು ತಂದರೂ ಅದು ಬಸವೇಶ್ವರರು ಐಕ್ಯಪಡೆದ ಸ್ಥಳವೆಂದು ನೆನೆದುಕೊಂಡರು. ಎಲ್ಲಿಂದಲೋ ವಿ.ಸೀ. ಹುಡುಕಿ ತಂದ ಒಂದು ಲೋಟ ಹಾಲನ್ನು ಕುಡಿದು ಹಸಿವನ್ನು ತಣಿಸಿಕೊಂಡರು. ಎರಡೂವರೆಯ ಸುಮಾರಿಗೆ ಹೊರಡುತ್ತೇನೆಂದು ಮಾತುಕೊಟ್ಟಿದ್ದ ಬಸ್ಸಿನವ ಮೊದಲೇ ಹೊರಟುಹೋಗಿ ಕೈಕೊಟ್ಟ. ಊರ ಪಟೇಲರ ಸಹಕಾರದಿಂದ ಎತ್ತಿನ ಬೋಳು ಬಂಡಿಯಲ್ಲಿ ಕುಳಿತು ಮೈನುಗ್ಗನ್ನು ಹೇಗೋ ತಡೆದುಕೊಂಡು ಹೊತ್ತು ಕಂತುವ ವೇಳೆಗೆ ಆಲಮಟ್ಟಿಯನ್ನು ಸೇರಿ ಅಲ್ಲಿ ಹರ್ಡೇಕರ್ ಮಂಜಪ್ಪನವರ ಆದರದ ಆತಿಥ್ಯವನ್ನು ಪಡೆದರು. ಅಲ್ಲಿಂದ ರೈಲು ಹಿಡಿದು ಮರುದಿನ ಬೆಂಗಳೂರಿಗೆ ಪ್ರಯಾಣ ಮಾಡಿದರಂತೆ. ಇಂಥ ಪ್ರವಾಸಗಳು ಒಂದಲ್ಲ, ಎರಡಲ್ಲ. ಇಂಥ ಸಂದರ್ಭಗಳಲ್ಲಿ ಅವರು ಕನ್ನಡ ನಾಡಿನ ಚರಿತ್ರೆ, ಸಾಹಿತ್ಯ, ಶಿಲ್ಪ, ಧರ್ಮಸಂಪ್ರದಾಯ, ಮುಂತಾದ ಅದರ ಸಂಸ್ಕೃತಿಯ ವಿವಿಧ ಆವಿಷ್ಕಾರಗಳನ್ನೇ ನೆನೆಯುತ್ತಿರುತ್ತಿದ್ದರಿಂದ ಯಾವ ಕಷ್ಟವೂ ಅವರಿಗೆ ದೊಡ್ಡದಾಗಿ ಕಾಣುತ್ತಿರಲಿಲ್ಲ. ಕನ್ನಡನಾಡಿನ ಬಗೆಯಲ್ಲಿಯ ಅವರ ಪ್ರೀತಿ ಅಂಥದಾಗಿತ್ತು. ಹಳೆಯ ಮೈಸೂರಿನ ಹೊರಗಡೆಯಲ್ಲಿ ಸಂಚರಿಸಿ ಅಲ್ಲಿಯ ಜನಗಳ ಪ್ರೀತಿವಿಶ್ವಾಸಗಳನ್ನು ಅವರಂತೆ ಸಂಪಾದಿಸಿದವರು ಇನ್ನಿಬ್ಬರು ಮಾತ್ರ—ವಿ. ಸೀತಾರಾಮಯ್ಯನವರು ಮತ್ತು ಅ. ನ. ಕೃಷ್ಣ

ರಾಯರು. ಈ ಮೂವರು ಮಹನೀಯರಂತೆ ಉತ್ತರ ಕರ್ನಾಟಕದವರ ಬಗೆಯಲ್ಲಿ ನಿಜವಾದ ಅಭಿಮಾನವನ್ನು ಬೆಳೆಯಿಸಿಕೊಂಡವರು ಹೆಚ್ಚಿನವರು ಇರಲಿಲ್ಲ, ಇಲ್ಲ, ಎಂದು ಧಾರಾಳವಾಗಿ ಹೇಳಬಹುದು.

ಶ್ರೀಕಂಠಯ್ಯನವರು ಕನ್ನಡ ನಾಡಿನಲ್ಲಿ ಅವಿರತವಾಗಿ ಸಂಚರಿಸುತ್ತಿದ್ದದ್ದು ಕೇವಲ ನಾಡುನುಡಿಗಳ ಬಗೆಯಲ್ಲಿ ಅವರಲ್ಲಿದ್ದ ಪ್ರೀತಿ ಅಭಿಮಾನಗಳಿಗಾಗಿ ಮಾತ್ರವಾಗಿರಲಿಲ್ಲ. ನಾಡುನುಡಿಗಳ ಏಳ್ಗೆ ಸಾಧ್ಯವಾಗಬೇಕಾದರೆ ಹತ್ತಿಪ್ಪತ್ತು ಆಡಳಿತಗಳಿಗೆ ಒಳಪಟ್ಟಿದ್ದ ಕನ್ನಡ ದೇಶಭಾಗಗಳು ಒಂದಾಗಬೇಕಾದದ್ದು ಅವರಿಗೆ ಮೊದಲ ಅಗತ್ಯವಾಗಿ ಕಾಣು ತ್ತಿತ್ತು. ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಪುನರುಜ್ಜೀವನದ ಕಾರ್ಯ ಕರ್ನಾಟಕದ ಏಕೀ ಕರಣವಿಲ್ಲದೆ ಕಷ್ಟಸಾಧ್ಯವಾಗಿ ಕಾಣುತ್ತಿತ್ತು. ಆದರೆ ಏಕೀಕರಣ ಒಂದು ರಾಜಕೀಯ ಪ್ರಶ್ನೆ. ಅದಕ್ಕಾಗಿ ಪ್ರಚಾರ ಮಾಡಬೇಕಾದವರು, ದುಡಿಯಬೇಕಾದವರು, ರಾಜಕೀಯ ಸ್ಥರು. ಶ್ರೀಕಂಠಯ್ಯನವರಿಗೆ ರಾಜಕೀಯದಲ್ಲಿ ಹೆಚ್ಚಿನ ಆಸಕ್ತಿ ಇರಲಿಲ್ಲ. ಅಲ್ಲದೆ ಸರಕಾರದ ಸೇವೆಯಲ್ಲಿದ್ದ ಅವರು ಏಕೀಕರಣವನ್ನು ಕುರಿತು ರಾಜಕೀಯವಾಗಿ ನೇರ ಪ್ರಚಾರವನ್ನು ಮಾಡುವಂತೆಯೂ ಇರಲಿಲ್ಲ. ಅದು ಕಾಂಗ್ರೆಸ್ಸಿನವರೊ, ಗಾಂಧೀಜಿಯವ ರೊ ಮಾಡಬಹುದಾದದ್ದು. ಅವರಿಗೆ ದೇಶದ ಸ್ವಾತಂತ್ರ್ಯವನ್ನು ಮೊದಲು ಸಾಧಿಸಬೇಕಾ ಗಿತ್ತು. ಆದರೆ ಸ್ವಾತಂತ್ರ್ಯ ಬಂದನಂತರ ಎಂದೋ ಸಾಧ್ಯವಾಗಬಹುದಾದ ಏಕೀಕರಣಕ್ಕಾಗಿ ಕನ್ನಡ ಜನ ಕಾಯುತ್ತ ಕೈಕಟ್ಟಿಕೊಂಡು ಕುಳಿತಿರಬೇಕೆ? ಅಲ್ಲದೆ, ಏಕೀಕರಣ ಎಂದೇ ಆಗಲಿ ಅದರ ಸ್ವರೂಪದ ಬಗೆಯಲ್ಲಿ ಶ್ರೀಕಂಠಯ್ಯನವರಿಗೂ ಉತ್ತರ ಕರ್ನಾಟಕದವರಿಗೂ ಸೂಕ್ಷ್ಮವಾದ ಭಿನ್ನಾಭಿಪ್ರಾಯಗಳಿದ್ದವು. ಕನ್ನಡದ ಇತರ ಭಾಗಗಳು ಮೈಸೂರಿಗೆ ಸೇರ ಬೇಕು, ಮಹಾರಾಜರು ರಾಜಪ್ರಮುಖರಾಗಬೇಕು ಎಂಬ ಅವರ ವಿಚಾರವನ್ನು ಹೊರಗಿ ನವರು ಒಪ್ಪುತ್ತಿರಲಿಲ್ಲ. ಆ ಪ್ರಶ್ನೆಯನ್ನು ಸಂದರ್ಭ ಬಂದಾಗ ಬಗೆಹರಿಸಿಕೊಳ್ಳೋಣ, ಕನ್ನಡ ಪ್ರದೇಶಗಳು ಒಂದು ಆಡಳಿತಕ್ಕೆ ಒಳಪಡುವ ಮೊದಲು ಕನ್ನಡ ಜನರ ಮನಸ್ಸು ಒಂದಾಗಲಿ, ಭಾಷೆ ಸಾಹಿತ್ಯಗಳ ಪುನರುಜ್ಜೀವನದ ವಿಷಯದಲ್ಲಿ ಜಾಗೃತಿಯಾಗಲಿ ಎಂದು ಏಕೀಕರಣದ ಪ್ರಶ್ನೆಯನ್ನು, ಅದರ ಅನಿವಾರ್ಯತೆಯನ್ನು, ಸಾಂಸ್ಕೃತಿಕ ದೃಷ್ಟಿಯಿಂದ ಒತ್ತಿ ಹೇಳುವ ದಾರಿಯನ್ನು ಅವರು ತಮ್ಮದಾಗಿಸಿಕೊಂಡರು. ಸರಕಾರದವರಾದರೂ ಇದನ್ನು ಆಕ್ಷೇಪಿಸುವಂತಿರಲಿಲ್ಲ. ಹೀಗೆ ತಮ್ಮ ಸಂಚಾರಗಳುದ್ದಕ್ಕೂ ಅವರು ಮಾಡುತ್ತಿದ್ದ ಭಾಷಣ ಗಳು,ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿರುತ್ತಿದ್ದರೂ ಅವೆಲ್ಲವುಗಳ ಆಳ ದಲ್ಲಿ ಏಕೀಕರಣದ ಪ್ರಚಾರವಿರುತ್ತಿತ್ತು. ಇದರ ಪರಿಣಾಮವೆಂದರೆ ಅವರು ಕನ್ನಡ ಸಂಸ್ಕೃ ತಿಯ ಪ್ರತಿನಿಧಿಯ ವೇಷದಲ್ಲಿ ಏಕೀಕರಣದ ಆಕಾಂಕ್ಷೆಯ ಪ್ರತೀಕವಾದರು. ಕರ್ನಾಟಕ ಒಂದಾದದ್ದನ್ನು ನೋಡುವ ಭಾಗ್ಯ ಅವರದಾಗಲಿಲ್ಲ. ಆದರೆ ಅವರ ಸಂಚಾರ ಪ್ರಚಾರ ಗಳ ಪರಿಣಾಮವಾಗಿ ಆಗಬೇಕಾದ ಏಕೀಕರಣಕ್ಕೆ ಮೊದಲ ಹೆಜ್ಜೆಯಾಗಿ, ಅದಕ್ಕೆ ಅಡಿ

ವಾಗಿ, ಮೈಸೂರಿನೊಡನೆ ಹೊರಗಿನವರ ಸಂಪರ್ಕ ಸಂಬಂಧಗಳು ಹೆಚ್ಚಿದವು.
ಸ್ಯ ವಿಶ್ವಾಸ ಬೆಳೆಯುವುದಕ್ಕೆ ಅನುಕೂಲವಾಯಿತು. ಇದರಿಂದಾಗಿ ಕರ್ನಾಟಕದ
ಕ್ಕೆ ಸಂಬಂಧಿಸಿದಂತೆ ಶ್ರೀಕಂಠಯ್ಯನವರು ಮಾಡಿದ ಪ್ರಚಾರ ನೇರವಾದ
ಯ ಪ್ರಚಾರಕ್ಕಿಂತಲೂ ಸಹಜವಾಗಿಯೇ ಹೆಚ್ಚು ಪರಿಣಾಮಕಾರಿಯಾಯಿತು.
ಪ್ರವಾಸ ಪ್ರಚಾರಗಳು ಕನ್ನಡ ನಾಡಿನ ಬೇರೆ ಬೇರೆ ಭಾಗಗಳನ್ನು ಮಾನಸಿಕವಾಗಿ
ವಾಗಿಸಿದವು.

೮

ಮಖಂಡಿಯ ಸಾಹಿತ್ಯ ಸಮ್ಮೇಳನದಲ್ಲಿ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಡಿ. ವಿ.ಜಿ
ತಮ್ಮನ್ನು ಬಿಡುಗಡೆ ಮಾಡಬೇಕೆಂದಿದ್ದರಿಂದ ಆ ಸ್ಥಾನಕ್ಕೆ ೧೯೩೮ರಲ್ಲಿ
ಯ್ಯನವರನ್ನು ಆಯ್ಕೆ ಮಾಡಲಾಯಿತು. ಕಾಲೇಜಿನಲ್ಲಿ ಪಾಠಪ್ರವಚನಗಳನ್ನು
ತ್ತಿದ್ದ ನಿಷ್ಠೆಯಿಂದಲೇ ಮುಂದಿನ ನಾಲ್ಕು ವರ್ಷ ಪರಿಷತ್ತಿನ ಕಾರ್ಯಕಲಾಪ
ನೋಡಿಕೊಂಡರು. ಉತ್ಸವ ಸಮ್ಮೇಳನಗಳನ್ನು ನಡೆಸಿದರು. ಕನ್ನಡದ ಬಗೆಯಲ್ಲಿ
ನವನ್ನು ಬೆಳೆಯಿಸಬಲ್ಲ ಹಳೆ ಹೊಸ ಪದ್ಯಗಳನ್ನು "ಕನ್ನಡದ ಬಾವುಟ"
ೆಸರಿನಿಂದ ಸಂಪಾದಿಸಿ ಪ್ರಕಟಿಸಿದರು. ಕನ್ನಡ ನುಡಿ ಪತ್ರಿಕೆಯನ್ನು ಪ್ರಾರಂಭಿಸಿ
ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿದರು. ಎಲ್ಲಕ್ಕೂ ಮುಖ್ಯವಾಗಿ ಆರು ಸಾವಿರ
ಯಿಗಳನ್ನು ಪರಿಷತ್ತಿಗೆ ಕೊಟ್ಟು ಅದಕ್ಕೆ ತನ್ನದೇ ಆದ ಒಂದು ಅಚ್ಚುಕೂಟವಿರು
ಏರ್ಪಾಡು ಮಾಡಿದರು. ಅವರು ಮಾಡಿದ ಸತ್ಕಾರ್ಯಗಳಿಗಾಗಿ ಅವರನ್ನು
"ರಾಜಸೇವಾಸಕ್ತ" ಎಂಬ ಬಿರುದನ್ನು ಕೊಟ್ಟು ಗೌರವಿಸಿತು. ಮೂರು
ೆ ವಿಸ್ತರಣದ ನಂತರ ಶ್ರೀಕಂಠಯ್ಯನವರು ಸರಕಾರದ ಸೇವೆಯಿಂದ ೧೯೪೨ರಲ್ಲಿ
ಾದರು. ಅದೇ ವರ್ಷ ಪರಿಷತ್ತಿನ ಉಪಾಧ್ಯಕ್ಷ ಪದವಿಯಿಂದಲೂ ಅಷ್ಟೇನೂ
ದ ಸನ್ನಿವೇಶದಲ್ಲಿ ನಿವೃತ್ತರಾಗಬೇಕಾಯಿತು.

ಗಬೇಕಾದ ಕೆಲಸಗಳನ್ನು ಆಗಿಸಿಯೇ ಬಿಡಬೇಕೆಂಬ ಉತ್ಸಾಹದಿಂದ ಮಾಡುವ
ೇ ವಿರೋಧದ ಪ್ರತಿಕ್ರಿಯೆಗೆ ಕಾರಣವಾಗುತ್ತವೆ ಎನ್ನುವುದೊಂದು ವಿಪರ್ಯಾಸ.
ಗಾಗಿ ಉಪಾಧ್ಯಕ್ಷಸ್ಥಾನದಿಂದ ಶ್ರೀಕಂಠಯ್ಯನವರು ಕೈಕೊಂಡು ಪೂರೈಸಿದ
ಾರ್ಯಗಳು ಇಂಥ ವಿರೋಧದ ಪ್ರತಿಕ್ರಿಯೆಯನ್ನುಂಟು ಮಾಡಿದವು. ಕೆಲವರಲ್ಲಿ
ಯನ್ನಾದರೆ ಇನ್ನು ಕೆಲವರಲ್ಲಿ ಅಸಮಾಧಾನವನ್ನು ಮೂಡಿಸಿದವು. ಉಪಾ

ಧ್ಯಕ್ಷರು ಪರಿಷತ್ತಿನ ಕಾರ್ಯನಿರ್ವಹಣೆಯಲ್ಲಿ ಯಾವ ಕ್ರಮವನ್ನೂ ಅನುಸರಿಸದೆ ಎಲ್ಲವನ್ನೂ ತಮ್ಮ ಮನಸ್ಸಿಗೆ ಬಂದಂತೆ ನಡೆಸುತ್ತಿದ್ದಾರೆ ಎಂಬ ದೂರು ಬಲಗೊಂಡು ಪ್ರತಿಭಟನೆಗೆ ಪ್ರಾರಂಭವಾಯಿತು. ಇಂಗ್ಲಿಷಿನ ಪರವಾಗಿ ಅವರು ಹೇಳುತ್ತಿದ್ದ ಮಾತುಗಳು, ಸಂಸ್ಕೃತದ ವಿಷಯವಾಗಿ ಅವರು ತಳೆದಿದ್ದರೆಂದುಕೊಂಡ ಅಭಿಪ್ರಾಯಗಳು. ತೀವ್ರವಾದ ವಿರೋಧವನ್ನು ಬೆಳೆಯಿಸಿದವು. ಕನ್ನಡ ಸಾಹಿತ್ಯವನ್ನು ಹೊಲೆಗೆಡಿಸುತ್ತಿದ್ದಾರೆ ಎನ್ನುವವರೆಗೂ ಮಾತು ಹೋಯಿತು. ಇಂಗ್ಲೆಂಡಿನ ವಿಷಯದಲ್ಲಿ ಅವರಲ್ಲಿದ್ದ ಅಭಿಮಾನ ಅವರು ಭಾರತ ಸ್ವಾತಂತ್ರ್ಯದ ವಿರೋಧಿ ಎನ್ನುವಂತೆ ಮಾಡಿತು. 'ಚಿರಂಜೀವಿ' ಯಾದ ಅಶ್ವತ್ಥಾಮನನ್ನು ತಮ್ಮ ನಾಟಕದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ್ದನ್ನು ಸಂಪ್ರದಾಯಸ್ಥರು ತೀವ್ರವಾಗಿ ಆಕ್ಷೇಪಿಸಿದರು. ಚರ್ಚೆ, ವಾದ ವಿವಾದಗಳು ಬೆಳೆದವು. ಸಾಹಿತ್ಯ ಪರಿಷತ್ತಿನ ಹೆಸರಿನಲ್ಲಿಯ ಕರ್ನಾಟಕ ಪದದಲ್ಲಿ 'ನ' ಕಾರ ಇರಬೇಕೆ. 'ಣ' ಕಾರ ಇರಬೇಕೆ ಎನ್ನುವುದರ ಬಗೆಯಲ್ಲಿ ಒಂದು ಕಾಳಗವೇ ನಡೆಯಿತು. ಆ ಮಾತನ್ನೇ ಬಿಟ್ಟು "ಕನ್ನಡ ಸಾಹಿತ್ಯ ಪರಿಷತ್ತು" ಎಂದು ಹೆಸರನ್ನು ಬದಲಾಯಿಸಿದಾಗ ಆ ವಿವಾದ ಕೊನೆಗೊಂಡಿತು. ಮೂವತ್ತು ವರ್ಷಗಳುದ್ದಕ್ಕೂ ಅಖಂಡವಾದ ನಿಷ್ಠೆಯಿಂದ ಕನ್ನಡಕ್ಕಾಗಿ ದುಡಿದವರು, ಕನ್ನಡ ನಾಡುನುಡಿಗಳ ಸೇವೆ ತಮ್ಮ ಜೀವದುಸಿರು ಎಂದು ನಂಬಿ ನಡೆದವರು ಇಂಥ ಆಕ್ಷೇಪಣೆಗಳಿಂದ, ವಾದವಿವಾದಗಳಿಂದ, ಅತಿಯಾಗಿ ನೊಂದು ಕೊಂಡಿದ್ದರೆ ಅದು ಸ್ವಾಭಾವಿಕವೇ. ಇದೆಲ್ಲದರ ನೋವನ್ನು ಅವರಿಗೆ ಮರೆಯಲಾಗಲಿಲ್ಲ. ಅವರ ಬದುಕಿನ ಕೊನೆಯ ಮೂರುನಾಲ್ಕು ವರ್ಷಗಳನ್ನು ಈ ವಿಫಲಭಾವನೆ ಮುಸುಕಿ ನೋಯಿಸಿತು. ಆರೋಗ್ಯ ಸರಿಯಾಗಿರಲಿಲ್ಲ. ರಕ್ತದ ಒತ್ತಡ ಹೆಚ್ಚುತ್ತಿತ್ತು: ಮಧುಮೇಹ ಬಲಿಯುತ್ತಿತ್ತು. ಅಂಥದರಲ್ಲಿಯೂ ಅವರು ೧೯೪೪ರಲ್ಲಿ ಧಾರವಾಡದಲ್ಲಿ ಪ್ರಾರಂಭವಾಗಲಿದ್ದ ಹೊಸ ಕಾಲೇಜೊಂದಕ್ಕೆ ಮುಖ್ಯಸ್ಥರಾಗಿ ಹೋಗುವುದಕ್ಕೆ ಅಲ್ಲಿಯ ಸ್ನೇಹಿತರ ಒತ್ತಾಯಕ್ಕೆ ಮಣಿದು ಹಿತೈಷಿಗಳ ಮಾತುಗಳನ್ನು ಗಮನಿಸದೆ ಒಪ್ಪಿದರು. ಅಲ್ಲಿಯವರೆಗೆ ತಮ್ಮಿಂದ ಆಗಬಹುದಾದ ಪ್ರಯೋಜನ ಆಗಲಿ ಎನ್ನುವ ದೃಷ್ಟಿ ಅವರದಾಗಿತ್ತು. ಅವರಿಂದಾಗಿ ಕಾಲೇಜಿಗೆ ಮನ್ನಣೆಯೇನೋ ಬಂದಿತು. ಆದರೆ ಆಡಳಿತವರ್ಗದವರು ಅವರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ. ಕಾರ್ಯನಿರ್ವಹಣೆಯಲ್ಲಿ ಅಗತ್ಯವಾದ ಸ್ವಾತಂತ್ರ್ಯವನ್ನು ಕೊಡಲಿಲ್ಲ. ಇದರಿಂದಾಗಿ ಧಾರವಾಡದಲ್ಲಿಯ ವಾಸ್ತವ್ಯ ಅವರು ಎಣಿಸಿದಂತೆ ಹಿತವಾಗಲಿಲ್ಲ, ಫಲಕಾರಿಯಾಗಲಿಲ್ಲ. ಅಲ್ಲಿಗೆ ಹೋಗಿ ಎರಡು ವರ್ಷಗಳಾಗುವುದರೊಳಗಾಗಿಯೇ ೧೯೪೬ರ ಜನವರಿ ೫ರಂದು ಹೃದಯಾಘಾತದಿಂದ ಅಕಸ್ಮಾತ್ತಾಗಿ ನಿಧನರಾದರು. ಮೂವತ್ತೈದು ವರ್ಷಗಳ ಹಿಂದೆ ಧಾರವಾಡದಲ್ಲಿಯೇ ಕನ್ನಡ ಮಾತು ತಲೆಯೆತ್ತುವ ಬಗೆಯನ್ನು ಕುರಿತು ದನಿಯನ್ನೆತ್ತಿದ ಅವರು ಧಾರವಾಡದಲ್ಲಿಯೇ ಕಾಲ

ವಶರಾದರೆನ್ನುವುದರಲ್ಲಿ ಒಂದು ಬಗೆಯ ಕ್ರೂರ ಔಚಿತ್ಯವೋ ವಿಧಿವಿಲಾಸದ ವಿಚಿತ್ರ ಕೈವಾಡವೊ ಎದ್ದುಕಾಣುತ್ತದೆ.

***

ಮೂವತ್ತರ ದಶಕದಲ್ಲಿ ಶ್ರೀಕಂಠಯ್ಯನವರ ಎರಡು ಇಂಗ್ಲಿಷ್ ಎರಡು ಕನ್ನಡ ಭಾಷಣಗಳನ್ನು ಕೇಳಿ ಅವರ ವಿದ್ವತ್ತಿಗೆ, ವಾಗ್ವೈಖರಿಗೆ ಮರುಳಾದವನು ನಾನೊಬ್ಬ. ಆದರೆ ನೇರವಾಗಿ ಅವರ ಪರಿಚಯವಾಗಿ ಅವರೊಡನೆ ನಾನು ಮಾತನಾಡಿದ್ದು ೧೯೪೨ರಲ್ಲಿ. ಆಗ ಬೆಂಗಳೂರಿನಲ್ಲಿಯೇ ಇರುತ್ತಿದ್ದ ನನ್ನನ್ನು ವಿ. ಸೀ ಅವರು ಒಂದು ಸಾಯಂಕಾಲ ಕರೆದುಕೊಂಡು ಹೋಗಿ ಪರಿಚಯ ಮಾಡಿಸಿದರು. ನನ್ನ ವಿಚಾರದಲ್ಲಿ ತುಂಬ ವಿಶ್ವಾಸದ ಮಾತುಗಳನ್ನು ಮೊದಲೇ ಹೇಳಿರಬೇಕು . ಐದು ವರ್ಷಗಳ ಹಿಂದೆ ಮಾಸ್ತಿಯವರ "ಹೇಮಕೂಟಾಶ್ರಮದಿಂದ ಬಂದಮೇಲೆ" ಕಥೆಯ ನನ್ನ ಇಂಗ್ಲಿಷ್ ಅನುವಾದ ಮದರಾಸಿನ "ತ್ರಿವೇಣಿ" ಪತ್ರಿಕೆಯಲ್ಲಿ ಪ್ರಕಟವಾದದ್ದನ್ನು ಅವರು ನೋಡಿದ್ದರು. ಮಾತನಾಡುತ್ತಿದ್ದಂತೆಯೇ ನನ್ನ ಸಾಹಿತ್ಯಾಸಕ್ತಿಯನ್ನು ತಿಳಿದುಕೊಂಡು ಇಂಗ್ಲಿಷ್ ಸಾಹಿತ್ಯವನ್ನು ಓದಿ ಕನ್ನಡದಲ್ಲಿಯೂ ಬರೆಯುತ್ತೇನೆನ್ನುವುದನ್ನು ತಿಳಿದು ತುಂಬ ಸಂತೋಷಪಟ್ಟರು. ಆ ಸಂದರ್ಭದಲ್ಲಿ ಅವರು ಹೇಳಿದ ಮಾತುಗಳು ಇಂದಿಗೂ ನನ್ನ ನೆನಪಿನಲ್ಲಿ ಉಳಿದಿವೆ. "ನೋಡಿ, ಕನ್ನಡಕ್ಕೆ ಇಂಗ್ಲೀಷಿನಿಂದ ತುಂಬಾ ಉಪಕಾರ ವಾಗಬೇಕಾಗಿದೆ. ಹೊಸ ರೀತಿಯ ಬರವಣಿಗೆಗಳಿಗಾಗಿ, ಹೊಸ ಪ್ರಯೋಗಗಳಿಗಾಗಿ, ಸಾಹಿತ್ಯವಿಮರ್ಶೆಯ ವಿಚಾರಗಳನ್ನು ಬೆಳೆಯಿಸುವುದಕ್ಕಾಗಿ, ಇಂಗ್ಲಿಷನ್ನು ಬಿಟ್ಟು ನಾವು ಮುಂದುವರಿಯುವ ಹಾಗಿಲ್ಲ. ಆ ಕೆಲಸವನ್ನೆಲ್ಲ ಇನ್ನು ಮುಂದೆ ನಿಮ್ಮಂಥವರು ಮಾಡ ಬೇಕು" ಎಂದು ಹೇಳಿದ ಅವರ ಮಾತುಗಳು ಹೊಸದಾಗಿ ಬರೆಯುತೊಡಗಿದ್ದ ನನಗೆ ಹೆಚ್ಚಿನ ಧೈರ್ಯವನ್ನು ತಂದು ಕೊಡುವಂಥವಾಗಿದ್ದವು. ಅದರ ನಂತರ ಮತ್ತೆ ಒಂದೆರಡು ಸಲ ಬೆಂಗಳೂರಿನಲ್ಲಿ ಅವರನ್ನು ಕಂಡಾಗಲೂ ಅದೇ ವಿಷಯ ಬಂದಿತ್ತು—ಇಂಗ್ಲೀಷಿ ನಿಂದ ಕನ್ನಡಕ್ಕೆ ಆಗಬಹುದಾದ ಉಪಕಾರ, ಕನ್ನಡಕ್ಕಾಗಿ ಮಾಡಬೇಕಾದ ಕೆಲಸ.

ಮತ್ತೆ ನಾನು ಅವರನ್ನು ಕಂಡು ಕೆಲವು ಗಂಟೆ ಅವರೊಡನೆ ಕಳೆದದ್ದು ೧೯೪೫ ರಲ್ಲಿ—ಮುಂಬಯಿಯ ಸಿಡೆನ್‌ಹ್ಯಾಂ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕನಾಗಿದ್ದಾಗ. ಅವರು ಪ್ರಿನ್ಸಿಪಾಲರಾಗಿದ್ದ ಧಾರವಾಡದ ಕಾಲೇಜು ಮುಂಬಯಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರಿದ್ದಾಗಿತ್ತು. (ಆಗಿನ್ನೂ ಕರ್ನಾಟಕ ವಿಶ್ವವಿದ್ಯಾನಿಲಯ ಹುಟ್ಟಿರಲಿಲ್ಲ.) ಯಾವುದೋ ಒಂದು ವಿಶ್ವವಿದ್ಯಾನಿಲಯದ ಸಭೆಗಾಗಿ ಮುಂಬಯಿಗೆ ಬಂದಿದ್ದರು. ನಮ್ಮ ಕಾಲೇಜಿನಲ್ಲಿ ಒಂದು ಭಾಷಣವಾಗಬೇಕೆಂದು ಕಾಲೇಜಿನಲ್ಲಿ ಗ್ರಂಥಪಾಲರಾಗಿದ್ದ ಎಚ್. ಎಸ್. ಪಾಟೀಲರು ಮತ್ತು ನಾನು ಹೋಗಿ ಕೇಳಿಕೊಂಡಾಗ ಅನಾರೋಗ್ಯದಿಂದ

ಬಳಲುತ್ತಿದ್ದರೂ ಒಪ್ಪಿದರು. ಅಂದು ಮಧ್ಯಾಹ್ನದ ರೈಲಿನಿಂದ ಅವರು ಹಿ
ವವರಿದ್ದುದ್ದರಿಂದ ಒಂದು ಗಂಟೆಯ ಸುಮಾರಿಗೆ ಅವರನ್ನು ಕರೆದುಕೊಂಡು
ತುಂಬಾ ನಿಶ್ಯಕ್ತಿಯಾಗಿತ್ತು. ವೇದಿಕೆಯನ್ನೇರುವುದಕ್ಕೆಯೇ ಕೈ ಹಿಡಿಯಬೇಕಾಗ
ಹಾಗಿದ್ದರೂ, ನನ್ನ ಪರಿಚಯ ಭಾಷಣವಾದಮೇಲೆ ಸುಮಾರು ಮುಕ್ಕಾಲುಗಂಟ
ನಾಡಿದರು. ಅದೇ ಅಸ್ಖಲಿತ ವಾಣಿ. ಅದು ವಾಣಿಜ್ಯ ಕಾಲೇಜಾಗಿದ್ದರಿಂದ ವಿ
ಗಳನ್ನು ಕುರಿತು, ವಾಣಿಜ್ಯ, ವ್ಯವಹಾರ, ಹಣಕಾಸು ಮುಂತಾದ ವಿಚಾರಗಳನ್ನು
ನಾವು ಬದುಕುವ ಹಾಗಿಲ್ಲವಾದರೂ ಬಾಳು ಸಾರ್ಥಕವಾಗುವುದು ಮಾನವೀಯ
ಗಳ ಅನುಷ್ಠಾನದಿಂದ ; ಸರಿಯಾದ ಸಂಸ್ಕಾರಗಳನ್ನು ರೂಢಿಸಿಕೊಂಡು ಮನುಷ್ಯ
ಮನುಷ್ಯನಾಗಿ ಬೆಳೆಯದಿದ್ದರೆ—ಸೌಹಾರ್ದ, ಪ್ರೀತಿ, ಅನುಕಂಪ, ತಿಳುವಳಿ
ಗುಣಗಳನ್ನು ಬೆಳೆಯಿಸಿಕೊಳ್ಳದ್ದರೆ—ಎಂಥ ಯಶಸ್ಸೂ ಕೊನೆಯ ಹಂತದಲ್ಲಿ
ಗುತ್ತದೆ ಎಂದು ಮುಂತಾಗಿ ರಸವತ್ತಾಗಿ, ಸಾರವತ್ತಾಗಿ, ಮಾತನಾಡಿದರು.
ಮುಗಿದಾಗ ತುಂಬಾ ಆಯಾಸವಾಗಿತ್ತು. ಅರ್ಧ ಗಂಟೆ ವಿಶ್ರಮಿಸಿಯಾದ ಮೇಲೆ
ನಿಲ್ದಾಣಕ್ಕೆ ಕರೆದುಕೊಂಡು ಹೋಗುತ್ತಿರುವಾಗ ನನ್ನ ಪರಿಚಯ ಭಾಷಣ
ಮಾತುಗಳಿಂದ ತಮಗಾದ ಸಂತೋಷವನ್ನು ಹೇಳಿದರು. ಆದರೂ ಏನೋ ಒಂದು
ಸಂಕೋಚ ಇದ್ದಹಾಗೆ ನನಗೆನಿಸಿತ್ತು. ಅದು ಯಾತಕ್ಕಿರಬಹುದೆಂಬುದರ ಸಂಶ
ನನಗಿತ್ತು. ಎರಡು ವರ್ಷಗಳ ಹಿಂದೆ "ಜಯಂತಿ" ಪತ್ರಿಕೆಯಲ್ಲಿ ನಾನು ಬರೆಯ
"ಸಾಹಿತ್ಯವಿಹಾರ" ದಲ್ಲಿ ಅವರ ಭಾಷಣ ಸಾಮರ್ಥ್ಯವನ್ನು ಕುರಿತು ತಮ್ಮ ವಾಗ್ವೈ
ತಾವೇ ಮನಸೋತಂತೆ ಅನೇಕ ಸಂದರ್ಭಗಳಲ್ಲಿ ಪ್ರಸ್ತುತವ ವಿಷಯವನ್ನೂ ಮರೆ
ತ್ತಾರೆ ಎಂಬ ಆಶಯದ ಮಾತುಗಳನ್ನು ಅರೆಹಾಸ್ಯದ ಧ್ವನಿಯಲ್ಲಿ ಬರೆದಿದ್ದೆ. ಅದನ್ನು
ಎಲ್ಲಿ ಓದಿದ್ದರೊ, ಅಥವಾ ಯಾರು ಹೇಳಿದ್ದರೊ, ಅಂತೂ ಅವರಿಗೆ ಅದು ಅಸಮ
ವನ್ನುಂಟು ಮಾಡಿತ್ತು. ಕೊನೆಗೆ ತಡೆಯಲಾಗದೆಂಬಂತೆ ಗಾಡಿಯಲ್ಲಿ ಕುಳಿತಾದ ಮೇ
ವಿಷಯವನ್ನು ಪ್ರಸ್ತಾಪಿಸಿ "ಏನು, ಇನಾಂದಾರರೇ, ನೀವೂ ಹಾಗೆ ಬರೆಯಬಹು
ಎಂದರು. "ಅದರಲ್ಲಿಯ ವಾಗ್ವೈಖರಿಯ ಬಗೆಗಿನ ಮೊದಲರ್ಧ ಮಾತ್ರ ನಿಜ. ಉಳಿ
ಅರೆಹಾಸ್ಯಕ್ಕಾಗಿ ಬರೆದದ್ದು. ಅದನ್ನು ತಾವು ಮನಸ್ಸಿಗೆ ತಂದುಕೊಳ್ಳಬಾರದು"
ಹೇಳಿದಾಗ ಅವರಿಗೆ ಸಮಾಧಾನವಾಗಿರಬೇಕು. ಗಾಡಿಯಲ್ಲಿ ಹೂವು ಹಣ್ಣುಗಳ
ತುಂಬಾ ಪ್ರೀತಿಯಿಂದ ಬೀಳ್ಕೊಟ್ಟೆವು. ರೈಲು ಹೊರಟುಹೋಯಿತು. ಶ್ರೀಕಂ
ನವರನ್ನು ನಾನು ನೋಡಿದ್ದು ಅದೇ ಕೊನೆಯ ಸಲವಾಯಿತು. ಈ ಎರಡೂ ಸನ್ನಿ
ಗಳು ಅವರ ಮನೋಧರ್ಮದ ಎರಡು ಬಗೆಗಳ ಇಣುಕು ನೋಟವನ್ನು ಕೊಡ
ಎನ್ನುವುದಕ್ಕಾಗಿ ಅವನ್ನು ಕುರಿತು ಹೇಳಿದ್ದೇನೆ.

೬

ಶ್ರೀಕಂಠಯ್ಯನವರ ಕೃತಿಗಳ ವಿಶೇಷವನ್ನು ತಿಳಿದುಕೊಳ್ಳುವುದಕ್ಕೆ ಪೂರ್ವಭಾವಿಯಾಗಿ ಅವರು ಕೈಕೊಂಡು ಪೂರೈಸಿದ ಕನ್ನಡದ ಪುನರುಜ್ಜೀವನದ ಕಾರ್ಯದ ರೂಪರೇಖೆಗಳನ್ನು ಸ್ಪಷ್ಟವಾಗಿ, ನಿಷ್ಪಕ್ಷಪಾತವಾಗಿ, ನಿವೇದಿಸುವ ಅವರ ಎರಡು ಭಾಷಣಗಳನ್ನು ಪರಿಶೀಲಿಸಬೇಕು. ಒಂದು, ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ೧೯೧೧ರಲ್ಲಿ ನೀಡಿದ ಉಪನ್ಯಾಸ—"ಕನ್ನಡ ಮಾತು ತಲೆಯೆತ್ತುವ ಬಗೆ." ಎರಡು, ಕಲಬುರ್ಗಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪೀಠದಿಂದ ೧೯೨೮ರಲ್ಲಿ ಮಾಡಿದ ಭಾಷಣ—"ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ." ಇವೆರಡೂ ಕನ್ನಡದ ಮುನ್ನಡೆಗಾಗಿ, ಹೊಸ ಸಾಹಿತ್ಯದ ನಿರ್ಮಾಣಕ್ಕಾಗಿ ಅವರು ಮಾಡಿದ ಧ್ಯೇಯ ಘೋಷಣೆಗಳೇ (ಮ್ಯಾನಿಫೆಸ್ಟೋ) ಆಗಿವೆ. ಅವರು ಮಾಡಿದ ಪ್ರಚಾರಕ್ಕೆ ಮಾತ್ರವಲ್ಲದೆ ಅವರ ಕೃತಿಗಳಿಗೂ ಹಿನ್ನೆಲೆಯಾಗಿದ್ದ, ಅಡಿಪಾಯವಾಗಿದ್ದ, ವಿಚಾರಗಳನ್ನು ಅವೆರಡೂ ಒಳಗೊಂಡಿವೆ.

ಮೊದಲನೆಯ ಉಪನ್ಯಾಸ ಮುಖ್ಯವಾಗಿ ಕನ್ನಡದ ಅಂದಿನ ಶೋಚನೀಯ ಸ್ಥಿತಿಯನ್ನು ವಿವರಿಸಿ ಅದಕ್ಕೆ ಪರಿಹಾರವನ್ನು ಸೂಚಿಸುತ್ತದೆ. ಒಂದು ಕಡೆ ಸಂಸ್ಕೃತದ ಹೆಮ್ಮೆ. ಇನ್ನೊಂದು ಕಡೆ ಇಂಗ್ಲೀಷಿನ ಆಕರ್ಷಣೆಯಾಗಿ ಕನ್ನಡವನ್ನು ಕೇಳುವವರೇ ಇರಲಿಲ್ಲ. ಸಂಸ್ಕೃತದಲ್ಲಿ ಇಲ್ಲದ್ದು ಕನ್ನಡದಲ್ಲಿ ಏನಿದೆ ಎಂದು ಒಬ್ಬರಾದರೆ ಆಧುನಿಕ ಯುಗಕ್ಕೆ ತಕ್ಕುದಾದ ಲಲಿತಸಾಹಿತ್ಯವೂ ಇಲ್ಲದ, ಉಪಯುಕ್ತ ಸಾಹಿತ್ಯವೂ ಇಲ್ಲದ ಕನ್ನಡಕ್ಕೆ ಕಟ್ಟು ಬೀಳುವುದರಿಂದೇನಾಗಬೇಕಾಗಿದೆ ಎಂದು ಇನ್ನೊಬ್ಬರು. ಇವರಿಗೆ ಸಮನಾಗಿ ಹಳಗನ್ನಡ ನಡುಗನ್ನಡದ ಹಿರಿಯ ಕೃತಿಗಳೇ ಇರುವಾಗ ಅವನ್ನು ಸರಿದೂಗುವ ಹೊಸ ಕೃತಿಗಳು ಸಾಧ್ಯವೆ ಎಂದು ಕನ್ನಡದ ವೀರಾಭಿಮಾನಿಗಳ ಹೆಮ್ಮೆ. ಇಂಥ ಸಂದಿಗ್ಧದಲ್ಲಿ ಶ್ರೀಕಂಠಯ್ಯನವರು ತಮ್ಮ ನಿಲುವನ್ನು ಸ್ಪಷ್ಟವಾಗಿ ವಿವರಿಸಿದರು. " ಅಭಿಮಾನದಿಂದ ದೇಶಭಾಷೆಗಳನ್ನು ಉದ್ಧಾರಮಾಡಿ ಆಯಾ ಪ್ರಾಂತ್ಯಗಳ ಜನ ಸಾಮಾನ್ಯಕ್ಕೂ, ಅನುಕೂಲಕ್ಕೆ ಇಂಗ್ಲಿಷ್‌ ಭಾಷೆಯನ್ನು ಸ್ವೀಕರಿಸಿ ಒಗ್ಗಟ್ಟಿಗಾಗಿ ಒದ್ದಾಡುವ ಇಂಡಿಯದ ವಿದ್ಯಾವಂತರಿಗೂ, ಇಬ್ಬರಿಗೂ ಲಾಭವಾಗುವಂತೆ ನಡೆಯತಕ್ಕದ್ದೇ ಮೇಲು....ನಾವು ಸ್ವೀಕರಿಸತಕ್ಕ ಭಾಷೆಗಳನ್ನು ಹೇಳುತ್ತಿರುವಾಗ ಸಂಸ್ಕೃತವನ್ನು ಬಿಡುವುದಕ್ಕಿಲ್ಲ....ಅದನ್ನು ತಿಳಿದ ಹೊರತು ಹಿಂದಿದ್ದ ಸ್ಥಿತಿಯಾಗಲಿ, ಈಗಿನ ಸ್ಥಿತಿಗೆ ಕಾರಣವಾಗಲಿ, ಮುಂದೆ ತಿದ್ದಬೇಕಾದ ರೀತಿಯಾಗಲಿ ತಿಳಿಯುವುದಿಲ್ಲ. ಆದ್ದರಿಂದ ಇಂಡಿಯದಲ್ಲಿ ವಿದ್ಯಾವಂತನೆನ್ನುವ ಪ್ರತಿಯೊಬ್ಬನೂ ಇಂಗ್ಲಿಷ್, ಸಂಸ್ಕೃತ, ತನ್ನ ಕಡೆಯ ದೇಶಭಾಷೆ ಈ ಮೂರನ್ನು ಚೆನ್ನಾಗಿ ತಿಳಿದಿರಬೇಕು. ತನಗೆ ಹರ್ಷವೂ ಲಾಭವೂ, ದೇಶಕ್ಕೆ ಉನ್ನತಿಯೂ ಸೌಖ್ಯವೂ ಬರುವಂತೆ ಶ್ರಮಬೀಳಬೇಕೆನ್ನುವವನಿಗೆ ಈ ಮೂರೂ ಬಂದೇ ತೀರಬೇಕು ; ಇಲ್ಲದಿದ್ದರೆ ಅಷ್ಟು ನೇರ್ಪಿಲ್ಲ. " ಎಪ್ಪತ್ತೆರಡು ವರ್ಷಗಳ ಹಿಂದೆ ಹೇಳಬೇಕಾಗಿ ಬಂದಿದ್ದ ಈ ಮಾತು

ಗಳನ್ನು ಇಂದಿಗೂ ಹೇಳಬೇಕಾಗಿದೆ ಎನ್ನುವುದು ನಾವು ಸಮಸ್ಯೆಯನ್ನು ಎದುರಿಸಿದ ರೀತಿಯನ್ನು ಕುರಿತ ಸಮರ್ಪಕ ವ್ಯಾಖ್ಯಾನವಾಗಿದೆ.

ಸಂಸ್ಕೃತದಿಂದ ಕನ್ನಡಕ್ಕಾದ ಉಪಕಾರಕ್ಕೆ ಸರಿಯಾಗಿ ಅಪಕಾರವೂ ಆಗಿದೆ. ಸಂಸ್ಕೃತದಲ್ಲಿಯ ಮುಕ್ಕಾಲು ಪಾಲು ಗ್ರಂಥಗಳು ವಸ್ತು, ಭಾವ, ಶೈಲಿ, ಯಾವುದ ರಲ್ಲಿಯೂ ಜನ ಸಾಮಾನ್ಯಕ್ಕಾಗಿ ಬರೆಯಲಾಗಲಿಲ್ಲ. ಪೋಷಕರ, ಪಂಡಿತರ ಪ್ರೀತಿ ಗಾಗಿಯೋ ತಮ್ಮ ಪಾಂಡಿತ್ಯವನ್ನು ಮೆರೆಯುವುದಕ್ಕಾಗಿಯೋ ಬರೆದುವು. ಪಂಪ, ರನ್ನ, ಕುಮಾರವ್ಯಾಸರಂಥ ಸ್ವತಂತ್ರ ಪ್ರತಿಭಾವಂತರು ಆಗಿಹೋದರೂ ಅಂಥವರು ಎಷ್ಟು ಜನ ? ಹೆಚ್ಚಿನವರಲ್ಲಿ ಸಂಸ್ಕೃತದ ಅನುಕರಣೆ ಒಂದು ಹೊರೆಯಾಗಿ ಎಲ್ಲ ಬಗೆಯ ಕೃತಕತೆಗಳಿಗೂ ಎಡೆಮಾಡಿಕೊಟ್ಟಿದೆ. ಇದರ ಪರಿಣಾಮವೆಂದರೆ, ಕಾವ್ಯ ವಸ್ತುವಿನಲ್ಲಿ ಹೊಸತನ ಕಾಣದು. ರೀತಿಯಲ್ಲಿ ಒಂದೇ ಕ್ರಮ. ಎಲ್ಲರೂ ಸೂತ್ರಕ್ಕೆ ಸ್ವತಂತ್ರವನ್ನು ಮಾರಿಕೊಂಡವರು. ಹೊಸ ಭಾವಗಳಿಗೆ ಅವಕಾಶವಿಲ್ಲ. ಎಲ್ಲವೂ ಲಕ್ಷಣಗ್ರಂಥಗಳನ್ನು ಅನುಸರಿಸಬೇಕು. ವರ್ಣನೆಗಳೆಲ್ಲ ಒಂದೇ ಪಡಿಯಚ್ಚಿನವು. ಶೈಲಿಯಾದರೊ, ಸಂಸ್ಕೃತ ಬರೆಯ ಹೊರಟು ಮರೆತು ಎಲ್ಲಿಯೊ ಕನ್ನಡ ಪ್ರತ್ಯಯಗಳನ್ನು ಅಂಟಿಸಿದ ಹಾಗೆ. ರೂಪ ಸಾಮಾನ್ಯವಾಗಿ ಪದ್ಯವೇ. ಇಂಗ್ಲಿಷ್ ಓದಿದವರನ್ನು ಬಿಟ್ಟರೂ ಸಾಮಾನ್ಯರು ಈ ಬಗೆಯ ಗ್ರಂಥಗಳನ್ನು ಅರ್ಥಮಾಡಿಕೊಳ್ಳಲಾರರು. ಸಂತೋಷ ಪಡಲಾರರು. ಕನ್ನಡ ಕಾವ್ಯದ ಪರಂಪರೆಯಲ್ಲಿ ಈ ಎಲ್ಲ ದೋಷಗಳೂ ಇವೆ ಎನ್ನುವುದನ್ನು ಒಪ್ಪಬೇಕಾಗುತ್ತದೆ. ಆದರೆ ದೋಷಗಳಿವೆ ಎಂದ ಮಾತ್ರಕ್ಕೆ ಅದನ್ನು ಕೈ ಬಿಡಲಾಗುವುದಿಲ್ಲ. ಹಿಂದಿನದನ್ನು ಅಳಿಸಿಹಾಕಿ ಮುಂದೆ ಸಾಗುವುದು ಸಾಧ್ಯವಲ್ಲ, ಸಾಧುವೂ ಅಲ್ಲ. ಅದಕ್ಕಾಗಿ ಮಾಡ ಬೇಕಾದ ಕೆಲಸಗಳೆಂದರೆ (೧) ಹಿಂದಿನ ಗ್ರಂಥಗಳೆಲ್ಲವನ್ನೂ ಶೇಖರಿಸಿ ಬೆಳಕಿಗೆ ತರುವುದು, (೨) ಕಾಲಕ್ಕೆ ತಕ್ಕಂತೆ ಹೊಸದಾಗಿ ಲಕ್ಷಣಗ್ರಂಥಗಳನ್ನು ರಚಿಸುವುದು, ಮತ್ತು (೩) ಪೂರ್ವಿಕರ ಕಾವ್ಯಗಳಲ್ಲಿಯ ಉತ್ತಮವಾದ ಭಾಗಗಳನ್ನು ಪಾಠ್ಯಗಳನ್ನಾಗಿ ನಿಯಮಿಸಿ ಪ್ರಚುರಪಡಿಸುವುದು.

ಹಿಂದಿನಿಂದ ಬಂದುದನ್ನು ಹೀಗೆ ಕಾಪಾಡಿಕೊಂಡು ಹೊಸ ರಚನೆ ಸಾಧ್ಯವಾಗು ವಂತೆ ಉಳುಮೆ ಮಾಡಬೇಕಾಗಿದೆ. ಅಷ್ಟನ್ನು ಮಾಡುವಾಗ ಗಮನಿಸಬೇಕಾದ ಅಂಶ ಗಳೆಂದರೆ (೧) ಭಾಷೆಯ ವಿಚಾರದಲ್ಲಿ ಹೊಸಗನ್ನಡವನ್ನೇ ಬರೆಯಬೇಕು. ಗ್ರಾಮ್ಯವನ್ನು ಬಿಟ್ಟು ವಿದ್ಯಾವಂತರು ಆಡುವ ಸ್ಫುಟವಾದ ಕನ್ನಡವನ್ನು ಗ್ರಂಥಭಾಷೆಯನ್ನಾಗಿಸಬೇಕು. (೨) ಇದರ ಉದ್ದೇಶವೆಂದರೆ ಎಲ್ಲರೂ ಓದಬೇಕು ಎನ್ನುವುದು. (೩) ಗ್ರಂಥಗಳ ವಿಷಯ ಸಮಾಜದ ಏಳಿಗೆಗೆ ನೆರವಾಗುವಂಥದು ಇರಬೇಕು. (೪) ಪ್ರಯೋಜನವೊಂದೇ ಬರಹದ ಗುರಿಯಾಗಿರದೆ ಸಂತೋಷವೂ ಆಗಿರಬೇಕಾದ್ದರಿಂದ ಲಲಿತ ಸಾಹಿತ್ಯ ಪ್ರಕಾರಗಳನ್ನೂ ರೂಢಿಸಿಕೊಳ್ಳಬೇಕು, (೫) ಹಿಂದೆ ಆಗಿಹೋದ ಹಿರಿಯ ಚರಿತ್ರೆ ಪುರುಷರ ಜೀವನ ಕಥೆ

ಗಳನ್ನು ಇದ್ದದ್ದಿದ್ದಂತೆ ತಿಳಿಸಬೇಕು. (೬) ಸಮೃದ್ಧವಾಗಿ ಬೆಳೆದು ನಿಂತ ಇಂಗ್ಲಿಷ್ ಸಾಹಿತ್ಯದಿಂದ ಅನುವಾದಗಳನ್ನು ಮಾಡಿಕೊಂಡು ಕನ್ನಡದ ಬೊಕ್ಕಸವನ್ನು ಶ್ರೀಮಂತವಾಗಿಸ ಬೇಕು. (೭) ಸಂಸ್ಕೃತದಲ್ಲಿಯ ಅಮೂಲ್ಯ ಕೃತಿಗಳೂ ಹೆಂಗಸರು ಕೂಡ ಓದಿಕೊಳ್ಳುವಂತೆ ಅನುವಾದವಾಗಬೇಕು.

ಶ್ರೀಕಂಠಯ್ಯನವರ ಈ ಮೊದಲ ಭಾಷಣದಲ್ಲಿ ಕನ್ನಡ ಸಮೃದ್ಧವಾಗಿ ಬೆಳೆಯಬೇಕು ಎಂಬ ಆಕಾಂಕ್ಷೆಯ ಜೊತೆಯಲ್ಲಿ ಅದನ್ನು ಸಾಧಿಸುವುದು ಹೇಗೆ ಎಂಬ ಬಗೆಯಲ್ಲಿಯ ಒಂದು ಸ್ಪಷ್ಟವಾದ ಯೋಜನೆಯನ್ನೂ ನಾವು ಕಾಣಬಹುದು. ಮುಖ್ಯವಾಗಿ ಕನ್ನಡ ಮಾತು ತಲೆಯೆತ್ತಬೇಕು, ಸಮೃದ್ಧವಾಗಿ ಸಮಕಾಲೀನ ಜೀವನಕ್ಕೆ ಉಪಕಾರಿಯಾಗಿ ಸಾಹಿತ್ಯ ಬೆಳೆಯಬೇಕು. ಹಿಂದಿನವರ ಸಂಪರ್ಕವನ್ನು ಕಡಿದುಕೊಳ್ಳದೆ ಹೊಸ ಕಾಲದ ಅಗತ್ಯಗಳನ್ನೂ ಪ್ರೇರಣೆಗಳನ್ನೂ ಅನುಲಕ್ಷಿಸಿಯೇ ಮುಂದುವರಿಯಬೇಕಾದಾಗ ಗಮನಿಸಲೇಬೇಕಾದ ಎಲ್ಲ ವಿಚಾರಗಳನ್ನೂ ಈ ಭಾಷಣ ಒಳಗೊಂಡಿದೆ. ಕನ್ನಡದ ಪುನರುತ್ಥಾನದ ಮಹತ್ಕಾರ್ಯಕ್ಕೆ ಇದು ಒಂದು ಮಾರ್ಗದರ್ಶಕ ಪೀಠಿಕೆಯಾಗಿದೆ.

***

ಕಲಬುರ್ಗಿಯ ಭಾಷಣವಂತೂ ಕನ್ನಡಲ್ಲಿಯ ನವೋದಯ ಸಾಹಿತ್ಯದ ಧ್ಯೇಯ ಘೋಷಣೆಯಾಗಿದೆ. ನಿರ್ಮಾಣವಾಗಬೇಕೆಂದ ಹೊಸ ಸಾಹಿತ್ಯದ ರೂಪರೇಖೆಗಳನ್ನು, ಆಶೋತ್ತರಗಳನ್ನು, ರೀತಿ ವಿಧಾನಗಳನ್ನು. ವಿವರವಾಗಿ ತಿಳಿಹೇಳುವ ಒಂದು ನೀಲ ನಕ್ಷೆಯಾಗಿದೆ. ಅದರ ಮುಖ್ಯಾಂಶಗಳನ್ನು ಅವರ ಮಾತುಗಳನ್ನೇ ಬಳಸಿ ಹೀಗೆ ಸಂಗ್ರಹಿಸಬಹುದು :

ದೇಶದ ಶ್ರೇಯೋಭಿವೃದ್ಧಿಗಾಗಿ ಆವಶ್ಯಕವಾದ ಸಾಧನಗಳಲ್ಲಿ ಸಾಹಿತ್ಯ ಕೃಷಿ ಒಂದು. ಜ್ಞಾನ ಆನಂದ ಸತ್ಪ್ರೇರಣೆಗಳನ್ನು ಒದಗಿಸಿ ಸಮಾಜದ ಪುನರ್ನಿರ್ಮಾಣ ಕಾರ್ಯದಲ್ಲಿ ಪ್ರಯೋಜನ ಕಾರಿಯಾದ ಸಾಹಿತ್ಯ ನಮ್ಮಲ್ಲಿ ಎಷ್ಟಿದೆ? ಇಂಗ್ಲಿಷನ್ನು ಕಲಿತವನು ಕಾಣಬಹುದಾದ ರಮಣೀಯವಾದ ಸಾಹಿತ್ಯೋದ್ಯಾನಗಳನ್ನು ಕನ್ನಡ ಪಡೆದಿದೆಯೆ ? ಪುರಾತನರ ಪ್ರೌಢ ಸಾಹಿತ್ಯ, ಮಧ್ಯಕಾಲದವರ ಸುಲಭ ಸಾಹಿತ್ಯ, ನೂತನರ ರಂಜಕ ಸಾಹಿತ್ಯ ನಮ್ಮಲ್ಲಿಲ್ಲವೆ ಎಂದು ಕೇಳಬಹುದು. ಇವೆ. ಆದರೆ ಇದ್ದಷ್ಟು ಸಾಲದು. ನಮ್ಮ ಸಾಹಿತ್ಯವನ್ನು ಕುಲುಮೆಗೆ ಹಾಕಿ ಪರೀಕ್ಷೆ ಮಾಡಬಲ್ಲ ರಸಜ್ಞರು ಇಲ್ಲದ್ದನ್ನು ಇವೆ ಎಂದುಕೊಂಡು ಜಂಭ ಪಡಲಾರರು. ತಾರತಮ್ಯಜ್ಞಾನವುಳ್ಳವರು ಕೀಳನ್ನು ಮೇಲೆಂದು, ಸಾಮಾನ್ಯವಾದದ್ದನ್ನು ಉತ್ಕೃಷ್ಟವೆಂದು, ಕಳಂಕಮಿಶ್ರಿತವಾದದ್ದನ್ನು ಪರಿಶುದ್ಧವೆಂದು, ಅರ್ಧಪಕ್ವವಾದ ಕಲಾಚಾತುರ್ಯವನ್ನು ಕಲೆಯ ಪರಮಪದವೆಂದು ಹೇಳಲಾರರು.

ನವಜೀವನದಲ್ಲಿ ಕಾಲಿಡುತ್ತಿರುವ ಜನಸಾಮಾನ್ಯಕ್ಕೆ ಹಳಗನ್ನಡ ಮತ್ತು ನಡು

ಗನ್ನಡ ಸಾಹಿತ್ಯದಿಂದ ಹೆಚ್ಚಿನ ಪ್ರಯೋಜನವಾಗಲಾರದು. ಅದು ಪುರಾತನ ಪ್ರಪ ಸಾಹಿತ್ಯ. ಭಾಷೆ ಕಷ್ಟ. ಸಂಸ್ಕೃತ ಶಬ್ದಗಳಿಂದ ಹೆಣೆದುಕೊಂಡಿರುವ ಸೀಗೆಯು ಮಾನವನ ವಿವಿಧ ವಿಶಾಲವಾದ ಮನೋವೃತ್ತಿಗಳನ್ನು ವಿವರಿಸುವ ವಾಣಿ ಅ ವಿಷಯ, ವೈರಾಗ್ಯ. ವೈರಾಗ್ಯ ತಪ್ಪಿದರೆ ಶೃಂಗಾರ. ಭಕ್ತಿ, ಜ್ಞಾನ, ಧರ್ಮ, ಮಾನವ ಪ್ರಪಂಚ, ಪ್ರಕೃತಿ ಇವೆಲ್ಲ ಉತ್ತಮ ಕವಿತಾವಿಷಯಗಳೇ ಹೌದು. ಆದರೆ ಅ ಕುರಿತು ಬರೆಯುವಾಗ ಸಂಸ್ಕೃತ ಮತ್ತು ಇಂಗ್ಲಿಷಿನ ಮಹಾಕವಿಗಳ ಪ್ರತಿಭೆಯಾ ಕಲ್ಪನಾಶಕ್ತಿಯಾಗಲಿ, ರಸಪ್ರವಾಹವಾಗಲಿ ನಮ್ಮ ಪೂರ್ವದ ಸಾಹಿತ್ಯದಲ್ಲಿ ಕಾಣಸಿ ದಿಲ್ಲ. ಶುದ್ಧ ಕಲಾದೃಷ್ಟಿಯಿಂದ ಸಾಹಿತ್ಯ, ಕಾವ್ಯ, ಎನ್ನಿಸಿಕೊಳ್ಳಬಹುದಾದ ಬರ ನಮ್ಮ ಪೂರ್ವದ ಸಾಹಿತ್ಯದಲ್ಲಿ ಹೇರಳವಾಗಿದೆ ಎಂದು ಹೇಳಲಾಗುವುದಿಲ್ಲ.

ಆದ್ದರಿಂದ ಹೆಮ್ಮೆಯ ದುರಭಿಮಾನವನ್ನು ಬಿಡೋಣ. ತಾರತಮ್ಯವನ್ನು ವಿಮರ್ಶೆಯನ್ನು ಅಭ್ಯಾಸ ಮಾಡೋಣ. ನೆರೆಮನೆಯ ಮಕ್ಕಳು ಮನೆಯ ಮಕ್ಕಳಿ ಮುದ್ದಾಗಿದ್ದರೆ, ಹೊಟ್ಟೆ ಉರಿದರೂ, ಅವರ ಚೆಲುವನ್ನು ಒಪ್ಪಿಕೊಳ್ಳೋಣ. ಎಷ ಉತ್ತಮವಾದ ವ್ಯವಸಾಯಗಳಿಗೆ ವಿನಿಯೋಗಿಸಬೇಕಾಗಿರುವ ನಮ್ಮ ಹ್ರಸ್ವ ಮಾನವನ್ನು ಕೇವಲ ಪೂರ್ವಗ್ರಂಥಗಳಿಗೆ ಅರ್ಪಿಸಲಾಗುವುದಿಲ್ಲ. ಅದಾಗದಿದ್ದ ನಮ್ಮಲ್ಲಿಯ ಅತ್ಯುತ್ತಮವಾದ ಕಾವ್ಯಗಳಲ್ಲಿಯಭಾಗಗಳನ್ನು ಸಂಗ್ರಹಿಸಿ ಪ್ರಚುರ ಬೇಕಾದದ್ದು ಮೊದಲ ಕರ್ತವ್ಯವಾಗಿದೆ. ಅಂತಹ ಉತ್ತಮ ಕಾವ್ಯಗಳು ಕನ್ನಡ ಬೇಕಾದಷ್ಟಿವೆ. ಆದರೆ ಯಾವನೋ ಬ್ರಹ್ಮರಾಕ್ಷಸ ಅಲ್ಪತೃಪ್ತಿ ಬೇಡ ಎಂದು ಕಿವಿಯಲ್ಲಿ ಊದಿ ಹೋಗಿದ್ದಾನೆ. ಹಿಂದಿನ ಸಾಹಿತ್ಯ ಎಷ್ಟೇ ಉತ್ತಮ ಭಾಗಗಳ ಒಳಗೊಂಡಿದ್ದರೂ ನೂತನ ಪ್ರಪಂಚದಲ್ಲಿ ಬೆಳೆಯುತ್ತಿರುವ ನಮಗೆ ಬೇಕಾದ ರ ಸಂಸ್ಕಾರಗಳನ್ನು ಅದು ಕೊಡಲಾರದು. ಅಂಥವನ್ನು ಒದಗಿಸುವ ಸಾಹಿತ್ಯ ಇ ಹುಟ್ಟಿ ಬೆಳೆಯಬೇಕಾಗಿದೆ.

ಈ ಹೊಸ ಸಾಹಿತ್ಯ ಹೊರಬರಬೇಕಾದದ್ದು ಮತಪ್ರಸಾರಕ್ಕಾಗಿಯಲ್ಲ; ಅದು ಬೇಕಾದದ್ದು ಜ್ಞಾನ ಪ್ರಸಾರಕ್ಕಾಗಿ, ಕಲಾನುಭವಕ್ಕಾಗಿ, ಸತ್ಪ್ರೇರಣೆಗಳಿಗಾಗಿ. ಪ್ರಪ ದಲ್ಲಿ ತಿಳಿದಿರುವ, ನುಡಿದಿರುವ, ನಡೆದಿರುವ, ಉತ್ತಮ ವಿಷಯಗಳೆಲ್ಲವನ್ನೂ ಸ್ವಾ ಭವಕ್ಕೆ ತಂದುಕೊಂಡು ಇತರರಿಗೆ ತಿಳಿಸಬೇಕಾದದ್ದು ಅದು. ಈ ಹೊಸ ಮಾರ್ಗ ಗ್ರಂಥಕರ್ತನು ಸ್ವತಂತ್ರ; ಎಲ್ಲರಿಗೂ ಅರ್ಥವಾಗುವ ಗದ್ಯದಲ್ಲಿ ಬರೆಯುವವ. ಪ್ರಪಂ ಎಲ್ಲ ಸಾಹಿತ್ಯಗಳಿಂದ ವಿಷಯಗಳನ್ನೂ ಮಾದರಿಗಳನ್ನೂ ಸ್ವೀಕರಿಸಿ ಉಪಯುಕ್ತವಾ ವನ್ನು ಕನ್ನಡಕ್ಕೆ ತಿರುಗಿಸುವವ. ಉದಾರವಾದ ಧರ್ಮಸಾರವನ್ನೂ ಮನುಷ್ಯಜಾತಿ ಅಭ್ಯುದಯವನ್ನೂ ವಿವರಿಸುವವ. ತನ್ನ ಮತ್ತು ಸಮಕಾಲೀನರ ಭಾವಾವೇಶಗಳ ಭಾವಗೀತೆಗಳಲ್ಲಿ ಹರಿಸುವವ. ಜೀವನದ ಪ್ರತಿಬಿಂಬವನ್ನು ರಂಜಕವಾದ ನಾಟಕಗ

ಸೃಷ್ಟಿಸುವವ. ಪ್ರಕೃತಿ ಶಾಸ್ತ್ರಾಭ್ಯಾಸದಿಂದ ಶಾಸ್ತ್ರೀಯ ಮನೋಭಾವವನ್ನು ಬಿತ್ತು ವವ. ಮಕ್ಕಳಿಗಾಗಿ ಆಕರ್ಷಕವಾಗಿ, ಹಿರಿಯರಿಗಾಗಿ ಜ್ಞಾನ ಬೋಧಕವಾಗಿ, ಅವರವರಿಗೆ ತಿಳಿಯುವಂತೆ ಬರೆಯುವವ. ಸಮಾಜದ ನ್ಯೂನತೆಗಳು, ಅದರ ಸಂಸ್ಕರಣದ ಮಾರ್ಗಗಳು, ಪೂರ್ವಪದ್ಧತಿಗಳ ಗುಣದೋಷಗಳು, ಸ್ವಾತಂತ್ರ್ಯಸಾಧನೆಯ ತತ್ವಗಳು, ರಾಜಪ್ರಜೆಗಳ ಪರಸ್ಪರ ಧರ್ಮಗಳು, ಲೋಕದ ಜನಾಂಗಗಳು ಸೌಹಾರ್ದದಿಂದ ವರ್ತಿಸುವಂತೆ ಮಾಡು ವುದಕ್ಕೆ ನಡೆಸಬೇಕಾದ ಪ್ರಯತ್ನಗಳು—ಇವೇ ಮುಂತಾದ ಆಧುನಿಕ ಜೀವನದ ಸಮಸ್ಯೆ ಗಳನ್ನು ಚರ್ಚಿಸುವವ. ಪುರಾತನರ ಜ್ಞಾನಕೋಶವನ್ನು ವಿಮರ್ಶಿಸಿ, ಜಳ್ಳನ್ನು ತೂರಿ ಕಾಳನ್ನು ಉಂಡು, ಮತ್ತೆ ಬಿತ್ತಿ ಹೊಸ ಬೆಳೆಯನ್ನು ಹೆಚ್ಚಿಸುವವ. ತಾಯ್ನುಡಿಯ ಮೂಲಕ ತನ್ನ ಜ್ಞಾನವನ್ನು ತನ್ನ ಜನಕ್ಕೆ ಕೊಡುವವ. ತನ್ನ ದೇಶದ ಜನರ ಪೂರ್ವದ ಸಂಸ್ಕೃತಿಗೆ ನ್ಯಾಯವಾದ ಭಕ್ತಿಯನ್ನು ಅರ್ಪಿಸಿ ನೂತನ ಸಂಸ್ಕೃತಿಗೂ ಮಹಾತ್ಮ್ಯಕ್ಕೂ ತಕ್ಕ ಬೆಲೆಯನ್ನು ಕಟ್ಟಬಲ್ಲವ. ಅದಕ್ಕಾಗಿ ಇಂಗ್ಲಿಷ್ ಒಂದನ್ನೇ ಆತ ಮೊರೆಹೋಗಬೇಕಿಲ್ಲ ಸಂಸ್ಕೃತದಿಂದಲೂ ಹೀರಿಕೊಳ್ಳಬಹುದಾದದ್ದು ಅಪಾರವಾಗಿದೆ. ಇಂಗ್ಲಿಷ್ ಸಂಸ್ಕಾರ ದಿಂದ ಅಂಜನಹಾಕಿ ಪರೆ ತೆಗೆದ ಹೊಸಗಣ್ಣಿನಿಂದ ನಮ್ಮ ಪುರಾತನ ಕಲೆ ಶಾಸ್ತ್ರದರ್ಶನ ಗಳನ್ನು ಪರಿಶೋಧಿಸಿ ಜನಸಾಮಾನ್ಯಕ್ಕೆ ದೇಹ ಮನಸ್ಸುಗಳೆರಡನ್ನೂ ಪುಷ್ಟಿಗೊಳಿಸುವ ಆಹಾರವನ್ನು ಒದಗಿಸಬೇಕಾಗಿದೆ. ಈ ವಿದ್ಯಾವಂತರು, ಸಂಸ್ಕೃತ, ಕನ್ನಡ, ಪ್ರಾಕೃತ ಪಾಲಿ, ಇಂಗ್ಲಿಷ್, ಗ್ರೀಕ್—ಯಾವ ಭಾಷೆಯಿಂದಲೂ ಸಂಪಾದಿಸಿದ ಜ್ಞಾನವನ್ನು ಲಲಿತವಾದ ಕನ್ನಡ ನುಡಿಯಲ್ಲಿ ಶೀಲವನ್ನು, ಆನಂದವನ್ನು, ಸುಪ್ರೇರಣೆಯನ್ನು ಕಿರಿಯರಿಗಾಗಿ ಒದಗಿಸಬೇಕಾಗಿದೆ. ಇಷ್ಟನ್ನು ಮಾಡಿದಾಗ ಬರಹಗಾರನ ಜನ್ಮ ಸಾರ್ಥಕ ವಾಗುತ್ತದೆ.

ಕನ್ನಡಿಗರು ಸ್ವಲ್ಪ ಜನ ಇರಬಹುದು. ಚೆದರಿ ಹೋಗಿರಬಹುದು. ಆದರೆ ಎಲ್ಲಾ ಪ್ರದೇಶಗಳಿಂದ ಗಾಳಿಯನ್ನೂ, ಬೆಳಕನ್ನೂ, ತೇಜಸ್ಸನ್ನೂ ಹೀರಿಕೊಳ್ಳುವ ಉದಾರ ಹೃದಯವೊಂದನ್ನು ನಾವು ಕಾಪಾಡಿಕೊಂಡರೆ ನಮ್ಮ ಜನವೂ ಜನದೊಡನೆ ಸಾಹಿತ್ಯವೂ ಅಮೂಲ್ಯವಾಗುವುದು. ಜೇನುಹುಳು ಯಾವ ಹೂವಿನ ಮಕರಂದವನ್ನು ತಂದರೂ ಕೊನೆಗೆ ಎಲ್ಲವನ್ನೂ ಜೇನು ತುಪ್ಪವಾಗಿಸುವಂತೆ ಎಲ್ಲವೂ ಕನ್ನಡವೇ ಆಗಿ ಹೋದರೆ ಆಗ ಹೊರಗಿನದು ಎನ್ನುವುದೆಲ್ಲಿ ಬಂತು? ಕಲೆಗಳಲ್ಲಿ, ಧರ್ಮಸಂಪ್ರದಾಯಗಳಲ್ಲಿ ರಾಜಕೀಯ ಪ್ರಪಂಚದಲ್ಲಿ ನೂರಾರು ಪ್ರಭಾವಗಳನ್ನು ಕನ್ನಡ ಜನ ಶತಮಾನಗಳ ದ್ದಕ್ಕೂ ಅರಗಿಸಿಕೊಂಡು ಬೆಳೆದುದನ್ನು ಚರಿತ್ರೆಯೇ ಹೇಳುತ್ತದೆ. ಆದ್ದರಿಂದ ಕನ್ನಡಿ ಗರು ಮತ್ತೆ ಹೊಸ ಪ್ರೇರಣೆಗಳನ್ನು ಅರಗಿಸಿಕೊಂಡು ಹೊಸ ಸಾಹಿತ್ಯದ ನಿರ್ಮಾಣ ಕಾರ್ಯಕ್ಕೆ ತೊಡಗಬೇಕಾಗಿದೆ.

೧೦

'ಶ್ರೀ' ಯವರ "ಇಂಗ್ಲಿಷ್ ಗೀತಗಳು" ಮೇಲಿನ ಮಾತುಗಳಲ್ಲಿಯ ಆಶಯಕ್ಕೆ ಕೈಗನ್ನಡಿಯಾಗಿದೆ. ಇಂಗ್ಲಿಷ್ ಕಾವ್ಯಪ್ರಪಂಚದಿಂದ ಆಯ್ದುಕೊಂಡ ಅರುವತ್ತು ಕವನಗಳ ಕನ್ನಡ ಅನುವಾದಗಳ ಈ ಸಂಗ್ರಹ ನವೋದಯ ಕಾವ್ಯಕ್ಕೆ ನಾಂದಿಯಾಗಿದೆ. ಒಂದು ಹೊಸ ಕಾವ್ಯ ಪ್ರಪಂಚಕ್ಕೆ ಬಾಗಿಲನ್ನು ತೆರೆದು ಕನ್ನಡ ಕಾವ್ಯದ ಚರಿತ್ರೆಯಲ್ಲಿ ಒಂದು ಹೊಸ ಯುಗವನ್ನೇ ಪ್ರಾರಂಭಿಸಿತು ಎನ್ನುವಷ್ಟರ ಮಟ್ಟಿಗಿನ ಪ್ರಭಾವವನ್ನು ಬೀರಿವೆ. ಭಾವ, ಭಾಷೆ, ಛಂದಸ್ಸು, ಎಲ್ಲದರಲ್ಲಿಯೂ ಹೊಸ ದಾರಿಗಳನ್ನು ಮಾದರಿಗಳನ್ನು ತೋರಿಸಿದ ಶ್ರೇಯಸ್ಸು ಅದರದಾಗಿದೆ. ಕೆಲವನ್ನು ಬಿಟ್ಟು ಹೆಚ್ಚಿನವು ಇಂಗ್ಲಿಷ್ ಓದಿಲ್ಲದವರಿಗೆ ಹೇಳದಿದ್ದರೆ ಇಲ್ಲಿಯ ಕವನಗಳು ಅನುವಾದಗಳೆಂದು ಗೊತ್ತಾಗದಿರುವಷ್ಟು ಸಹಜಸ್ವಾಭಾವಿಕ ರಚನೆಗಳಾಗಿವೆ. ಭಾಷೆಯ ಸೊಗಸು, ಭಾವದ ಸಹಜ ಸಾರ್ವತ್ರಿಕತೆ, ಭಾವದ ತುಡಿತಕ್ಕೆ ಸರಿಯಾದ ನುಡಿಯ ನಡೆ, ಇವು ಎಲ್ಲ ಕಾವ್ಯದ ಸಾಮಾನ್ಯ ಲಕ್ಷಣಗಳೆಂದು ಹೇಳಬಹುದು. ಈ ಮೂರರಲ್ಲಿ ಯಾವ ಒಂದರಿಂದ ಮಾತ್ರ ಕಾವ್ಯಸತ್ವ ಸಿದ್ಧಿಸುವುದಿಲ್ಲ. ಮೂರೂ ಒಂದು ಸಮತೂಕದಲ್ಲಿ ಹೊಂದಿಕೆಯಾಗಿದ್ದಾಗ ಮಾತ್ರ ಕಾವ್ಯದ ಅವತಾರವಾಗುತ್ತದೆ. ಭಾವ ಬೇರೆಡೆಯಲ್ಲಿಯದಿರಬಹುದು. ಅದು ನಮ್ಮದೂ ಆಗಿರಬಹುದಾದಾಗ, ನಮ್ಮ ಮಾತಿನಲ್ಲಿ ಅದನ್ನೇ ಸೊಗಸಾಗಿ ಹೇಳಿದಾಗ ಮೂಡುವ ಕಾವ್ಯ ಅನುವಾದವಾದರೇನು, ಸ್ವತಂತ್ರವಾಗಿದ್ದರೇನು ?' ಅದು ಕಾವ್ಯವೇ. ತೊಡಿಗೆ ಬೇರೆ ; ಒಳಗಿನಿಂದ ನುಡಿಯುವ ಜೀವ ಒಂದೇ. "ಇಂಗ್ಲಿಷ್ ಗೀತಗಳು" ಸಂಗ್ರಹದಲ್ಲಿಯ ಕಾವ್ಯಸತ್ವ ಈ ರೀತಿಯದು. ಮೂಲ ಬೇರೆಯಾದರೂ ಅವತಾರ ಇಲ್ಲಿಯದು. ಪರಿಣಾಮ, ಸಮಾನ ಸ್ವರೂಪದ್ದು. ಅಂಥ ಯಶಸ್ಸನ್ನು ಇಲ್ಲಿಯ ಕಾವ್ಯಾನುವಾದಗಳು ಪಡೆದಿವೆ. ಇಲ್ಲಿಯ ಕಾರ್ಯ ಒಬ್ಬ ಸಾಧಕನದಲ್ಲ, ಸಿದ್ಧನದು ಎನ್ನುವಂತಿದೆ.

ಕಳೆದ ಶತಮಾನದ ಕೊನೆಯ ಕಾಲುಭಾಗದಲ್ಲಿ ಇಂಗ್ಲಿಷಿನಿಂದ ನಾಟಕಗಳು, ಅವಕ್ಕೂ ಹೆಚ್ಚಾಗಿ ಗದ್ಯ ಕೃತಿಗಳು ಅನುವಾದವಾಗಿ ಕನ್ನಡಕ್ಕೆ ಬರತೊಡಗಿದ್ದವು. ಷೇಕ್ಸ ಪಿಯರನ ಮೂರು ನಾಲ್ಕು ದುರಂತ ನಾಟಕಗಳು ಅನುವಾದವಾಗಿದ್ದವು. ಆದರೆ ಈ ಶತಮಾನದ ಮೊದಲ ಶತಕದವರೆಗೆ ಇಂಗ್ಲಿಷ್ ಕಾವ್ಯದ ಅನುವಾದಗಳ ಕಡೆಗೆ ಹೆಚ್ಚಿನ ಗಮನ ಹರಿದಹಾಗೆ ಕಾಣುವುದಿಲ್ಲ. ಮೈಸೂರಿನಲ್ಲಿ ಎಸ್. ಜಿ. ನರಸಿಂಹಾಚಾರ್ಯರು, ದಕ್ಷಿಣ ಕನ್ನಡದಲ್ಲಿ ಹಟ್ಟಿಯಂಗಡಿ ನಾರಾಯಣರಾಯರು ಮತ್ತು ಪಂಜೆ ಮಂಗೇಶರಾಯರು ಅತ್ತ ಗಮನವನ್ನು ಹರಿಯಿಸಿದ್ದರು. ಮೊದಲ ದಶಕದ ಪಠ್ಯಪುಸ್ತಕಗಳಲ್ಲಿ ನರಸಿಂಹಾಚಾರ್ಯರು ಮಾಡಿದ ಇಂಗ್ಲಿಷ್ ಕವನಗಳ ಕೆಲವು ಅನುವಾದಗಳು ಕಾಣಿಸಿಕೊಂಡಿವೆ. ಅನುವಾದಗಳಿಗಾಗಿ ಅವರು ನಡುಗನ್ನಡದ ಪದ್ಯಪ್ರಕಾರಗಳನ್ನೇ ಬಳಸಿದ್ದಾರೆ. ಪಂಜೆಯವರು ಕೆಲವು ಇಂಗ್ಲಿಷ್ ಪದ್ಯಗಳನ್ನು ಲಲಿತವಾಗಿ ಅನುವಾದಿಸಿದ್ದಾರೆ.

ಅವರ ಅನುವಾದಗಳಾದರೂ ಹಿಂದಿನವರ ಪದ್ಯರಚನಾಕ್ರಮವನ್ನೇ ಅನುಸರಿಸುತ್ತವೆ. ಆದಿಪ್ರಾಸಾವನ್ನು ಬಿಡುವುದಕ್ಕೆ ಅವರು ಒಪ್ಪಲಿಲ್ಲ. ಆದಿಪ್ರಾಸವನ್ನು ಧೈರ್ಯವಾಗಿ ನಿರಾಕರಿಸಿದ ಗೋವಿಂದ ಪೈಗಳ ಕೆಲವು ಅನುವಾದಗಳು ಅವರ '' ಗಿಳಿವಿಂಡು '' ಸಂಗ್ರಹ ದಲ್ಲಿವೆ. ಇವರಿಗೆ ಸಮಕಾಲೀನರಾಗಿದ್ದ ಹ. ನಾರಾಯಣರಾಯರು ಇಂಗ್ಲಿಷ್ ಪದ್ಯ ಗಳನ್ನು ಅನುವಾದ ಮಾಡಿದ ಆ ಕಾಲದವರಲ್ಲಿ ಪ್ರಮುಖರು. ಅವರ '' ಆಂಗ್ಲಕವಿತಾ ಸಾರ '' ಎಂಬ ಸಂಗ್ರಹವಲ್ಲಿ ಷೇಕ್ಸ್‌ಪಿಯರ್, ಮಿಲ್ಟನ್, ಗ್ರೇ, ವರ್ಡ್ಸ್‌ವರ್ತ್, ಷೆಲ್ಲಿ, ಕೀಟ್ಸ್, ಕಾಲಿನ್ಸ್ ಮುಂತಾದವರ ಕವನಗಳ ಅಥವಾ ಕಾವ್ಯಭಾಗಗಳ ಅನುವಾದಗಳಿವೆ. ಸಂಗ್ರಹಕ್ಕೆ ಬರೆದ ಮುನ್ನುಡಿಯಲ್ಲಿ '' ಈಗಲೂ (ಛಂದಸ್ಸಿನ ವಿಷಯದಲ್ಲಿ) ಹೊಸ ಮಾರ್ಗಗಳನ್ನೇಕೆ ತೆರೆಯಬಾರದೆಂದು ಸರಳ ಕಾವ್ಯಪ್ರಿಯರು ಕೇಳುತ್ತಾರೆ. ಈ ಪದ್ಯ ಗಳಲ್ಲಿ ಪ್ರಾಸವನ್ನು ತೊರೆಯದಿದ್ದರೂ ಪೂರ್ವ ಕವಿಗಳ ನಿಯಮಗಳನ್ನು ಸೂಕ್ಷ್ಮವಾಗಿ ಅನುಸರಿಸಿಲ್ಲ'' ಎಂದಿದ್ದಾರೆ. ಈ ಮಾತುಗಳು ಗಾಳಿ ಯಾವ ದಿಕ್ಕಿನಲ್ಲಿ ಹಾಯುತ್ತಿತ್ತು ಎನ್ನುವುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

ನಾರಾಯಣರಾಯರ ಅನುವಾದಗಳನ್ನು ಶ್ರೀಕಂಠಯ್ಯನವರು ನೋಡಿದ್ದರೋ ಇಲ್ಲವೋ ತಿಳಿಯದು. ಅವರ '' ಆಂಗ್ಲ ಕವಿತಾಸಾರ '' ಎಂದು ಪ್ರಕಟವಾಯಿತೆನ್ನು ವುದು ಗೊತ್ತಾಗುವುದಿಲ್ಲ. (ಪುಸ್ತಕದ ಹೆಸರು '' ಆಂಗ್ಲ ಕವಿತಾಸಾರ '' ಎಂದೇ ಇದ್ದಿತೆ ಎನ್ನುವುದರ ಬಗೆಯಲ್ಲಿಯೂ ಸಂದೇಹಕ್ಕೆ ಅವಕಾಶವಿದೆ.) ಅದು ಹೇಗಿದ್ದರೂ ್ರೀಕಂಠಯ್ಯನವರು ವಿದ್ಯಾಭ್ಯಾಸಕ್ಕಾಗಿ ಮದರಾಸಿನಲ್ಲಿ ಇರುವಾಗಲೆ '' ಷೇಕ್ಸ್‌ಪಿ ಯರನ ನಾಟಕಗಳನ್ನೂ ಗ್ರೀಕರ ರುದ್ರನಾಟಕಗಳನ್ನೂ ಪ್ಲೇಟೋವಿನ ಸಂವಾದಗಳನ್ನೂ ಕಾರ್ಲೈಲನ ಧೀರೋಪದೇಶಗಳನ್ನೂ ಕನ್ನಡಕ್ಕೆ ತರಬೇಕು ಎಂದಿವೇ ಮೊದಲಾದ ಸವಿ ಗನಸುಗಳನ್ನು ಕಂಡ '' ವಿಷಯವನ್ನು ಅವರೇ ತಿಳಿಸಿದ್ದಾರೆ. ಬಹುಶಃ ಆ ಸುಮಾರಿಗೆ, ಅಥವಾ ಮುಂದೆ ಅಲ್ಪಾವಧಿಯಲ್ಲಿಯೇ ಇಲ್ಲಿಯ ಕವನಗಳ ಅನುವಾದಕಾರ್ಯ ಮೊದ ಲಾಗಿರಬೇಕು. '' ಯಾರ ಸಂತೋಷಕ್ಕಾಗಿ ಮೊದಲು ನಾನು ಈ ಗೀತಗಳನ್ನು ಬರೆ ದೆನೋ ಆ ಕಣ್ಣುಗಳು ಬೇಗ ಮುಚ್ಚಿಹೋಗಿ, ಕೆಲವು ವರ್ಷ ಗ್ರಂಥ ನನ್ನಲ್ಲಿಯೇ ಉಳಿದುಕೊಂಡಿತು '' ಎಂಬ ಅವರ ಅರಿಕೆಯಲ್ಲಿಯ ಮಾತನ್ನು ಗಮನಿಸಿದರೆ ೧೯೧೪ ಕ್ಕೆ ಮೊದಲೇ ಇಲ್ಲಿಯ ಹಲವಾರು ಗೀತಗಳು, ಬಹುಶಃ ಪ್ರಣಯಕ್ಕೆ ಸಂಬಂಧಿಸಿದುವು, ರಚಿತ ವಾಗಿರಬೇಕೆಂದು ಊಹಿಸಬಹುದಾಗಿದೆ. ೧೯೧೯ರಲ್ಲಿ ಮೂರು. ೧೯೨೧ರಲ್ಲಿ ಹನ್ನೆರಡು, ೧೯೨೪ರಲ್ಲಿ ಇಪ್ಪತ್ತುನಾಲ್ಕು ಎಂದು ಹಂತಹಂತವಾಗಿ ಹೊರಬಂದು ೧೯೨೬ರಲ್ಲಿ ಒಟ್ಟು ಅರುವತ್ತು ಅನುವಾದಗಳೂ ಮೂರು ಸ್ವತಂತ್ರ ರಚನೆಗಳೂ ಸೇರಿದಂತೆ '' ಇಂಗ್ಲಿಷ್ ಗೀತಗಳು '' ೧೯೨೬ರಲ್ಲಿ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದವರಿಂದ ಪ್ರಕಟ ವಾಯಿತು. ಈ ಮೊದಲು ಮೇಲೆ ಕಾಣಿಸಿದಂತೆ ನರಸಿಂಹಾಚಾರ್ಯರು, ಪಂಜೆಯವರು,

ಗೋವಿಂದ ಪೈಗಳು, ನಾರಾಯಣರಾಯರು ಇಂಗ್ಲೀಷ್ ಕವನಗಳ ಅನುವಾದಗಳನ್ನು ಪ್ರಕಟಿಸಿದ್ದರು. ಅವರೆಲ್ಲರೂ ಇಂಗ್ಲೀಷ್ ಕಾವ್ಯದಲ್ಲಿಯ ಭಾವವೈವಿಧ್ಯಕ್ಕೆ, ಅಲ್ಲಿಯ ಛಂದಸ್ಸ್ವಾತಂತ್ರ್ಯಕ್ಕೆ ಮನಸೋತವರಾಗಿದ್ದರು. ಅಂಥ ವೈವಿಧ್ಯ ಸ್ವಾತಂತ್ರ್ಯಗಳಿಂದ ಕಾವ್ಯ ಸೊಗಯಿಸುತ್ತದೆ ಎಂಬುದನ್ನು ಅರಿತವರಾಗಿದ್ದರು. ಆದರೆ ಕಟ್ಟಳೆಗಳಿಂದ ಕನ್ನಡ ಕಾವ್ಯವನ್ನು ಬಿಡುಗಡೆ ಮಾಡುವುದು ಹೇಗೆ ಎಂಬ ಯೋಚನೆ ನರಸಿಂಹಾಚಾರ್ಯರಿಗೆ ಇದ್ದಹಾಗೆ ಕಾಣುವುದಿಲ್ಲ. ಹಾಡಿನ ಮಟ್ಟುಗಳನ್ನು ಹೊಂದಿಸಿಕೊಂಡು ಒಂದು ರೀತಿಯಲ್ಲಿ ಪಂಜೆಯವರು ಸಮಸ್ಯೆಯನ್ನು ಬಗೆಹರಿಸಿಕೊಂಡಿದ್ದರೂ ಆದಿಪ್ರಾಸವನ್ನು ಬಿಟ್ಟುಕೊಡಲು ಅವರು ಸಿದ್ಧರಿರಲಿಲ್ಲ. ಪೈಯವರಿಗೆ ಈ ಆದಿಪ್ರಾಸ ನಿರ್ಬಂಧಕಾರಿಯಾಗಿ ಕಂಡಿತು. ಕೊನೆಗೆ ಅದನ್ನು ನಿರಾಕರಿಸಿದರು. ಹೊಸ ಮಾರ್ಗಗಳನ್ನು ತೆರೆಯಬಾರದೇಕೆ ಎಂಬ ತಮ್ಮ ಲವಲವಿಕೆಯ ಮೂಲಕ ನಾರಾಯಣರಾಯರು ಹಳೆಯ ನಿರ್ಬಂಧಗಳನ್ನು ಕೆಲಮಟ್ಟಿಗೆ ಸಡಿಲಿಸಿಕೊಂಡರಲ್ಲದೆ ಪೂರ್ತಿಯಾಗಿ ಹೊಸ ಮಾರ್ಗಗಳನ್ನು ಶೋಧಿಸ ಹೋಗಲಿಲ್ಲ. ತಾವು ಮೆಚ್ಚಿಕೊಂಡಿದ್ದ ಇಂಗ್ಲಿಷ್ ಪದ್ಯಗಳನ್ನು ಅನುವಾದಿಸುವಾಗ (ಅಥವಾ ಪೈಗಳಂತೆ ಸ್ವಂತದ ರಚನೆಗೆ ತೊಡಗಿದಾಗ) ಎದುರಿಸಬೇಕಾದ ತೊಡರುಗಳ ಕಡೆಗೆ ಇವರೆಲ್ಲರ ಗಮನ ಇದ್ದಿತೇ ಹೊರತು ಶ್ರೀಕಂಠಯ್ಯನವರಂತೆ ಕನ್ನಡ ಕಾವ್ಯ ಪ್ರಪಂಚಕ್ಕೆ ಹೊಸ ಬಗೆಯ ಭಾವ, ಭಾಷೆ, ರೀತಿಗಳನ್ನು ಪರಿಚಯಿಸಿಕೊಡಬೇಕೆಂಬ ಉದ್ದೇಶವನ್ನು ಇವರಲ್ಲಿಯ ಯಾರೂ ಇರಿಸಿಕೊಂಡಿರಲಿಲ್ಲ. ಕನ್ನಡ ಕಾವ್ಯಕ್ಕೆ ಹೊಸ ದಿಕ್ಕು ದಾರಿಗಳನ್ನು ತೋರಿಸಬೇಕು ಎನ್ನುವ ಉದ್ದೇಶ ಶ್ರೀಕಂಠಯ್ಯನವರಲ್ಲಿ ಸ್ಪಷ್ಟವಾಗಿದ್ದಿತು. ಕೇವಲ ತಮ್ಮ ಮೆಚ್ಚಿಗೆಗಾಗಿ ಅವರು ಅನುವಾದಗಳಿಗೆ ತೊಡಗಲಿಲ್ಲ. ಆದ್ದರಿಂದ ಇಲ್ಲಿಯ ಅನುವಾದಗಳಿಗೆ ಸ್ವಂತದ ಉತ್ತಮಿಕೆಯ ದೃಷ್ಟಿಯಿಂದ ಒಂದು ರೀತಿಯ ಮಹತ್ವ ಬರುತ್ತದಾದರೆ ಕನ್ನಡ ಕಾವ್ಯದ ಚರಿತ್ರೆಯ ದೃಷ್ಟಿಯಿಂದ ಅವಕ್ಕೆ ಇನ್ನೂ ಹೆಚ್ಚಿನ ಮಹತ್ವ ಪ್ರಾಪ್ತವಾಗುತ್ತದೆ. " ಇಂಗ್ಲಿಷ್ ಗೀತಗಳು " ಕನ್ನಡದಲ್ಲಿ ಭಾವಗೀತೆಯ ಯುಗವನ್ನು ಪ್ರಾರಂಭಿಸಿತೆಂದು ಹೇಳಬಹುದಾಗಿದೆ.

ಇಲ್ಲಿಯ ಅರುವತ್ತು ಅನುವಾದಗಳಲ್ಲಿ ಷೆಲ್ಲಿಯವು ಒಂಬತ್ತು, ಬರ್ನ್ಸನವು ಏಳು, ವರ್ಡ್ಸ್‌ವರ್ತ್‌ನವು ಐದು, ಬ್ರೌನಿಂಗ್, ಸ್ಕಾಟ್, ಟೆನಿಸನ್‌ರವು ಮೂರು ಮೂರು, ಷೇಕ್ಸ್‌ಪಿಯರ್, ಸದೆ, ಬ್ಯಾರನ್, ಕ್ಯಾಂಬೆಲ್. ಕೂಪರ್ ಎರಡೆರಡು, ಬೇರೆ ಹದಿಮೂರು ಕವಿಗಳ ಒಂದೊಂದು, ಐದು ಕವಯಿತ್ರಿಯರವು, ಎರಡು ಅನಾಮಿಕರವು. ಎಂಬ ರೀತಿಯಲ್ಲಿ ಕಾಣಿಸಿಕೊಳ್ಳುತ್ತವೆ. ಕವನಗಳ ವಿಷಯವನ್ನು ಮನಸ್ಸಿನಲ್ಲಿರಿಸಿಕೊಂಡು ನೋಡಿದಾಗ ದೇಶಭಕ್ತಿಯನ್ನು ಕುರಿತವು ಹದಿನೈದು. ಪ್ರಕೃತಿ ಸೌಂದರ್ಯದವು ಆರು, ತಾತ್ವಿಕವಾದವು ಹನ್ನೆರಡು ಮತ್ತೆ ಉಳಿದ ಮೂವತ್ತು ಪ್ರಣಯ ಪ್ರಪಂಚಕ್ಕೆ ಸೇರಿದುವಾಗಿವೆ. ಶ್ರೀಕಂಠಯ್ಯನವರೇ ಅರಿಕೆಯಲ್ಲಿ ತಿಳಿಸಿರುವಂತೆ " ವಿಶ್ವಕವಿತಾ ವಿಷಯಗಳಾದ ಯುದ್ಧ,

ು, ಮರಣ, ದೇಶಭಕ್ತಿ, ದೈವಭಕ್ತಿ, ಪ್ರಕೃತಿ ಸೌಂದರ್ಯ, ಮಾನವ ಜನ್ಮದ ಸುಖ ುಗಳು, ರಾಗ ದ್ವೇಷಗಳು, ಪುರುಷಾರ್ಥಗಳು, ಜನ್ಮಾಂತರ ದರ್ಶನಗಳು ಮುಂತಾದ ವಸ್ತುಗಳನ್ನು ಇತರ ದೇಶದ ಕವಿಗಳು ಯಾವ ರೀತಿಯಲ್ಲಿ ಪುಷ್ಟಿಗೊಳಿಸಿ ಸಹಜ ಯಲ್ಲಿ ಸೌಂದರ್ಯರಚನೆಯನ್ನು ಮಾಡಿರುವರೊ ಅದನ್ನೆಲ್ಲ ಶ್ರದ್ಧೆಯಿಂದ ಪರಾ ಸಿ" ಕನ್ನಡ ಕವಿಗಳು ಮುಂದುವರಿಯಬೇಕೆಂಬ ಅಭಿಲಾಷೆಯಿಂದ ಇಲ್ಲಿಯ ಅನು ಗಳನ್ನು ಅವರ ಮುಂದೆ ಇಡಲಾಗಿದೆ. ಈ ಎಲ್ಲ ಕಾವ್ಯ ವಿಷಯಗಳಿಗೂ ಪ್ರಸ್ತುತ ಹದಲ್ಲಿ ನಿದರ್ಶನಗಳು ಸಿಕ್ಕುತ್ತವೆ. ಒಂದೊಂದು ಕವನವನ್ನು ಎತ್ತಿಕೊಂಡು ರ್ಣಿಸಿ ವಿವರಿಸುವುದು ಇಲ್ಲಿ ಸಾಧ್ಯವಿಲ್ಲ. ಅಲ್ಲದೆ ಏನು ಹೇಳಿದರೂ ಎಷ್ಟು ಹೇಳಿ ಕೃತಿಗಳಲ್ಲಿಯ ಕಾವ್ಯ ಸತ್ವ ಅನುಭವ ವೇದ್ಯವಾದದ್ದು. ಅದನ್ನು ಓದಿಯೇ ಬೇಕಲ್ಲದೆ ವಿವರಣೆಯ ಮೂಲಕವಲ್ಲ. ಕೆಲವೊಂದು ವಿಶೇಷಗಳ ಕಡೆಗೆ ಓದುಗನ ಸವನ್ನು ಸೆಳೆಯಬಹುದಷ್ಟೇ.

ಸಂಗ್ರಹದಲ್ಲಿಯ ಕವನಗಳನ್ನು ಒಂದು ವಿಶಿಷ್ಟವಾದ ಯೋಜನೆಯ ಕ್ರಮಕ್ಕೆ ಒಳ ನಿಲ್ಲಿಸಿದ ಹಾಗೆ ಕಾಣುತ್ತದೆ. ಪ್ರಾರಂಭದಲ್ಲಿಯೇ ಬರುವ ಷೇಕ್ಸ್‌ಪಿಯರನ ುಪ್ಪು-ಯೌವನ" ಬದುಕಿನ ಎರಡು ತುದಿಗಳಲ್ಲಿಯ ಸ್ಥಿತಿಗತಿಗಳನ್ನು ಚಿತ್ರಿಸಿ ದಿನ ಕವನಗಳಿಗೆಲ್ಲ ಒಂದು ಬಗೆಯ ಚೌಕಟ್ಟನ್ನು ಒದಗಿಸುತ್ತದೆ. ಯೌವನದ ುಗ್ಗಿಯಿಂದ ಮೊದಲಾಗಿ ಮುಪ್ಪಿನ ಮಾಗಿಯವರೆಗೆ, ಯುವಕನಿಗೆ ಸಹಜವಾದ ್ನೇಹದಿಂದ ಮೊದಲಾಗಿ ಜೀವನದ ನಿಗೂಢವನ್ನು ಅರಿಯಲಾಗದೆ ಕೊನೆಯಲ್ಲಿ ದೈವ ಶರಣಾಗಿ ಪ್ರಾರ್ಥನೆಯ ಬೇಡಿಕೆಯ ಮನಃಸ್ಥಿತಿಯವರೆಗೆ ಇಲ್ಲಿಯ ಭಾವಧಾರೆ ತ್ತದೆ. ಬದುಕಿನ ಪಯಣದಲ್ಲಿ ಮುಂದುವರಿದಂತೆ ಒಂದು ಜೀವ ಬೆಳೆಯುವ, ಹದ ಮಾಗುವ ಕ್ರಮದ ಸೂಚನೆ ಇಲ್ಲಿ ಧ್ವನಿತವಾಗುತ್ತದೆ. ಮುಂಜಾವಿನ ಹೊಂಬೆಳಕು ಯ ಮಸಕುಗತ್ತಲಾಗುತ್ತವೆ. ಇರುಳ ಕತ್ತಲೆ ಎದೆಯನ್ನು ಕ್ಷಣಕಾಲ ನಡುಗಿಸುತ್ತದೆ. ಯಲ್ಲಿ ಭಯ ಕಳೆದು ಭರವಸೆ ಮೂಡುತ್ತದೆ. ಆ ದೃಷ್ಟಿಯಿಂದ ಅನುವಾದಕ್ಕಾಗಿ ಆಯ್ದ ಕವನಗಳು ಮನುಷ್ಯಜೀವನದ ಒಂದೊಂದು ಭಾವಸ್ಥಿತಿಯನ್ನು ಪ್ರತಿ ಆಯಾಯ ಸ್ಥಿತಿಯಲ್ಲಿಯ ಮನಸ್ಸಿನ ಮಿಡಿತನುಡಿತಗಳನ್ನು ಸಂಕೇತಿಸುತ್ತವೆ.

ಮೊದಲು ಬರುವ ಆರು ಕವನಗಳಲ್ಲಿ ನಿಸರ್ಗ ಸೌಂದರ್ಯದ ಬಗೆಗಳನ್ನು ಕಾಣು ಲ್ಲದೆ ಅವನ್ನು ಕಂಡಾಗಿನ ಸೊಗಸಿನ ಅನುಭವ ಎಲ್ಲವನ್ನೂ ಮರೆಯುವಂತೆ ುತ್ತದೆ. ಅಡವಿ ಮರದಡಿಯಲ್ಲಿಯ ಸಂತಸದ ಸಂತೃಪ್ತಿಯನ್ನು ಕೊರೆಯುವ ಗಾಳಿಯೊಂದಲ್ಲದೆ ಬೇರೆ ಯಾವುದೂ ಕೆಡಿಸಲಾರದು. ಅಂಥ ಸಂತಸದ ಆಕರ್ಷಣೆ ದು. ಋತುಗಳ ರಾಜನಾದ ವಸಂತದ ಬರವನ್ನು ಕೋಗಿಲೆ ತುಂಬಿದ ಕೊರಲಿನಿಂದ ುಸುತ್ತದೆ. ತಿಳಿಯಾದ ಬಾನಿನಲ್ಲಿ ಬಿಳಿಮುಗಿಲು ತೇಲಿದಾಗ, ಸೋತ ದಳದಂತೆ

ಮಳೆ ಕದ್ದಡಗಿದಾಗ "ಮಳೆಯಲ್ಲಿ. ಬಯಲಲ್ಲಿ. ನೆಲದಲ್ಲಿ. ಜಲದಲ್ಲಿ. ತಲೆದೋರಿ ತಾನಂದವೆಲ್ಲೆಲ್ಲಿಯೂ." ಮುಗಿಲಲ್ಲಿ ಮಳೆಬಿಲ್ಲ ಕಂಡ ಕವಿಯ ಹೃದಯ ಉಲ್ಲಾಸದಲ್ಲಿ ಕುಣಿಯುತ್ತದೆ. ಅದು ಎಂದಿಗೂ ಹಾಗಾದ್ದರಿಂದ ಬದುಕಿನ ಹಿಂದು ಮುಂದುಗಳನ್ನು ಜೋಡಿಸಿ ಒಂದಾಗಿಸುವ ಸೇತುವೆಯಾಗಿ "ಮನುಜನಿಗೆ ಮಗು ತಂದೆ" ಎಂಬ ಯೋಜನೆಯನ್ನು ಮೂಡಿಸಬಲ್ಲದ್ದಾಗುತ್ತದೆ. ಇಂಥ ಉಲ್ಲಾಸ ಒಂದು ಬಗೆಯದಾದರೆ ಮುದ್ದಿನ ಕುರಿಮರಿಯನ್ನು ಕುರಿತ ಅಕ್ಕರೆಯ ಹಾಡು ಗ್ರಾಮಾಂತರ ಜೀವನದ ಸಹಜ ಸೌಂದರ್ಯವನ್ನು, ನಿಷ್ಕಲ್ಮಷವಾದ ಪ್ರೀತಿಸೌಹಾರ್ದಗಳ ಭಾವನೆಗಳನ್ನು ಅನುಭವಕ್ಕೆ ತಂದು ಕೊಡುತ್ತದೆ. ಈ ಸಂತೋಷಗಳು ಒಂದು ತರಹದುವಾದರೆ "ನೆಲವನೊಲ್ಲದೆ ಬಿಗಿದು ಬಿಮ್ಮುತ. ನಲಿದು ಹಾಡುತ, ಹಾಡುತೇರುತ. ಏರುತೇರುತ" ಹಾಡುವ ಬಾನಾಡಿಯನ್ನು ಕಂಡು "ಆರು ನೀನೆಲೆ ಹರುಷ ಮೂರುತಿ. ಹಕ್ಕಿ ಎಂಬರೆ ನಿನ್ನನು ?" ಎಂದು ಅಚ್ಚರಿಯನ್ನು. ಆನಂದವನ್ನು ಅನುಭವಿಸುತ್ತಿದ್ದಂತೆಯೆ. ಅದರ ನಿರಾತಂಕವಾದ ವಿಹಾರಕ್ಕೆ ಇದಿರಾಗಿ ನೆಲದ ಮೇಲಿನ ನಾವು ಮಾತ್ರ

ಹಿಂದು ಮುಂದನು ನೋಡಿ ನಮೆವೆವು
ನೆನೆಯುತಿಲ್ಲದ ಸುಖವನು,
ಕುಂದು ಸೋಕದ ನಮ್ಮ ನಗೆಯೊಳು
ಕೊನೆಗೆ ನೋವಿನಿಸಿರುವುದು,
ನೊಂದ ಗೋಳನು ಹೇಳಿ ಕೊರೆವುವೆ ಇನಿಯ ಕವನಗಳೆಮ್ಮೊಳು.

ಎಂದು ಹೇಳುವಂತಾಗುತ್ತದೆ. ಅದರ ರಾಗಮಧುರಾವೇಶ ನಮ್ಮ ಪಾಲಿಗೂ ಬರಲಿ ಎಂಬ ಬಯಕೆ ಸಹಜವಾಗಿಯೇ ಎದೆಯಲ್ಲಿ ಉಕ್ಕಿ ಬರುತ್ತದೆ. ಮೊದಲಿನ ಈ ಎಲ್ಲ ಹಾಡುಗಳಲ್ಲಿ ಪ್ರಕೃತಿಸೌಂದರ್ಯದ ವಿವಿಧ ವಿಲಾಸಗಳು. ಸಹಜಗಂಭೀರವಾದ ಸೊಗಸಿನ ಆವಿಷ್ಕಾರಗಳು ಹೃದಯದಲ್ಲಿ ಸಂತಸದ ಮಾರ್ದನಿಯನ್ನು ಉಕ್ಕಿಸುತ್ತವೆ.

ದೇಶ ಪ್ರೇಮದ ವಿವಿಧ ಬಗೆಗಳನ್ನು ಚಿತ್ರಿಸುವ ಕವನಗಳಲ್ಲಿ ಕಾಳಗದ ಕರೆಗೆ ಓಗೊಡುವ ವೀರಾವೇಶ ಶೌರ್ಯವನ್ನು ಮೆರೆದು ಕೊನೆಯಲ್ಲಿ ವೀರಗಲ್ಲಿನ ಮೌನದಲ್ಲಿ ಕೊನೆಗಾಣುವುದನ್ನು ಕಾಣುತ್ತೇವೆ. (ನೋಡಿ. ಕಾಳಗದ ಪದ. ವೀರಗಲ್ಲು) ಪ್ರಪಂಚದ ಯಾವುದೋ ಒಂದು ಮೂಲೆಯಲ್ಲಿ ದೇಹವನ್ನು ಮಣ್ಣಾಗಿಸಬೇಕಾಗುವ ಧೀರನ ಮರಣವೇ ಅವನಿಗೆ ಸಲ್ಲುವ ಮಾತಿಲ್ಲದ ಗೌರವವಾಗುವ ಸನ್ನಿವೇಶವನ್ನು ನೆನೆಯುತ್ತಿದ್ದಂತೆ ಹೃದಯ ಮರುಗುತ್ತದೆ. (ಸರ್ ಜಾನ್ ಮೂರನ್ನು ಹೂಳಿದ್ದು) ಯಾವುದನ್ನೂ ಲೆಕ್ಕಿಸದೆ "ಮೃತ್ಯುವಿನ ದಾಡೆಯಲಿ. ನರಕದುರಿಬಾಯಿಯಲಿ" ನುಗ್ಗುವ ರಾವುತರ ರುದ್ರಭೀಕರ ತ್ಯಾಗವನ್ನು (ರಾವುತರದಾಳಿ). ನಡುಗಡಲಿನಲ್ಲಿ ಹಡಗು ಒಡೆದು ನೂರಾರು ನಾವಿಕರು ಜಲಸಮಾಧಿಯನ್ನು ಹೊಂದುವ ನಿಸ್ಸಹಾಯ ದುರಂತವನ್ನು ಕಂಡು ಎದೆ

ನಡುಗುತ್ತದೆ. ಇಂಥವರ ತ್ಯಾಗದಿಂದಲೇ ಒಂದು ನಾಡಿನ ಹಿರಿಮೆ ಬೆಳೆದು ನಿಲ್ಲುವುದು. ಆವರ ದೇಶಾಭಿಮಾನವನ್ನು ನೆನೆಯುತ್ತಿದ್ದಂತೆ ಹೆಮ್ಮೆ ಉಕ್ಕುತ್ತದಾದರೂ ಸಾವಿರಾರು ಜನಗಳ ಜೀವವನ್ನು ಬೇಡುವ ಯುದ್ಧಗಳು ದೊರೆಕಿಸಿಕೊಡುವ ವಿಜಯ ಎಂಥದೋ, ಆಂಥ ವಿಜೃಂಭಣೆಯು ಆರ್ಥವಾದರೂ ಏನೋ ಎಂಬ ವ್ಯಂಗ್ಯವ್ಯಾಖ್ಯಾನವನ್ನು ಬ್ಲೆನ್ ಹೀಮ್ ಕವನದಂಥ ಕವನ ಒದಗಿಸುತ್ತದೆ. ಇಂದು ಗೌರವ ಪಡೆದು ನಾಳೆ ಆದೇ ಜನಗಳ ಕೋಪಕ್ಕೆ ಗುರಿಯಾಗಬೇಕಾಗುವ ದೇಶಸೇವಕನ ಬಾಳಕಥೆಯಾದರೂ ಒಂದು ವಿಪರ್ಯಾಸದ ಕಥೆಯೇ ಎನ್ನುವುದನ್ನು ಆದೇ ಹೆಸರಿನ ಒಂದು ಕವನ ತಿಳಿಸಿಕೊಡುತ್ತದೆ.

ಸಂಗ್ರಹದಲ್ಲಿಯ ಆರ್ಧದಷ್ಟು ಕವನಗಳು ಗಂಡುಹೆಣ್ಣುಗಳ ನಡುವಿನ ಎಳೆತ ಸೆಳೆತಗಳಿಗೆ, ಬೇಟ ಕೂಟಗಳ ಸಂತಸಕ್ಕೆ, ಅಗಲಿಕೆಯ ಸಂಕಟಕ್ಕೆ, ಪ್ರೀತಿಯ ನೋವು ನಲಿವುಗಳಿಗೆ, ದೈನ್ಯ ದುರಂತಗಳಿಗೆ, ಅದರ ತ್ಯಾಗಕ್ಕೆ, ಆನಿರ್ವಚನೀಯವಾದ ಒತ್ತಡ ಉನ್ನತಿಗಳಿಗೆ ಬಾಯಾಗಿ ಇವೆಲ್ಲವುಗಳ ವಿವಿಧ ಪರಿಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತವೆ. "ಇಂಗ್ಲಿಷ್ ಕವಿಗಳು ಶೃಂಗಾರರಸವನ್ನು ಹೇಗೆ ಗಂಭೀರವಾಗಿಯೂ, ಸೂಕ್ಷ್ಮವಾಗಿಯೂ ಸ್ವಾಭಾವಿಕವಾಗಿಯೂ ತೋರಿಸುವರೆಂಬುದನ್ನು ತಿಳಿಸುವುದಕ್ಕಾಗಿ" ಅದರ ವಿವಿಧ ಬಗೆಗಳ ಕವನಗಳನ್ನು ಆಯ್ಕೆ ಮಾಡಲಾಗಿದೆ ಎಂದು ಶ್ರೀಯವರೇ ಹೇಳಿದ್ದಾರೆ. 'ಮಾದವಮಾದಿ' ಬೇಟದ ಒತ್ತಡವನ್ನು, ಆದು ಹುಟ್ಟಿಸುವ ಮುನಿಸು ಮರುಕಗಳನ್ನಾದರೆ ಪ್ರೇಮದ ಹುಡುಗಿಯ ಸೆಳೆತ ಕೋಟಿ ಯೋಜನಗಳನ್ನು ದಾಟಿ ಬರುವೆ ಎಂದು ಒಲಿದವನಿಂದ ಹೇಳಿಸುತ್ತದೆ. 'ಸುಂದರಿ ಕಮಲೆ' ಹೆಣ್ಣ ಚೆಲುವಿಗೆ ಇಸು ಹೃದಯದ ಕಾಣಿಕೆಯಾಗಿ ರೂಪುಗೊಳ್ಳುತ್ತದೆ. ಮೆಚ್ಚಿಕೊಂಡವಳು ಮೇಲು ನೋಟಕ್ಕೆ ಮೆರೆಯುವವಳಲ್ಲವಾದರೂ ಆಕೆಯ ಕಣ್ಣೋಲವಿನ ಬೆಳಕು ಒಲುಮೆಯನ್ನು ಸೆಳೆಯುತ್ತದೆ. ಲೋಕದಲ್ಲಿ ಯಾವುದೂ ಒಂಟಿಯಾಗಿರದಾಗ ಎದೆಯನ್ನು ಸೆಳೆದವಳೇಕೆ ದೂರವಿರಬೇಕು ಎಂಬ ಕೇಳಿಕೆಯ ಕೊರಗು ಒಂದು ಕಡೆಯಾದರೆ ಹೊನ್ನ ಸಂಕಲೆಯಾಗಿ ಒಲುಮೆ ಉಕ್ಕೇರುವ ಬದುಕಿನ ವಸಂತಕಾಲದ ಕರೆ ಇನ್ನೊಂದು ಕಡೆ. ಆದರೆ ಒಲುಮೆಗೂ ಬಿಡುವು ಬೇಕೆನ್ನುವ ತೃಪ್ತಿಯೋ, ಬೇಸರವೊ ಒಬ್ಬನದಾದರೆ ಇನ್ನೊಬ್ಬನದು ದಾಸನಾಗಿ ನಿತ್ಯ ಸೇವೆಯನ್ನು ಸಲ್ಲಿಸುವ ಸಮರ್ಪಣಭಾವ. ಇಂಥ ಒಲುಮೆಯ ರಹಸ್ಯವನ್ನು, ಆದರ ಲೋಕಾತೀತವಾದ ಆಕರ್ಷಣೆಯ ಸಾಮರ್ಥ್ಯವನ್ನು ತಿಳಿಯದೆ ಲೋಕ ಆ ಮಾತನ್ನು ಹೊಲೆಗೆಡಿಸುತ್ತದೆ; ಆಂಥದನ್ನು ಬಾಯಲ್ಲಿ ಆಲ್ಲಗಳೆದರೂ ಹೃದಯದಲ್ಲಿ ಆದು ಮೊರೆಯಿಡುತ್ತಲೇ ಇರುತ್ತದೆ. ನಲ್ಲೆಯನ್ನು ಬಿಟ್ಟು ಹೋಗಬೇಕಾದ ನಲ್ಲ ಎದೆಯಳಲನ್ನು ಹೀರಿ ಒಂದು ಮುತ್ತನ್ನು ಕೊಟ್ಟು ಬೀಳ್ಕೊಡು ಎಂದು ಬೇಡುವಂತೆ ಮಾಡುತ್ತದೆ. ಅಂಥ ಒಲುಮೆ ಆಳಿದಾಗ ಹೃದಯ ಒಂದು ಮನೆಯೆ, ತೊಟ್ಟಿಲೆ, ಆಥವಾ ಚಿತಿಯೆ ಎಂದು ಕೇಳುವಂತಾಗುತ್ತದೆ. ಅದನ್ನು ಕಳೆದುಕೊಂಡ ಆಳಲಿಗೆ ಕಣ್ಣೀರೊಂದೇ

ಕಾಣಿಕೆಯಾಗುತ್ತದೆ. ಹೊರಟುಹೋದ ಇನಿಯಳ ಯೋಚನೆ ಕರಗಿಹೋದ ಸಂಗೀತ ದಂತೆ, ಸೊರಗಿಹೋದ ಗುಲಾಬಿಯಂತೆ, ಒಂದು ನೆನವರಿಕೆಯಾಗಿ ಉಳಿದು ಒಲುವೆ ಹೃದಯದಲ್ಲಿ ನೆಲೆಯನ್ನು ಪಡೆಯುವಂತೆ ಮಾಡುತ್ತದೆ. ಬೇಸರ ತುಂಬಿದ ಹೃದಯ ಇರುಳನ್ನು ಬಯಸಿ ಬೇಡುತ್ತದೆ. ನಿರಾಶೆ ಕವಿದ ಹೃದಯ ಸಾವನ್ನು ಬಯಸುತ್ತದೆ. ಹೀಗೆ ನೂರು ಭಾವಗಳು, ನಲಿವುಗಳು, ನೋವುಗಳು, ಮಾನವ ಹೃದಯ ತಂತಿಗಳನ್ನು ಮೀಟುತ್ತಲೇ ಇರುತ್ತವೆ. ಅಂಥವು ಇಲ್ಲಿಯ ಹತ್ತಾರು ಪ್ರಣಯಗೀತೆಗಳಲ್ಲಿ ಮಾತು ಗಳನ್ನು ಪಡೆದು ಓದುವವನ ಅನುಭವಗಳಾಗುತ್ತವೆ.

ಇನ್ನು ಕೆಲವು ಕವನಗಳು ಒಲವಿನ ಸಫಲತೆಯನ್ನೋ ವಿಫಲತೆಯನ್ನೋ ಒಂದೊಂದು ಸನ್ನಿವೇಶದ ಮೂಲಕ ಚಿತ್ರಿಸುತ್ತವೆ. ಒಲವಿಗಾಗಿ ಮರುಳಾಗಿ ಮಡಿದು ಹೋದವನ ಕರುಣ ಕಥೆಯನ್ನು ಹೇಳಿ ತಾನು ಒಲಿದವಳನ್ನು ಗೆದ್ದುಕೊಂಡ ಕಥೆಯನ್ನು 'ಕನಕಾಂಗಿ' ಹೇಳುತ್ತದೆ. ತನಗಾಗಿ ತೆರವು ತರಹೋದ ಚಾಮನಿಗಾಗಿ ಕಾಯಲಾಗದೆ, ತಂದೆತಾಯಿಗಳ ಯೋಗಕ್ಷೇಮದ ಯೋಚನೆಯಿಂದಾಗಿ ಮುದಿಯ ರಾಮಗೌಡನನ್ನು ಮದುವೆಯಾಗಬೇಕಾದ ಚೆನ್ನಿಯ ದುರಂತ ಒಂದು ರೀತಿಯದಾದರೆ ಹಿರಿಯನ ಒಪ್ಪಿಗೆ ಇಲ್ಲದ್ದಕ್ಕಾಗಿ ಪ್ರಣಯಿಯೊಡನೆ ಪಾರಾಗಬೇಕೆಂದಾಗ ನೀರಪಾಲಾಗಿ ಸಾಯುವ ಕಾರಿ ಹೆಗ್ಗಡೆಯ ಮಗಳ ದುರಂತ ಇನ್ನೊಂದು ಬಗೆಯದು. ದಾಳಿಯಿಟ್ಟು ಕಳ್ಳರು ಬಂದಾಗ ಶೂರ ತಂದೆಯ ನೆರವಿಲ್ಲದೆ ನೀರಿಗೆ ಹಾರಿದ ಏಳು ಜನ ಅಕ್ಕತಂಗಿಯರ ಮರುಕ ತುಂಬಿದ ಕಥೆ ಜೋಳಕನ್ಯೆಯರದು. ಕೈಹಿಡಿದವನ ವಿಶ್ವಾಸ ಘಾತಕ್ಕಾಗಿ ಹೊಳೆಗೆ ಹಾರಿ ಆಸು ನೀಗಿದ ಯುವತಿಯೊಬ್ಬಳ ಹೃದಯವಿದ್ರಾವಕ ಕಥೆ ದುಃಖಸೇತು. ಹೂವನ್ನು ಕದ್ದು ಮುಳ್ಳನ್ನು ಬಿಟ್ಟು ಹೋಗಿದ್ದ ವಂಚಕನ ನೆನಹು ಒಂದು ಹೆಣ್ಣು ಹೃದಯದ ಮೊರೆತ ವಾಗುತ್ತದೆ.

ಆದರೆ ಮನುಷ್ಯನ ಹೃದಯವನ್ನು ಆಳುವ ಭಾವಗಳು ಪ್ರಣಯ ಪ್ರೀತಿಗಳು ಮಾತ್ರವಲ್ಲ. ದಿನಗಳು ಉರುಳಿದ ಹಾಗೆ ಕಳೆದ ದಿನಗಳ ನೆನಹುಗಳು ಒಮ್ಮೆ ಸಂತಸ ವನ್ನಾದರೆ ಇನ್ನೊಮ್ಮೆ 'ತೇ ಹಿ ನೋ ದಿವಸಾ ಗತಾಃ' ಎಂಬ ವ್ಯಾಕುಲವನ್ನು ಹುಟ್ಟಿಸು ತ್ತವೆ. ಬದುಕಿನ ಕೊನೆಯ ಕರಿನೆರಳು ಚಾಚತೊಡಗುತ್ತದೆ. ಮನಸ್ಸು ಇಬ್ಬಗೆಯಾಗಿ ಒಮ್ಮೆ ಪುರುಷ ಪ್ರಯತ್ನವನ್ನೋ ಒಮ್ಮೆ ದೈವತದ ಕರುಣೆಯನ್ನೋ ನಂಬುವಂತಾಗು ತ್ತದೆ. ನೆಮ್ಮದಿಯ ನಾಡನ್ನು ಬಯಸುತ್ತದೆ. ಆದರ ಕನಸನ್ನು ಕಾಣುತ್ತದೆ. ಅಲ್ಲಿಗೆ ಸಾಗಬೇಕಾದ ದಾರಿಯ ಕಷ್ಟಗಳನ್ನು ಕುರಿತು ಚಿಂತಿಸುತ್ತದೆ. ತನ್ನೊಡನಿದ್ದ ಜೀವದ ಹಾಗೂ ತನ್ನ ಸಂಬಂಧವನ್ನು ಕುರಿತು ಯೋಚನೆ ಮಾಡುತ್ತದೆ. ಸಂತೃಪ್ತ ಜೀವನದ ನಿಜಸ್ವರೂಪವನ್ನು ಅರ್ಥಮಾಗಿಸಿಕೊಳ್ಳಬಯಸುತ್ತದೆ. ಕೊನೆಯಲ್ಲಿ ಹೆಮ್ಮೆ ಅಳಿದು ಕೈಹಿಡಿದು ನಡಸೆಂದು ದೈವತವನ್ನು ಮೊರೆಹೋಗುತ್ತದೆ. ಯುವಕ ಹೃದಯದ ಹಾಡು

ಹುಮ್ಮಸ್ಸುಗಳಿಂದ ತೊಡಗಿ ಬಗೆಬಗೆಯ ಅನುಭವಗಳನ್ನು ಪಡೆದು ಕೊನೆಗೆ ತಿಳಿವಿನ ವಿನೀತಭಾವದಲ್ಲಿ ಜೀವನದ ಪಯಣ ಒಂದು ಬಗೆಯ ಪರಿಣತಿಯಲ್ಲಿ ಕೊನೆಗೊಳ್ಳುತ್ತದೆ. "ಇಂಗ್ಲಿಷ್ ಗೀತಗಳು" ಈ ಪಯಣದ ದಾರಿಯ ಇಣುಕು ನೋಟಗಳನ್ನು ಒದಗಿಸುತ್ತದೆ. ಬದುಕಿನ ನಡೆಯನ್ನು ಚಿತ್ರಿಸುತ್ತದೆ. ಸಂಗ್ರಹದ ಕೊನೆಯಲ್ಲಿ ಬರುವ ಎರಡು ಸ್ವತಂತ್ರ ರಚನೆಗಳು ಕವಿಯ ಸ್ವದೇಶ ಪ್ರೇಮವನ್ನು ಉತ್ಕಟವಾಗಿ ಎತ್ತಿಹೇಳುತ್ತವೆ.

ಶ್ರೀಕಂಠಯ್ಯನವರು ಮಾಡಿದ ಅನುವಾದಗಳು ಮೂಲಕ್ಕೆ ಎಷ್ಟು ಹತ್ತಿರವಾಗಿ ಸಾಗುತ್ತವೆ ಎನ್ನುವುದನ್ನು ನೆನೆದರೆ ಆಶ್ಚರ್ಯವಾಗುತ್ತದೆ. ಅಪವಾದ ರೂಪವಾಗಿ ಒಂದೆರಡು ಕಡೆಗಳಲ್ಲಿ ಅವರು ಮೂಲದಿಂದ ಒಂದಿಷ್ಟು ಆಚೆ ಈಚೆ ಸರಿದದ್ದಿದೆಯಾದರೂ ಒಟ್ಟಿನಲ್ಲಿ ಅವರ ಅನುವಾದಗಳಲ್ಲಿ ಕಾಣುವ ಮೂಲದ ಬಗೆಯ ಪ್ರಾಮಾಣಿಕ ನಿಷ್ಠೆ ಆದರ್ಶಪ್ರಾಯವಾದದ್ದು. ಆದರೆ ಅನುವಾದಗಳನ್ನು ಕಟ್ಟುನಿಟ್ಟಾಗಿ ಮಾಡಿದ್ದರೂ ಮಾತಿಗೊಂದು ಮಾತನ್ನು ಇಟ್ಟುಕೊಂಡು ಹೋಗದೆ ಮೂಲದಲ್ಲಿಯ ಭಾವವಿಶೇಷವನ್ನು ಜೀವಂತವಾಗಿ, ತದ್ವತ್ತಾಗಿ, ಕನ್ನಡದಲ್ಲಿ ನುಡಿಸುವ ಪ್ರಯತ್ನವನ್ನು ಯಶಸ್ವಿಯಾಗಿ ಮಾಡಿದರು. ಭಾವದ ಅಭಿವ್ಯಕ್ತಿಯೇ ಮುಖ್ಯವಾದ್ದರಿಂದ ಇನ್ನು ಕೆಲವು ಅನುವಾದಗಳಲ್ಲಿ ಮೂಲದಲ್ಲಿಯ ಹೆಸರು, ಸಂದರ್ಭ, ಆವರಣ, ನಮ್ಮಲ್ಲಿಯ ಜೀವನಕ್ಕೆ ಹೊಂದಿಕೊಳ್ಳುವಂತೆ ಬದಲಾಯಿಸಿಕೊಳ್ಳಬೇಕಾಯಿತು. ಇಂಥ ಬದಲಾವಣೆಗಳಿಂದ ಮೂಲದಲ್ಲಿಯ ಭಾವಕ್ಕೆ ಚ್ಯುತಿ ಬರಲಿಲ್ಲ ಮಾತ್ರವಲ್ಲ ; ಅದೇ ಭಾವ ನಮಗೆ ಹತ್ತಿರದ್ದೆನಿಸುವ ಸನ್ನಿವೇಶಗಳ ಮೂಲಕ ವ್ಯಕ್ತವಾಗುವುದರಿಂದ ಮತ್ತೂ ಸೊಗಯಿಸುವಂತಾಯಿತು. ಈ ಮಾರ್ಪಾಟುಗಳ ಸಫಲತೆಯನ್ನು ಸಂಗ್ರಹದಲ್ಲಿಯ ಕಿರುಕಥನಕವನಗಳಲ್ಲಿ ಕಾಣಬಹುದಾಗಿದೆ. (ಉದಾ. ಕನಕಾಂಗಿ. ಮುದಿಯ ರಾಮಗೌಡ. ಕಾರಿಹೆಗ್ಗಡೆಯ ಮಗಳು, ಚೋಳ ಕನ್ನೆಯರು, ಇತ್ಯಾದಿ.)

ಇದುವರೆಗಿನ ವಿವರಣೆಯಿಂದ ಇಲ್ಲಿಯ ಕವನಗಳಲ್ಲಿಯ ಭಾವಗಳ ಸ್ವರೂಪವನ್ನು, ಅವುಗಳ ವಿವಿಧತೆಯನ್ನು, ಎಲ್ಲರ ಬಾಳಿಗೂ ಅವು ಎಷ್ಟು ಹತ್ತಿರದವು ಎನ್ನುವುದನ್ನು ನಾವು ತಿಳಿಯಬಹುದೇ ಹೊರತು ಅವು ಕಾವ್ಯವಾಗಿ ಹೊಮ್ಮಿದ ಬಗೆಯನ್ನು ತಿಳಿಯಲಾರೆವು. ಈ ಭಾವಗಳೇ ಕವನಗಳ ವಿಷಯವಾದರೂ ಅವು ಕಾವ್ಯವಾಗಿ ರೂಪುಗೊಳ್ಳುವುದು ಭಾಷೆಯ ವಿಶಿಷ್ಟವಾದ ಬಳಕೆಯಿಂದ. ಅವು ಮೈತಳೆದು ನಿಲ್ಲುವಂತೆ ಪದಗಳನ್ನು ಬಳಸಬೇಕಾದಾಗ ಆಯಾಯ ಭಾವಗಳನ್ನು ಅವು ಸಮರ್ಪಕವಾಗಿ ಪ್ರತಿಸ್ಪಂದಿಸುವಂತೆ ಅವನ್ನು ಒಂದು ಕ್ರಮದಲ್ಲಿ ನಿಲ್ಲಿಸಬೇಕಾಗುತ್ತದೆ. ಈ ಕ್ರಮವನ್ನೇ ನಾವು ಛಂದಸ್ಸು ಎನ್ನುವುದು. ಇಲ್ಲಿಯ ಭಾವಗಳ ಅಭಿವ್ಯಕ್ತಿಗಾಗಿ ಶ್ರೀಕಂಠಯ್ಯನವರು ಹೊಸ ದಾರಿಗಳನ್ನು ಹುಡುಕಿಕೊಂಡರು. ಒಂದು, ಭಾಷೆಗೆ ಸಂಬಂಧಿಸಿದಂತೆ, ಇನ್ನೊಂದು, ಪದ

ಗಳನ್ನು ನಿಲ್ಲಿಸುವ ಕ್ರಮಕ್ಕೆ ಸಂಬಂಧಿಸಿದಂತೆ. ಈ ಎರಡು ವಿಷಯಗಳಲ್ಲಿಯೂ ಅವರ ಸಾಧನೆ ಅಸಾಧಾರಣವಾಗಿದ್ದು ಮಾರ್ಗದರ್ಶಕವಾಗಿದೆ.

ಶ್ರೀಕಂಠಯ್ಯನವರು ಅನುವಾದಗಳಿಗಾಗಿ ಬಳಸಿದ ಭಾಷೆ ಅಚ್ಚ ಕನ್ನಡದ ದಿನ ಬಳಕೆಯ ಭಾಷೆ. ಇಲ್ಲಿ ಸಂಸ್ಕೃತದ ಸುಳಿವಿಲ್ಲ. ತದ್ಭವಗಳ ಸುದ್ದಿ ಇಲ್ಲ. ಅಲಂಕಾರಗಳ ಆಡಂಬರವಿಲ್ಲ. ದಿನಬಳಕೆಯಲ್ಲಿ ಇಲ್ಲದ ಮಾತುಗಳು, ಕ್ಲಿಷ್ಟವಾದ ಪದಗಳು, ಎಲ್ಲಿಯಾದರೂ ಇವೆಯೆ ಎಂದು ಹುಡುಕಬೇಕಾಗುತ್ತದೆ. ಹುಡುಕಿದಾಗ ಆಶ್ಚರ್ಯವಾಗುತ್ತದೆ. ಎಲ್ಲಿಯೋ ಅಪರೂಪವಾಗಿ ಒಂದೆರಡು ಕಡೆ ಸಂಸ್ಕೃತ ಪದಗಳು ಸಿಕ್ಕಬಹುದು. ಅವು ಕೂಡ ಸಾಮಾನ್ಯಬಳಕೆಯಲ್ಲಿದ್ದ ಚಿರಪರಿಚಿತವಾದ ಪದಗಳು. ಕ್ಲಿಷ್ಟತೆಯ ಮಾತೇ ಇಲ್ಲ ಇಲ್ಲಿ. ಇದೊಂದು ಅಸದೃಶವಾದ ಸಾಧನೆ ಎನ್ನಬೇಕು. ಇಷ್ಟು ಸರಳವಾದ, ಇಷ್ಟು ಸಹಜವಾದ, ಸಾಮಾನ್ಯವಾದ ಮಾತುಗಳನ್ನು ಕಾವ್ಯಕ್ಕಾಗಿ ಬಳಸಬಹುದು, ಎಂಥ ಭಾವನೆಯನ್ನೂ ಇಷ್ಟು ನಿರಾಡಂಬರವಾಗಿ ವ್ಯಕ್ತಪಡಿಸಬಹುದು ಎನ್ನುವುದನ್ನು ಕಂಡಾಗ ಆಶ್ಚರ್ಯವೆನಿಸುತ್ತದೆ. ದಿನ ಬಳಕೆಯ ಮಾತುಗಳನ್ನೇ ಕಾವ್ಯ ಬಳಸಬೇಕು, ಕಾವ್ಯೋಚಿತವೆಂದ ಕೃತಕ ಪದಬಂಧಗಳನ್ನಲ್ಲ ಎಂದ ವರ್ಡ್ಸ್‌ವರ್ತ್‌ನ ಮಾತನ್ನು ಶ್ರೀಕಂಠಯ್ಯನವರು ಇಲ್ಲಿ ಪೂರ್ತಿಯಾಗಿ ಅನುಷ್ಠಾನಕ್ಕೆ ತಂದಿದ್ದಾರೆ. ಇಂಗ್ಲಿಷ್ ಗೀತಗಳ ಇಲ್ಲಿಯ ಅನುವಾದಗಳನ್ನು ಓದುತ್ತಿದ್ದಂತೆ ಓದುಗನ ಗಮನವನ್ನು ಮೊದಲು ಸೆಳೆಯುವುದು ಇಲ್ಲಿ ಬಳಸಲಾದ ಅಚ್ಚ ಕನ್ನಡದ ನಿರಾಭರಣ ಸೌಂದರ್ಯ. ದಿನಬಳಕೆಯ ಮಾತುಗಳು ಕಾವ್ಯಕ್ಕೆ ಸಹಜ ಸೌಂದರ್ಯವನ್ನು ತಂದು ಕೊಡಬಲ್ಲವು, ಕವಿಯಾದವ ಪಂಡಿತನಾಗಿರಬೇಕಿಲ್ಲ, ಎಂಬ ಸತ್ಯವನ್ನು ಇಲ್ಲಿಯ ಅನುವಾದಗಳು ಸಾರಿ ಹೇಳುತ್ತವೆ.

ಛಂದೋಬಂಧಗಳ ವಿಚಾರದಲ್ಲಿ—ಭಾವದ ಮಿಡಿತಗಳನ್ನು ಪ್ರತಿಸ್ಪಂದಿಸುವಂತೆ ಪದಗಳ ನುಡಿತವನ್ನೂ ನಡೆಯನ್ನೂ ಹೊಂದಿಸಿಕೊಳ್ಳುವುದರಲ್ಲಿ—ಸ್ವಾತಂತ್ರ್ಯವಿಲ್ಲದಾಗ ಬಗೆಬಗೆಯ ಭಾವಸೂಕ್ಷ್ಮಗಳನ್ನು ಮಾತಿನಲ್ಲಿ ಮೂಡಿಸುವುದು ಕಷ್ಟವೆನ್ನುವುದನ್ನು ತಿಳಿದ ಶ್ರೀಕಂಠಯ್ಯನವರು ಈ ಅನುವಾದಗಳಲ್ಲಿ ಸಾಧಿಸಿಕೊಂಡ ಛಂದೋವೈವಿಧ್ಯ ಇಲ್ಲಿಯ ಮತ್ತೊಂದು ಮಹತ್ವದ ಸಾಧನೆಯಾಗಿದೆ. "ಕನ್ನಡದ ಜಾಯಮಾನವನ್ನು ಮೀರದೆ ಎಷ್ಟು ಮಟ್ಟಿಗೆ ಛಂದಸ್ಸು ಇಂಗ್ಲಿಷ್ ಛಂದಸ್ಸುಗಳನ್ನು ಹೋಲಬಹುದೋ ಅಷ್ಟು ಮಟ್ಟಿಗೂ ಆ ಪದ್ಯಗಳನ್ನು ಕನ್ನಡಕ್ಕೆ ಇಳಿಸುವುದಕ್ಕೆ ಪ್ರಯತ್ನಪಟ್ಟಿರುತ್ತೇನೆ" ಎಂದಿದ್ದಾರೆ. ಇಂಗ್ಲೀಷಿನ ಛಂದಸ್ಸು ಸ್ವರಘಾತವನ್ನು ಆಧರಿಸಿದ್ದು. ಸಂಸ್ಕೃತ ವೃತ್ತಗಳನ್ನು ಬಿಟ್ಟರೆ ಕನ್ನಡದ ಛಂದಸ್ಸು ಮಾತ್ರಾಗಣ ಅಂಶಗಣಗಳ ರಚನೆ, ಅಥವಾ ಸಂಯುಕ್ತ ಗಣಗಳ ರಚನೆಯದು. ಇಂಗ್ಲಿಷಿನಲ್ಲಿ ಮೂಲಭೂತವಾದ ಲಯಗತಿಗಳು ಕೆಲವೇ ಆಗಿದ್ದರೂ ಗಣಗಳನ್ನೂ ಚರಣಗಳನ್ನೂ ಯೋಜಿಸಿಕೊಳ್ಳುವ ವೈವಿಧ್ಯದ ಮೂಲಕ ಅನೇಕ ಪದ್ಯಜಾತಿಗಳು ಏರ್ಪಟ್ಟು ನಿಂತಿವೆ. ಇದನ್ನು ಕನ್ನಡದಲ್ಲಿಯೂ ಮಾಡ

ಬಹುದೆಂಬುದನ್ನು ಶ್ರೀಕಂಠಯ್ಯನವರು " ಇಂಗ್ಲಿಷ್ ಗೀತ " ಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಮಾತ್ರಾಗಣಗಳನ್ನೇ ಅಡಿಪಾಯವಾಗಿರಿಸಿಕೊಂಡು ಅವನ್ನೇ ಬೇರೆಬೇರೆಯಾಗಿ ಆಯಾಯ ಪದ್ಯಗಳಲ್ಲಿಯ ಭಾವಕ್ಕೆ ಹೊಂದುವಂತೆ ಯೋಜಿಸಿಕೊಂಡಿದ್ದಾರೆ, ದ್ರಾವಿಡ ಛಂದೋರೂಪಗಳನ್ನು ಚೆನ್ನಾಗಿ ತಿಳಿದಿದ್ದ ಶ್ರೀಯವರು ಯಾವಬಗೆಯ ಗುರುಲಘುಗಳ ಯೋಜನೆಯಿಂದ ಯಾವ ಭಾವಸೂಕ್ಷ್ಮವನ್ನು ಸೂಚಿಸಬಹುದೆಂಬುದನ್ನು ಚೆನ್ನಾಗಿ ಗುರುತಿಸಿ ಅವರು ಕಾವ್ಯದಲ್ಲಿ ಛಂದಸ್ಸು ಮಾಡಬಹುದಾದ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಹಾಗೆ ಮಾಡುವಲ್ಲಿ ಹೊಸ ಛಂದೋಬಂಧಗಳನ್ನು ಬಳಕೆಗೆ ತಂದಿದ್ದಾರೆ. ಭಾವಗೀತದ ಬೆಳವಣಿಗೆಗೆ ಅಗತ್ಯವಾದ ರಚನಾ ಸ್ವಾತಂತ್ರ್ಯವನ್ನು ಕನ್ನಡ ಕಾವ್ಯಕ್ಕೆ ತಂದುಕೊಟ್ಟಿದ್ದಾರೆ. ಅವರು ಬಳಸಿದ ವಿವಿಧ ಛಂದೋಬಂಧಗಳ ಪಾರಿಭಾಷಿಕ ವಿಶ್ಲೇಷಣೆ ಇಲ್ಲಿ ಅನಗತ್ಯ. ಸಾಂಪ್ರದಾಯಿಕ ಪದ್ಯಬಂಧಗಳು ಭಾವಾಭಿವ್ಯಕ್ತಿಗೆ ನಿರ್ಬಂಧಕಾರಿಯಾಗುವುದರಿಂದ ಹೊಸ ಬಂಧಗಳನ್ನು ಏರ್ಪಡಿಸಿಕೊಳ್ಳಬೇಕಾಯಿತು. ಹೊಸ ರೂಪ ರಚನೆಗಳ ಮೂಲಕ ಹೊಸ ಕಾವ್ಯಕ್ಕೆ ಹೊಸ ಸಾಧ್ಯತೆಗಳನ್ನು ತೋರಿಸಿಕೊಟ್ಟರು. ಭಾವಾಭಿವ್ಯಕ್ತಿಗೆ ಹೊಸ ಶಕ್ತಿಯನ್ನು ತಂದುಕೊಟ್ಟರು. ಆ ದೃಷ್ಟಿಯಿಂದಲೂ " ಇಂಗ್ಲಿಷ್ ಗೀತಗಳು " ಕನ್ನಡ ಕಾವ್ಯಪ್ರಪಂಚದಲ್ಲಿ ಒಂದು ಹೊಸ ಯುಗವನ್ನೇ ಪ್ರಾರಂಭಿಸಿತೆಂದು ಹೇಳಬಹುದಾಗಿದೆ.

ಇಲ್ಲಿಯ ಕವನಗಳು " ಇಂಗ್ಲಿಷ್ ಕಾವ್ಯಮಾಲೆಯ ನಾಯಕ ರತ್ನಗಳೆಂದು ಆದುಕೊಂಡವಲ್ಲ. ಉತ್ತಮರಾದ ಕವಿಗಳೂ ಇಲ್ಲಿ ಎಲ್ಲರೂ ಇಲ್ಲ. ಆಗಾಗ್ಗೆ ಓದುತ್ತಿರುವಾಗ ನನ್ನ ಮನಸ್ಸಿಗೊಪ್ಪಿ, ನನ್ನ ಕೈ ಮೀರದುವಾಗಿ ಕಂಡು ಬಂದ ಗೀತಗಳಿವು " ಎಂದು ಹೇಳಲಾದ ಮಾತು ವಿಮರ್ಶಕರ ಬಾಯಿ ಮುಚ್ಚಬೇಕು. ಆದರೂ ಅನುವಾದಗಳಲ್ಲಿ ಅಲ್ಲಲ್ಲಿ ಕಂಡು ಬಂದ ಕೊರತೆಗಳನ್ನು ಕೆಲವರು ಹೇಳಿದ್ದಾರೆ. ಷೆಲ್ಲಿಯ ಕವನಗಳು ಅಷ್ಟೊಂದು ಸೊಗಯಿಸಿಲ್ಲ ಎಂದಿದ್ದಾರೆ. ಕೊರತೆಗಳು ಇಲ್ಲವೆಂದಲ್ಲ. ಬೆಡ್ಡೋಸ್‌ನ ಕವನದಲ್ಲಿಯ ಎರಡನೆಯ ಪಂಕ್ತಿಯೇ ಬಿಟ್ಟು ಹೋಗಿದೆ. ಕೆಲವೆಡೆಯಲ್ಲಿ ಅನುವಾದ " ಗದ್ಯಕ " ವಾಗಿದೆ ಎಂದು ಅವರೇ ಒಪ್ಪುತ್ತಿದ್ದರು. ಆದರೆ ಒಟ್ಟಿನಲ್ಲಿ ನೋಡಿದಾಗ ಇಂಥ ಅರೆಕೊರೆಗಳು ಇಂಗ್ಲಿಷ್ ಮೂಲಗಳನ್ನು ಓದಿದವರಿಗೆ ಗೊತ್ತಾಗಬಹುದೇ ಹೊರತು ಉಳಿದವರಿಗೆ ಇವು ಅನುವಾದಗಳೆಂದು ಹೇಳದೆ ಗೊತ್ತಾಗುವುದಿಲ್ಲ. ಅಷ್ಟರ ಮಟ್ಟಿಗಿನ ಸ್ವಯಂಪೂರ್ಣವಾದ ಕಾವ್ಯಸಂಪತ್ತನ್ನು ಇಲ್ಲಿಯ ಅನುವಾದಗಳು ಪಡೆದಿವೆ. ' ಕನಕಾಂಗಿ,' ' ಚೋಳಕನ್ಯೆಯರು,' ' ಮುದಿಯ ರಾಮೆಗೌಡ, ' ದುಃಖಸೇತು, ' ' ಬಿಂಕದ ಸಿಂಗಾರಿ ' ರಾವುತರ ದಾಳಿ, ' ಹಳೆಯ ಪಳಕೆಯ ಮುಖಗಳು, ' ' ಮುದ್ದಿನ ಕುರಿಮರಿ,' ಇಂಥ ಇನ್ನೂ ಅನೇಕ—ಅನುವಾದ ಕಲೆಯ ಪರಮ ಸಿದ್ಧಿಗಳಾಗಿ ನಿಂತಿವೆ. ಅನುವಾದ ಕಾರ್ಯವನ್ನು ಇಬ್ಬರು ಹೆಂಡಿರ ಕಾಟ...ದು ಹೇಳುತ್ತಾರೆ. ಆದರೆ ಇಲ್ಲಿ

ನಾವು ಕಾಣುವುದು ಇಬ್ಬರು ಪ್ರೇಯಸಿರೊಡನೆ ನಡೆಸಿದ ಸರಸ ಸಲ್ಲಾಪವನ್ನು. ಇಂಗ್ಲಿಷು, ಕನ್ನಡ, ಇವರಿಬ್ಬರೂ ಇವರಿಗೆ ಇನಿಯರು. ಇವಳ ಸೊಬಗನ್ನು ಅವಳಿಗೆ, ಅವಳ ತೊಡಿಗೆಯನ್ನು ಇವಳಿಗೆ ಇಟ್ಟು ನೋಡಬಯಸಿದ ಮನಸ್ಸಿನ ವಿಲಾಸ ಇಲ್ಲಿ ಅನುವಾದದ ವೇಷ ತೊಟ್ಟು ಕಾವ್ಯವಾಗಿದೆ.

"ಇಂಗ್ಲಿಷ್ ಗೀತಗಳ" ಪ್ರಭಾವವನ್ನು ವರ್ಡ್ಸ್‌ವರ್ತ್-ಕೋಲ್ರಿಜ್‌ರ 'ಲಿರಿಕಲ್ ಬ್ಯಾಲಡ್ಸ್' ಬೀರಿದ ಪ್ರಭಾವಕ್ಕೆ ಹೋಲಿಸಲಾಗಿದೆ. "ಲಿರಿಕಲ್ ಬ್ಯಾಲಡ್ಸ್" ಇಂಗ್ಲೆಂಡಿನಲ್ಲಿ ಒಂದು ಹೊಸ ಕಾವ್ಯಪಂಥವನ್ನೇ ಸೃಷ್ಟಿಸಿತು. ಕನ್ನಡ ಕಾವ್ಯ ಪ್ರಪಂಚದಲ್ಲಿ "ಇಂಗ್ಲಿಷ್ ಗೀತಗಳು" ಒಂದು ಕಾವ್ಯಪಂಥವನ್ನಲ್ಲದಿದ್ದರೂ ಒಂದು ಹೊಸ ಕಾವ್ಯ ಪದ್ಧತಿಯನ್ನು ಪ್ರಚುರ ಪಡಿಸಿತು. ಕನ್ನಡದಲ್ಲಿ ಮಹಾಕಾವ್ಯಗಳ ಬಡ ಬಂಧು ವಿನಂತಿದ್ದ ಭಾವಗೀತೆಗೆ ಸ್ವಾತಂತ್ರ್ಯವನ್ನು ತಂದುಕೊಟ್ಟು ಅದು ತನ್ನಷ್ಟಕ್ಕೆಯೆ ಒಂದು ಸ್ವತಂತ್ರವಾದ, ಹೃದ್ಯವಾದ, ಜನಪ್ರಿಯವಾದ ಕಾವ್ಯಪ್ರಕಾರವಾಗಿ ಬೆಳೆಯುವಂತೆ ಮಾಡಿತು. ಜನರ ಮಾತಿನಲ್ಲಿಯೇ ಅವರ ಅನುಭವ ಪ್ರಪಂಚಕ್ಕೆ ಹತ್ತಿರವಾಗಿರುವ ಭಾವಗಳನ್ನು ಸಹಜವಾಗಿ ಹೇಳಿ ಕಾವ್ಯ ಜನಸಾಮಾನ್ಯರ ಸಂಪತ್ತಾಗುವಂತೆ ಮಾಡಿತು. ಹೊಸ ಛಂದೋಬಂಧಗಳನ್ನು ರೂಢಿಸಿ ಹಳೆಯ ಕಾಲದ ಕಟ್ಟುಪಾಡುಗಳ ಸೆರೆಯಿಂದ ಕಾವ್ಯವನ್ನು ಬಿಡುಗಡೆ ಮಾಡಿತು. ಅಚ್ಚಗನ್ನಡ ಮಾತಿನ ಸೊಬಗನ್ನೂ ಸಾಮರ್ಥ್ಯವನ್ನೂ ಎತ್ತಿತೋರಿಸಿತು. ಇಂಥದೆಲ್ಲದರ ಅನಂತ ಸಾಧ್ಯತೆಗಳನ್ನು ಶ್ರೀಕಂಠಯ್ಯನವರು ಮೊದಲ ಬಾರಿಗೆ ತೋರಿಸಿಕೊಟ್ಟರು. ಹೊಸ ಭಾವಗೀತದ ಜನಕರಾದರು.

೧೧

ಇಂಗ್ಲಿಷ್ ಗೀತಗಳ ನಂತರ ಪ್ರಕಟವಾದ ಶ್ರೀಕಂಠಯ್ಯನವರ ಮೂರು ಕೃತಿಗಳು ನಾಟಕಗಳು—'ಗದಾಯುದ್ಧ ನಾಟಕಂ', 'ಅಶ್ವತ್ಥಾಮನ್' ಮತ್ತು 'ಪಾರಸಿಕರು'. ಈ ಮೂರೂ ದುರಂತನಾಟಕಗಳು ಎನ್ನುವುದು ಆಶ್ಚರ್ಯವೂ ಅಲ್ಲ ಆಕಸ್ಮಿಕವೂ ಅಲ್ಲ. ಮದರಾಸಿನಲ್ಲಿ ಓದುತ್ತಿದ್ದಾಗಲೆ ಅವರು ಗ್ರೀಕರ, ಷೇಕ್ಸ್‌ಪಿಯರನ ದುರಂತನಾಟಕಗಳನ್ನು ಅತೀವವಾಗಿ ಮೆಚ್ಚಿಕೊಂಡಿದ್ದರಲ್ಲದೆ ಅದನ್ನು ಕನ್ನಡಕ್ಕೆ ತರಬೇಕೆಂಬ ಕನಸನ್ನು ಕಂಡಿದ್ದರೆನ್ನುವುದನ್ನು ನೋಡಿಯಾಗಿದೆ. ಅವರ ಓದು ವಿಸ್ತರಿಸಿದ ಹಾಗೆ, ವ್ಯಾಸಂಗ ಆಳವಾದ ಹಾಗೆ, ದುರಂತ ನಾಟಕಗಳ ಬಗೆಗಿನ ಒಲವು ಮತ್ತೂ ಹೆಚ್ಚಿತೆಂದು ಕಾಣುತ್ತದೆ. ಗ್ರೀಕರ ಉದಾತ್ತವಾದ ದುರಂತ ನಾಟಕ ಪರಂಪರೆಯನ್ನು ನೆನೆಯುತ್ತಿದ್ದಂತೆ ಅಂಥ

ನಾಟಕಗಳು ನಮ್ಮಲ್ಲಿ ಯಾತಕ್ಕೆ ಇರಬಾರದು ಎಂದು ಸಹಜವಾಗಿಯೇ ಅನಿಸಿತು. ನಮ್ಮ ಲಾಕ್ಷಣಿಕರು ರಂಗಸ್ಥಳದ ಮೇಲೆ ಸಾವು ನೋವುಗಳಿರಬಾರದೆಂದು ಅಂಥ ಒಂದು ನಾಟಕ ಪ್ರಕಾರವನ್ನು ನಿರ್ಬಂಧಿಸಿದ್ದು ಅವರಿಗೆ ಅಸ್ವಾಭಾವಿಕವಲ್ಲದೆ ಅನಗತ್ಯವಾಗಿಯೂ ಕಂಡಿತು. ನಮ್ಮ ಮಹಾಭಾರತ ರಾಮಾಯಣಗಳಲ್ಲಿ, ಇತರ ಇತಿಹಾಸ ಪುರಾಣಗಳಲ್ಲಿ, ದುಃಖದ ಸನ್ನಿವೇಶಗಳೇನೂ ಕಡಿಮೆ ಇಲ್ಲ. ನಮ್ಮ ಕವಿಗಳು ದುಃಖದ ಆಳವನ್ನು ತಿಳಿಯುದವರಲ್ಲ. ಹಾಗಿದ್ದರೂ ಅವರು ದುರಂತ ಕಾವ್ಯರಚನೆಗೆ ಮನಸ್ಸು ಮಾಡಲಿಲ್ಲ. ಇದರಿಂದ ಭಾರತೀಯ ಸಾಹಿತ್ಯಪರಂಪರೆ ಒಂದು ಮಹತ್ತರವಾದ, ಉದಾತ್ತವಾದ, ರಸಾನುಭವದ ಬಗೆಗೆ ಎರವಾಗಿದೆ. ಆ ಕೊರತೆಯನ್ನು ಅನುವಾದಗಳಿಂದಾಗಲಿ, ಪ್ರತಿಭೆಯುಳ್ಳವರು ರಚಿಸಬಲ್ಲ ಸ್ವತಂತ್ರ ಕೃತಿಗಳಿಂದಾಗಲಿ ನೀಗಿಕೊಳ್ಳಬೇಕೆಂಬ ಆಶಯವನ್ನು ಶ್ರೀಯವರು ಅನೇಕ ಸಲ ವ್ಯಕ್ತಪಡಿಸಿದ್ದಾರೆ. ಕತ್ತಲೆಗೆ ಹೆದರುವವ ಧ್ರುವತಾರೆಯನ್ನು ಕಾಣಲಾರ ಎಂದಿದ್ದಾರೆ, ಬೇಯದ ಒಲೆ ಇಲ್ಲ, ಸಾವಿಲ್ಲದ ಮನೆ ಇಲ್ಲ, ಎಂದಿದ್ದಾರೆ. ಅಲ್ಲದೆ, ದುರಂತ ನಾಟಕ ಸಾಮಾನ್ಯವಾಗಿ ನಾಯಕನ ಸಾವಿನಲ್ಲಿ ಕೊನೆಗಾಣುತ್ತದೆಯಾದರೂ ಸಾವನ್ನು ಸ್ವಾಗತಿಸಬೇಕಾದಂಥ ದುಃಖಕ್ಕೆ ಈಡಾಗುವುದು ಸಾವಿಗಿಂತ ಹೆಚ್ಚಿನ ದುರಂತವಾಗಬಹುದು. ಆದ್ದರಿಂದ ಸಾವಿನ ಸನ್ನಿವೇಶಗಳಿಗಾಗಲಿ, ದುಃಖದೈನ್ಯಗಳ ಸನ್ನಿವೇಶಗಳಿಗಾಗಲಿ ನಾವು ಹೆದರಿಕೊಂಡು ಒಂದು ಘನವಾದ ಸಾಹಿತ್ಯಾನುಭವದ ಅವಕಾಶವನ್ನು ಕಳೆದುಕೊಳ್ಳುವಂತಾಗಬಾರದು ಎನ್ನುವುದು ಶ್ರೀಕಂಠಯ್ಯನವರ ಮನೋಗತವಾಗಿತ್ತು. ಆದ್ದರಿಂದ ಅವರು ನಾಟಕರಚನೆಗೆ ಎಂದಾದರೂ ಕೈ ಹಾಕಿದ್ದೇ ಆದರೆ ಆ ನಾಟಕ ದುರಂತ ನಾಟಕವಾಗಿರುತ್ತದೆ, ಗ್ರೀಕ್ ಮಾದರಿಯದಾಗಿರುತ್ತದೆ, ಎನ್ನುವ ನಿರೀಕ್ಷೆ ಸ್ವಾಭಾವಿಕವೇ ಆಗಿದ್ದಿತು. ಗ್ರೀಕ್ ದುರಂತ ನಾಟಕಗಳಲ್ಲಿಯ ಶಕ್ತಿಯುತವಾದ ರಚನಾ ವಿಧಾನ, ಸರಳವಾದರೂ ಭಾವೋಜ್ವಲವಾದ ಪಾತ್ರ ಕಲ್ಪನೆ, ಭಾರತೀಯರಿಗೆ ಅಪರಿಚಿತವಲ್ಲದ, ಒಂದು ದೃಷ್ಟಿಯಿಂದ ಅವರಿಗೆ ಹತ್ತಿರವಾದ, ಜೀವನವನ್ನು ಕುರಿತ ಧರ್ಮ ದೃಷ್ಟಿ, ಅವರನ್ನು ಅದರತ್ತ ಒಲಿಯುವಂತೆ ಮಾಡಿದ್ದವು. ಅಂಥದನ್ನು ಕನ್ನಡದಲ್ಲಿ ತಂದು ತೋರಿಸಬೇಕೆಂಬ ಅಭಿಲಾಷೆಯನ್ನು ಮೂಡಿಸಿದ್ದವು.

ನಾಗಚಂದ್ರ ಚಿತ್ರಿಸಿದ ರಾವಣನ ಪಾತ್ರದಲ್ಲಿ ಶ್ರೀಕಂಠಯ್ಯನವರು ದುರಂತ ನಾಯಕನಾಗುವ ಸಾಧ್ಯತೆಗಳನ್ನು ಕಂಡಿದ್ದರು. ಅದನ್ನು ಕುರಿತು ಇಂಗ್ಲಿಷ್‌ನಲ್ಲಿ ಒಂದು ಸುದೀರ್ಘವಾದ ಲೇಖನವನ್ನು ಬರೆದಿದ್ದಾರೆ. ರನ್ನ ಚಿತ್ರಿಸಿದ ದುರ್ಯೋಧನನ ಪಾತ್ರ ಅಂಥ ಇನ್ನೊಂದು ಸಾಧ್ಯತೆಯನ್ನು ಅವರ ಕಣ್ಣೆದುರು ತಂದಿತು. ತಮ್ಮ ನಾಟಕಕ್ಕಾಗಿ ಈ ಎರಡನೆಯದನ್ನು ಅವರು ಆಯ್ದುಕೊಂಡರು. ಹಾಗೆ ಆಯ್ದುಕೊಳ್ಳುವುದರಲ್ಲಿ ಬೇರೆ ಅನುಕೂಲಗಳೂ ಇದ್ದವು. ರನ್ನನ ' ಸಾಹಸ ಭೀಮ ವಿಜಯ ' ಚಂಪೂ ಕಾವ್ಯವಾದರೂ ಮೊದಲಿಂದ ಕೊನೆಯವರೆಗೆ ಅದು ನಾಟ್ಯಸತ್ವದಿಂದ ಕೂಡಿದೆ. ಕಥೆ ಉದ್ದಕ್ಕೂ ಪಾತ್ರಗಳ

ಸಂಭಾಷಣೆಗಳ ಮೂಲಕವೇ ಮುಂದುವರಿಯುತ್ತದೆ. ಆವೇಶಭರಿತವಾದ ಒಂದು ಪಾರಾಕಾಷ್ಠೆಯ ಸನ್ನಿವೇಶದತ್ತ ಸಾಗುತ್ತದೆ. ಪಾತ್ರಗಳ ಶೀಲ ಸ್ವಾಭಾವಗಳು, ಅವುಗಳ ಧೈರ್ಯದರ್ಪಶೋಕಗಳು ಆವರವರ ಮಾತುಗಳಲ್ಲಿ, ಕೃತಿಗಳಲ್ಲಿ ವ್ಯಕ್ತವಾಗುತ್ತವಲ್ಲದೆ ಕವಿಯ ವಿವರಣೆಯ ಮೂಲಕವಲ್ಲ. ಸನ್ನಿವೇಶಗಳನ್ನು ಕಣ್ಣೆದುರು ನಿಲ್ಲುವಂತೆ ನಿಚ್ಚಳ ವಾಗಿ ಕಲ್ಪಿಸಿಕೊಳ್ಳುವ ರೀತಿ ಮತ್ತು ಎಂಥ ಸನ್ನಿವೇಶಕ್ಕೂ ಸಮನಾಗಿ, ಸಮರ್ಥವಾಗಿ, ಅದನ್ನು ನಿರ್ವಹಿಸಬಲ್ಲ ಶಕ್ತಿಯುತವಾದ ಬರವಣಿಗೆಯ ಶೈಲಿ, ನಾಟಕಕ್ಕೆ ಅನುಕೂಲ ವಾದ ಈ ಎಲ್ಲ ಪರಿಕರಗಳು ರನ್ನನ ಕಾವ್ಯದಲ್ಲಿವೆ. ಅದರಲ್ಲಿ ಒಂದು ರುದ್ರನಾಟಕ ಆಡಗಿದ್ದಂತೆ ಶ್ರೀಕಂಠಯ್ಯನವರಿಗೆ ಕಂಡಿತು. ಆದನ್ನು ಹೊರಗೆಳೆಯುವುದರಲ್ಲಿ ಕಾವ್ಯಕ್ಕೆ ವಿಶಿಷ್ಟವಾದ ಭಾಗಗಳನ್ನು, ನಾಟಕಕ್ಕೆ ಹೊಂದಲಾರದ, ಅಥವಾ ಆಗತ್ಯವೆನಿಸದ ಭಾಗ ಗಳನ್ನು ಕೈಬಿಟ್ಟು ಹತ್ತರಲ್ಲಿ ಒಂಬತ್ತೂವರೆಯಷ್ಟು ಮಾತುಗಳನ್ನು ಅವನಿಂದಲೇ ತೆಗೆದುಕೊಂಡು ಸಾಹಸಭೀಮ ವಿಜಯಚಂಪುವನ್ನು ಗದಾಯುದ್ಧ ನಾಟಕವನ್ನಾಗಿಸಿದರು. ಕಥೆಯ ಬೆಳವಣಿಗೆಯ ಕ್ರಮವನ್ನು ಮತ್ತು ಸಂಭಾಷಣೆಗಾಗಿ ಮಾತುಗಳನ್ನು ಕೂಡ ರನ್ನನಿಂದಲೇ ಆಯ್ದುಕೊಂಡರು. ಹಾಗಿದ್ದರೆ ಶ್ರೀಕಂಠಯ್ಯನವರು ಮಾಡಿದ್ದೇನು ಎಂಬ ಪ್ರಶ್ನೆ ತಲೆಯೆತ್ತುತ್ತದೆ. ಕೆಲವೊಂದು ಬದಲಾವಣೆಗಳನ್ನು ಮಾಡಿದ್ದಾರೆ. ಕಾವ್ಯದಲ್ಲಿ ಸನ್ನಿವೇಶವನ್ನು ಮುಂದುವರಿಸಿಕೊಂಡು ಹೋಗಬೇಕಾದಾಗ ಅಥವಾ ಆಗತ್ಯವಾದ ಸೂಚನೆಗಳನ್ನು ಕೊಡುವಾಗ ಕವಿ ಬಳಸಬೇಕಾಗಿದ್ದ ' ಕೊಂಡಿ ' ಮಾತುಗಳನ್ನು ಪಾತ್ರ ಗಳ ಬಾಯಲ್ಲಿ (' ಎಂದು ಪಾಶ್ಚಾತ್ತಾಪಂಗೆಯ್ದು ' ಎಂಬ ಮಾತನ್ನು ' ಪ್ರಿಯ ಮೆನಗೆ ಈ ಪಶ್ಚಾತ್ತಾಪಂ ' ಎಂಬ ರೀತಿಯಲ್ಲಿ) ಹಾಕಿದ್ದಾರೆ. ನಾಟಕದಲ್ಲಿ ಕಾಣಿಸಿ ಕೊಳ್ಳದ ನಕುಲಪಾರ್ಥರ ಮೂದಲಿಕೆಯ ಮಾತುಗಳನ್ನು ಧರ್ಮಪುತ್ರನ ಬಾಯಲ್ಲಿ, ಕವಿ ಹೇಳಬೇಕಾಗಿಬಂದಿದ್ದ ಕೆಲವೊಂದು ಅಂಶಗಳನ್ನು, ಕೃಷ್ಣ, ಅಶ್ವತ್ಥಾಮ, ಧರ್ಮ ರಾಜರ ಬಾಯಲ್ಲಿ ಹಾಕಿದ್ದಾರೆ. ಇಷ್ಟಲ್ಲದೆ ಕೆಲವು ಮಾತುಗಳನ್ನು ತಿದ್ದಿದ್ದಾರೆ. ಕೆಲ ವನ್ನು ಬಿಟ್ಟಿದ್ದಾರೆ. ಇನ್ನು ಕೆಲವು ಮಾತುಗಳನ್ನು ಸೇರಿಸಿದ್ದಾರೆ. ಇಂಥ ಬದಲಾವಣೆ ಗಳು ಹೆಚ್ಚಿಲ್ಲವಾದರೂ ಹೆಚ್ಚಿನ ಪರಿಣಾಮವನ್ನುಂಟುಮಾಡಿವೆ. ಇಂಥವುಗಳಿಂದ ಇಡೀ ನಾಟಕದ ಆಶಯವೇ ಬದಲಾಗುವುದು ಸಾಧ್ಯವಿದೆ. ಇಲ್ಲಿಯ ನಾಟಕದಲ್ಲಿ ಹಾಗಾಗಿದೆ. ಹಾಗಾಗಬೇಕೆಂದೇ ಶ್ರೀಕಂಠಯ್ಯನವರು ಕೆಲವೇ ಆದರೂ ಆಶಯದ ದೃಷ್ಟಿಯಿಂದ ಮಹತ್ವದುವೆನ್ನಬೇಕಾದ, ನಾಟಕದ ಪರಿಣಾಮದ ಸ್ವರೂಪವನ್ನೇ ಬೇರೆಯಾಗಿಸಬಲ್ಲ ಬದಲಾವಣೆಗಳನ್ನು ಮಾಡಿದ್ದಾರೆ. ರನ್ನನ ಕಾವ್ಯದ ಉದ್ದೇಶ ಭೀಮನ ಸಾಹಸದ ಮೂಲಕ ತನ್ನ ದೊರೆಯನ್ನು ಪ್ರಶಂಸೆ ಮಾಡುವುದಾಗಿತ್ತು. ಶ್ರೀಕಂಠಯ್ಯನವರ ನಾಟಕದ ಉದ್ದೇಶ ದುರ್ಯೋಧನನ ಮೂಲಕ ದುರಂತ ಸನ್ನಿವೇಶವೊಂದನ್ನು ಚಿತ್ರಿಸು ವುದಾಗಿತ್ತು. ಆದ್ದರಿಂದ ಅವರು ಮಾಡಿದ ಬದಲಾವಣೆಗಳನ್ನು ಈ ದೃಷ್ಟಿಯಿಂದ

ನೋಡಬೇಕಾಗುತ್ತದೆ. ಉಂಟಾಗುವ ಪರಿಣಾಮಗಳನ್ನು ಪರಿಶೀಲಿಸಬೇಕಾಗುತ್ತದೆ. ಮೊದಲನೆಯದಾಗಿ, ಶ್ರೀಕಂಠಯ್ಯನವರಿಗೆ ಕಾವ್ಯವನ್ನು ನಾಟಕವಾಗಿ ಪರಿವರ್ತಿಸಬೇಕಾಗಿದೆ. ಎರಡನೆಯದಾಗಿ, ಆ ನಾಟಕ ಗ್ರೀಕ ಮಾದರಿಯ ದುರಂತನಾಟಕವಾಗಬೇಕಾಗಿದೆ. ಇದನ್ನು ಅವರು ಹೇಗೆ ಮತ್ತು ಎಷ್ಟರಮಟ್ಟಿಗೆ ಸಾಧಿಸಿದ್ದಾರೆ ಎನ್ನುವುದನ್ನು ತಿಳಿಯಬೇಕಾದರೆ ನಾಟಕದಲ್ಲಿಯ ಕ್ರಿಯೆ ಹೇಗೆ ಬೆಳೆದಿದೆ ಎನ್ನುವುದನ್ನು ಗಮನಿಸಬೇಕಾಗುತ್ತದೆ.

ನಾಟಕದ ಕ್ರಿಯೆಯನ್ನು ಐದು ರಂಗಗಳನ್ನಾಗಿ ವಿಂಗಡಿಸಲಾಗಿದೆ. ಅದು ಬೆಳೆಯುವ ಕ್ರಮ ಕಾವ್ಯದಲ್ಲಿಯದರಿಂದ ಬೇರೆಯಾಗಿಲ್ಲ. ಕೌರವ ಪಾಂಡವರ ಯುದ್ಧ ಹೆಚ್ಚು ಕಡಿಮೆ ಮುಗಿದುಹೋಗಿದೆ. ಕೌರವ ಬಲದ ವೀರ ಸೇನಾನಾಯಕರಾಗಿದ್ದ ದ್ರೋಣ, ಕರ್ಣ, ಶಲ್ಯ ಎಲ್ಲರೂ ಮಡಿದುಹೋಗಿದ್ದಾರೆ. ಎಲ್ಲರಿಗೂ ಹಿರಿಯನಾಗಿದ್ದ ಭೀಷ್ಮ ಶಸ್ತ್ರತ್ಯಾಗ ಮಾಡಿ ಶರಪಂಜರದಲ್ಲಿ ಸಾವಿಗಾಗಿ ಕಾಯುತ್ತಿದ್ದಾನೆ. ಧೃತರಾಷ್ಟ್ರನ ನೂರು ಮಕ್ಕಳಲ್ಲಿ ದುರ್ಯೋಧನನೊಬ್ಬನೆ ಉಳಿದುಕೊಂಡಿದ್ದಾನೆ. ಸೇನಾನಾಯಕನಾಗಬಲ್ಲ ಉಳಿದ ವೀರನೆಂದರೆ ಅಶ್ವತ್ಥಾಮನೊಬ್ಬನೇ. ಯುದ್ಧ ಮುಗಿದಿದ್ದರೂ ದ್ರೌಪದಿಗೆ ಸಮಾಧಾನವಿಲ್ಲ. ಧರ್ಮರಾಯನ ಮಾತು ಕೇಳಿ ಭೀಮ ಎಲ್ಲಿ ದುರ್ಯೋಧನನನ್ನು ಶಿಕ್ಷಿಸದೆ ಬಿಡುತ್ತಾನೆಯೋ ಎಂಬ ಆತಂಕ ಅವಳದಾಗಿದೆ. ತೊಡೆ ತೋರಿಸಿ ತನ್ನನ್ನು ಅವಮಾನಗೊಳಿಸಿದ್ದನ್ನು ಆಕೆ ಮರೆಯುವಂತಿರಲಿಲ್ಲ. ಆ ತೊಡೆಯನ್ನು ಸೀಳುತ್ತೇನೆಂದು ತಾನು ಮಾಡಿದ ಶಪಥವನ್ನು ನಡೆಸುವೆನೆಂದು ದ್ರೌಪದಿಗೆ ಭೀಮ ಆಶ್ವಾಸನ ಹೇಳುತ್ತಾನೆ. ದ್ರೌಪದಿಯಲ್ಲಿಯ ಪ್ರತೀಕಾರದ ಬಯಕೆಯನ್ನು ಕೃಷ್ಣ ಪುರಸ್ಕರಿಸುತ್ತಾನೆ. ಅಂದಿನ ಸೂರ್ಯಾಸ್ತಕ್ಕೆ ಮೊದಲು ಊರುಭಂಗವನ್ನು ಮಾಡದಿದ್ದರೆ ದುರ್ಯೋಧನ ಅಜೇಯನಾಗುತ್ತಾನೆ ಎಂದು ಎಚ್ಚರಿಸುತ್ತಾನೆ. ತನ್ನ ಶಪಥವನ್ನು ಪೂರೈಸುವುದಕ್ಕೆಂದು ಭೀಮ ಹೊರಡುವುದರೊಂದಿಗೆ ಮೊದಲ ರಂಗ ಮುಗಿಯುತ್ತದೆ.

ಎರಡನೆಯ ರಂಗ ಪ್ರಾರಂಭವಾಗುವಾಗ ದ್ರೋಣ ಅಶ್ವತ್ಥಾಮ ಇಬ್ಬರೂ ತನಗೆ ದ್ರೋಹ ಬಗೆದರೆಂದು ದುರ್ಯೋಧನ ಅವರನ್ನು ಹಳಿಯುತ್ತಿರುತ್ತಾನೆ. ಪಾಂಡವರನ್ನು ಕುರಿತು ಸಂಜಯ ಹೇಳಿದ ಒಳ್ಳೆಯ ಮಾತುಗಳು ಧರ್ಮರಾಯ, ಭೀಮ, ಕೃಷ್ಣ, ಎಲ್ಲರ ಮೇಲೂ ತನ್ನ ಆಕ್ರೋಶವನ್ನು ಕಾರುವುದಕ್ಕೆ ಅವಕಾಶವಾಗುತ್ತದೆ. ತನ್ನಿಂದಾದ ಎಲ್ಲ ಅವಮಾನಗಳನ್ನು ಸಹಿಸಿಕೊಂಡಿದ್ದ ಹೇಡಿಗಳು ಅವರೆಂಥ ವೀರರು ಎನ್ನುತ್ತಾನೆ. ಧೃತರಾಷ್ಟ್ರ ಗಾಂಧಾರಿಯರು ಬಂದು ಸಂಧಾನ ಮಾಡಿಕೊಳ್ಳುವುದು ಒಳ್ಳೆಯದೆಂದು ಬೇಡಿಕೊಳ್ಳುತ್ತಾರೆ. ಆದರೆ ದುರ್ಯೋಧನ ಅವರ ಮಾತನ್ನು ಒಪ್ಪದೆ ಭೀಷ್ಮ ಹೇಳಿದ ಹಾಗೆ ನಡೆದುಕೊಳ್ಳುವೆನೆಂದು ಮಾತುಕೊಡುತ್ತಾನೆ.

ಮೂರನೆಯ ರಂಗ ದುರ್ಯೋಧನ ಭೀಷ್ಮನನ್ನು ಕಾಣುವುದಕ್ಕೆ ಹೊರಟಂತೆ ಪ್ರಾರಂಭವಾಗುತ್ತದೆ. ದಾರಿಯಲ್ಲಿ ರಣಾಂಗಣದಲ್ಲಿಯ ಹೆಣಗಳನ್ನು ಮೇಯುತ್ತಿದ್ದ

ಮೂರು ಮರುಳುಗಳು ಎದುರಾಗಿ ಆತನ ಹಿಂದಿನ ಪಾಪಗಳೆಲ್ಲವನ್ನು ನೆನಪಿಸಿಕೊಟ್ಟು ಅಂದೇ ಸಾಯಂಕಾಲ ಆತನ ಕೊನೆ ಎಂಬ ಸೂಚನೆಯನ್ನು ಕೊಡುತ್ತವೆ. ಯುದ್ಧರಂಗದಲ್ಲಿ ಬಿದ್ದಿದ್ದ ಕರ್ಣ ದುಶ್ಶಾಸನರ ಮೃತ ದೇಹಗಳನ್ನು ಕಂಡು ದುರ್ಯೋಧನ ಪರಿತಪಿಸುತ್ತಾನೆ. ತನ್ನ ನೋವು ನಷ್ಟಗಳನ್ನು ಪರಿಪರಿಯಾಗಿ ಹೇಳಿಕೊಳ್ಳುತ್ತಾನೆ. ಅಭಿಮನ್ಯುವಿನ ದೇಹವನ್ನು ಕಂಡಾಗ ಆತನ ವೀರವನ್ನು ಕೊಂಡಾಡುತ್ತಾನೆ. ಭೀಷ್ಮನಾದರೂ ಸಂಧಾನ ಮಾಡಿಕೊಳ್ಳುವುದು ಒಳ್ಳೆಯದೆಂದು ಹೇಳುತ್ತಾನೆ. ದುರ್ಯೋಧನ ಒಪ್ಪದಿದ್ದಾಗ, ಮರುದಿನ ಬಲರಾಮ ಬರುತ್ತಾನೆ, ಅಲ್ಲಿಯವರೆಗೆ ಕಾಯುತ್ತಿರು ; ಆ ಒಂದು ದಿನದ ಮಟ್ಟಿಗೆ ಮೈತ್ರೇಯರ ಶಾಪದ ಗಂಡವಿದೆಯಾದ್ದರಿಂದ ವೈಶಂಪಾಯನ ಸರೋವರದಲ್ಲಿ ಅಂದಿನ ರಾತ್ರಿ ಮುಗಿಯುವವರೆಗೆ ಅಡಗಿಕೊಂಡಿರಬೇಕೆಂದು ಹೇಳುತ್ತಾನೆ. ಅಲ್ಲಿಗೆ ಮೂರನೆಯ ರಂಗ ಮುಗಿಯುತ್ತದೆ. ನಾಲ್ಕನೆಯ ರಂಗ ಒಂದು ತೀರ ಚಿಕ್ಕದಾದ ದೃಶ್ಯ. ಕೃಷ್ಣ ಮತ್ತು ಭೀಮ ದುರ್ಯೋಧನನನ್ನು ಹುಡುಕಿಕೊಂಡು ಹೊರಟಿದ್ದಾರೆ. ಸೂರ್ಯಾಸ್ತ ಸಮೀಪಿಸುತ್ತಿದೆ ಎಂದು ಕೃಷ್ಣ ಅವಸರಿಸುತ್ತಾನೆ.

ಕೊನೆಯ ರಂಗ ನಾಟಕದ ಕೇಂದ್ರ ಸನ್ನಿವೇಶ. ಸರೋವರದಲ್ಲಿ ಅಡಗಿಕೊಂಡಿದ್ದ ದುರ್ಯೋಧನ ಭೀಮನ ಮೂದಲಿಕೆಯನ್ನು ತಡೆಯಲಾಗದೆ ಹೊರಬರುತ್ತಾನೆ. ಗದಾಯುದ್ಧ ಪ್ರಾರಂಭವಾಗುತ್ತದೆ. ಭೀಮ ಬಿದ್ದಾಗ ದುರ್ಯೋಧನ ತಡೆಯುತ್ತಾನೆ. ನೆಲಕ್ಕೆ ಬಿದ್ದವನನ್ನು ಹೊಡೆಯುವುದು ಧರ್ಮವಲ್ಲ ಎಂದು ತನ್ನ ಗದೆಯಿಂದ ಗಾಳಿ ಬೀಸಿ ಆತ ಚೇತರಿಸಿಕೊಳ್ಳುವಂತೆ ಮಾಡುತ್ತಾನೆ. ಮತ್ತೆ ಯುದ್ಧ ಪ್ರಾರಂಭವಾದಾಗ ಕೃಷ್ಣ ಭೀಮನಿಗೆ ಆತನ ಪ್ರತಿಜ್ಞೆಯನ್ನು ನೆನಪಿಗೆ ತಂದುಕೊಡುತ್ತಾನೆ. ತೊಡೆಯ ಮೇಲೆ ಗದೆಯ ಏಟನ್ನು ಇಟ್ಟಾಗ ದುರ್ಯೋಧನ ನೆಲಕ್ಕೆ ಬೀಳುತ್ತಾನೆ. ಬಿದ್ದ ಆತನನ್ನು, ಆತನ ರಾಜಮುಕುಟವನ್ನು, ಭೀಮ ಒದೆಯುತ್ತಾನೆ. ಇದು ನ್ಯಾಯವಲ್ಲ ಎಂದು ತಿಳಿದ ಧರ್ಮರಾಜ ಭೀಮನ ತಲೆಯ ಮೇಲೆ ಸೇಡುಮಾರಿಗಳು ಸುಳಿಯುತ್ತಿದ್ದುದನ್ನು ಕಾಣುತ್ತಾನೆ. ಅವುಗಳಿಂದ ಆಗಬಹುದಾದ ಅಪಾಯವನ್ನು ಶಿವನ ಆರಾಧನೆಯಿಂದ ತಪ್ಪಿಸಿಕೊಳ್ಳುವುದಕ್ಕೆಂದು ಎಲ್ಲರೂ ನೀಲಾಚಲಕ್ಕೆ ತೆರಳುತ್ತಾರೆ.

ಇಲ್ಲಿಗೆ ನಾಟಕ ಮುಗಿಯಬಹುದಾಗಿತ್ತು. ಮುಗಿದಿದ್ದರೆ ಚೆನ್ನಾಗಿತ್ತು.

ಸಾಯುವುದರಲ್ಲಿದ್ದ ದುರ್ಯೋಧನನಿದ್ದಲ್ಲಿಗೆ ಅಶ್ವತ್ಥಾಮ ಲಕ್ಷ್ಮಿಯನ್ನು ಮೂದಲಿಸುತ್ತ ಎಳೆದುಕೊಂಡು ಬರುತ್ತಾನೆ. ಭೀಮನ ತಲೆಯನ್ನು ತಂದುದನ್ನು ಕಣ್ಣಾರೆ ನೋಡದೆ ಸಾಯಲಾರೆ ಎಂದು ದುರ್ಯೋಧನ ಹೇಳಿದಾಗ ಪ್ರಭುವಿಗೆ ಕೊನೆಯ ಸೇವೆಯೆಂದು ಅದು ಯಾವ ಮಹತ್ಕಾರ್ಯ ಎಂದು ಹೇಳಿಕೊಂಡು ಹೋಗುತ್ತಾನೆ. ಕ್ಷಣಾರ್ಧದಲ್ಲಿ ಐವರು ಪಾಂಡವರ ತಲೆಗಳನ್ನು ತಂದೆನೆಂದು ಅವನ ಕಾಲಮೇಲೆ ಉಪಪಾಂಡವರ ತಲೆಗಳನ್ನು ಹಾಕುತ್ತಾನೆ. ಅವನ್ನು ನೋಡಿದ ದುರ್ಯೋಧನ ನಿಜವನ್ನು

ತಿಳಿದು ಎಸಗಿದ್ದ ಅಪಕೃತ್ಯಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊ, "ಇದೆಲ್ಲ ಕೃಷ್ಣನ ಮಾಯೆ, ದೈವದ ಮುಂದೆ ನಾವಲ್ತು" ಎಂದು ಹೇಳಿ ಆಸುನೀಗುತ್ತಾನೆ.

***

ನಾಟಕದ ಕ್ರಿಯೆ ಕಾವ್ಯದಲ್ಲಿಯ ವಿನ್ಯಾಸವನ್ನೇ ಪೂರ್ತಿಯಾಗಿ ಅನುಸರಿಸುತ್ತದೆ. ಆದ್ದರಿಂದ ಇಲ್ಲಿಯ ಸಂವಿಧಾನದ ಶ್ರೇಯಸ್ಸು ರನ್ನನಿಗೆಯೆ ಸಲ್ಲುತ್ತದೆ. ರನ್ನನ ಮಾತು ಗಳನ್ನೇ ಉದ್ದಕ್ಕೂ ಬಳಸಿರುವುದರಿಂದ ಭಾವದ ಒಂದು ಉನ್ನತ ಮಟ್ಟದಲ್ಲಿ ನಡೆಯುವ ಸಂಭಾಷಣೆಗಳ ಶೈಲಿಯ ಶ್ರೇಯಸ್ಸಾದರೂ ಮೂಲದ ಕವಿಗೇ ಸಲ್ಲುತ್ತದೆ. ಕ್ರಿಯೆಯ ಈ ವಿನ್ಯಾಸದಲ್ಲಿ ಗ್ರೀಕ್ ರುದ್ರ ನಾಟಕದಂಥ ರಚನೆ ಶ್ರೀಕಂಠಯ್ಯನವರಿಗೆ ಗೋಚರಿ ಸಿರಬೇಕು. ಗ್ರೀಕ್ ನಾಟಕಗಳ ವಿಶಿಷ್ಟ ಲಕ್ಷಣಗಳಾದ ಸ್ಥಳ ಕಾಲ ಕ್ರಿಯೆಗಳ ಐಕ್ಯ ; ಒಂದೊಂದೇ ಗುಣ ವಿಶೇಷಗಳನ್ನು ಎತ್ತಿ ತೋರಿಸುವ ಪಾತ್ರ ಪೋಷಣೆಯ ರೀತಿ ; ಕೇಂದ್ರ ಪಾತ್ರ ದೈವಹತವಾಗಿ ಕೊನೆಗಾಣುವ ದುರಂತ ; ಒಂದು ಬಗೆಯ ಶಾಂತಿಯಲ್ಲಿ ನಾಟಕ ಮುಕ್ತಾಯವಾದರೂ ಸೇಡಿನ ಕೇಡನ್ನು ಎಸಗಿದವ ತನ್ನ ತಲೆಯ ಮೇಲೆ ಸೇಡು ಮಾರಿಗಳ ಕೋಪವನ್ನು ತಂದು ಕೊಳ್ಳುವುದು, ಇವೆಲ್ಲವೂ ಇಲ್ಲಿವೆ. ಮೊದಲಿನಿಂದ ಕೊನೆಯವರೆಗೆ ಕ್ರಿಯೆ ಕುರುಕ್ಷೇತ್ರದ ರಣಭೂಮಿಯ ಮೇಲೆಯೇ ನಡೆಯುತ್ತದೆ. ಕ್ರಿಯೆಯ ಕಾಲ ಹೆಚ್ಚೆಂದರೆ ಅರ್ಧ ದಿವಸ. ಮೊದಲಾದ ಕ್ರಿಯೆ ಸ್ಥಳಾಂತರವಿಲ್ಲದೆ, ಕಾಲಾಂತರವಿಲ್ಲದೆ ಮುಂದುವರಿದು ತನ್ನ ಪರಾಕಾಷ್ಠೆಯ ಕೊನೆಯನ್ನು ತಲಪುತ್ತದೆ. ಪಾತ್ರಗಳೆಲ್ಲವೂ ಒಂದೊಂದು ಗುಣದ ಪ್ರತೀಕಗಳಂತಿವೆ. ಧರ್ಮರಾಯನಲ್ಲಿ ಕ್ಷಮೆ, ದ್ರೌಪದಿಯಲ್ಲಿ ಪ್ರತೀಕಾರ ಬುದ್ಧಿ, ಭೀಮನಲ್ಲಿ ರೌದ್ರ, ದುರ್ಯೋಧನನಲ್ಲಿ ಅಭಿಮಾನ, ಕೃಷ್ಣನಲ್ಲಿ ಪಾಂಡವರ ಪಕ್ಷಪಾತ ; ಈ ಒಂದೊಂದು ಗುಣಗಳನ್ನಲ್ಲದೆ ಆಯಾಯ ಪಾತ್ರ ಗಳಲ್ಲಿ ಬೇರೆ ಯಾವುದನ್ನೂ ನಾವು ಕಾಣುವುದಿಲ್ಲ. ದುರ್ಯೋಧನನ ಅಹಂಕಾರದ ಮದ ಆತನನ್ನು ಮುರಿದು ದುರಂತಕ್ಕೀಡು ಮಾಡುತ್ತದೆ. ಸಮರಜಯ ದೈವಾಯತ್ತ, ದೈವದ ಮುಂದೆ ನಾವಲ್ತು ಎಂಬ ಮಾತುಗಳಲ್ಲಿ ದೈವದ ಆಧಿಪತ್ಯ ನಾಟಕದುದ್ದಕ್ಕೂ ನಡೆಯುತ್ತಿರುವುದು ವ್ಯಕ್ತವಾಗುತ್ತದೆ. ತನ್ನ ಪ್ರತೀಕಾರ ಬುದ್ಧಿಗಾಗಿ ಭೀಮ ಸೇಡು ಮಾರಿಯರನ್ನು ಎದುರಿಸಬೇಕು. ಇಲ್ಲವೆ ಅವರನ್ನು ಸಂತೈಸಬೇಕು ; ತನ್ನ ಅಪಕೃತ್ಯ ಕ್ಕಾಗಿ ಅಶ್ವತ್ಥಾಮ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಶ್ರೀಕಂಠಯ್ಯನವರು ನಾಟಕದಲ್ಲಿ ಮೇಳವೊಂದನ್ನು ಸೇರಿಸಿಬಿಟ್ಟಿದ್ದರೆ, ಮತ್ತು ಸಾವಿನ ದುರಂತ ರಂಗಸ್ಥಳದಾಚೆಯಲ್ಲಿ ನಡೆಯುವಂತೆ ಮಾಡಿ ದುರ್ಯೋಧನನನ್ನು ಪೂರ್ತಿಯಾಗಿ ದುರಂತನಾಯಕನನ್ನಾಗಿಸಿದ್ದರೆ, ಗದಾಯುದ್ಧನಾಟಕ ಯಾವ ಒಂದಂಶದಲ್ಲಿಯೂ ಬೇರೆಯಾಗಿರದ ಗ್ರೀಕ್ ಮಾದರಿಯ ದುರಂತ ನಾಟಕವಾಗುತ್ತಿತ್ತು. ಮೊದಲನೆಯದನ್ನು ಶ್ರೀಕಂಠಯ್ಯನವರು ಮಾಡಬಹು

ದಿತ್ತು. ಆದರೆ ಆವರು ಮನಸ್ಸು ಮಾಡಲಿಲ್ಲ. ಎರಡನೆಯದನ್ನು ಮಾಡುವುದು ಅಸಾಧ್ಯ ವಿದ್ದಿತು. ಊರುಭಂಗದಲ್ಲಿ ಕೊನೆಗೊಳ್ಳಬೇಕಾದ ಗದಾಯುದ್ಧವೇ ನಾಟಕದ ಪರಕಾಷ್ಠೆ ಯಾಗಿರುವಾಗ, ಅದೇ ನಾಟಕ ಹೃದ್ಭಾಗವಾಗಿದ್ದಾಗ, ಆದನ್ನು ನಾಟಕದ ಹೊರಗಿರಿಸಿ ದ್ದರೆ ನಾಟಕದಲ್ಲಿ ಏನೊಂದೂ ಉಳಿಯುತ್ತಿರಲಿಲ್ಲ. ಮೂರನೆಯದನ್ನು, ಅಂದರೆ ದುರ್ಯೋಧನನನ್ನು ದುರಂತ ನಾಯಕನನ್ನಾಗಿ ಚಿತ್ರಿಸುವ ಯತ್ನವನ್ನು, ಶ್ರೀಕಂಠಯ್ಯ ನವರು ಮಾಡಿದ್ದಾರೆ. ಪ್ರಯತ್ನ ಎಷ್ಟರಮಟ್ಟಿಗೆ ಫಲಿಸಿದೆ ಎನ್ನುವುದೇ ಈ ನಾಟಕದ ವಿಮರ್ಶೆಯಲ್ಲಿ ಪರ್ಯಾಲೋಚಿಸಬೇಕಾದ ಮುಖ್ಯ ವಿಷಯವಾಗಿದೆ.

ನಾಟಕದಲ್ಲಿ ದುರ್ಯೋಧನ ದುರಂತನಾಯಕನಾಗಿ ಚಿತ್ರಿಸಲ್ಪಟ್ಟಿದ್ದಾನೆಯೆ ? ಎಂಬ ಪ್ರಶ್ನೆಗೆ ಉತ್ತರ ಹೇಳುವ ಮೊದಲು ನಾಟಕದಲ್ಲಿ ನಾಯಕಪಟ್ಟ ಯಾರದು ? ಭೀಮನದೊ, ಅವನದೊ, ಎಂಬ ಪ್ರಶ್ನೆಗೆ ಉತ್ತರ ಹೇಳಬೇಕಾಗುತ್ತದೆ. ರನ್ನನ ಕಾವ್ಯ ದಲ್ಲಿ ಇಂಥ ಪ್ರಶ್ನೆಗೆ ಅವಕಾಶವೇ ಇಲ್ಲ. "ಸತ್ಯಾಶ್ರಯದೇವನೆ ಪೃಥ್ವೀವಲ್ಲಭಂ ಕಥಾನಾಯಕನಾಗನಿಲಜನೋಳ್ಪೋಲಿಸಿ ಪೇಳ್ದನೀ ಗದಾಯುದ್ಧಮಂ ಮಹಾಕವಿ ರನ್ನಂ" ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾನೆ. ಕಾವ್ಯವನ್ನು ಉದ್ದಕ್ಕೂ ಅನುಸರಿಸಿಕೊಂಡು ಹೋಗಿರುವ ನಾಟಕದ ವಿಚಾರದಲ್ಲಿಯೂ ಇದೇ ಮಾತನ್ನು—ಭೀಮನೆ ನಾಯಕ ಎಂದು —ಹೇಳುವುದಾದರೆ ನಾಟಕದಲ್ಲಿ ದುರ್ಯೋಧನನಿಗೆ ಯಾವ ಸ್ಥಾನ? ಭೀಮನೇ ನಾಯಕ ಎನ್ನುವುದಾದರೆ ದುರ್ಯೋಧನ ಒಂದು ಎದುರು ಪಾತ್ರವಾಗಿ, ನಾಯಕನ ಹಿರಿಮೆ ಯನ್ನು ಸ್ಥಾಪಿಸುವ ಒಂದು ಸಾಧನಮಾತ್ರವಾಗಿ ನಿಲ್ಲಬೇಕಾಗುತ್ತದೆ. ಆ ಸಂದರ್ಭದಲ್ಲಿ ಆತನನ್ನು ದುರಂತ 'ನಾಯಕ' ಎನ್ನುವುದಕ್ಕೆ ಅವಕಾಶವೇ ಉಳಿಯುವುದಿಲ್ಲ. ಆದರೆ ಈಗಿದ್ದಂತೆ ನಾಟಕದ ಕ್ರಿಯೆ ಮೊದಲಿನಿಂದ ಕೊನೆಯವರೆಗೆ ಭೀಮನ ಮೂಲಕವೇ ನಡೆಯುತ್ತದೆ. ಊರುಭಂಗದ ಪ್ರತಿಜ್ಞೆಯನ್ನು ಮಾಡಿದವನು ಅವನು. ಅದನ್ನು ಈಡೇರಿಸುವವನೂ ಅವನೇ. ಆತನ ಪ್ರತಿಜ್ಞೆಯ ಈಡೇರಿಕೆಯೇ ನಾಟಕಕ್ರಿಯೆಯ ಕೇಂದ್ರವಾಗಿರುವಾಗ ಆತನನ್ನು ನಾಯಕಪಟ್ಟದಿಂದ ಪದಚ್ಯುತಗೊಳಿಸುವುದು ಸಾಧ್ಯವಿಲ್ಲ ವಾಗುತ್ತದೆ. ಅನಿವಾರ್ಯವಾಗಿ ದುರ್ಯೋಧನ ನಾಟಕದ ದುರಂತನಾಯಕನಾಗುವ ಬದಲು ಒಂದು ದುರಂತಪಾತ್ರವಾಗಬೇಕಾಗುತ್ತದೆ. ಆವಾಗ ನಾಟಕಕಾರರಿಗೆ ಯಾವುದು ಮುಖ್ಯ ? ಭೀಮನ ಗೆಲವೋ, ದುರ್ಯೋಧನನ ಸೋಲೋ, ಎಂಬ ಪ್ರಶ್ನೆಗೆ ಅವಕಾಶ ಉಂಟಾಗುತ್ತದೆ. ಶ್ರೀಕಂಠಯ್ಯನವರು ಈ ಪ್ರಶ್ನೆಯನ್ನು ಎದುರಿಸಿದ್ದಾರೆ. ಅವರ ದೃಷ್ಟಿಯಲ್ಲಿ, ಭೀಮನ ಗೆಲವನ್ನು ಅಲ್ಲಗಳೆಯುವ ಹಾಗಿರಲಿಲ್ಲವಾದರೂ ಆತನ ಗೆಲವಿ ಗಿಂತ ದುರ್ಯೋಧನನ ದುರಂತವೇ ದೊಡ್ಡದಾಗಿ ಕಂಡಿದೆ. ಆದ್ದರಿಂದ ತಾಂತ್ರಿಕವಾಗಿ ನಾಯಕಪಟ್ಟ ಆತನಿಗಿಲ್ಲದಿದ್ದರೂ ನಾಯಕಪಟ್ಟಕ್ಕೆ ಸರಿಸಮನಾದ, ಒಂದು ತೂಕ ಹೆಚ್ಚೆಂದರೂ ಆದೀತು, ಘನತೆಯನ್ನು ಆತನಿಗೆ ಆರೋಪಿಸಿದ್ದಾರೆ. ದುರ್ಯೋಧನನ

ಪಾತ್ರವನ್ನು ಹೀಗೆ ಎತ್ತರಿಸಬೇಕೆಂದಾಗ ಭೀಮನ ಪಾತ್ರವನ್ನು ಕೆಲಮಟ್ಟಿಗಾದರೂ ಕೆಳಕ್ಕಿಳಿಸಬೇಕಾಗುತ್ತದೆ. ದುರ್ಯೋಧನನಿಗಾಗಿ ಭೀಮನನ್ನು ಒಂದಿಷ್ಟು ಕೆಳಗಿಳಿಸಿಯೂ ಇದ್ದಾರೆ.

ನಾಟಕದಲ್ಲಿ ನಾಯಕನ ಪಟ್ಟ ಇರಲಿ, ಇರದಿರಲಿ. ಪ್ರತಿನಾಯಕನ ಪಟ್ಟವಾದರೂ ಆತನಿಗಿದೆ. ಅದು ಹೇಗಿದ್ದರೂ ನಾಟಕದಲ್ಲಿಯ ದುರ್ಯೋಧನನನ್ನು ಶ್ರೀಕಂಠಯ್ಯ ನವರು ಒಂದು ದುರಂತ ಪಾತ್ರವೆಂಬ ದೃಷ್ಟಿಯಿಂದ ಕಂಡಿದ್ದಾರೆ ಎನ್ನುವುದಂತೂ ನಿಶ್ಚಿತ. ಆದ್ದರಿಂದ ಅಂಥ ಪಾತ್ರಕ್ಕೆ ಉಚಿತವಾದ, ಅಂಥ ಪಾತ್ರದಲ್ಲಿ ಇರಲೇಬೇಕಾದ, ಲಕ್ಷಣಗಳನ್ನು ದುರ್ಯೋಧನನಲ್ಲಿ ನಾವು ಎಷ್ಟರ ಮಟ್ಟಿಗೆ ಕಾಣಬಹುದು ಎಂಬ ಪ್ರಶ್ನೆ ಮಹತ್ವದ್ದಾಗುತ್ತದೆ. ದುರಂತನಾಟಕ ಘನವಾದ ಒಂದು ಸ್ಥಾನದಲ್ಲಿದ್ದವನ ಪತನವನ್ನು ಚಿತ್ರಿಸುತ್ತದೆ. ಇಂಥ ಪತನಕ್ಕೆ ಪ್ರತಿಕೂಲ ದೈವವೊ, ಸ್ವಭಾವದಲ್ಲಿಯ ದೋಷವೊ, ಅಥವಾ ಅಕಲ್ಪಿತವಾಗಿ ಮಾಡಿದ ಒಂದು ಪ್ರಮಾದವೊ ಕಾರಣವಾಗಿರುತ್ತದೆ. ದುರಂತ ಕ್ಕೀಡಾಗುವ ಪಾತ್ರದಲ್ಲಿ ಸಹಾನುಭೂತಿಯನ್ನು ಪಡೆಯಬಲ್ಲ ಒಳ್ಳೆಯದು ಇದ್ದಹಾಗೆ ಪಾಲಿಗೆ ಬಂದ ದುಃಖಕ್ಕೆ ಆತನನ್ನು ಕೆಲಮಟ್ಟಿಗಾದರೂ ಅರ್ಹನನ್ನಾಗಿಸುವ ಒಳ್ಳೆಯ ದಲ್ಲದ್ದೂ ಇರುತ್ತದೆ. ಪ್ರತಿಕೂಲ ದೈವವೊಂದೇ ದುರಂತಕ್ಕೆ ಕಾರಣವಾದಾಗ ದುಃಖ ಕ್ಕೀಡಾಗುವವನ ಹೊಣೆಗಾರಿಕೆ ತಪ್ಪುತ್ತದೆ. ಹೊಣೆಗಾರನಾಗಿದ್ದರೂ ಆತನ ಬಗ್ಗೆ ಕನಿಕರವನ್ನೂ ಗೌರವವನ್ನೂ ಹುಟ್ಟಿಸುವಂಥ ಯಾವುದಾದರೊಂದು ಗುಣವಿಶೇಷ, ಒಂದಿಲ್ಲೊಂದು ಬಗೆಯ ಔನ್ನತ್ಯ ಆತನಲ್ಲಿ ಇರಬೇಕಾಗುತ್ತದೆ. ಒಟ್ಟಿನಲ್ಲಿ ''ಇಂಥವನಿಗೆ ಹೀಗಾಗಬಾರದಾಗಿತ್ತು'' ಎಂಬ ಕನಿಕರ ಮೂಡುವುದರ ಜೊತೆಗೆ '' ಎಂಥವನಿಗೆ ಯಾವ ಗತಿಯಾಯಿತು ? ಇಂಥವನಿಗೇ ಈ ಗತಿಯಾದರೆ ನಮ್ಮಂಥವರ ಪಾಡೇನು '' ಎಂಬ ಒಂದು ಬಗೆಯ ಅಸ್ಪಷ್ಟ ಭಯವೂ ದುರಂತ ಪಾತ್ರದ ದುರ್ಗತಿಯನ್ನು ನೆನೆದಾಗ (ಅಥವಾ ನಾಟಕದಲ್ಲಿ ಕಣ್ಣೆದುರು ಕಂಡಾಗ) ಮೂಡುತ್ತದೆ. ಈ ಅಳತೆಯನ್ನು ಮನಸ್ಸಿನಲ್ಲಿರಿಸಿ ಕೊಂಡು ದುರ್ಯೋಧನನ ನಡೆನುಡಿಗಳನ್ನು ಪರೀಕ್ಷಿಸಿದಾಗ ಆತ ಒಂದು ದುರಂತ ಪಾತ್ರವಾಗಿ ಕಾಣುತ್ತಾನೆಯೆ? ದುರಂತ ನಾಯಕನ ಪಟ್ಟವನ್ನು ಕೊಡಬೇಕೆಂದರೂ ಅದು ಆತನಿಗೆ ಸಲ್ಲುತ್ತದೆಯೆ ?

ರನ್ನನಿಗೆ ಭೀಮ ನಾಯಕ. ಆದರೂ ದುರ್ಯೋಧನನ ವಿಷಯದಲ್ಲಿ ಆತನಲ್ಲಿ ಸಹಾನುಭೂತಿ ಇದೆ. ಅದು ನಾಟಕದಲ್ಲಿಯೂ ಉಳಿದು ಬಂದಿದೆ. ನಾಟಕ ದುರ್ಯೋಧನನಿಗೆ ಹೆಚ್ಚಿನ ಮನ್ನಣೆಯನ್ನು ತಂದು ಕೊಡುವ ಯತ್ನವನ್ನು ಮಾಡಿದೆ. ಭೀಮನಿಗಿಂತ ಹೆಚ್ಚಾಗಿ ರಂಗಸ್ಥಳದ ಮೇಲೆ ಅವನೇ ಕಾಣಿಸಿಕೊಳ್ಳುತ್ತಾನೆ. ಉನ್ನತಸ್ಥಾನದಿಂದ ಪತನ ಹೊಂದುವವನೂ ಅವನೇ. ಅದು ಕೂಡ ತನ್ನಲ್ಲಿಯ ಒಂದು ಸ್ವಭಾವದೋಷದ ಪರಿಣಾಮವಾಗಿ. ಪ್ರತಿಕೂಲ ದೈವದ ಹೊಡೆತಕ್ಕೆ ಸಿಕ್ಕಿ ಸಾವುಸಂಕಟಗಳಿಗೆ ಈಡಾಗು

ವವನಾದರೂ ಅವನೇ. ಅಲ್ಲದೆ ತನ್ನ ವಿಪತ್ತಿಗೆ ತಾನೇ ಕಾರಣವಾಗುತ್ತಾನೆ. ದೈವವಾದರೂ ಮನುಷ್ಯನ ಮುಖಾಂತರವೇ ಕಾರ್ಯಗತವಾಗಬೇಕು. ದುರ್ಯೋಧನನಲ್ಲಿ ಪ್ರತಿಕೂಲ ದೈವವೆನ್ನಬೇಕಾದದ್ದಾದರೂ ಆತನ ಕೃತಿಯ ಪರಿಣಾಮವಾಗಿಯೇ ರೂಪುಗೊಂಡಿದೆ. ತನ್ನ ಹೆಮ್ಮೆಯನ್ನು ಕೊಚ್ಚಿಕೊಂಡು ಮೈತ್ರೇಯರ ಎದುರಿಗೆ ತೊಡೆಯನ್ನು ತಟ್ಟಿಕೊಂಡದ್ದಕ್ಕಾಗಿಯೇ ಅವರು ಆ ತೊಡೆಯೇ ಮುರಿಯಲಿ ಎಂದು ಶಾಪ ಕೊಟ್ಟಿದ್ದರು. ಇವೆಲ್ಲವೂ ಕೆಲಮಟ್ಟಿಗೆ ಆತನನ್ನು ದುರಂತ ಪಾತ್ರವನ್ನಾಗಿ ಮಾಡುತ್ತವೆ. ಆತನ ಬಗೆಯಲ್ಲಿ ಕನಿಕರ ಮೂಡುವಂತೆ ಮಾಡುತ್ತವೆ. ಆದರೆ ದುರಂತ ನಾಯಕನಲ್ಲಿರಬೇಕಾದ ಔನ್ನತ್ಯ. ಒಳ್ಳೆಯದೋ ಕೆಟ್ಟದ್ದೋ ಆದ ಒಂದು ಹಿರಿಯ ಸತ್ವ, ಆತನಲ್ಲಿದೆಯೆ ? ನಾಟಕ ಕ್ರಿಯೆಯನ್ನು ಮುನ್ನಡೆಸುವ ಅಂತಶ್ಶಕ್ತಿ ಎಂಥದಾದರೂ ಆತನಲ್ಲಿದೆಯೆ ?"

ಆತ ಕುರುಕುಲಾರ್ಕ. ಕೌರವರ ಚಕ್ರವರ್ತಿ. ಸಕಲ ಧರಿತ್ರೀಕಾಂತ. ಅಂಥ ಘನತೆ ಆತನದಿದೆ. ನಿಜ. ಆದರೆ ಅದು ಎಕ್ಸ್ ಆಫೀಶಿಯೋ ಘನತೆ, ಸ್ಥಾನದಿಂದ ಬಂದ ಮಾನ. ಅಂಥ ಸ್ಥಾನದಲ್ಲಿದ್ದುಕೊಂಡು ಘನವಾದ ಏನನ್ನೂ ಮಾಡಿದವನಲ್ಲ ಆತ. ಅಲ್ಲಿದ್ದುಕೊಂಡು ಮಾಡಿದ್ದು ಒಂದೇ—ಪಾಂಡವರ ಅವಮಾನ, ಅವರೊಡನೆ ದ್ವೇಷ, ಯುದ್ಧ. ಆತನಲ್ಲಿಯ ಛಲ, ಏನೇ ಆದರೂ ಪಾಂಡವರೊಡನೆ ಸಂಧಾನ ಮಾಡಿಕೊಳ್ಳುವುದಿಲ್ಲ ಎನ್ನುವ ಅಚಲ ನಿಶ್ಚಯ, ಆತನ ಅಪ್ರತಿಮ ಧೈರ್ಯಕ್ಕೊಂದು ಸಾಕ್ಷಿಯಾದರೂ ಆ ಛಲವಾಗಲಿ, ಆ ಧೈರ್ಯವಾಗಲಿ ಆತನನ್ನು ಯಾವ ಒಂದು ಕೃತಿಯತ್ತ ನಡೆಸುವುದಿಲ್ಲ. ಒಂದೆರಡು ಸಂದರ್ಭಗಳಲ್ಲಿ ಕೆಚ್ಚಿನ ಮಾತುಗಳು ಆತನ ಬಾಯಿಂದ ಹೊರಬರುತ್ತವೆಯಾದರೂ ನಾಟಕದ ಉದ್ದಕ್ಕೂ ಆತ ತೊಡಗಿರುವುದು ಕರ್ಣದುಶ್ಶಾಸನರ ಮರಣಕ್ಕಾಗಿ ಶೋಕದಲ್ಲಿ, ಆತ್ಮಾನುಕಂಪದಲ್ಲಿ, ದ್ರೋಣ ಅಶ್ವತ್ಥಾಮರನ್ನು ಮೊದಲ್ಗೊಂಡು, ಪಾಂಡವರನ್ನು, ಕೃಷ್ಣನನ್ನು ಹಳಿಯುವುದರಲ್ಲಿ. ಈ ಯಾವುದೂ ಆತನ ಸ್ವಭಾವಕ್ಕೆ ಉನ್ನತಿಯನ್ನು ತಂದು ಕೊಡುವಂಥದಲ್ಲ. ಅರಸೊತ್ತಿಗೆಯ ವೈಭವ ಅಳಿದಾಗ ಆತನ ಸ್ಥಿತಿ ಕರುಣಾಸ್ಪದವಾಗುತ್ತದೆ. ಕರ್ಣದುಶ್ಶಾಸನರಲ್ಲಿ ಆತನಿಗೆ ಅಪಾರವಾದ ಪ್ರೀತಿ ಇದೆ. ಅವರಿಲ್ಲದ ಪ್ರಪಂಚ ಶೂನ್ಯವಾಗಿ ಕಾಣುತ್ತದೆ. ಅಭಿಮನ್ಯುವಿನ ವೀರಕ್ಕೆ ಗೌರವ ತೋರುವ ಔದಾರ್ಯವೂ ಆತನಲ್ಲಿದೆ. ಕೊನೆಯಲ್ಲಿ ಅಶ್ವತ್ಥಾಮ ಎಸಗಿದ್ದು ಅಪಕೃತ್ಯ, ಅದಕ್ಕಾಗಿ ಪ್ರಾಯಶ್ಚಿತ್ತವಾಗಬೇಕು ಎಂಬ ಪಶ್ಚಾತ್ತಾಪವಿದೆ. ಇದೆಲ್ಲ ದೈವದಾಟ ಎಂದು ತಡವಾಗಿಯಾದರೂ ಒಪ್ಪಿಕೊಳ್ಳುವ ವಿವೇಕವೂ ಇದೆ. ಆದರೆ ಇವೆಲ್ಲವೂ ಸಾಮಾನ್ಯ ಗುಣಗಳು. ಅಸಾಮಾನ್ಯತೆಯ ಎತ್ತರಕ್ಕೇರಿಸಬಲ್ಲವುಗಳಲ್ಲ. ಇವೆಲ್ಲವೂ ಸೇರಿ ಆತನ ದುರ್ದೆಸೆಯನ್ನು ಕಂಡಾಗ ದುರ್ಯೋಧನನ ಬಗೆಯಲ್ಲಿ ಕನಿಕರವನ್ನು ಉಂಟುಮಾಡುತ್ತವೆಯೇ ಹೊರತು ಆತ ಒಬ್ಬ ಘನವಂತ, ಉನ್ನತ ವ್ಯಕ್ತಿ ಎಂಬ ಭಾವನೆಯನ್ನು ಉಂಟುಮಾಡುವುದಿಲ್ಲ. ಎಂಥವನ ಗತಿ ಏನಾಯಿತು ಎಂದೆನಿಸುವಂತೆ ಮಾಡು

ವುದಿಲ್ಲ. ಅಷ್ಟನ್ನು ಮಾಡದಿದ್ದಾಗ ದುರಂತ ಪಾತ್ರದ ಎತ್ತರಕ್ಕೆ ಆತ ಏರುವುದಿಲ್ಲ ಎಂದೇ ಹೇಳಬೇಕಾಗುತ್ತದೆ.

ಅಂಥ ಎತ್ತರಕ್ಕೆ ಆತನನ್ನು ಏರಿಸುವ ಒಂದು ಪ್ರಯತ್ನವನ್ನು ರನ್ನ ಗದಾಯುದ್ಧದ ಸಂದರ್ಭದಲ್ಲಿ ಮಾಡುತ್ತಾನೆ. ಭೀಮ ನೆಲಕ್ಕೆ ಬಿದ್ದಾಗ ಬಿದ್ದವನನ್ನು ಹೊಡೆಯುವುದು ಧರ್ಮವಲ್ಲ ಎಂದು ಆತನನ್ನು ಚೇತರಿಸುವುದಕ್ಕಾಗಿ ಗದೆಯಿಂದ ಗಾಳಿ ಹಾಕಿಸುತ್ತಾನೆ. ಇದು ಆತನಲ್ಲಿಯ ಉನ್ನತಿಯ, ಧರ್ಮಬುದ್ಧಿಯ ಲಕ್ಷಣ ಅಲ್ಲವೆ ಎಂದು ಕೇಳಬಹುದು. ರನ್ನನ ಆಶಯ ಅದು. ನಾಟಕವಾದರೂ ಅದನ್ನು ಉಳಿಸಿಕೊಂಡಿದೆಯಾದ್ದರಿಂದ ನಾಟಕದ ಆಶಯವಾದರೂ ಅದೇ ಆಗುತ್ತದೆ. ಆದರೆ ಆ ಸನ್ನಿವೇಶದಲ್ಲಿ, ದುರ್ಯೋಧನನಂಥವನಲ್ಲಿ, ಅಂಥ ಧರ್ಮಬುದ್ಧಿಯಾಗಲಿ, ಔದಾರ್ಯವಾಗಲಿ, ಸಾಧ್ಯವೆ ಸಂಭಾವ್ಯವೆ, ಎಂದು ಕೇಳಬೇಕಾಗುತ್ತದೆ. ಭೀಮನಿಗೆ ವಿಷಾನ್ನವನ್ನು ಹಾಕಿದವನಲ್ಲಿ, ಅರಗಿನ ಮನೆಯಲ್ಲಿ ಪಾಂಡವರೆಲ್ಲರನ್ನು ಸುಟ್ಟುಬಿಡಬೇಕೆಂದವನಲ್ಲಿ, ದ್ರೌಪದಿಯನ್ನು ತುಂಬಿದ ಸಭೆಯಲ್ಲಿ ಎಳೆತರಿಸಿ ದುಶ್ಶಾಸನ ಆಕೆಯ ಸೀರೆಯನ್ನು ಸೆಳೆಯುತ್ತಿದ್ದಾಗ ಹಿಗ್ಗಿ ತನ್ನ ತೊಡೆಯನ್ನು ತೋರಿಸಿದವನಲ್ಲಿ, ಇದ್ದಕ್ಕಿದ್ದಹಾಗೆ ಅಂಥ ಧರ್ಮ ಬುದ್ಧಿಯ ಔದಾರ್ಯ ಅವತರಿಸಿತು ಎನ್ನುವುದು ಸಂಭಾವ್ಯವೆನಿಸುವುದಿಲ್ಲ. ಆತನ ದುಷ್ಕೃತ್ಯಗಳೆಲ್ಲವೂ ಎಂದೋ ಹಿಂದಿನ ಕಾಲದವು, ಅವು ನಡೆದು ಹದಿಮೂರು ವರ್ಷಗಳಾಗಿ ಹೋಗಿವೆ, ಎಂಬ ಸಮರ್ಥನೆಯನ್ನೂ ಹೇಳುವ ಹಾಗಿಲ್ಲ. ಅವೆಲ್ಲ ಎಂದೋ ನಡೆದು ಹೋಗಿದ್ದರೂ ಇಂದಿಗೂ ಆತನ ಮನಸ್ಸಿನಲ್ಲಿ ಅವು ಹಚ್ಚಗಾಗಿಯೇ ಉಳಿದಿವೆ. ಅವನ್ನು ಹೆಮ್ಮೆಯಿಂದ ನೆನೆದುಕೊಳ್ಳುತ್ತಾನೆ. ನೆನೆದುಕೊಂಡು ಪ್ರತಿ ಪಕ್ಷಿಗಳನ್ನು ಮೂದಲಿಸುತ್ತಾನೆ. ಆತ ಎಸಗಿದ ದುಷ್ಕೃತ್ಯಗಳ ನೆನಪು ಅವನಲ್ಲಿ ಮಾತ್ರವಲ್ಲ, ಭೀಮನಲ್ಲಿ, ದ್ರೌಪದಿಯಲ್ಲಿ. ಸೇಡಿನ ಅಪೇಕ್ಷೆಯಿಂದ ಉರಿಯುತ್ತವೆ. ಅಷ್ಟಲ್ಲದೆ ಭೀಮ ನೆಲಕ್ಕೆ ಬೀಳುವುದಕ್ಕೆ ಅರೆ ಕ್ಷಣ ಮಾತ್ರ ಹಿಂದೆ ಆತನನ್ನು ದುಶ್ಶಾಸನನ ರಕ್ತ ಹೀರಿದ ಪಿಶಾಚಿ ಎಂದು ತನ್ನ ಕೋಪಾವೇಶದಲ್ಲಿ ಕರೆದಿದ್ದಾನೆ. ಇಂಥ ಸನ್ನಿವೇಶದಲ್ಲಿ ಆತನಲ್ಲಿ ಅದುವರೆಗೆ ಸುಪ್ತವಾಗಿದ್ದ ಧರ್ಮಬುದ್ಧಿ ಜಾಗೃತವಾಯಿತು ಎಂದರೆ ನಂಬುವುದು ಕಷ್ಟವಾಗುತ್ತದೆ. ರನ್ನನ ದೃಷ್ಟಿಯಲ್ಲಿ ದುರ್ಯೋಧನ "ಮಹಾನುಭಾವ." ಅದನ್ನು ಸಮರ್ಥಿಸುವುದಕ್ಕೆ ಈ ಸನ್ನಿವೇಶ. ಆದರೆ ಸಹಾನುಭೂತಿ ಸಂಭಾವ್ಯತೆಯನ್ನು ಮರೆಯುವಂತೆ ಮಾಡಿದೆ.

ದುರ್ಯೋಧನನನ್ನು ಎತ್ತರಿಸುವ ಪ್ರಯತ್ನದಲ್ಲಿ ಭೀಮನನ್ನು ನಾಟಕದಲ್ಲಿ ಕೆಲ ಮಟ್ಟಿಗೆ ಇಳಿಸಲಾಗಿದೆ. ಇದರಿಂದ ಭೀಮನಿಗೆ ಅನ್ಯಾಯವಾಗಿದೆ ಎನ್ನುವುದನ್ನು ಒಪ್ಪಬೇಕಾಗುತ್ತದೆ. ನಾಟಕದಲ್ಲಿ ನಾವು ಆತನನ್ನು ಕಾಣುವುದು ಮುಖ್ಯವಾಗಿ ಎರಡು ಸಂದರ್ಭಗಳಲ್ಲಿ ಮಾತ್ರ. ಮೊದಲನೆಯ ರಂಗದಲ್ಲಿ ತನ್ನ ಪ್ರತಿಜ್ಞೆಯನ್ನು ಪುನರುಚ್ಚರಿಸುವಾಗ ಮತ್ತು ನಾಲ್ಕನೆಯ ರಂಗದಲ್ಲಿ ಅದನ್ನು ಪೂರೈಸುವುದಕ್ಕೆ ಹೊರಟು ಕೊನೆಯ

ವರಲ್ಲಿ ಅದನ್ನು ಪೂರೈಸಿದಾಗ. ಪ್ರತಿಜ್ಞೆ ಹಾಗೂ ಅದರ ಪೂರೈಕೆಗೆ ಸಾಕಷ್ಟು ಸಮರ್ಥನೆ ಇದ್ದಿತೆನ್ನುವುದನ್ನು ಹೇಳಬೇಕಾಗಿಲ್ಲ. ಮಹಾಭಾರತದಲ್ಲಿಯೂ ಆತ ಶೀಘ್ರ ಕೋಪಿಯೇ. ದುರ್ಯೋಧನನಲ್ಲಿ ಛಲ ಉರಿದಂತೆ ಭೀಮನಲ್ಲಿ ಪ್ರತೀಕಾರ ಬುದ್ಧಿ ಉರಿಯುತ್ತಿರುವುದು ಸ್ವಾಭಾವಿಕವೇ. ಆದರೆ ಮೂಲದಲ್ಲಿಯ ಕೆಲವು ಮಾತುಗಳನ್ನು ಬಿಟ್ಟುಕೊಟ್ಟಿರುವುದರಿಂದ ಆತನ ಕೋಪಾತಿರೇಕದ ಜೊತೆಯಲ್ಲಿಯೇ ಅಲ್ಲಿ ಕಾಣಸಿಗುವ ಉನ್ನತಿಗೆ ಒಂದಿಷ್ಟು ಊನ ಒಂದಿದೆ. ಮಹಾಭಾರತದಲ್ಲಿಯೂ ಹಿರಿಯಣ್ಣನ ಧರ್ಮ ಬುದ್ಧಿಯ ತಾಳ್ಮೆಯ ವಿಷಯದಲ್ಲಿ ಭೀಮನಲ್ಲಿ ಅಸಹನೆ ಇದೆ. ಆದರೆ ಅಸಹನೆ ಅವಿನಯ ವಾಗುವುದಿಲ್ಲ. ನಾಟಕದಲ್ಲಿ ಎದ್ದು ಕಾಣುವ ಅವಿನಯ ರನ್ನನ ಕಾವ್ಯದಲ್ಲಿಯೂ ಇಲ್ಲ. " ಆನುಂ ವಿಧೇಯ ನಲ್ಲಂ, ನೀನುಂ ಗುರುವಲ್ಲಮಿಂದಿನೊಂದುದೆವಸದೊಳ್ " ಎಂದು ಹೇಳುವುದಕ್ಕೆ ಮುಂಚೆ "ಅಜಾತಶತ್ರುಗೆ ಕುರುಕುಲಪ್ರಧಾನಶತ್ರುವೆನಿಸಿದ ಸಾಹಸ ಭೀಮಂ ಸಾಷ್ಟಾಂಗನಮಸ್ಕಾರಂ ಗೆಯ್ದಿಂತೆಂದಂ " ಎಂಬ ಮಾತುಗಳನ್ನು ನಾಟಕ ಬಿಟ್ಟು ಕೊಟ್ಟಿದ್ದರ ಪರಿಣಾಮವನ್ನು ಊಹಿಸಬಹುದು. " ಈ ಮಸಕಂ ಮಸಗಲ್ ತಗದು " ಎಂದು ಧರ್ಮರಾಯ ಹೇಳಿದಾಗ ಭೀಮನ ಬಾಯಲ್ಲಿಯ " ಓಹೋ ಧರ್ಮಶ್ರವಣಂ " ಎಂಬ ಕಟು ಮಾತು ಅವಿನಯದ ಇನ್ನೊಂದು ಬಗೆಯಾಗಿದೆ. ಗದಾಯುದ್ಧಕ್ಕೆ ಮೊದಲು ಸರೋವರದಿಂದ ಹೊರಬಂದ " ನಿಜಗದೆಯಿಂ ತೂಗುತ್ತಮಿರ್ದ " ದುರ್ಯೋಧನನನ್ನು ಕಂಡು " ಮೆಚ್ಚಿ ತಲೆಯುಂ ತೂಗಿದ " ನೆಂದು ಕಾವ್ಯ ಹೇಳುವ ಮಾತೂ ನಾಟಕದಲ್ಲಿ ಇಲ್ಲವಾದ್ದರಿಂದ ವೈರಿಯನ್ನೂ ಮೆಚ್ಚಿಕೊಳ್ಳಬಲ್ಲ ಹಿರಿಮೆ ನಾಟಕದಲ್ಲಿಯ ಭೀಮನಲ್ಲಿ ಇಲ್ಲದಾಗಿದೆ. ಯುದ್ಧಕ್ಕೆ ತೊಡಗುವ ಮೊದಲು " ದ್ರೋಣಾಚಾರ್ಯಂಗೆ ಮನದೊಳ್ ನಮಸ್ಕಾರಂ ಮಾಡಿ " ತನ್ನ ಕಾಲದಂಡವನ್ನು ಎತ್ತಿ ಕೊಳ್ಳುತ್ತಾನೆ. ನಾಟಕದ ಭೀಮ ನಲ್ಲಿ ಈ ಉದಾತ್ತ ವಿನಯ ಕಾಣಸಿಗುವುದಿಲ್ಲ. ಮೈತ್ರೇಯರೆದುರು ತಟ್ಟಿಕೊಂಡ ತೊಡೆ ಯನ್ನು, ದ್ರೌಪದಿಗೆ ತೋರಿಸಿದ ತೊಡೆಯನ್ನು, ತನ್ನೆದುರು ತಟ್ಟಿಕೊಂಡ ತೊಡೆಯನ್ನು ಒಡೆಯುವುದಕ್ಕೆ ಸಮರ್ಥನೆ ಇದ್ದಂತೆ—ಅದು ಮೂಲ ಪ್ರತಿಜ್ಞೆಗೆ ಸೇರಿದ ವಿಷಯ— ಬಿದ್ದ ದುರ್ಯೋಧನನನ್ನು ಒದೆಯುವುದಕ್ಕೆ, ಕಿರೀಟಭಂಗಕ್ಕೆ ಎಂಥ ಸಮರ್ಥನೆಯನ್ನೂ ಹೇಳಲಾಗುವುದಿಲ್ಲ. ಮಹಾಭಾರತದಿಂದ ರನ್ನನವರೆಗೂ ಉಳಿದುಬಂದ ಈ ದುರ್ನಯ ವನ್ನು ನಾಟಕ ತಪ್ಪಿಸಬಹುದಾಗಿತ್ತು. ಹಾಗೆ ಮಾಡುವುದರಿಂದ ಭೀಮನ ಘನತೆಗೆ ಏನೂ ಚ್ಯುತಿ ಬರುತ್ತಿರಲಿಲ್ಲ. ಹೆಚ್ಚುತ್ತಿತ್ತು. ಆದರೆ ದುರ್ಯೋಧನ ಭೀಮಸೇನರಂಥ ಧೀರ ಪಾತ್ರಗಳ ಕೋಪತಾಪಗಳನ್ನು ಸಾಮಾನ್ಯರ ಎಣಿಕೆಯಿಂದ ಅಳೆಯಲಾಗುವುದಿಲ್ಲ. ಅವರ ವೀರವೂ ಅಂಥದು, ಅವರ ಕೋಪವೂ ಅಂಥದು ಎಂದು ಸಮಾಧಾನ ಹೇಳಿ ಕೊಳ್ಳಬೇಕಾಗುತ್ತದೆ.

ನಾಟಕದಲ್ಲಿಯ ಕೃಷ್ಣನ ಪಾತ್ರದಲ್ಲಿ ಮಾತ್ರ ಆತನಲ್ಲಿರಬೇಕಾದ ಮಹೋನ್ನತಿಯು

ಯಾವ ಸುಳಿವೂ ಸಿಕ್ಕುವುದಿಲ್ಲ. ಉದ್ದಕ್ಕೂ ಆತ ಮಾಡಿದ ಒಂದೇ ಒಂದು ಕೆಲಸವೆಂದರೆ ಭೀಮನನ್ನು ಪ್ರಚೋದಿಸುವುದು. " ಇಂದಿನ ನೇಸರಿಂದೊಳಗೆ ವೈರಿಯನಿಕ್ಕದೆ ಮಾಣ್ದೆವಪ್ಪೊಡೆ ಇನ್ನೆಂದುಮಸಾಧ್ಯಂ " ಎಂದು ಮೊದಲ ರಂಗದಲ್ಲಿ ಹೇಳಿದವ ನಾಲ್ಕನೆಯದರಲ್ಲಿ " ನೇಸಱಿಟಿಯುತಿರ್ಕುಂ, ಮುಂದುಮುಂದಱಿಸುವಂ " ಎಂದು ಅವಸರಿಸುತ್ತಾನಲ್ಲದೆ ಭೀಮ ಬಿದ್ದು ಮತ್ತೆ ಎದ್ದು ಯುದ್ಧ ಮುಂದುವರಿದಾಗ " ಸತ್ಯಾಶ್ರಯ, ಊರುಭಂಗ ಪ್ರತಿಜ್ಞೆ ಏನಾಯ್ತು ? " ಎಂದು ನೇರವಾಗಿ ಭೀಮನಿಗೆ ಸೂಚನೆ ಕೊಡುತ್ತಾನೆ. ಪಾಂಡವರ ಒಗೆಯಲ್ಲಿಯ ಕೃಷ್ಣನ ಪಕ್ಷಪಾತ ವಿಖ್ಯಾತವಾದದ್ದೇ. ಆದರೆ ಅದು ಇಷ್ಟು ಒರಟಾಗಿ, ಕಣ್ಣೊತ್ತುವಂತೆ, ಕಾಣುವಂಥದಲ್ಲ. " ಧರ್ಮಜಂ ಕೃಪೆಯಿಂದೊಳ್ಳಿತಂ ಪೇಟ್ದಪಂ ; ಈಗಳುಂ ಕೇಳ್ದು ಬರ್ದುಂಕು " ಎಂದು ದುರ್ಯೋಧನನಿಗೆ ಹೇಳುವ ಮಾತಿನಲ್ಲಿಯೂ ಪಕ್ಷಪಾತವಲ್ಲದೆ ವ್ಯಂಗ್ಯ ಇದೆ.

ಗ್ರೀಕ್ ದುರಂತ ನಾಟಕಗಳ ಮಾದರಿಯ ಕೃತಿಯೊಂದನ್ನು ಕನ್ನಡಕ್ಕೆ ಕೊಡಬೇಕೆಂಬ ಶ್ರೀಕಂಠಯ್ಯನವರ ಆಕಾಂಕ್ಷೆ ಇಲ್ಲಿ ಬಹುಮಟ್ಟಿಗೆ ಈಡೇರಿದೆ. ಪೂರ್ತಿಯಾಗಿ ಈಡೇರದಿರುವುದಕ್ಕೆ ಕೇಂದ್ರ ಪಾತ್ರಗಳಲ್ಲೊಂದಾದ ದುರ್ಯೋಧನನ ಸ್ವಭಾವವೇ ಆತಂಕವಾಗುತ್ತದೆ. ಭೀಮನ ಸಾಹಸದ ವಿಜಯವನ್ನು ಕೊಂಡಾಡುವ ಉದ್ದೇಶವನ್ನಿರಿಸಿಕೊಂಡ ರನ್ನನ ಕಾವ್ಯವನ್ನು ಮೂಲವಾಗಿಸಿಕೊಂಡು ಅದನ್ನು ಅನುಸರಿಸಿರುವುದು ನಾಟಕಕಾರರ ಸ್ವಾತಂತ್ರ್ಯವನ್ನು ಮಿತಿಗೊಳಿಸಿದೆ. ಇದರಿಂದ ಅನುಕೂಲಗಳೂ ದೊರೆತಿವೆ. ನಾಟಕ ಕ್ರಿಯೆಯ ರೀತಿರಚನೆಗಳಲ್ಲಿ, ಒಂದು ಆವೇಶದ ಮಟ್ಟದಲ್ಲಿಯೇ ನಡೆಯುವ ಶೈಲಿಯ ಶಕ್ತಿಯಲ್ಲಿ, ಗ್ರೀಕ್ ನಾಟಕದ ಲಕ್ಷಣಗಳು ತಾವಾಗಿಯೇ ಬಂದಿವೆ. ಎಲ್ಲಕ್ಕೂ ಮುಖ್ಯವಾಗಿ, ಮನುಷ್ಯನಲ್ಲಿಯ ಅಹಂಕಾರಮದ (ಹ್ಯೂಬ್ರಿಸ್) ಆತ್ಮಘಾತಕ, ಅದು ದುರಂತಮೂಲ ಎಂಬ ಗ್ರೀಕ್ ನಾಕಟಗಳ ವಿಚಾರಸರಣಿಗೆ ಈ ನಾಟಕ ಒಂದು ನಿದರ್ಶನವಾಗುತ್ತದೆ. ದುರ್ಯೋಧನನನ್ನು ದೈವಹತ ಎನ್ನುವುದಕ್ಕಿಂತ ಅಹಂಕಾರಹತ ಎಂದೇ ಹೇಳಬೇಕಾಗುತ್ತದೆ. " ದೈವದ ಮುಂದೆ ನಾವಲ್ತು " ಎಂಬ ಮಾತನ್ನು ಕೊನೆಯಲ್ಲಿ ದುರ್ಯೋಧನನೇ ಹೇಳುತ್ತಾನೆ. ಆ ಮಾತಿನಲ್ಲಿ ಅಹಂಕಾರ ಸಲ್ಲದು ಎಂಬ ಅಸ್ಪಷ್ಟ ಸೂಚನೆ ಇದೆ. ದುರಂತಕ್ಕೆ ಅಹಂಕಾರವನ್ನು ಮೂಲವಾಗಿಸುವುದು, ಕೊನೆಯಲ್ಲಿ ದೈವದ ಆಧಿಪತ್ಯವನ್ನು ಒಪ್ಪಿಕೊಳ್ಳುವಂತಾಗುವುದು, ಅಥವಾ ಪ್ರೇಕ್ಷಕರಲ್ಲಿ ಅಂಥ ಭಾವನೆಯನ್ನು ಹುಟ್ಟಿಸುವುದು, ಗ್ರೀಕ್ ದುರಂತ ನಾಟಕಗಳು ಉಂಟುಮಾಡುವ ಪರಿಣಾಮದಲ್ಲಿ ಒಂದು ವಿಶೇಷವಾದ, ಮುಖ್ಯವಾದ, ಅಂಶವಾಗಿದೆ. ಅದನ್ನು ಗದಾಯುದ್ಧ ಮಾಡುತ್ತದೆ.

೧೨

"ಗದಾಯುದ್ಧ" ಪ್ರಕಟವಾಗಿ ಮೂರು ವರ್ಷಗಳ ನಂತರ ೧೯೨೯ರಲ್ಲಿ ಶ್ರೀಕಂಠಯ್ಯನವರು "ಅಶ್ವತ್ಥಾಮನ್" ನಾಟಕವನ್ನು ಬರೆದು ಪ್ರಕಟಿಸಿದರು. ಈ ನಾಟಕ ಶ್ರೀಯವರ ಮೇರುಕೃತಿ ; ಕನ್ನಡ ನಾಟಕ ಪ್ರಪಂಚಕ್ಕೆ ಕಿರೀಟಪ್ರಾಯವಾದ ಸಾಧನೆ. ಗ್ರೀಕ್ ಮಾದರಿಯ ದುರಂತ ನಾಟಕವೊಂದನ್ನು ಕನ್ನಡದಲ್ಲಿ ಬರೆಯಬೇಕೆಂಬ ಅವರ ಅಭಿಲಾಷೆ ಇಲ್ಲಿ ಪೂರ್ಣವಾಗಿ ಫಲಕಾರಿಯಾಗಿದೆ. ಬಹುಶಃ ಕನ್ನಡದಲ್ಲಿ ಶ್ರೇಷ್ಠ ದುರಂತ ನಾಟಕ ಇದೊಂದೇ ಎಂದು ಹೇಳಬಹುದಾಗಿದೆ. ರಚನಾವಿಧಾನದಲ್ಲಿ, ಕವಿತಾ ಶಕ್ತಿಯಲ್ಲಿ, ಸಮರ್ಥವಾದ ಭಾಷಾಪ್ರಯೋಗದಲ್ಲಿ, ದುರಂತಾನುಭವದ ಅಂಗವಾಗಿ ಒಂದು ಉದಾತ್ತವಾದ ಜೀವನದೃಷ್ಟಿಯನ್ನು ಪ್ರತಿಪಾದಿಸುವುದರಲ್ಲಿ ಇದನ್ನು ಸರಿಗಟ್ಟುವ ನಾಟಕ ಕನ್ನಡದಲ್ಲಿ ಇನ್ನೊಂದಿಲ್ಲ. ಒಂದು ದೃಷ್ಟಿಯಿಂದ ಈ ನಾಟಕವನ್ನು ಶ್ರೇಷ್ಠ ಗ್ರೀಕ್ ನಾಟಕಕಾರ ಸೊಫೊಕ್ಲೀಸನ 'ಏಜಾಕ್ಸ್' ನಾಟಕದ ಯಶಸ್ವಿಯಾದ ಭಾರತೀಯ ರೂಪಾಂತರವೆಂದು ಹೇಳಬಹುದಾದರೂ ಇನ್ನೊಂದು ದೃಷ್ಟಿಯಿಂದ ಇದನ್ನು ಸ್ವತಂತ್ರವಾದ ನಾಟಕವೆಂದೂ ಹೇಳಬೇಕಾಗುತ್ತದೆ. ಹೇಳದಿದ್ದರೆ ಅದು ರೂಪಾಂತರವೆಂದು ಗೊತ್ತಾಗದ ಮಟ್ಟಿಗಿನ ಸ್ವಯಂಪೂರ್ಣತೆಯನ್ನು ಅದು ಸಾಧಿಸಿದೆ. ರಚನೆರೀತಿಗಳಲ್ಲಿ, ಸನ್ನಿವೇಶಗಳು ಬೆಳೆಯುವ ಕ್ರಮದಲ್ಲಿ, ಮಾತುಗಳಲ್ಲಿ ಕೂಡ, ಗ್ರೀಕ್ ನಾಟಕವನ್ನು ಅನುಕರಿಸಿಕೊಂಡು ಹೋಗಿದ್ದರೂ ಸೂಕ್ಷ್ಮವಾದ ಬದಲಾವಣೆಗಳಿಂದ, ಇಡೀ ನಾಟಕದ ವಾತಾವರಣವನ್ನೇ ಇಲ್ಲಿಯದಾಗಿ ಚಿತ್ರಿಸುವುದರಿಂದ, ನಾಟಕ ಸ್ವಂತಿಕೆಯನ್ನು ಪಡೆದು ಸ್ಥಾಪಿಸಿಕೊಳ್ಳುತ್ತದೆ. ರೂಪಾಂತರಕಲೆಯ ಯಶಸ್ಸನ್ನು ತಿಳಿಯುವುದಕ್ಕೆ, ಮೂಲಕ್ಕಿಂತಲೂ ಹೆಚ್ಚು ಆಳವಾಗುವ ಪರಿಣಾಮವನ್ನು ಆರ್ಥವಿಸಿಕೊಳ್ಳುವುದಕ್ಕೆ ಗ್ರೀಕ್ ಮೂಲವನ್ನು ನೆನೆಯಬೇಕಲ್ಲದೆ ನಾಟಕದ ರಸಾನುಭವದ ಅಗತ್ಯವಾಗಿಯಲ್ಲ. ಸ್ವತಂತ್ರ ನಾಟಕವೆಂದು ಪರಿಗಣಿಸಿ ಪರಾಮರ್ಶಿಸಿದರೂ "ಅಶ್ವತ್ಥಾಮನ್" ವಿಮರ್ಶೆಯ ಎಂಥ ತೀಕ್ಷ್ಣ ದೃಷ್ಟಿಯನ್ನೂ ಎದುರಿಸಬಲ್ಲ ಕೃತಿಯಾಗಿ ನಿಲ್ಲುತ್ತದೆ.

ಸೊಫೊಕ್ಲೀಸನ ನಾಟಕದ ನಾಯಕನಾದ ಏಜಾಕ್ಸನ ಕಥೆಯ ರೀತಿಯನ್ನು ಮಹಾಭಾರತದ ಸೌಪ್ತಿಕಪರ್ವದಲ್ಲಿಯ ಅಶ್ವತ್ಥಾಮನ ವೃತ್ತಾಂತಕ್ಕೆ ಹೊಂದಿಸಿಕೊಂಡು ಆತನನ್ನು ಕುರಿತಂತೆ ದುರಂತ ನಾಟಕವನ್ನು ರೂಪಿಸಿರುವುದು ಇಲ್ಲಿಯ ಕಾರ್ಯವಿಧಾನ. ಆ ಎರಡು ಕಥೆಗಳಲ್ಲಿ ಕೆಲಮಟ್ಟಿಗಿನ ಸಾಮ್ಯವಿದೆ. ವ್ಯತ್ಯಾಸಗಳೂ ಇವೆ. ನಾಟಕದ ರಚನೆ ಗ್ರೀಕ್ ಮೂಲವನ್ನೇ ಅನುಸರಿಸಿಕೊಂಡು ಹೋದರೂ ನಾಟಕ ಬೇರೆಯಾಗಿಯೇ ನಿಲ್ಲುವುದರಿಂದ ಇಲ್ಲಿಯ ನಾಟಕ ಎರಡು ಮೂಲಗಳಿಂದ ತನ್ನ ಶಕ್ತಿಯನ್ನು ಪಡೆಯುತ್ತದೆ. ಆದ್ದರಿಂದ ಆ ಎರಡೂ ಮೂಲಗಳಲ್ಲಿಯ ಕಥೆಗಳನ್ನು ನಾವು ಸ್ಥೂಲವಾಗಿಯಾದರೂ ತಿಳಿದಿರಬೇಕಾಗುತ್ತದೆ.

ಟ್ರೋಜನ್ ಯುದ್ಧ ಮುಗಿದಾಗ ಮಡಿದುಹೋದ ವೀರ ಅಕಿಲಸನ ಚಿಲಕತ್ತು ತನಗೆ ಬರಬೇಕಾದದ್ದು ಅನ್ಯಾಯವಾಗಿ ಒಡೀಸಿಯಸ್‌ನಿಗೆ ಕೊಡಲಾಯಿತೆಂದು ತೀವ್ರ ಅಸಮಾಧಾನಗೊಂಡ ಏಜಾಕ್ಸ್ ಅದನ್ನು ಪಡೆದವನನ್ನೂ ಕೊಡಿಸುವುದರಲ್ಲಿ ಭಾಗಿಗಳಾಗಿರಬಹುದಾದ ಸೇನಾನಾಯಕರನ್ನೂ ಕೊಲೆಮಾಡಿ ಸೇಡು ತೀರಿಸಿಕೊಳ್ಳಬೇಕೆಂದಿರುತ್ತಾನೆ. ಒಡೀಸಿಯಸ್ಸ್‌ನ ಅಭಿಮಾನದೇವತೆಯಾದ ಪಾಲ್ಲಾಸ್ ಅಥೆನಿ ಏಜಾಕ್ಸನಿಗೆ ಆ ಸಂದರ್ಭದಲ್ಲಿ ಮಂಕು ಕವಿಯುವಂತೆ ಮಾಡಿದ್ದರಿಂದ ಏಜಾಕ್ಸ್ ತಾನು ನಾಯಕರನ್ನೇ ಕೊಲ್ಲುತ್ತಿದ್ದೇನೆಂಬ ಭ್ರಮೆಯಲ್ಲಿ ಪಾಳೆಯದಲ್ಲಿಯ ಮೂಕ ಪ್ರಾಣಿಗಳನ್ನು ಕೊಲೆಗೆಯ್ಯುತ್ತಾನೆ. ಕವಿದ ಮಂಕು ಸರಿದಾಗ ತನ್ನ ಕೃತ್ಯಕ್ಕೆ ತಾನೇ ಹೇಸಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ತನ್ನ ಪಕ್ಷದ ನಾಯಕರನ್ನೇ ಕೊಲೆ ಮಾಡಬಯಸಿದ ಏಜಾಕ್ಸನ ಅಪಕೃತ್ಯ ದೇಶದ್ರೋಹವೆಂದು ಬಗೆದ ಮೆನಿಲಾಸ್ ಮತ್ತು ಅಗೆಮೆಮ್ನೊನ್ ಆತನ ವಿಧಿಪೂರ್ವಕವಾದ ಅಂತ್ಯಸಂಸ್ಕಾರವನ್ನು ವಿರೋಧಿಸುತ್ತಾರೆ. ಒಡೀಸಿಯಸ್ಸೇ ಮಧ್ಯೆ ಪ್ರವೇಶಿಸಿ ಮಡಿದ ವೀರನಿಗೆ ಯಥೋಚಿತವಾದ ಸಂಸ್ಕಾರಗಳು ನಡೆಯುವಂತೆ ಮಾಡುತ್ತಾನೆ.

ಊರುಭಂಗದ ನಂತರ ಸಾವನ್ನು ಇದಿರು ನೋಡುತ್ತ ಬಿದ್ದಿದ್ದ ದುರ್ಯೋಧನನನ್ನು ಕಂಡು ಭೀಮ ಆತನ ತೊಡೆಯನ್ನು ಅಧರ್ಮದಿಂದ ಮುರಿದದ್ದರಿಂದ ತನ್ನ ದೊರೆಯ ಸಾವಿಗೆ ಸೇಡು ತೀರಿಸಬೇಕೆಂದು ಅಶ್ವತ್ಥಾಮ ಪಾಂಡವರ ಪಾಳಯವನ್ನು ರಾತ್ರಿಯ ಸಮಯದಲ್ಲಿ ಹೊಕ್ಕು ಅರೆನಿದ್ರೆಯಲ್ಲಿದ್ದ ಪಾಂಚಾಲರನ್ನೂ ಉಪಪಾಂಡವರನ್ನೂ ಸಂಹರಿಸುತ್ತಾನೆ. ಇದನ್ನು ತಿಳಿದ ಭೀಮ, ಕೃಷ್ಣ ಮತ್ತು ಅರ್ಜುನ ಆತನನ್ನು ಬೆನ್ನಟ್ಟಿದಾಗ ಅಶ್ವತ್ಥಾಮ ದಿವ್ಯಾಸ್ತ್ರವನ್ನು ಬಿಡುತ್ತಾನೆ. ಅರ್ಜುನ ಪ್ರತ್ಯಸ್ತ್ರವನ್ನು ಬಿಟ್ಟಾಗ ಲೋಕ ಸುಟ್ಟು ಹೋಗುವಂತಾಗುತ್ತದೆ. ವ್ಯಾಸನಾರದರ ಬೇಡಿಕೆಯಂತೆ ಅರ್ಜುನ ತನ್ನ ಅಸ್ತ್ರವನ್ನು ಹಿಂತೆಗೆದುಕೊಳ್ಳುತ್ತಾನೆ. ಅಶ್ವತ್ಥಾಮ ಒಪ್ಪುವುದಿಲ್ಲ. ಆಗ ಮೂರು ಸಾವಿರ ವರ್ಷ ಮನುಷ್ಯಸಹವಾಸವಿಲ್ಲದೆ ಅಲೆದಾಡುತ್ತಿರು ಎಂದು ಕೃಷ್ಣ ಶಾಪ ಹೇಳುತ್ತಾನೆ. ಆತನ ತಲೆಯಲ್ಲಿಯ ಮಣಿಯನ್ನು ತೆಗೆದುಕೊಂಡು ಮೂವರೂ ಹಿಂದಿರುಗುತ್ತಾರೆ. ಏಜಾಕ್ಸ್ ಒಂದು ಕಾರಣಕ್ಕಾದರೆ ಅಶ್ವತ್ಥಾಮ ಇನ್ನೊಂದು ಕಾರಣಕ್ಕಾಗಿ ನಿರಪರಾಧಿಗಳ ಕಗ್ಗೊಲೆಯನ್ನು ಮಾಡಿ ಒಂದೊಂದು ರೀತಿಯ ದುರಂತದಲ್ಲಿ ತಮ್ಮ ಬದುಕನ್ನು ಕೊನೆಗೊಳಿಸುತ್ತಾರೆ ಎನ್ನುವುದು ಎರಡೂ ಕಥೆಗಳಲ್ಲಿಯ ಸಮಾನಾಂಶ. ಗ್ರೀಕ್ ನಾಟಕದಲ್ಲಿಯ ಪಾತ್ರವರ್ಗವನ್ನು ಇಲ್ಲಿಯ ಕಥೆಗೆ ಹೊಂದಿಸಿ ಕೊಳ್ಳಲಾಗಿದೆ. ಅಲ್ಲಿಯ ನಾಯಕ ಏಜಾಕ್ಸ್ ಇಲ್ಲಿಯ ನಾಯಕ ಅಶ್ವತ್ಥಾಮನಾಗುತ್ತಾನೆ. ಅಶ್ವತ್ಥಾಮ ಬನವಾಸಿಯವನೆಂದೂ. ತನ್ನ ತಂದೆಯೊಡನೆ ಕೌರವರ ಆಶ್ರಯವನ್ನು ಪಡೆದವನೆಂದೂ ಕಲ್ಪಿಸಲಾಗಿದೆ. ಅದೇ ಪ್ರದೇಶಕ್ಕೆ ಸೇರಿದವನೆಂದು ಏಕಲವ್ಯ (ಗ್ರೀಕ್ ನಾಟಕದ ಟ್ಯೂಸರ್,

ಏಜಾಕ್ಸನ ಮಲ ತಮ್ಮ) ಗುರುಗಳಿಗೆ ಬೆಂಬಲವೆಂದು ತನ್ನ ಅನುಯಾಯಿಗಳಾದ ಬೇಡರ ಪಡೆಯೊಂದಿಗೆ ಬಂದಿದ್ದಾನೆ. ಸಾಲಾಮಿಸ್ ನಾವಿಕರು ಮೂಲದಲ್ಲಿಯ ಮೇಳದವರಾಗಿರುವಂತೆ ಬನವಾಸಿಯ ಈ ಬೇಡರು ಇಲ್ಲಿಯ ಮೇಳದವರಾಗಿದ್ದಾರೆ. ಮಹಾಭಾರತದಲ್ಲಿಯ ಅಶ್ವತ್ಥಾಮ ಬ್ರಹ್ಮಚಾರಿ. ಆದರೆ ನಾಟಕದಲ್ಲಿ ಏಜಾಕ್ಸ್‌ನ ಮಗ ಯೂರಿಸಾಕಿಸ್‌ನಿಗೆ ಸಮನಾಗಿ ಅಶ್ವತ್ಥಾಮನಿಗೆ ರುದ್ರಶಕ್ತಿ ಎಂಬ ಮಗನಿದ್ದಾನೆ. ಏಜಾಕ್ಸನ ದಾಸಿ-ಪ್ರೇಯಸಿಯಾಗಿದ್ದ ಟೆಕ್‌ಮೆಸಾಳಿಗೆ ಪ್ರತಿಯಾಗಿ ಅಶ್ವತ್ಥಾಮನನ್ನು ಎಳೆತನದಲ್ಲಿ ಸಲಹಿದ ಅಜ್ಜಿ, ಪರಶುರಾಮನ ತಂಗಿ, ಭಾರ್ಗವಿಯ ಪಾತ್ರವನ್ನು ಯೋಜಿಸಲಾಗಿದೆ. ಮೆನಿಲಾಸ್ ಅಗೆಮೆಮ್ನಾನ್ ಇಬ್ಬರೂ ಭೀಮನಲ್ಲಿ ಸೇರಿಕೊಳ್ಳುತ್ತಾರೆ. ಒಡೀಶಿಯಸ್ ಕೃಷ್ಣನಾಗುತ್ತಾನೆ. ಪಾಲಾಸ್ ಅಥೆನಿ ರುದ್ರನಾಗಿ ಪರಿವರ್ತನೆಯಾಗುತ್ತಾಳೆ. ಈ ಬಗೆಯ ಪಾತ್ರ ಯೋಜನೆಯ ತತ್‌ಕ್ಷಣದ ಪರಿಣಾಮವೆಂದರೆ ನಾಟಕದ ಸನ್ನಿವೇಶ ಹಾಗೂ ವಾತಾವರಣ ಪೂರ್ತಿಯಾಗಿ ಭಾರತದ್ದಾಗಿ ಪರಿಣಮಿಸುತ್ತದೆ. ನಾಟಕ ಗ್ರೀಕ್ ಮೂಲವೊಂದರ ರೂಪಾಂತರವಾಗಿರದೆ ಸ್ವತಂತ್ರವಾದ ರಚನೆ ಎಂಬ ಭಾವನೆಯನ್ನು ಬಲಪಡಿಸುತ್ತದೆ.

ನಾಟಕ ಪ್ರತ್ಯಂಶದಲ್ಲಿಯೂ ಮೂಲ ಗ್ರೀಕ್ ನಾಟಕವನ್ನು ಅನುಸರಿಸಿ ಮುಂದುವರಿಯುತ್ತದೆ. ಸ್ಥಳಕಾಲ ಕ್ರಿಯೆಗಳಿಗೆ ಭಂಗ ಬಾರದಂತೆ ನಾಟಕಕ್ರಿಯೆಯ ರಚನೆಯಾಗಿದ್ದರೂ ಮೇಳದವರ ಮಧ್ಯಸ್ತಿಕೆಯನ್ನು ಒಂದೊಂದು ಹಂತವಾಗಿಸಿಕೊಂಡು ಅದನ್ನು ಹತ್ತು ಭಾಗಗಳಾಗಿ ವಿಂಗಡಿಸಬಹುದಾಗಿದೆ. ಶ್ರೀಯವರೇ ಪ್ರಕಟಿಸಿದ ನಾಟಕದ ಸಾರಾಂಶ ಈ ಮುಂದಿನಂತಿದೆ :

***

"ರಾತ್ರಿ ಪಾಂಡವರ ಪಾಳೆಯದಲ್ಲಿ ಕೊಲೆ ಮಾಡಿದವನು ಯಾರೆಂದು ಕಂಡು ಹಿಡಿಯಲು ಹೆಜ್ಜೆ ಗುರುತಿನಿಂದ ಕೃಷ್ಣನು ಅಶ್ವತ್ಥಾಮನ ಗೂಡಾರದ ಬಳಿಗೆ ಬರುವನು. ಅಲ್ಲಿ ರುದ್ರನು ಅವನಿಗೆ—ಅಶ್ವತ್ಥಾಮನು ಕೌರವನ ದುರ್ಮರಣದಿಂದ ಕ್ರುದ್ಧನಾಗಿ ಪಾಂಡವರನ್ನೆಲ್ಲ ನಾಶ ಮಾಡುವಂತೆ ವರವನ್ನು ಕೇಳಿ, ತಾನು ಕೊಡದಿರಲು ತನ್ನನ್ನು ಧಿಕ್ಕರಿಸಿ, ಪಾಂಡವರ ಪಾಳೆಯವನ್ನು ಅರ್ಧರಾತ್ರಿಯಲ್ಲಿ ಹೊಕ್ಕು ತನ್ನ ಮಾಯೆಯಿಂದ ಉನ್ಮತ್ತನಾಗಿ ಪಶುಗಳು ಹೆಂಗಸರು ಮಕ್ಕಳು ಮುಂತಾದವರನ್ನು ಕೊಂದು, ಸೆರೆಗಳೆಂದು ಕೆಲವು ಪಶುಗಳನ್ನೂ, ಕೃಷ್ಣನೆಂದು ಒಂದು ಕುರಿಯನ್ನೂ ಗೂಡಾರಕ್ಕೆ ಹಿಡಿದುಕೊಂಡು ಬಂದು ಹಿಂಸಿಸುತ್ತಿರುವ ಸಂಗತಿಯನ್ನು ತಿಳಿಸುವನು. ಕೃಷ್ಣನು ಬೇಡ ಬೇಡವೆಂದರೂ ರುದ್ರನು ಅಶ್ವತ್ಥಾಮನನ್ನು ಹೊರಕ್ಕೆ ಬರಮಾಡುವನು. ಅಶ್ವತ್ಥಾಮನು ತಾನು ಭೀಮಾರ್ಜುನರನ್ನು ಕೊಂದುದನ್ನು ಹೊಗಳಿಕೊಂಡು ಯುದ್ಧಕ್ಕೆಲ್ಲ ಕಾರಣನಾದ ತಂತ್ರಿಯಾದ ಕೃಷ್ಣನಿಗೆ ಮಾಡುವ ಚಿತ್ರಹಿಂಸೆ ಇನ್ನೂ ಇದೆ ಎಂದು ಹೇಳಿ ಒಳಗೆ ಹೋಗು

ವನು. ರುದ್ರನು—ಎಷ್ಟೇ ಪೌರುಷವಿರಲಿ, ಐಶ್ವರ್ಯವಿರಲಿ, ಮನುಷ್ಯಮಾತ್ರನಾದವನು ಅಹಂಕಾರದಿಂದ ಮದಿಸಿ, ದೇವತೆಗಳನ್ನು ಧಿಕ್ಕರಿಸಿದರೆ, ದೇವತೆಗಳು ಅಂತಹವನನ್ನು ಮುರಿಯುವರು ಎಂದು ತಿಳಿಸುವನು. (೨) ಮೇಳದವರು ಘೋರ ಕೃತ್ಯವನ್ನು ಮಾಡಿದವನು ಅಶ್ವತ್ಥಾಮನೆಂದು ಪಾಂಡವರ ಸೇನೆ ಕೂಗುವುದನ್ನು ಕೇಳಿ, ನಿಜಾಂಶವನ್ನು ತಿಳಿಯುವುದಕ್ಕೆ ಅಶ್ವತ್ಥಾಮನ ಬಳಿಗೆ ಬರುವರು. ನಿಜವಾಗಿದ್ದಲ್ಲಿ ಏನೋ ದೈವದ ಮೋಸವಿರಬೇಕೇ ಹೊರತು ಬುದ್ಧಿಪೂರ್ವಕವಾಗಿ ಅಶ್ವತ್ಥಾಮನು ಈ ಕೆಟ್ಟ ಕೆಲಸವನ್ನು ಮಾಡಿರಲಾರನೆಂದು ಹೇಳಿಕೊಳ್ಳುವರು. ಭಾರ್ಗವಿ ಬಂದು ಇದೆಲ್ಲಾ ನಿಜವೆಂದು ತಿಳಿಸುವಳು ; ಮತ್ತು ಅಶ್ವತ್ಥಾಮನ ಭ್ರಮೆ ಹೋಗಿ ಬುದ್ಧಿ ತಿರುಗಿ, ಬಹು ಪಶ್ಚಾತ್ತಾಪ ಪಟ್ಟು, ಏನೋ ಕೆಟ್ಟ ಯೋಚನೆಯಲ್ಲಿರುವನೆಂದೂ, ಕೆಳೆಯರಾದ ಮೇಳದವರು ಅವನನ್ನು ಸಂತೈಸಬೇಕೆಂದೂ ಪ್ರಾರ್ಥಿಸುವಳು. (೩) ಅಶ್ವತ್ಥಾಮನು ತಾನು ಕೊಂದ ಪಶುಗಳ ನಡುವೆ ಸಂಕಟ ಪಡುತ್ತ, ಇಂಥ ದುಷ್ಕೃತ್ಯವನ್ನು ಮಾಡಿದ ನನಗೆ ಮರಣವೇ ಸರಿ, ನಾನಿನ್ನು ಮಾನದಿಂದ ಬದುಕುವುದು ಅಸಾಧ್ಯ ಎಂದು ಬಗೆದು ತಾನು ಕೌರವನ ಹಗೆಯನ್ನು ತೀರಿಸಿ ಸ್ವಾಮಿಭಕ್ತಿಯನ್ನು ತೋರಿಸುವುದಕ್ಕೆ ಹೊರಟರೆ ದೈವವು ಹೀಗೆ ಮಾಡಿಸಿತೆಂತಲೂ, ತನ್ನ ಅಪಕೀರ್ತಿಯನ್ನು ಸತ್ತು ನೀಗಬೇಕೆಂತಲೂ ಭಾರ್ಗವಿಗೂ ಮೇಳದವರಿಗೂ ಹೇಳುವನು. ಅವರು ಎಷ್ಟು ಸಮಾಧಾನ ಹೇಳಿದರೂ ಒಪ್ಪುವುದಿಲ್ಲ. ತನ್ನನ್ನು ಕಡೆಯಲ್ಲಿ ಕೈ ಬಿಟ್ಟ ರುದ್ರನಲ್ಲಿ ತನಗೆ ಭಕ್ತಿಯ ಹಂಗು ಹರಿದುಹೋಯಿತೆಂದು ತಿಳಿಸಿ, ಸುಖವನ್ನೇ ಅರಿಯದ ತನ್ನ ಬಾಳನ್ನೂ ತನ್ನ ತಾಯ್ನಾಡಾದ ಕನ್ನಡವನ್ನೂ, ನೆಲಸಿದ ನಾಡಾದ ಕುರುಕ್ಷೇತ್ರವನ್ನೂ ಸ್ಮರಿಸಿಕೊಂಡು ವ್ಯಥೆ ಪಟ್ಟು, ತನ್ನ ಮಗನಾದ ರುದ್ರಶಕ್ತಿಯನ್ನು ಕರೆಸಿ, ಆಶೀರ್ವಾದ ಮಾಡಿ, ಬೇಟೆಗೆ ಹೋಗಿರುವ ಏಕಲವ್ಯನು ಎಲ್ಲರಿಗೂ ರಕ್ಷಕನಾಗುವನೆಂದು ಹೇಳಿ ಒಳಕ್ಕೆ ಹೋಗುವನು. (೪) ಮೇಳದವರು ಬನವಾಸಿಯ ಸುಖವನ್ನೂ, ಇಲ್ಲಿ ತಮ್ಮ ಪಾಡನ್ನೂ, ಭಾರ್ಗವಿಯ ದುಃಖವನ್ನೂ, ಅಶ್ವತ್ಥಾಮನ ದುಷ್ಪರಿಣಾಮವನ್ನೂ ನೆನಸಿಕೊಂಡು ಶೋಕಿಸುವರು. (೫) ಇವರಿಂದ ತಪ್ಪಿಸಿಕೊಂಡು ಹೋಗುವುದಕ್ಕಾಗಿ, ವಕ್ರೋಕ್ತಿಯಿಂದ ಆಶ್ವತ್ಥಾಮನು ತಾನು ಭಾರ್ಗವಿಯ ಗೋಳಿಗೆ ಮರುಗಿದನೆಂದೂ, ಬಲಿಷ್ಠರಾದ ದೇವತೆಗಳ ಮೇಲೆ ಎದಿರು ಬೀಳುವುದು ಮೂರ್ಖತನವೆಂದು ತನಗೆ ಜ್ಞಾನೋದಯವಾಯಿತೆಂದೂ, ತೀರ್ಥಗಳಲ್ಲಿ ಸ್ನಾನ ಮಾಡಿ ತನ್ನ ಕಳಂಕವನ್ನು ತೊಳೆದು ರುದ್ರನ ಕೋಪವನ್ನು ನಿವಾರಿಸುವೆನೆಂದೂ, ಇಷ್ಟರಲ್ಲೇ ತನ್ನ ಮಿತ್ರರು ತನ್ನ ಸಂಕಟವೆಲ್ಲಾ ಪರಿಹಾರವಾಗಿ ಬಿಡುಗಡೆಯಾಯಿತೆಂಬ ಸುದ್ದಿಯನ್ನು ಕೇಳುವರೆಂದೂ ಹೇಳಿ ಹೊರಟು ಹೋಗುವನು. (೬) ಮೇಳದವರು ನಂಬಿ ಅಶ್ವತ್ಥಾಮನು ರುದ್ರನ ಕಡೆ ತಿರುಗಿದನೆಂದೂ, ಬದುಕಿಕೊಂಡನೆಂದೂ ಆನಂದ ಪಟ್ಟು ಶಿವನನ್ನು ಪ್ರಾರ್ಥಿಸಿ ನಾಟ್ಯವಾಡುವರು. ಅಷ್ಟರಲ್ಲಿ ಒಬ್ಬ ದೂತನು ಓಡಿ ಬಂದು ಏಕಲವ್ಯನು ಬೇಟೆಗೆ

ಪೋಗಿದ್ದವನು ಹಿಂತಿರುಗಿದನೆಂದೂ, ಒಡನೆ ಪಾಂಡವರ ಸೇನೆಯೆಲ್ಲವೂ ಅಶ್ವತ್ಥಾಮನ ಆಪ್ತಮಿತ್ರನೆಂದು ಅವನ ಮೇಲೆ ಬಿದ್ದಿತೆಂದೂ. ಆದರೆ ಕೃಷ್ಣನು ಎಲ್ಲರನ್ನೂ ಸಮಾಧಾನ ಪಡಿಸಿ ಏಕಲವ್ಯನಿಗೆ—ಈ ಒಂದು ದಿವಸ ಅಶ್ವತ್ಥಾಮನ ಮೇಲೆ ರುದ್ರನ ಆಗ್ರಹವಿರುವುದು ; ಅವನನ್ನು ಹೊರಗೆ ಬಿಡದೆ ಒಳಗೆ ತಡೆದಿರಿ, ಶಾಂತಿ ಮಾಡಿ ರುದ್ರನ ಪ್ರಸಾದವನ್ನು ಸಂಪಾದಿಸಿ ಅವನನ್ನು ಉಳಿಸಿಕೊಳ್ಳೋಣ ಎಂದು ಹೇಳಿದನೆಂದೂ ತಿಳಿಸುವನು. ಅಶ್ವತ್ಥಾಮನು ಆಗಲೇ ಹೊರಟು ಹೋದನಲ್ಲಾ ಎಂದು ಆತಂಕಪಟ್ಟು ಮೇಳದವರೂ ಭಾರ್ಗವಿಯೂ ಅವನನ್ನೆ ಅರಸಿಕೊಂಡು ಹೋಗುವರು. (೭) ಅಶ್ವತ್ಥಾಮನು ಪಾಂಡವರನ್ನು ಶಪಿಸಿ ಖಡ್ಗದ ಮೇಲೆ ಬಿದ್ದು ಸಾಯುವನು. ಭಾರ್ಗವಿಯೂ ಮೇಳದವರೂ ಕಂಡು ದುಃಖಿಸುವರು. ಪಾಂಡವರೂ ಕೃಷ್ಣನೂ ಈ ಭಾಗದಲ್ಲಿ ಗರ್ವ ಪಡುವುದಕ್ಕೆ ಕಾರಣವಿಲ್ಲ ; ಅಶ್ವತ್ಥಾಮನನ್ನು ಅವರು ಜಯಿಸಲಿಲ್ಲ ; ದೈವವು ಮುರಿಯಿತು ಎಂದು ಭಾರ್ಗವಿ ಹೇಳುವಳು. ಏಕಲವ್ಯನೂ ಬಂದು ಸೇರಿ, ಅಶ್ವತ್ಥಾಮನ ಗುಣ ಪ್ರಶಂಸೆ ಮಾಡಿ, ತಾನು ಯಾವ ಮುಖವನ್ನಿಟ್ಟುಕೊಂಡು ತನ್ನೂರಿಗೆ ಹೋಗುವುದು ಎಂದು ಖೇದಪಟ್ಟು ಪ್ರೇತ ಸಂಸ್ಕಾರಕ್ಕೆ ತೊಡಗುವನು. ಆಗ ಭೀಮನು, ದ್ರೌಪದಿಯ ಮಕ್ಕಳನ್ನು ಅಶ್ವತ್ಥಾಮನು ರಾತ್ರಿ ಕೊಂದನೆಂದು, ರೋಷಾವೇಶದಿಂದ ಬಂದು ತನ್ನ ಶತ್ರು ಸತ್ತಿರುವುದನ್ನು ಕಂಡು ಶವವನ್ನು ನಾಯಿ ನರಿಗಳಿಗೆ ಎಳೆಸುತ್ತೇನೆ, ಉತ್ತರಕ್ರಿಯೆ ಆಗಕೂಡದು, ಎಂದು ತಡೆಯುವನು. ಏಕಲವ್ಯನಿಗೂ ಭೀಮನಿಗೂ ಮಾತು ನಡೆದು ಯುದ್ಧವಾಗುವುದು. (೮) ಮೇಳದವರು ಯುದ್ಧವೆಂಬುದನ್ನು ಮೊಟ್ಟ ಮೊದಲು ಯಾರು ಮಾಡಿದರೋ ಎಂದು ಶಪಿಸುತ್ತ, ಶಾಂತಿಯ ಸುಖಗಳನ್ನು ನೆನೆಯುತ್ತ ಭಾರತ ಯುದ್ಧಕ್ಕೆ ಮೂಲಳಾದ ದ್ರೌಪದಿ ಯಾವ ಗಳಿಗೆ ಹುಟ್ಟಿದಳೋ ಎಂದು ಅವಳನ್ನು ಜರೆಯುತ್ತ ಭೀಮ ಏಕಲವ್ಯರಿಗೆ ಕ್ಷಮೆಯನ್ನು ತಾಳಿ ಎಂದು ಹೇಳುವರು. (೯) ಅಷ್ಟರಲ್ಲಿ ಕೃಷ್ಣನು ಬಂದು ಭೀಮನಿಗೆ ಸಮಾಧಾನ ಹೇಳುವನು. ವೀರರು ವೀರರಿಗೆ —ಅದರಲ್ಲಿಯೂ ಸತ್ತಮೇಲೆ—ಅಪಮಾನಪಡಿಸುವುದು ಧರ್ಮವಲ್ಲವೆಂತಲೂ, ಉತ್ತರ ಕ್ರಿಯೆಗಳಿಗೆ ಅಡ್ಡಿಯಾಗಿ ಬರುವುದು ಮನುಷ್ಯ ಧರ್ಮಕ್ಕೇ ಅಲ್ಲ, ದೈವಶಾಸನಕ್ಕೂ ವಿರುದ್ಧವೆಂತಲೂ, ಹೆಂಗಸಿನ ದುಃಖಕ್ಕಾಗಿ ಮತ್ಸರವನ್ನು ಬೆಳೆಸಬಾರದೆಂತಲೂ, ಅಶ್ವತ್ಥಾಮನು ಮಹಾವೀರನು, ಪೂಜ್ಯನು ಎಂತಲೂ ಹೇಳುವನು. ತನ್ನ ದೇವರು ರುದ್ರನೇ ಕೈ ಬಿಟ್ಟವರಲ್ಲಿ ನಿನಗೇಕೆ ಇಷ್ಟು ವಿಶ್ವಾಸವೆಂದು ಭೀಮನು ಆಕ್ಷೇಪಿಸಲು—ರುದ್ರ ಹೃದಯವನ್ನು ನಾವೇನು ಬಲ್ಲೆವು. ಕಲ್ಮಷವನ್ನು ಕಳೆದು ಪರಿಶುದ್ಧಾತ್ಮನನ್ನು ಸೆಳೆದುಕೊಂಡನೆಂದು ನಾನು ತಿಳಿಯುತ್ತೇನೆ ಎಂದು ಹೇಳುವನು. ನಿನ್ನಿಷ್ಟವಂತೆ ನಡಸು : ನನಗೆ ಅವನಲ್ಲಿ ವಿಶ್ವಾಸ ಹುಟ್ಟದು ಎಂದು ಹೇಳಿ ಭೀಮನು ಹೊರಟು ಹೋಗುವನು. ಕೃಷ್ಣನು ಅಶ್ವತ್ಥಾಮನ ಮಗನನ್ನು ಹರಸುವನು. (೧೦) ಉತ್ತರ ಕ್ರಿಯೆಗಾಗಿ ದೇಹ

ವನ್ನು ಸಾಗಿಸುವರು. ತಮ್ಮ ದೇಶಕ್ಕೆ ಹಿಂದಿರುಗಿ, ರುದ್ರನಲ್ಲಿ ಹೋರಿ ರುದ್ರನಲ್ಲಿ ಸೇರಿದ ಅಶ್ವತ್ಥಾಮನಿಗೆ ಅಲ್ಲಿ ಒಂದು ದೇವಸ್ಥಾನವನ್ನು ಕಟ್ಟಿ, ಜಾತ್ರೆಯನ್ನು ಏರ್ಪಡಿಸುವುದಾಗಿ ಏಕಲವ್ಯನೂ ಮೇಳದವರೂ ಹರಸಿಕೊಳ್ಳುವರು—ಭರತ ವಾಕ್ಯ.''

***

ಶ್ರೀಯವರು ಕೊಟ್ಟ ನಾಟಕದ ಸಾರಾಂಶ ನಾಟಕಕ್ರಿಯೆಯನ್ನು ಸಾಕಷ್ಟು ವಿವರವಾಗಿಯೇ ತಿಳಿಸುತ್ತದೆ. ನಾಟಕದ ನಾಯಕ ತನ್ನ ದುರಹಂಕಾರದ ಪರಿಣಾಮವಾಗಿ ದೈವವನ್ನು ಧಿಕ್ಕರಿಸುತ್ತಾನೆ. ಆತ ಎಸಗಬೇಕೆಂದಿದ್ದ ಅಪಕೃತ್ಯವನ್ನು ತಪ್ಪಿಸುವುದಕ್ಕೆಂದು ದೈವ ಆತನನ್ನು ಮರುಳುಗೊಳಿಸಿ ಹೇಯವಾದ ಕೃತ್ಯದಲ್ಲಿ ತೊಡಗಿಸುತ್ತದೆ. ಅಷ್ಟಾದನಂತರ ಬುದ್ಧಿ ತಿಳಿಯಾದಾಗ ಆತ ತನ್ನ ಕೃತಿಗೆ ತಾನೇ ಹೇಸಿ ವ್ಯಥೆಪಡುತ್ತಾನೆ. ಯಾರೂ ಮೆಚ್ಚಲಾಗದ್ದನ್ನು ಮಾಡಿ ತಂದುಕೊಂಡ ಅವಮಾನಕ್ಕೆ ಸಾಯುವುದೊಂದೇ ಆತನ ದೃಷ್ಟಿಯಲ್ಲಿ ಪರಿಹಾರವಾಗಿ ಕಾಣುತ್ತದೆ. ಹಾಗೆಂದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಸತ್ತವನಿಗಾಗಿ ನಡೆಯಬೇಕಾದ ಸಂಸ್ಕಾರದ ವಿಷಯದಲ್ಲಿ ಚರ್ಚೆ ನಡೆದು, ಏನೆಂದರೂ ಆತ ಒಬ್ಬ ಮಹೋನ್ನತ ವ್ಯಕ್ತಿ, ಸರಿಯಾದ ಸಂಸ್ಕಾರ ನಡೆಯಬೇಕೆಂದು ನಿಶ್ಚಯಿಸಲಾಗುತ್ತದೆ. ಅದು ನಡೆಯುತ್ತದೆಂಬ ಭರವಸೆಯಲ್ಲಿ ನಾಟಕ ಮುಕ್ತಾಯವಾಗುತ್ತದೆ. ಇಲ್ಲಿ ಅಶ್ವತ್ಥಾಮನಾದರೆ ಅಲ್ಲಿ ಏಜಾಕ್ಸ್. ಇಬ್ಬರ ಕಥೆಯೂ ಇದೇ. ಎರಡೂ ನಾಟಕಗಳಲ್ಲಿ ಕ್ರಿಯೆ ಇದೇ ಕ್ರಮದಲ್ಲಿ ನಡೆಯುತ್ತದೆ. ತನ್ನ ಅಹಂಕಾರದ ಉರುಬಿನಲ್ಲಿ ದೈವವಿರೋಧ ಮತ್ತು ಅಪಕೃತ್ಯ ; ಪರಿತಾಪ ಮತ್ತು ಆತ್ಮಹತ್ಯೆ ; ಸಂಸ್ಕಾರದ ಚರ್ಚೆಯ ಮೂಲಕ ಆತನ ಗುಣ ಗೌರವದ ಪ್ರಶ್ನೆಯ ನಿರ್ಣಯ. ಇವನ್ನು ನಾಟಕ ಕ್ರಿಯೆಯ ಮೂರು ಹಂತಗಳಲ್ಲಿ ಕಾಣಬಹುದು. ನಾಯಕನ ಸ್ವಹತ್ಯೆಯ ನಂತರವೂ ಆತನ ಮೃತದೇಹದೆದುರಿನಲ್ಲಿಯೇ ಆತನ ಗುಣಗೌರವದ ವಿಷಯದಲ್ಲಿ ಚರ್ಚೆ ತೀರ್ಮಾನಗಳು ನಡೆಯುತ್ತವಾದ್ದರಿಂದ ನಾಟಕದ ಉದ್ದಕ್ಕೂ ಒಂದಿಲ್ಲೊಂದು ರೀತಿಯಲ್ಲಿ ಆತನ ಗುಣಪ್ರಕಾಶನಕ್ಕೆ ಪ್ರಾಧಾನ್ಯ ಬರುತ್ತದೆ. ಮೊದಲಿನ ಎರಡು ಹಂತಗಳಲ್ಲಿ ದುರಂತಮೂಲವಾದ ಆತನ ಸ್ವಭಾವವಿಶೇಷ, ಅದರ ವಿವಿಧ ಬಗೆಗಳು ಮತ್ತು ಪರಿಣಾಮಗಳು ಎದ್ದು ಕಾಣುತ್ತವೆಯಾದರೆ ಕೊನೆಯ ಹಂತದಲ್ಲಿ ಇವಕ್ಕೆ ಇದಿರಾಗಿ ಆತನ ಉನ್ನತಿ ವ್ಯಕ್ತವಾಗುತ್ತದೆ. ದೊಡ್ಡವನಾಗಿದ್ದವ ಪೂರ್ವಾರ್ಧದಲ್ಲಿ ಸಾಯುತ್ತಾನೆ. ಉತ್ತರಾರ್ಧದಲ್ಲಿ ಸಾವಿನ ಅಪಕೀರ್ತಿ ಕಳೆದು ಅದರ ಮೂಲಕವೇ ಎಂಬಂತೆ ಇನ್ನೂ ದೊಡ್ಡವನಾಗಿ ಕಾಣುತ್ತಾನೆ. ಹೀಗೆ ನಾಟಕದ ಉದ್ದಕ್ಕೂ ನಾಯಕನ ಗುಣ, ದೋಷ, ಪ್ರಭಾವ, ಕೀರ್ತಿ, ಅವನತಿ, ಉನ್ನತಿ ಎದ್ದು ಕಾಣುವಂತೆ ನಾಟಕಕ್ರಿಯೆ ಮುಂದುವರಿಯುತ್ತದೆ.

ಅಹಂಕಾರದ ಮದ (ಹ್ಯೂಬ್ರಿಸ್) ದೇವತೆಗಳ ಕೋಪವನ್ನು ಕೆರಳಿಸುತ್ತದೆ, ಅದೇ ನಾಯಕನ ಪತನಕ್ಕೆ ಕಾರಣವಾಗುತ್ತದೆ ಎನ್ನುವುದು ಗ್ರೀಕ್ ದುರಂತ ನಾಟಕಗಳಲ್ಲಿ ಒಂದು ಪ್ರಧಾನ ವಿಚಾರ. 'ಅಶ್ವತ್ಥಾಮನ್' ನಾಟಕದಲ್ಲಿಯೂ ನಾಟಕಕ್ರಿಯೆಯ ಉದ್ದಕ್ಕೂ ಅದೇ ವಿಚಾರ ಎದ್ದು ಕಾಣುತ್ತದೆ. ಅಶ್ವತ್ಥಾಮನ ಪತನಕ್ಕೆ ಆತನ ಅಹಂಕಾರಮದವೇ ಕಾರಣ. ಆತನ ಕಥೆಯೆಂದರೆ ಆತನ ಅಹಂಕಾರದ ಕಥೆಯೇ. ಅದು ಆತನ ಪತನಕ್ಕೆ ಕಾರಣವಾದಂತೆ ಅದಕ್ಕೆ ಹಾಗೆ ಈಡಾಗುವುದರಲ್ಲಿ ಆತನ ಹಿರಿಮೆಯೂ ಪ್ರಕಟವಾಗುತ್ತದೆ. ಕೆಡಕನ್ನು ಮಾಡುತ್ತಿರುವಾಗಲೂ ಈತ ಒಬ್ಬ ಅಸಾಮಾನ್ಯ ಎಂಬ ಭಾವನೆ ಉಂಟಾಗುತ್ತದೆ. ಆದ್ದರಿಂದ ಆತನ ಹಿರಿಮೆ ಕಿರಿಮೆಗಳನ್ನು ಬಿಡಿಸಿ ನೋಡುವುದೇ ನಾಟಕದ ವಿಮರ್ಶೆಯಾಗುತ್ತದೆ. ಅದರ ಅರ್ಥವಂತಿಕೆಯನ್ನು ತಿಳಿದುಕೊಳ್ಳುವ ಮಾರ್ಗವಾಗುತ್ತದೆ.

ಕಗ್ಗೊಲೆಯನ್ನು ಮಾಡಿದವರು ಯಾರು ಎಂದು ಕೃಷ್ಣ ಅರಸುತ್ತ ಬಂದಾಗ ರುದ್ರ ಕೊಡುವ ದೀರ್ಘ ವಿವರಣೆ ಇಡೀ ನಾಟಕಕ್ಕೆ ಒಂದು ಮುನ್ನುಡಿ ಮಾತ್ರವಲ್ಲ, ಒಂದು ಕೈಪಿಡಿಯಂತಿದೆ. ನಡೆದದ್ದೇನು ಎನ್ನುವುದರ ಜೊತೆಯಲ್ಲಿ ನಡೆದದ್ದು ಹೇಗೆ ಎನ್ನುವುದನ್ನೂ ವಿವರಿಸುತ್ತಾನೆ. ಯಾವುದೋ ಸಾಹಸಕ್ಕೆಂದು ಹೊರಟಂತಿದ್ದ ಅಶ್ವತ್ಥಾಮನನ್ನು ಅವನಿಗೆ ಪ್ರಿಯನಾಗಿದ್ದ ರುದ್ರ ಯಾವ ವರವನ್ನು ಕೊಡಲಿ ಎಂದು ಕೇಳಿದಾಗ ಅದನ್ನು ಕಿವಿಗೆ ಹಾಕಿಕೊಳ್ಳದೆ ತನ್ನ ಸೇಡಿನ ಆಲೋಚನೆಯಲ್ಲಿಯೇ ಪಾಂಡವರಿಗೆ ಪ್ರಳಯಕಾಲ ಬಂದಿತು ಎನ್ನುತ್ತಾನೆ. "ಕೆಲವರನ್ನು ಬಿಟ್ಟು" ಎಂದು ರುದ್ರ ಹೇಳಿದಾಗ ಆತನ ಅಹಂಕಾರ ಕೆರಳುತ್ತದೆ. "ನೋಡುತಿರು ಎಲೆ ರುದ್ರ, ದೂರದೊಳ್ ನೋಡುತಿರು, ವೀರ್ಯ್ಯಂ ಮಾನುಷಂ ಅದೆಂತಿರ್ಕುಂ ಎಂಬುದನ್" ಎನ್ನುತ್ತಾನೆ. "ಮದಿಸಿ ತಾನ್ ನಕ್ಕನ್, ಆನ್ ನಕ್ಕೆನ್, ಮಾಯಮನ್ ಬೀಸಿದೆನ್" ಎಂದು ರುದ್ರ ಹೇಳುತ್ತಾನೆ. ತಾನ್ ನಕ್ಕನ್, ಆನ್ ನಕ್ಕೆನ್, ಈ ಎರಡು ಮಾತುಗಳ ನಡುವೆ ಇಡೀ ನಾಟಕದ ಚಾಲಕ ಸೂತ್ರ ಅಡಗಿದೆ. ಈ ಎರಡು ನಗುಗಳ ನಡುವೆ ದುರಂತ ಬೆಳೆಯುತ್ತದೆ. ಒಂದು ಕಡೆ ಮಾನುಷ ವೀರ್ಯವನ್ನು ಮೆರೆದು ತೋರುವೆನೆಂಬ ಅಹಂಕಾರ ಮದದ ನಗೆಯಾದರೆ ಇನ್ನೊಂದು ಕಡೆ ಇದೆಂಥ ಹುಚ್ಚು, ತಿಳಿಗೇಡಿತನ, ಎನ್ನುವ ನಗೆ. ಹಾಗೆಂದು ರುದ್ರ ಬೀಸಿದ ಮಾಯೆ ಅಶ್ವತ್ಥಾಮನಲ್ಲಿ ಉರಿಯುತ್ತಿದ್ದ ಸೇಡುಬುದ್ಧಿಯ ಜೊತೆಯಲ್ಲಿ ಸೇರಿಕೊಂಡು ಮುಂದೆ ನಡೆಯುವುದೆಲ್ಲವೂ ನಡೆಯುವಂತೆ ಮಾಡುತ್ತದೆ. ಅಹಂಕಾರ ಅಶ್ವತ್ಥಾಮನಿಗೆ ಹುಟ್ಟುಗುಣವಾಗಿದೆ. ಚಿಕ್ಕಂದಿನಿಂದಲೂ ಬೆಳೆದು ಬಂದಿದೆ, ಶಸ್ತ್ರವಿದ್ಯೆಯನ್ನು ಹೇಳಿಕೊಟ್ಟು ದೇವರನ್ನು ನಮಿಸಿ ನಿನ್ನ ಪೌರುಷವನ್ನು ಮೆರೆ ಎಂದು ತಂದೆ ಹರಸಿದಾಗ ದೇವತೆಗಳ ನೆರವಿದ್ದರೆ ಹೇಡಿಯೂ ಗೆಲ್ಲುತ್ತಾನೆ. ಅವರ ಸಹಾಯವಿಲ್ಲದೆ ಜಯಲಕ್ಷ್ಮಿಯ ಮುಂದಲೆಯನ್ನು ಸೆಳೆಯುತ್ತೇನೆ ಎಂದಿದ್ದ. ಇನ್ನೊಂದು ಸಲ

ಯುದ್ಧದಲ್ಲಿ ರುದ್ರ ಸಹಾಯಕ್ಕೆ ಬಂದಾಗ ಎದುರಾಳಿಗಳ ಕಡೆಗೆ ಹೋಗು ಎಂದಿದ್ದ. ಕಾಲಕ್ರಮದಲ್ಲಿ ಅದು ಮತ್ತೂ ಬೆಳೆದಂತಿದೆ.

ಇಂಥ ಅಹಂಕಾರದ ಜೊತೆಯಲ್ಲಿ ತನ್ನ ದೊರೆಯಾಗಿದ್ದ ಕೌರವನ ಬಗೆಯಲ್ಲಿ ಅಪಾರವಾದ ನಿಷ್ಠೆಯನ್ನು ಇರಿಸಿಕೊಂಡಿದ್ದಾನೆ. ಆ ನಿಷ್ಠೆಯೇ ಆತನನ್ನು ಸೇಡಿಗೆಳೆಯುತ್ತದೆ. ಭೀಮನ ಧರ್ಮವಲ್ಲದ ಹೊಡೆತದಿಂದ ನೆಲಕ್ಕೆ ಬಿದ್ದ ತನ್ನ ಸ್ವಾಮಿಯ ಕರುಣಸ್ಥಿತಿಯನ್ನು ನೋಡಲಾಗದೆ ಸೇಡು ತೀರಿಸಿಕೊಳ್ಳುವ ಪ್ರತಿಜ್ಞೆಯನ್ನು ಮಾಡುತ್ತಾನೆ. ಈ ಸ್ವಾಮಿನಿಷ್ಠೆ ಆತ ತೊಡಗಿದುದಕ್ಕೆ ತತ್‌ಕ್ಷಣದ ಅದಮ್ಯವಾದ ಒಂದು ಪ್ರೇರಣೆಯಾಗುತ್ತದೆ. (ಏಜಾಕ್ಸನ ಪ್ರೇರಣೆ ಇಷ್ಟು ಮಹತ್ತ್ವವಾದದ್ದಲ್ಲ.) ಅಶ್ವತ್ಥಾಮ ಸೇಡಿಗಿಳಿಯುವುದು ತನ್ನ ಸ್ವಾಮಿನಿಷ್ಠೆಗಾಗಿ. ಏಜಾಕ್ಸ್ ಸೇಡಿಗಿಳಿಯುವುದು ತನಗೆ ಸಿಕ್ಕಬೇಕಾದದ್ದು ಸಿಕ್ಕಲಿಲ್ಲ, ಅದನ್ನು ತಪ್ಪಿಸಿದವರನ್ನು ದಂಡಿಸಬೇಕೆಂಬ ಸ್ವಾರ್ಥದ ಯೋಚನೆಗಾಗಿ. ಸ್ವಾಮಿಭಕ್ತಿಗಾಗಿ ಅಶ್ವತ್ಥಾಮನನ್ನು ಯಾರೂ ದೂಷಿಸುವ ಹಾಗಿಲ್ಲ. ಆತನಲ್ಲಿಯ ಕೋಪಾವೇಶಕ್ಕೂ ಸಮರ್ಥನೆ ಇದೆ. ಮೊದಲಿನಿಂದಲೂ ಪಾಂಡವರು ಎದುರಾಳಿಗಳು, ವೈರಿಗಳು. ಅವರ ಪರವಾಗಿದ್ದ ಕೃಷ್ಣನೂ ಆದ್ದರಿಂದ ವೈರಿಯೇ. ಭೀಮನಂತೂ ತನ್ನ ದೊರೆಯನ್ನು ಅಧರ್ಮದಿಂದ ಹೊಡೆದು ಕೆಡವಿದವ. ಒಂದು ದೃಷ್ಟಿಯಿಂದ ಆತ ಸೇಡಿಗೆ ತೊಡಗುವುದು ನ್ಯಾಯವೇ ಎನ್ನಬೇಕಾಗುತ್ತದೆ. ಅದನ್ನು ಆತ ಸ್ವಾಮಿ ಕಾರ್ಯವೆಂದೇ ಬಗೆಯುತ್ತಾನೆ. ಆದರೆ ಅದನ್ನು ನಡೆಸುವುದರಲ್ಲಿ ಆತನ ಸ್ವಭಾವದೋಷ ಕಾರ್ಯಮುಖವಾಗುತ್ತದೆ. ಅಪಕೃತ್ಯಕ್ಕೆಳೆಯುತ್ತದೆ. ದುರಂತಕ್ಕೆ ಕಾರಣವಾಗುತ್ತದೆ. ಹೀಗೆ ಆತನ ಪ್ರೇರಣೆ ಒಳ್ಳೆಯದಾದರೂ ಅದರಿಂದ ತೊಡಗುವ ಕಾರ್ಯದ ಪರಿಣಾಮ ವಿಪರೀತವಾಗುತ್ತದೆ ಎನ್ನುವುದೇ ಆತನ ಬದುಕಿನಲ್ಲಿಯ ದುರಂತ. ಆ ದುರಂತವನ್ನೇ ನಾಟಕ ಚಿತ್ರಿಸುತ್ತದೆ. ಆತನ ಸ್ವಭಾವದಲ್ಲಿಯ ದೋಷ ಎಷ್ಟು ಆಳವಾಗಿ ಬೇರೂರಿದ್ದಾಗಿದೆ, ಎಷ್ಟು ಬಗೆಯಲ್ಲಿ ಅದು ಕಾಣಿಸಿಕೊಳ್ಳುತ್ತದೆ ಎನ್ನುವುದನ್ನು ಆತ ಎಸಗಿದ ಅಪಕೃತ್ಯ ಮಾತ್ರವಲ್ಲದೆ ಅದರಿಂದಾಗಿ ಆತ ಎದುರಿಸಬೇಕಾದ ಸನ್ನಿವೇಶ ಪರಂಪರೆಯೂ ತೋರಿಸಿಕೊಡುತ್ತದೆ.

ನಾಟಕ ಪ್ರಾರಂಭವಾಗುವಾಗ ದುಷ್ಕೃತ್ಯ ನಡೆದುಹೋಗಿದೆ. ರುದ್ರ ಕೃಷ್ಣನಿಗೆ ಆತನನ್ನು ತೋರಿಸಿದಾಗ ಅಶ್ವತ್ಥಾಮ ಇನ್ನೂ ತನ್ನ ಕೋಪಾವೇಶದ ಸ್ಥಿತಿಯಲ್ಲಿಯೇ ಇದ್ದಾನೆ. ತಾವು ಕೇಳುತ್ತಿದ್ದುದು ನಿಜವೆ ಎಂದು ಮೇಳದವರು ಆತಂಕ ಪಡುತ್ತಿದ್ದಾಗಲೂ ಅಶ್ವತ್ಥಾಮನಂಥವ ಇಂಥ ಹೇಯ ಕೃತ್ಯವನ್ನು ಮಾಡಿರಲಾರ, ಇದರಲ್ಲಿ ಏನೋ ದೈವದ ಮೋಸವಿದೆ ಎಂದು ಕೊಳ್ಳುತ್ತಿರುವಾಗ ಭಾರ್ಗವಿ ಬಂದು ಅದನ್ನು ಮಾಡಿದವ ಅಶ್ವತ್ಥಾಮನೇ ಎಂದು ಹೇಳುತ್ತಾಳಲ್ಲದೆ ಆತನಿಗೆ ಬುದ್ಧಿ ತಿಳಿದು ಮಾಡಿದ್ದಕ್ಕಾಗಿ ಪರಿತಪಿಸುತ್ತಿದ್ದಾನೆಂದೂ ತಿಳಿಸುತ್ತಾಳೆ. ಮೇಳದವರು ಬಂದು ಆತನನ್ನು ಕಂಡಾಗ ಆತ

ತನ್ನನ್ನು ತಾನೇ ಹಳಿದುಕೊಳ್ಳುತ್ತಿದ್ದಾನೆ. "ತುರುಗಳರಿಯದುವನ್ ಇರಿದವನ್, ಆಹ ಧೀರನ್, ಆಹ ಶೂರನ್, ಹೆಸರೊ, ಹೋ, ರುದ್ರಾವತಾರನ್!" ಇನ್ನು ತಾನು ಬಾಳುವುದಕ್ಕೆ ಅರ್ಹನಲ್ಲ ಎಂಬ ನಿಲುವಿಗೆ ಬಂದಿದ್ದಾನೆ. ಅದಕ್ಕೆ ಕಾರಣ ಪಶ್ಚಾತ್ತಾಪ ವಲ್ಲ; ತಾನು ಮಾಡಿದ್ದು ನೈತಿಕವಾಗಿ ಹೇಯ ಎಂಬ ಅರಿವೂ ಅಲ್ಲ. "ಬಾನವರ ಮಾನ ವರ ಕಣ್ಣೊಳ್ ಇನ್ನೊಪ್ಪೆನ್" ಎನ್ನುವುದಕ್ಕಾಗಿ. "ಎನಗೆ ಲೋಕಂ ಮರುಳೆಂದು ಪಾಡುವುದೆ ಪಾಟಂ, ಪೆಸರೊ ಕೆಸರಂಟಿ ಶೋಕಂ." ಲೋಕ ತನ್ನನ್ನು ಹಳಿಯುತ್ತದೆ, ತನ್ನ ಹೆಸರಿಗೆ ಕಳಂಕ ತಟ್ಟಿತು ಎನ್ನುವುದು ಆತನ ದುಃಖ. ಅಹಂಕಾರಿಗೆ ತನ್ನ ಹೊರತು ಬೇರೆ ಯೋಚನೆ ಹೊಳೆಯದೆ, ತನ್ನನ್ನು ಕುರಿತೇ ಚಿಂತಿಸುವುದು ಸ್ವಾಭಾವಿಕ. ಅಹಂಕಾರದ ಒಂದು ಮುಖವಾದ ಆತ್ಮನಿಷ್ಠೆ ತನಗಾದ ನಷ್ಟವನ್ನು ನೆನೆಯುತ್ತದೆಯೇ ಹೊರತು ಬೇರೆ ಯೋಚನೆಯನ್ನು ಮಾಡುವುದಿಲ್ಲ. ತಾನು ಎಂಥವನು ಎಂಥವನಾದೆ ಎಂಬ ಯೋಚನೆಯೇ ಬಲವಾಗಿದ್ದುದನ್ನು "ಇಂತಪ್ಪನ್ ಇಲ್ಲದೆಂದಾದೆನ್, ಈಗಳೋ ಇಂತಪ್ಪನ್ ಇಲ್ಲಮೆಂದೇ ಆದೆನ್, ಪುಡಿಯೊಳಗೆ ಪುಡಿಯ ಪುಡಿಯಾದೆನ್ ನಾಣ ನುಡಿ ಯಾದೆಲ್ಲನ್" ಎಂಬ ಅಶ್ವತ್ಥಾಮನ ಮಾತುಗಳು ಆತನ ಸ್ವಾರ್ಥನಿಷ್ಠವಾದ ಯೋಚನೆ ಗಳನ್ನು ಸಾರಿ ಹೇಳುತ್ತವೆ. ತಾನು ನೀತಿಗೆಟ್ಟವನೆನ್ನುವುದಕ್ಕಿಂತ ಮಾನಕೆಟ್ಟವನು, ಲೋಕದ ನಗೆಗೆ ಈಡಾದವನು ಎಂಬ ಭಾವವೇ ಆತನನ್ನು ತತ್ಕ್ಷಣದಲ್ಲಿ ಇನ್ನು ಬದುಕಿ ಪ್ರಯೋಜನವಿಲ್ಲ ಎಂಬ ಯೋಚನೆಯತ್ತ ತಳ್ಳುತ್ತದೆ. ಅಷ್ಟು ಬಲವತ್ತರವಾಗಿದೆ ತನ್ನ ಬಗೆಯುಲ್ಲಿಯ ಆತನ ಪ್ರೀತಿ. ಬದುಕು ತನ್ನನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ; ತನ್ನ ಸ್ವಾಮಿ ಕೂಡ ತನ್ನ ಯೋಗ್ಯತೆಗೆ ತಕ್ಕಂತೆ ತನ್ನನ್ನು ನೋಡಿಕೊಳ್ಳಲಿಲ್ಲ; ಯಾವ ಸುಖ ವನ್ನೂ ತಾನು ಕಾಣಲಿಲ್ಲ ಎಂದು ಆತ್ಮಾನುಕಂಪದತ್ತ ಆತನನ್ನು ತಳ್ಳುತ್ತದೆ ಸ್ವಂತದ ಬಗೆಯುಲ್ಲಿಯ ಅಭಿಮಾನ. ಸಾಯುವ ನಿರ್ಧಾರವನ್ನು ಕೈಕೊಂಡಾಗಲೂ ಆ ಸಾವು ಸ್ವಹತ್ಯೆಯಾಗಬೇಕೆನ್ನುವುದಕ್ಕೆ ಕಾರಣ ವೈರಿಗೆ ತನ್ನನ್ನು ಕೊಂದ ಸರಿತಸ ಬೇಡ ಎನ್ನು ವುದಕ್ಕಾಗಿ. ತನ್ನನ್ನು ಕೊಂದುಕೊಳ್ಳುವ ಹೆಮ್ಮೆಯೂ ತನ್ನದೇ ಆಗಿರಬೇಕು ಎನ್ನುವಷ್ಟು ಆಳವಾದದ್ದು ಆತನ ಆತ್ಮಾಭಿಮಾನ. "ತಕ್ಕನ್ ತಕ್ಕವೊಲ್ ಬಾಳ್ದಪನ್, ತಕ್ಕವೊಲ್ ಸತ್ತಪನ್." ಆತನ ಅಹಂಕಾರದ ಮಟ್ಟ ಇದು! ಸಾಯುವುದಾದರೂ "ಸಾಹಸಮೇ ನಾನುಮೊಂದೆಸಗಿ" ಸಾಯಬೇಕು. ಅಲ್ಲದೆ ತಾನು "ಎದೆಯುರ್ಕಿನ್ ಅಳಿದನೆಂಬುದನ್" ತಂದೆ ತಿಳಿಯಬೇಕು.

ಅಶ್ವತ್ಥಾಮನ ಅಹಂಕಾರ ಇಂಥ ಆತ್ಮನಿಷ್ಠೆಯ ಮಟ್ಟದಲ್ಲಿ ಮಾತ್ರ ಉಳಿಯು ವುದಿಲ್ಲ. ದೈವತವನ್ನು ಕುರಿತಂತೆ ಔದ್ಧತ್ಯವಾಗುವವರೆಗೆ ಬೆಳೆಯುತ್ತದೆ. ತಾನು ನೆಚ್ಚಿದ ರುದ್ರನೇ ತನಗೆ ಮೋಸ ಮಾಡಿದ ಎಂದುಕೊಳ್ಳುತ್ತಾನೆ. ದೇವರಾಣೆ ಇಟ್ಟು ಭಾರ್ಗವಿ ಬೇಡಿಕೊಂಡಾಗ ದೇವರ ಬಗೆಯುಲ್ಲಿಯ ಋಣ ಹರಿದು ಹೋಯಿತೆಂದು ಹೇಳು

ತ್ತಾನೆ. ದೇವರ ಬಗೆಯಲ್ಲಿ ಮನುಷ್ಯ ಉದ್ಧತನಾಗಿ ನಡೆದುಕೊಳ್ಳುವುದು ಗ್ರೀಕರ ದೃಷ್ಟಿಯಲ್ಲಿ ಮಹಾಪರಾಧ. ಹಾಗೆ ನಡೆದುಕೊಂಡವನನ್ನು ದೇವರು ಶಿಕ್ಷಿಸದೆ ಬಿಡುವುದಿಲ್ಲ ಎನ್ನುವುದು ಅವರ ದೃಢವಾದ ನಂಬಿಕೆಯಾಗಿತ್ತು. ನಮ್ಮಲ್ಲಿಯಾದರೂ ಅದೊಂದು ಪಾಪವೇ. ಹಾಗೆಂದೇ ರುದ್ರ ಹೇಳಿದ್ದು–"ದೈವದೊಳ್ ಸೊರ್ಕುನುಡಿ ನುಡಿಯದಿರ್" ಎಂದು ; "ಮಿತಿಯರಿದು ನೆಗಳ್ವರ್ಗೆ ದೇವರ್ಕಳ್ ಒಸೆದಪರ್, ಮುರಿದಪರ್ ಮಿಕ್ಕರನ್." ಆದರೆ ಅಶ್ವತ್ಥಾಮನ ಮಿತಿಮೀರಿದ ಅಹಂಕಾರಕ್ಕೆ ದೇವರ ಹಂಗೂ ಉಳಿಯುಲಿಲ್ಲ. "ಆ ಕ್ಷುದ್ರ ದೇವತೆಗಳೇನ್ ಬಲ್ಲವೆನ್ನನ್" ಎನ್ನುವವರೆಗೆ ಮಾತು ಹೋಗುತ್ತದೆ. ತನ್ನ ಹೊರತು ಯಾವುದನ್ನೂ ಕಾಣಲಾಗದ ಕುರುಡನನ್ನಾಗಿಸಿತು ಆತನ ಆತ್ಮಾಭಿಮಾನ. ಕೊನೆಯ ಗಳಿಗೆಯಲ್ಲಿ ರುದ್ರನನ್ನು ಬೇಡಿಕೊಳ್ಳುತ್ತಾನೆ—ತನ್ನ ಮೃತ ದೇಹವನ್ನು ಶತ್ರುಗಳು ಮೊದಲು ನೋಡದಂತಾಗಲಿ ಎಂದು. ಅವರು ಮೊದಲು ನೋಡಿದರೆ ತನ್ನನ್ನು ನಾಯಿನರಿಗಳಿಗೆ ಎಸೆಯುತ್ತಾರೆ ಎನ್ನುವುದಕ್ಕಾಗಿ. ಅವರ ಹೆಮ್ಮೆ ಅವರಿಗೆ ಬೇಡ, ಅವರ ಅವಮಾನ ತನಗೆ ಬೇಡ ಎನ್ನುವುದು ಆತನ ಮನಸ್ಸು. ಸಾವಿನಾಚೆಯವರೆಗೂ ಆತನ ಅಹಂಕಾರ ಚಾಚುತ್ತದೆ. ಹೀಗೆ ಅಶ್ವತ್ಥಾಮನಲ್ಲಿಯ ಸ್ವಭಾವದೋಷವಾದ ಅಹಂಕಾರ ಬಗೆಬಗೆಯಾಗಿ ಕಾಣಿಸಿಕೊಳ್ಳುತ್ತದೆ.

ಇಂಥ ಮನಸ್ಸು ತನ್ನ ಅವಮಾನಕ್ಕಾಗಿ ದುಃಖ ಪಡಬಹುದೇ ಹೊರತು ತಾನು ಮಾಡಿದ ಅಪಕೃತ್ಯಕ್ಕಾಗಿ ಪಶ್ಚಾತ್ತಾಪ ಪಡುವುದಿಲ್ಲ. ತಾನು ಮಾಡಿದ್ದು ತಪ್ಪು ಎಂದೆನಿಸದೆ ಪಶ್ಚಾತ್ತಾಪ ಸಾಧ್ಯವಿಲ್ಲ. ಅಶ್ವತ್ಥಾಮನಿಗೆ ಹಾಗೆನಿಸುವುದೇ ಇಲ್ಲ. ಆದ್ದರಿಂದ ಪಶ್ಚಾತ್ತಾಪದ ಭಾವನೆ ಆತನ ಹತ್ತಿರ ಸುಳಿಯುವುದಿಲ್ಲ. ಬುದ್ಧಿ ತಿಳಿದಾಗ ತಾನು ನಡೆಸಿದ್ದ ಕಗ್ಗೊಲೆಯನ್ನು ಕಂಡು ತನ್ನನ್ನು ಪಾಪಿ ಎಂದು ಹಳಿದುಕೊಳ್ಳುತ್ತಾನೆ. ಅದು ಆತ್ಮಾವಹೇಳನವೇ ಹೊರತು ಪಾಪ ಪ್ರಜ್ಞೆಯಲ್ಲ. ತಾಯಿಯಿಂದ, ಮೇಳದವರಿಂದ ತಪ್ಪಿಸಿಕೊಂಡು ಹೋಗಬೇಕಾದಾಗ ತೀರ್ಥಗಳಲ್ಲಿ ತನ್ನ ಕಳಂಕವನ್ನು ತೊಳೆದುಕೊಳ್ಳುವ ಮಾತನ್ನು ಹೇಳುತ್ತಾನೆ. ಆದರೆ ಅದು ತನ್ನ ನಿಜವಾದ ಉದ್ದೇಶವನ್ನು ಮರೆಮಾಚುವ ಮಾತು. ತನ್ನನ್ನು ದೈವ ಮೋಸಮಾಡಿತೆಂದಲ್ಲದೆ ತಪ್ಪು ತನ್ನದಲ್ಲ ಎನ್ನುವುದೇ ಆತನ ನಿಲುವು, ಕೊನೆಯವರೆಗೂ, "ದೈವಂ ತಪ್ಪಾಗಿ ನಡಸುವೊಡೆ, ಕಲಿ ಎಡಪುವನ್", ಎಂದೇ ಹೇಳುತ್ತಾನೆ. ತನ್ನ ಮಗನನ್ನು ಹರಸುವಾಗ "ತಂದೆಯಿನ್, ಕಂದ ಮೇಲಾಗ ದೃಷ್ಟದೊಳ್" ಎನ್ನುವಾಗ ತನ್ನ ಅದೃಷ್ಟವನ್ನೇ ದೂಷಿಸುತ್ತಾನೆ. "ಮಿಕ್ಕೆಲ್ಲ ನಡತೆಯುಳವ್ ಆವನಂತೆ ಆಗು" ಎಂದು ಹೇಳುತ್ತಾನೆಂದ ಮೇಲೆ ತನ್ನ ನಡತೆಯಲ್ಲಿ ಯಾದ ತಪ್ಪೂ ಆತನಿಗೆ ಕಾಣುವುದಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ನಾಟಕದಲ್ಲಿ ಮೊದಲಿಂದ ಕೊನೆಯವರೆಗೆ ಎಲ್ಲ ಪ್ರಮುಖ ಪಾತ್ರಗಳ ಬಾಯಲ್ಲೂ ವಿಧಿಯ, ದೇವತೆಗಳ ಪ್ರಾಬಲ್ಯದ, ಮಾತುಗಳು ಬರುತ್ತವೆ. ಗ್ರೀಕ್ ನಾಟಕ ಮನುಷ್ಯ

ಜೀವನದ ಮೇಲಿನ ದೇವತೆಗಳ ಆಧಿಪತ್ಯವನ್ನು ಒತ್ತಿ ಹೇಳುತ್ತದೆ. ಇದಾದರೂ ಭಾರತೀಯ ವಿಚಾರ ಸಂಪ್ರದಾಯಕ್ಕೆ ಹೊರತಲ್ಲ. ಅನಿರೀಕ್ಷಿತವಾದದ್ದು, ಅಥವಾ ಆಗಬಾರದ್ದು ಏನಾದರೂ ನಡೆದಾಗ ವಿಧಿಯ, ದೈವದ ಮಾತು ಬಂದೇ ಬರುತ್ತದೆ ನಮ್ಮಲ್ಲಿಯೂ. (ನಾಟಕದಲ್ಲಿ ಒಂದೇ ಒಂದುಸಲ ಮೇಳನಾಯಕನು ಹೇಳುವ ವಿಚಾರ —" ಆಳ್ ಸಿರಿಗೆ ಕರುಬುವುದು ದೈವಂ " ಎಂಬ ವಿಚಾರ—ಮಾತ್ರ ನಮ್ಮ ನಂಬಿಕೆಗಳಿಗೆ ಹೊಂದಲಾರದ್ದಾಗಿ ಕಂಡುಬರುತ್ತದೆ.) ನಡೆಸಿದ ಕೊಲೆಯ ಆವೇಶದಲ್ಲಿಯೇ ಇದ್ದ ಅಶ್ವತ್ಥಾಮನನ್ನು ಕಂಡು ಕೃಷ್ಣ " ವಿಧಿವಶದೆ ಕಾಲ್ತೊಡರ್ದು ಬಿಳ್ದಂಗೆ ಮರುಗುವೆನ್ " ಎನ್ನುತ್ತಾನೆ. " ಮಿತಿಯರಿದು ನೆಗಳ್ವರ್ಗೆ ದೇವರ್ಕಳ್ ಒಸೆದಪರ್—ಮುರಿದಪರ್ ಮಿಕ್ಕರನ್ " ಎನ್ನುತ್ತಾನೆ ರುದ್ರ. " ದೇವರು ಇತ್ತಂತೆಯೇ ನಾವ್ ನಗುವುದಳ್ವುದು " ಎಂದು ಮೇಳನಾಯಕ ಹೇಳುತ್ತಾನೆ. ಕೃಷ್ಣನಿಂದ ದೂತ ತಂದ ಮಾತು " ತಾನ್ ಮನುಷ್ಯನೆ ಎಂಬುದನ್ ಮರೆತು, ಕಡುಕೊರ್ಬಿ, ಒಳ್ಳಿತರ್ಕಿಲ್ಲನ್, ಆಗಳೇ ದೇವರ್ಕಳ್ ಅವನ ಬಾಳ್ಗೆಡರೊಡ್ಡಿ ಕೆಳಗುರುಳೆ ಪೊಯ್ವರ್ " ಅಶ್ವತ್ಥಾಮನ ನಡೆಯ ಮೇಲೊಂದು ವ್ಯಾಖ್ಯಾನದಂತಿದೆ. ಭಾರ್ಗವಿ ಅಶ್ವತ್ಥಾಮನನ್ನು " ದೈವಹತ ವೀರ " ಎನ್ನುತ್ತಾಳೆ. ಕೊನೆಯಲ್ಲಿ ಏಕಲವ್ಯ ಆ ದಿನವೇ ತನ್ನನ್ನು ಬೇಟೆಗೆ ವಿಧಿ ಸೆಳೆಯಬೇಕೆ ? " ವಿಧಿ ಮುಳಿಯೆ ಆರಿರ್ದುಮ್ ಏನ್ ಮಾಳ್ಪರ್ ?' " ಎನ್ನುತ್ತಾನೆ. ಅಭಿಮನ್ಯುವಿನ ಕೊಡುಗೆಯಾಗಿ ಬಂದಿದ್ದ ಖಡ್ಗದ ಮೇಲೆಯೇ ಬಿದ್ದು ಅಶ್ವತ್ಥಾಮ ಸಾಯುವಂತಾದದ್ದು "ವಿಧಿಯ ಗತಿ." "ಇದುವುಂ, ಇಂತೆಲ್ಲಮುಂ, ದೈವಮ್ ಒಡ್ಡಿದ ಬಲೆಗಳ್ ಅಳ್ಗಳ್ಗೆ." ಭೀಮ ಕೂಡ ಅಂದು ತಾವು ಬದುಕಿಕೊಂಡದ್ದು ದೇವರು ಬಂದು ಕಾಯ್ದುದ್ದರಿಂದ ಎಂದು ಹೇಳುತ್ತಾನೆ. ಮುಂದೆ ನಡೆದುದೆಲ್ಲವೂ ನಡೆಯುವಂತೆ ಅಶ್ವತ್ಥಾಮನನ್ನು ಮಾಯೆಗೆ ಸಿಲುಕಿಸಿದವ ರುದ್ರನೇ. ಹೀಗೆ ಮೊದಲಿಂದ ಕೊನೆಯವರೆಗೆ ಎಲ್ಲರೂ ಅಶ್ವತ್ಥಾಮನ ದುರಂತದಲ್ಲಿ ದೈವದ ಕೈವಾಡವನ್ನು ಕಾಣುತ್ತಾರೆ. ಮನುಷ್ಯನ ಬಾಳಿನ ಮೇಲೆ ಅದು ನಡಸುವ ಆಧಿಪತ್ಯವನ್ನು ಒತ್ತಿಹೇಳುತ್ತಾರೆ.

ಅಶ್ವತ್ಥಾಮನಲ್ಲಿ ಸ್ವಭಾವಗತವಾಗಿ ಆತನ ಅಹಂಕಾರವೇ ದುರಂತಮೂಲವಾಗಿರುವಾಗ, ಅದರ ಮೂಲಕವೇ ದೇವರ ಆಗ್ರಹವನ್ನು ತನ್ನ ಮೇಲೆ ತಂದುಕೊಂಡನೆನ್ನುವುದು ಸ್ಪಷ್ಟವಾಗಿರುವಾಗ, ಆತನನ್ನು " ದೈವಹತ " ಎನ್ನುವುದು ಒಂದು ಪರಿಭಾಷೆ ಮಾತ್ರ ಆಗುತ್ತದೆ. ಹಾಗೆ ಹೇಳುವ ಎಲ್ಲರ ಮನಸ್ಸಿನ ಹಿನ್ನೆಲೆಯಲ್ಲಿ ಇಂಥವನಿಗೆ ಈ ಗತಿಯಾಗಬಾರದಾಗಿತ್ತು ಎಂಬ ಭಾವನೆ ಇದೆ ಎನ್ನುವುದು ಗಮನಿಸಬೇಕಾದ ವಿಷಯ. ಆತ ದೈವವನ್ನು ಧಿಕ್ಕರಿಸುತ್ತಾನೆ ಎನ್ನುವುದನ್ನು ಔದ್ಧತ್ಯವೆಂದೇ ಹೇಳಬೇಕು. ಆದರೆ ಅಂಥದು ಸಾಧ್ಯವಾಗುವುದು ಅಸಾಮಾನ್ಯನಾದವನಿಗೆ ಮಾತ್ರ ಎನ್ನುವುದನ್ನೂ ಒಪ್ಪಬೇಕಾಗುತ್ತದೆ. "ನೋಡುತಿರು ವೀರ್ಯಂ ಮಾನುಷಂ " ಎಂದು ರುದ್ರನಿಗೆ ನೇರವಾಗಿ

ಹೇಳಬಲ್ಲವನ ಅಂತಸ್ಸತ್ವ ಸಾಮಾನ್ಯವೆಂದು ಹೇಳಲಾಗುವುದಿಲ್ಲ. ಈ ಅಂತಸ್ಸತ್ವವೇ ತನ್ನ ಮೇಲೆ ಎರಗಿದ, ಅಥವಾ ತಾನೇ ತಂದುಕೊಂಡ, ದುರಂತವನ್ನು ಧೀರರಲ್ಲಿ ಧೀರನಾಗಿ ಎದುರಿಸಬಲ್ಲ ಸಾಮರ್ಥ್ಯದ ಮೂಲವಾಗುತ್ತದೆ. ಅಂಥ ಸತ್ವವೇ ಅವಮಾನಕ್ಕಿಂತ ಅವಸಾನ ಲೇಸು ಎಂದುಕೊಳ್ಳುವಂತೆ ಮಾಡುತ್ತದೆ. ಕೊನೆಯುವರೆಗೂ ತನ್ನ ಸ್ವಾಮಿನಿಷ್ಠೆಯಿಂದ ತೊಡಗಿದ ಸೇಡಿನ ಬುದ್ಧಿ ಕಡಿಮೆಯಾಗಲಿಲ್ಲ, ಶತ್ರುಗಳ ಬಗೆಯಲ್ಲಿಯ ವೈರ ತಗ್ಗಲಿಲ್ಲ; ಅಂಥ ಕೆಚ್ಚು ಆತನದು ಎನ್ನುವುದನ್ನು ನಾವು ಮರೆಯುವಹಾಗಿಲ್ಲ, ಕೌರವನ ಪಕ್ಷವನ್ನು ವಹಿಸಿದಂದಿನಿಂದಲೇ ಆತನ ಅಂತಸ್ಸತ್ವದ ಕೆಚ್ಚು ತಪ್ಪು ದಾರಿಯನ್ನು ಹಿಡಿಯಿತು. ದಾರಿ ತಪ್ಪಿತೆಂದು ಸತ್ವ ಸಣ್ಣದು ಎನ್ನುವಹಾಗಿಲ್ಲ. ಆತನ ಸಾವನ್ನು ಕಂಡು ಶೋಕಿಸುವ ಏಕಲವ್ಯ, ಆತನಲ್ಲಿ ಕಂಡ ಗುಣಗಳು—''ಕಟ್ಟೊಟ್ಟಮೆ, ಕಲಿತನಂ, ಅಡಿದೆಗೆಯದಾಳ್ತನಂ, ಸ್ವಾಮಿಯೊಳ್ ನೆರೆಭಕ್ತಿ, ಜಗಮನದಿರಿಪ ಶಕ್ತಿ''—ಆತನಲ್ಲಿಯ ಸತ್ವದ ಆವಿಷ್ಕಾರಗಳು. ನಾಟಕದಲ್ಲಿ ಇಂಥ ಗುಣಗಳ ಪ್ರಕಾಶನಕ್ಕೆ ಅವಕಾಶವಿಲ್ಲ—ನಾಟಕ ಪ್ರಾರಂಭವಾಗುವ ಮೊದಲೇ ದುರಂತಕ್ಕೆ ಮೂಲವಾದ ಅಪಕೃತ್ಯ ನಡೆದುಹೋಗಿರುವುದರಿಂದ. ಆದ್ದರಿಂದ ಆತನ ಹಿರಿಮೆಯನ್ನು ಬೇರೆಯುವರ ಬಾಯಿಂದಲೇ ಕೇಳಬೇಕಾಗಿ ಬರುತ್ತದೆ. ''ಆರ್ ಇರ್ದರ್ ಈತನಿನ್ ಜ್ಞಾನಿಯುಂ ಶೂರನುಂ.'' ಎಂದು ರುದ್ರ (ನಾಟಕದ ಪ್ರಾರಂಭದಲ್ಲಿಯೇ) ಕೇಳಿದ್ದಕ್ಕೆ ಕೃಷ್ಣ ''ನಾನ್ ಕಾಣೆನ್ ಆರುಮನ್'' ಎನ್ನುತ್ತಾನೆ. ಇದಕ್ಕಿಂತ ಹೆಚ್ಚಿನ ಪ್ರಶಂಸೆ ಬೇಕಿಲ್ಲ. ಅಂಥ ಅಪಕೃತ್ಯವನ್ನು ಅಶ್ವತ್ಥಾಮ ಮಾಡಿರಲಾರ, ಮಾಡಿದ್ದರೆ ಅದು ದೈವದ ಮೋಸ ಎಂದುಕೊಳ್ಳುತ್ತಾರೆ ಮೇಳದವರು. ಕೊನೆಯಲ್ಲಿ ಭೀಮನಿಗೆ ಕೃಷ್ಣ ಹೇಳುವ ಮಾತುಗಳು ಅಶ್ವತ್ಥಾಮನ ಹಿರಿಮೆಯನ್ನು ನಿಚ್ಚಳವಾಗಿ ನೋಟಕನಲ್ಲಿ ನಿಲ್ಲಿಸುತ್ತವೆ. ''ದ್ವೇಷಿಸಿದನ್ ಎನ್ನನ್ ಇವನ್—ಎನಗೆ ಬದ್ಧದ್ವೇಷಿ—ಆದೊಡಂ ಗೌರವಂದೋರುವೆನ್, ಕಲಿಗಳೊಳ್ ಕಲಿ ಎಂದು ಸಾರುವೆನ್. ಅಭಿಮನ್ಯು ಅವನ್ ಒರ್ವನ್, ಇವನ್ ಒರ್ವನ್—ಬೆಂಕೆಗಳ್—ಸಿಡಿಲ ಮರಿಗಳ್—ರುದ್ರನಂಶಂಗಳ್.'' ಇಂಥ ಸತ್ವವೇ ಅತನನ್ನು ದುರಂತನಾಯಕನನ್ನಾಗಿಸುತ್ತದೆ.

ನಾಟಕದ ಒಳಗೆ ಎರಡು ಸಂದರ್ಭಗಳಲ್ಲಿ ಆತನ ಹಿರಿಮೆಯನ್ನು ಕಾಣುತ್ತೇವೆ. ಒಮ್ಮೆ ಸ್ವಹತ್ಯೆಯನ್ನು ನಿರ್ಧರಿಸಿದ ಮೇಲೆ ತನ್ನ ಮಗನನ್ನು ಕರೆಸಿ ಎತ್ತಿಕೊಂಡು ಹರಸುವಾಗ; ಇನ್ನೊಮ್ಮೆ ಸಾಯುವ ಮೊದಲು ಖಡ್ಗದ ಮೇಲೆ ಬೀಳುವುದಕ್ಕೆ ಮುನ್ನ. ಈ ಎರಡೂ ಸಂದರ್ಭಗಳು ಹೃದಯಸ್ಪರ್ಶಿಯಾಗಿದ್ದಷ್ಟೂ ಆತನ ಅಂತರಂಗದ ಹಿರಿಮೆಯನ್ನು ಎತ್ತಿತೋರಿಸುವಂಥವಾಗಿವೆ. ಮಗುವನ್ನು ಎತ್ತಿಕೊಂಡು ಅದರ ಮುಖದಲ್ಲಿಯ ಹಸುಳೆತನದ ಸುಖಶಾಂತಿಗಳನ್ನು ಕಂಡು ನಲಿಯುತ್ತಾನೆ. ಹಾಗೆಯೇ ಅಜ್ಜಿಯ ಕಣ್ಮಣಿಯಾಗಿ ಬೆಳೆದು ದೊಡ್ಡವನಾಗಿ ವೀರವನ್ನು ಮೆರೆ ಎಂದು ಹರಸಿ ತನ್ನ

" ಅಕ್ಕರೆಯ ಪೊರೆಯುನ್ " ಸ್ನೇಹಿತರು ನೋಡಿಕೊಳ್ಳಬೇಕೆಂದು ಹೇಳುತ್ತಾನೆ. ತನ್ನ ದಿವ್ಯ ಧನುಸ್ಸಿಗೆ ಆತ ಸರಿಯಾಗಿ ಬಾಣವನ್ನು ಹೂಡಿದ್ದನ್ನು ಕಂಡು ಸಂತೋಷಿಸುತ್ತಾನೆ. ಈ ಸಂದರ್ಭದಲ್ಲಿ ಆತನ ಹೃದಯದಲ್ಲಿಯ ವಾತ್ಸಲ್ಯ, ವಂಶಾಭಿಮಾನ, ತಕ್ಕತನ—ಇಂಥವ ಹೆಂಗಸರ, ಮಕ ಳ ಕಗ್ಗೊಲೆಯನ್ನು ಮಾಯೆಯು ಮುಸುಕಿನಲ್ಲಲ್ಲದೆ ಮಾಡಲಾರ ಎನ್ನಿಸುವಂಥ ಹೃದಯಮಾರ್ದವ—ಸ್ಪಷ್ಟವಾಗುತ್ತವೆ. ತನ್ನ ಬದುಕಿನ ಕೊನೆಯ ಗಳಿಗೆಯಲ್ಲಂತೂ ಆತನಲ್ಲಡಗಿದ ಉನ್ನತಿ ಉಕ್ಕಿಬರುತ್ತದೆ. ತನ್ನ ಕೊನೆಯ ನುಡಿಯಾಗಿ ಈ ಹಗಲ ಬೆಳಕು ತನಗೆ ಇನ್ನಿಲ್ಲ ಎಂದು ಎಳೆ ಬಿಸಿಲನ್ನು, ಸೂರ್ಯನನ್ನು ಕುರಿತು ಹೇಳುವಲ್ಲಿ, ಅಚ್ಚುಮೆಚ್ಚಿನ ತಾಯ್ನಾಡಾದ ಕನ್ನಡವನ್ನು ನೆನೆದುಕೊಳ್ಳುವುದರಲ್ಲಿ ಆತನ ಭಾವೋನ್ನತಿ ಕಾವ್ಯವಾಗಿ ಹರಿಯುತ್ತದೆ. ಆತನ ಪಾಲಿಗೆ ಕನ್ನಡನಾಡು ಪುಣ್ಯಭೂಮಿ. ಆತ್ಮಹತ್ಯೆಯ ನಿರ್ಧಾರವನ್ನು ಕೈಗೊಂಡಾಗಲೆ ಕನ್ನಡನಾಡನ್ನು ನೆನೆದು ಅಲ್ಲಿ ಕಣ್ಣು ಮುಚ್ಚಬೇಕೆಂದಿದ್ದ ತನಗೆ ಆ ಭಾಗ್ಯವಿಲ್ಲವಾಯಿತೆಂದು ಮರುಗಿದ್ದಾನೆ. ಈಗ ಕೊನೆಯ ಗಳಿಗೆಯಲ್ಲಿ ಅದನ್ನು ಮತ್ತೆ ಹೃತ್ಪೂರ್ವಕವಾಗಿ ನೆನೆದುಕೊಳ್ಳುತ್ತಾನೆ.

" ಓ ಬೆಳಕೆ, ಓ ಪುಣ್ಯಭೂಮಿಯೇ, ಕನ್ನಡಮೆ, ಎನ್ನ ತಾಯ್ನಾಡೆ,
ನೆಲನ್ ಅಱಿವ ಬನವಾಸಿ, ತೆಂಗು ಗಱಿ ಕೊಡೆಯಿರ್ಪ ಕಡಲುಲಿಯ ಮನೆಯೇ,
ಒಡನಾಡಿ ಪಸುಗಳೆ, ಕೆಳೆಗಳೆ, ಪೊನಲ್ಗಳೆ, ಓ ಪಸುರ ಬಯಲೆ,
ಬೀಳ್ಕೊಡಿಂ, ಬೀಳ್ಕೊಡಿಂ, ಎನಗೆ ಜೀವಾನಂದಮಾಗಿರ್ದರೆಲ್ಲರ್
ಬೀಳ್ಕೊಂಡಿಂ, ಪೋಗಿ ಬರ್ಪೆನ್—"

ಎಂಬ ಆತನ ಬೀಳ್ಕೊಡಿಗೆ ಕಣ್ಣೀರನ್ನು ತರಿಸುತ್ತದೆ. ಇಂಥ ಹಿರಿಯ ಚೇತನಕ್ಕೆ ಈ ಗತಿ ಬಂದಿತೇ ಎಂದು ಮರುಗುವಂತಾಗುತ್ತದೆ. " ಆವುದೆಂದೆಳ್ತರದ ಪೆಂಪಿಂದೆ ಎಲ್ಲಿ ಗುರುಳ್ದಯ್ " ಎಂದ ಭಾರ್ಗವಿಯ ದುಃಖ ನಮ್ಮ ಹೃದಯವನ್ನು ಕೊರೆಯುತ್ತದೆ. ಅಶ್ವತ್ಥಾಮ ಉದಾತ್ತ ವ್ಯಕ್ತಿತ್ವದ ದುರಂತ ನಾಯಕನಾಗಿ ನಿಲ್ಲುತ್ತಾನೆ.

ನಾಯಕನ ದುರಂತದ ನಂತರ ನಾಟಕವನ್ನು ವಿಸ್ತರಿಸುವ ಅಗತ್ಯವನ್ನು ಕುರಿತು ಮೂಲ ಗ್ರೀಕ್ ನಾಟಕದ ಬಗೆಯಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಅದೇ ಕ್ರಮದಲ್ಲಿ ಇಲ್ಲಿಯೂ ನಾಟಕ ಮುಂದುವರಿದಿದೆ. ಆದ್ದರಿಂದ ಅದರಿಂದ ಸಾಧಿತವಾಗುವುದೇನೆಂಬ ಪ್ರಶ್ನೆಗೆ ಉತ್ತರ ಹೇಳಬೇಕಾಗುತ್ತದೆ. ಗ್ರೀಕ್ ವೀರರ ಪರಂಪರೆಯಲ್ಲಿ ಏಜಾಕ್ಸನಿಗೆ ಹಿರಿಯ ಸ್ಥಾನವಿದ್ದಿತು. ಅಕಿಲಿಸನ ನಂತರದ ಸ್ಥಾನ ಅವನದೇ ಆಗಿದ್ದಿತು. ಆಥೆನ್ಸನಲ್ಲಿ ಆತ ಆಗಲೇ ಗೌರವಾರ್ಹ ವ್ಯಕ್ತಿಯೆನಿಸಿದ್ದ. ಅಂಥವ ಮೂಕ ಪ್ರಾಣಿಗಳನ್ನು ಕೊಂದು ಆತ್ಮ ಹತ್ಯೆ ಮಾಡಿಕೊಂಡನೆಂದರೆ ಆತನ ಗೌರವಕ್ಕೆ ಚ್ಯುತಿ ಬಂದಂತೆಯೇ. ಆದ್ದರಿಂದ ಆತನ ಹಿರಿಮೆಯನ್ನು ಮತ್ತೆ ಸ್ಥಾಪಿಸುವುದು ಅಗತ್ಯವಿದ್ದಿತು. ಆತನ ಅಪಕೃತ್ಯ ಯಾವುದೋ ಒಂದು ಆವೇಶಕ್ಕೆ ಒಳಗಾದಾಗ ಮಾಡಿದ್ದು. ಅಲ್ಲದೆ ವೀರನಿಗೆ ಸರಿಯಾಗಿ ಸಮಾಧಿಯಾಗ

ಬೇಕೆನ್ನುವುದು ಬಹು ಮುಖ್ಯವಾದ ವಿಚಾರವಾಗಿತ್ತು. ಮಹಾಭಾರತದಲ್ಲಿ ಅಶ್ವತ್ಥಾಮ ಒಬ್ಬ ವೀರನೆಂದು ಹೆಸರು ಪಡೆದಿದ್ದರೂ ಯಾವ ದೊಡ್ಡ ಗೌರವದ ಸ್ಥಾನವೂ ಆತನ ದಾಗಿರಲಿಲ್ಲ. ಆದರೆ ನಾಟಕದಲ್ಲಿಯ ಅಶ್ವತ್ಥಾಮ ಮಹಾಭಾರತದ ಅಶ್ವತ್ಥಾಮನಿಂದ ಬೇರೆಯಾಗಿದ್ದಾನೆ. ಸತ್ತ ಮೇಲೆ ಆತನ ದೇಹವನ್ನು ಭೀಮನ ಕೋಪಾವೇಶಕ್ಕೆ ಗುರಿಯಾಗಿಸುವುದು ಸರಿಯೆನಿಸದು. ಆದ್ದರಿಂದ ಆತನ ಹಿರಿಮೆಯನ್ನು ಎತ್ತಿ ಹೇಳುವುದರ ಜೊತೆಗೆ ನಾಟಕದ ಆ ಭಾಗ ಉದಾತ್ತವಾದ ಒಂದು ಜೀವನ ದೃಷ್ಟಿಯನ್ನು ವಿಶದಪಡಿಸುವ ಸನ್ನಿವೇಶವಾಗುತ್ತದೆ. ಹಾಗೆ ಮಾಡುವುದರಿಂದ ಶ್ರೀಯವರು ಮೂಲದಲ್ಲಿಯ ಕಿಂತಲೂ ಹೆಚ್ಚಿನ ಅರ್ಥವಂತಿಕೆಯನ್ನು ನಾಟಕಕ್ಕೆ ತಂದು ಕೊಟ್ಟಿದ್ದಾರೆ. ಅಶ್ವತ್ಥಾಮನ ದೇಹವನ್ನು ಹದ್ದು ನಾಯಿಗಳಿಗೆ ಹಾಕುತ್ತೇನೆಂದು ಬಂದ ಭೀಮನನ್ನು ಎದುರಿಸಿ ಏಕಲವ್ಯ ಯುದ್ಧಕ್ಕೆ ತೊಡಗಿದಾಗ ಕೃಷ್ಣ ಮಧ್ಯೆ ಪ್ರವೇಶಿಸಿ ಅದನ್ನು ತಡೆಯುತ್ತಾನೆ. ಮೇಳದವರು. ಲೋಕದಲ್ಲಿ ಯುದ್ಧವೆನ್ನುವುದು ಹೇಗೆ ಮೊದಲಾಯಿತೊ, ಅದಕ್ಕೆ ಕೊನೆಯೇ ಇಲ್ಲವೆ—ಕೌರವನ ಕಾಲು ಜಾರಿದಾಗ ನಕ್ಕಿದ್ದ ದ್ರೌಪದಿಯನ್ನು ಸಭೆಯಲ್ಲಿ ಎಳೆ ತರಿಸಿ, ಸೀರೆ ಸೆಳೆಯಿಸಿ, ತೊಡೆ ತೋರಿಸಿದ ; ಅದನ್ನು ಭೀಮ ಸೀಳಿದ ; ಅದರ ಸೇಡಿಗಾಗಿ ಅಶ್ವತ್ಥಾಮ ಈ ದುರಂತಕ್ಕೀಡಾದ; ಆತನ ದೇಹಕ್ಕಾಗಿ ಈಗ ಮತ್ತೆ ಭೀಮ ಏಕಲವ್ಯರ ಯುದ್ಧ—ಹೀಗೆ ಮರಿಯಿಂದ ಮರಿಯಿಕ್ಕುತ್ತ ಮುಂದುವರಿಯುತ್ತಿರುವ ಯುದ್ಧದ ರಕ್ತಪಾತ ಮುಗಿಯದೆ ಎಂದು ಕೇಳುತ್ತಾರೆ. ಯುದ್ಧದಲ್ಲಿಯೇ ವೀರ್ಯದ ಫಲವೆಂದರೆ ತಾಯಂದಿರು ಮಕ್ಕಳನ್ನು ಕಳೆದುಕೊಳ್ಳುವುದು, ಮಕ್ಕಳು ತಬ್ಬಲಿಯಾಗುವುದಷ್ಟೆ, ಇಂಥ ಯುದ್ಧವನ್ನು ನಿಲ್ಲಿಸಿ ಶಾಂತಿಯನ್ನು ನೆಲಸಬಾ ಎಂಬ ಮೊರೆಗೆ ಉತ್ತರವಾಗಿ ಕೃಷ್ಣ ಭೀಮನನ್ನು ಸಂತೈಸುವ ಯತ್ನವನ್ನು ಮಾಡುತ್ತಾನೆ. ರುದ್ರನೇ ಕೈ ಬಿಟ್ಟವನಲ್ಲಿ ಏಕಿಂಥ ಅಭಿಮಾನ ಎಂದು ಭೀಮ ಕೇಳಿದ್ದಕ್ಕೆ " ನಾಮೆಂತು ಕಂಡಪೆವು ಆ ರುದ್ರ ಹೃದಯಮನ್ ? ಪರಿಶುದ್ಧನನ್ ಮಾಡಿ ಆತ್ಮಮನ್ ಸೆಳೆದನೆನ್ಬೆನ್ " ಎಂದು ಉತ್ತರ ಹೇಳುತ್ತಾನೆ. 'ತಮ್ಮನ್ನು ಎಂದಿಗೂ ದ್ವೇಷಿಸಿದ, ಕೊಲ್ಲ ಬಯಸಿದ ಅಶ್ವತ್ಥಾಮನ ದೇಹವನ್ನು ಹಾಗೆ ಬಿಟ್ಟು ಕೊಡುವುದೆಂದರೆ ತಮಗೇನು ಜಯ ಬಂದ ಹಾಗಾಯಿತು ಎಂದು ಭೀಮ ಕೇಳಿದ್ದಕ್ಕೆ—

" ಕೆಳೆಯಂಗೆ ಸೋಲ್ಪುದೆ ಜಯಂ ; ಕ್ಷಮೆಯೆ ತಾನ್ ಜಯಂ ;
ಕ್ರೋಧಮನ್ ತುಬಿದಿಟ್ಟು, ಬಲ್ವಿಡಿದು ಧರ್ಮಮನ್,
ಬಗೆಯೊಡನೆ ಪೋರಾಡುವುದೆ ಜಯಂ—

ಎಂದು ಹೇಳಿದ ಕೃಷ್ಣನ ಮಾತು ಅಂದಿನ ವಿರಸವನ್ನು ಕೊನೆಗಾಣಿಸುತ್ತದೆ. ಲೋಕದಲ್ಲಿ ಯುದ್ಧ ಕೊನೆಗಾಣುವ ದಾರಿಯನ್ನು ತೋರಿಸುತ್ತದೆ.

ನಾಟಕದಲ್ಲಿಯ ಅಶ್ವತ್ಥಾಮ ಹಾಗೂ ಕೃಷ್ಣನ ವಿಚಾರದಲ್ಲಿ ಸಾಕಷ್ಟು ಚರ್ಚೆ,

ವಾದವಿವಾದಗಳು ನಡೆದಿವೆ. ಎರಡು ಬಗೆಯ ಆಕ್ಷೇಪಗಳನ್ನು ಎತ್ತಲಾಗಿದೆ. ಚಿರಂಜೀವಿಯಾದ ಅಶ್ವತ್ಥಾಮನನ್ನು ನಾಟಕ ಆತ್ಮಹತ್ಯೆಗೆ ತೊಡಗಿಸುತ್ತದೆ ಎನ್ನುವುದು ಒಂದು ; ಅವತಾರ ಪುರುಷನಾದ ಕೃಷ್ಣನನ್ನು ಮಾನವನಾಗಿ ಚಿತ್ರಿಸುತ್ತದೆ ಎನ್ನುವುದು ಇನ್ನೊಂದು. ಎರಡೂ ಆಕ್ಷೇಪಗಳಿಗೆ ಸಮರ್ಪಕವಾದ ಉತ್ತರಗಳನ್ನು ಹೇಳುವುದು ಸಾಧ್ಯವಿದೆ. ಅಶ್ವತ್ಥಾಮ ಚಿರಂಜೀವಿ ಎನ್ನುವ ವಿಚಾರ ಯಾರೋ ಬರೆದ ಯಾವುದೋ ಒಂದು ಶ್ಲೋಕವನ್ನು ಆಧರಿಸಿ ಜನಜನಿತವಾಗಿ ಬೆಳೆದದ್ದು. ಆತ ಚಿರಂಜೀವಿ ಎನ್ನುವುದಕ್ಕೆ ಮಹಾಭಾರತದಲ್ಲಿ ಆಧಾರವಿಲ್ಲ. ಆತ ಚಿರಂಜೀವಿಯಾಗಿದ್ದರೆ ಅಶ್ವತ್ಥಾಮಾ ಹತಃ ಎಂಬ ಧರ್ಮರಾಯನ ಮಾತನ್ನು ನಂಬಿ ದ್ರೋಣಾಚಾರ್ಯ ಶಸ್ತ್ರ ಸಂನ್ಯಾಸ ಮಾಡುತ್ತಿರಲಿಲ್ಲ. ಅಲ್ಲದೆ ಇಲ್ಲಿಯ ಅಶ್ವತ್ಥಾಮ ಮಹಾಭಾರತದ ಅಶ್ವತ್ಥಾಮನಿಂದ ಬೇರೆಯಾಗಿದ್ದಾನೆ. ಮಹಾಭಾರತದಲ್ಲಿ ಆತ ಪಾಂಚಾಲರನ್ನೂ ಉಪಪಾಂಡವರನ್ನೂ ಕೊಲ್ಲುತ್ತಾನೆ. ಇಲ್ಲಿಯವ ಕೊಲ್ಲುವುದಿಲ್ಲ—ರುದ್ರನ ಮೂಲಕ ಕೊಲ್ಲಿಸಾಗುವುದಿಲ್ಲ. ಆದ್ದರಿಂದ ಆತ ಚಿರಂಜೀವಿ ಹೌದೆ ಅಲ್ಲವೆ ಎನ್ನುವುದಕ್ಕಿಂತ ಈ ನಾಟಕದಲ್ಲಿಯ ಆತನ ಸಾವು ಸಮರ್ಪಕವೆ, ಸಮರ್ಥನೀಯವೆ ಅಲ್ಲವೆ ಎನ್ನುವ ಪ್ರಶ್ನೆ ಹೆಚ್ಚು ಮಹತ್ವದ್ದು. ಅವಮಾನಕ್ಕಿಂತ ಅವಸಾನವೇ ಒಳ್ಳೆಯದೆಂದುಕೊಂಡ ಆತನ ಸ್ವಾಭಾವಸತ್ವಕ್ಕೆ ಸಾವೊಂದೇ ಪರಿಹಾರವಾಗಿ ಕಾಣುತ್ತದೆ. ಆತನ ಸ್ವಭಾವವನ್ನು ನಾವು ಒಪ್ಪುವುದಾದರೆ ಆತನ ಸಾವನ್ನು ಒಪ್ಪಬೇಕಾಗುತ್ತದೆ. ಲೋಕದ ತಿರಸ್ಕಾರವನ್ನು ತಪ್ಪಿಸಿಕೊಳ್ಳುವುದಕ್ಕಿಂತ ಹೆಚ್ಚಿನದೇನನ್ನು ಆತನ ಸಾವು ಸಾಧಿಸಿತು ? ಅದಕ್ಕೆ ಇನ್ನೂ ಘನವಾದ ಉದ್ದೇಶವಿದ್ದಿದ್ದರೆ ಚೆನ್ನಾಗಿತ್ತು ಎಂದಿದ್ದಾರೆ. ಹಾಗೆನ್ನುವುದೆಂದರೆ ಆತನ ಪ್ರೇರಣೆ ಬೇರೆಯಾಗಿರಬೇಕಾಗಿತ್ತು. ಆದ್ದರಿಂದ ನಾಟಕವೇ ಬೇರೆಯಾಗಬೇಕಾಗಿತ್ತು, ಎಂದಂತಾಗುತ್ತದೆ.

ನಾಟಕ ಕೃಷ್ಣನನ್ನು ಒಬ್ಬ ಮನುಷ್ಯನನ್ನಾಗಿ ಮಾಡಿದೆ ಎನ್ನುವುದು ನಿಜ. ರುದ್ರ ತೋರಿಸಿದ ಅಶ್ವತ್ಥಾಮನ ದುರ್ದೆಸೆಯನ್ನು ಕಂಡು ತನಗೆ ಕಡು ವೈರಿಯಾಗಿದ್ದರೂ ತನ್ನ ವಿಧಿಯ ಪಾಶದಲ್ಲಿ ಸಿಲುಕಿದ ಆತನನ್ನು ಕಂಡು ಮರುಗುತ್ತಾನೆ. ಮನುಷ್ಯನ ಬಾಳೇ ಇಂಥದು ; " ಇಂದವನ್, ನಾಳೆ ನಾನ್. ಏನ್ ಪಾಡೊ ಆಳ ಬಾಳ್ ! ಬೀಸುವ ಬಯಲ್‌ಗಾಳಿ. ಪರಿದಡಂಗುವ ನೆಳಲ್ ! " ಎಂಬ ಆತನ ಉದ್ಗಾರ ಪೂರ್ತಿ ಮನುಷ್ಯಸಹಜವಾದದ್ದೇ ಆದರೂ ಜೀವನದ ಸ್ವರೂಪವನ್ನು ಪೂರ್ತಿಯಾಗಿ ತಿಳಿದವನದ್ದಾಗಿದೆ. ಆತನನ್ನು ಮನುಷ್ಯನನ್ನಾಗಿ ಮಾಡಲಾಗಿದೆ ಎಂದು ಆಕ್ಷೇಪಿಸುವವರು ಮನುಷ್ಯನಾದರೂ ಆತನ ವ್ಯಕ್ತಿತ್ವದ ಉನ್ನತಿ ಎಂಥದು; ಇಲ್ಲಿಯ ಆತನ ಪಾತ್ರ ಎಷ್ಟು ಘನವಾದದ್ದು, ಎಂಥ ಔದಾರ್ಯವನ್ನು ತೋರಿಸುತ್ತಾನೆ, ಶಾಂತಿಸೌಹಾರ್ದಧರ್ಮ ದೃಷ್ಟಿಗಳನ್ನು ಪ್ರತಿಪಾದಿಸುವ, ಯುದ್ಧವನ್ನು ತಡೆಯುವ, ಒಂದು ಶಕ್ತಿಯಾಗುತ್ತಾನೆ

ಎನ್ನುವುದನ್ನು ಮರೆಯುತ್ತಾರೆ. ರುದ್ರನ ಆಗ್ರಹವಿದ್ದ ಆ ಒಂದು ದಿನ ತನಗೆ ಕಡುವೈರಿಯಾಗಿದ್ದ ಅಶ್ವತ್ಥಾಮನನ್ನು ತಡೆದು ಉಳಿಸಿಕೊಳ್ಳಬೇಕೆಂದು ಏಕಲವ್ಯನಿಗೆ ಹೇಳಿ ಕಳುಹಿಸುವ ಮನಸ್ಸಿನ ಔದಾರ್ಯ ಸಣ್ಣದಲ್ಲ. ಕೊನೆಯಲ್ಲಿ ಅಶ್ವತ್ಥಾಮನ ಶವಸಂಸ್ಕಾರವನ್ನು ತಡೆಯಬೇಕೆಂದಿದ್ದ ಭೀಮನಿಗೆ ಹಾಗೆ ಹೃದಯವನ್ನು ಕಲ್ಲು ಮಾಡಿ ಸಂಸ್ಕಾರವನ್ನು ತಡೆಯುವುದೆಂದರೆ ಧರ್ಮವನ್ನು ತುಳಿದಂತೆ, ಅಂಥ ದ್ವೇಷ ಸಲ್ಲದು, ಎಂದು ಹೇಳಿ ಅಶ್ವತ್ಥಾಮನ ಗುಣಗಳನ್ನು ಬಾಯಿ ತುಂಬ ಹೊಗಳುತ್ತಾನೆ. ಆತನ ವೀರವನ್ನು ಕೊಂಡಾಡುತ್ತಾನೆ. ಆತ ಪೂಜ್ಯ ಎಂದು ಹೇಳುತ್ತಾನೆ. ಇದು ದೇವರಲ್ಲದಿದ್ದರೂ ದೇವರಂಥ ಮನುಷ್ಯನಿಗೆ ಮಾತ್ರ ಸಾಧ್ಯವಾದ ಹೃದಯವೈಶಾಲ್ಯ ; ವಿಶ್ವವಿಶಾಲವಾದ ಧರ್ಮದೃಷ್ಟಿ. ಮಾಸ್ತಿಯವರು "ಶ್ರೀರಾಮಪಟ್ಟಾಭಿಷೇಕ"ದಲ್ಲಿ ಶ್ರೀರಾಮನನ್ನು ಮಾನವನನ್ನಾಗಿ ಕಂಡಿದ್ದಾರೆ. ಹಾಗೆ ಚಿತ್ರಿಸಿದ್ದಾರೆ. ಹಾಗೆ ಮಾಡುವುದರಿಂದ ಶ್ರೀರಾಮನ ಘನತೆಗೆ ಚ್ಯುತಿ ಬಂದಿದೆ ಎಂದು ಯಾರೂ ಹೇಳಲಾರರು. ದೇವರು ಮನುಷ್ಯನಾಗಿ ಅವತರಿಸಿದ ಎಂದು ಹೇಳುವುದಕ್ಕಿಂತ ಮನುಷ್ಯ ದೊಡ್ಡವನಾಗಿ ದೇವರಾದ ಅಥವಾ ಇವನು ದೇವರು ಎಂದುಕೊಳ್ಳುವಂತೆ ಬೆಳೆದ ಎನ್ನುವುದು ಹತ್ತಿರದ ವಿಚಾರವಾಗುತ್ತದೆ. ನಂಬಿಕೆಯನ್ನು ಸಹಜವಾಗಿ ಗಳಿಸುತ್ತದೆ. ನಡತೆ ದೇವತ್ವದ ಕಲ್ಪನೆಗೊಂದು ನಿದರ್ಶನವಾಗುತ್ತದೆ. ಇಲ್ಲಿಯ ಕೃಷ್ಣ ಮನುಷ್ಯನಾದರೂ ಇವನು ದೇವರು ಎಂದುಕೊಳ್ಳಬೇಕಾದಂತೆ ನಡೆದುಕೊಳ್ಳುತ್ತಾನೆ. ಅವತಾರದ ಕಲ್ಪನೆಗಿಂತ ಇಲ್ಲಿಯಂಥ ನಡೆತೆ ಆತನ "ದೇವತ್ವ"ಕ್ಕೆ ಸಾಕ್ಷಿಯಾಗುತ್ತದೆ.

ನಾಟಕ ನಮ್ಮ ಮೇಲೆ ಮಾಡುವ ಪರಿಣಾಮವನ್ನು ವಿಶ್ಲೇಷಿಸಿ ನೋಡಿದಾಗ ಕೆಲವೊಂದು ಆಲೋಚನೆಗಳು ನಮ್ಮ ಮನಸ್ಸಿನಲ್ಲಿ ಮೂಡುತ್ತವೆ. ಒಂದು ಕಡೆಯಿಂದ ದೇವರು ಮತ್ತು ಮನುಷ್ಯರ ನಡುವಿನ ಸಂಬಂಧವನ್ನು, ಇನ್ನೊಂದು ಕಡೆಯಿಂದ ಧರ್ಮದೃಷ್ಟಿಯ ಪ್ರಭಾವವನ್ನು ಕುರಿತು ಚಿಂತಿಸುವಂತಾಗುತ್ತದೆ. ಈ ಎರಡೂ ಮನುಷ್ಯವ್ಯಾಪಾರದ ಇತಿಮಿತಿಗಳನ್ನು ನಿರ್ಧರಿಸುವ ಅಂಶಗಳಾಗುತ್ತವೆ. ಮನುಷ್ಯ ಸ್ವತಂತ್ರನಾಗಿದ್ದಷ್ಟು ಅಸ್ವತಂತ್ರನೂ ಆಗಿದ್ದಾನೆ. ಇವೆರಡರ ಮಿತಿಮೇರೆಗಳ ಮಧ್ಯದಲ್ಲಿಯೇ ವ್ಯಕ್ತಿಯ ಮನಸ್ಸು, ನಡೆ, ನುಡಿ, ಕಾರ್ಯಸಾಮರ್ಥ್ಯ ತಮ್ಮ ಅವಕಾಶಗಳನ್ನು ಪಡೆದು ಬಾಳಿನ ಏಳು ಬೀಳುಗಳನ್ನು ರೂಪಿಸಿಕೊಳ್ಳುತ್ತವೆ. ಮನುಷ್ಯ ಎಷ್ಟೇ ಸ್ವತಂತ್ರನೆಂದರೂ ತನ್ನನ್ನು ಮೀರಿದ ಶಕ್ತಿಗಳ ಸನ್ನಾಹದ ಮಧ್ಯದಲ್ಲಿ ಆತ ವ್ಯವಹರಿಸಬೇಕಾಗುತ್ತದೆ. ತನ್ನ ಸ್ವಭಾವವನ್ನು, ಕಾರ್ಯಪ್ರವೃತ್ತಿಯನ್ನು ರೂಪಿಸಿರುವ ಸಾವಿರಾರು ಪ್ರಭಾವಗಳು ಹಾಗೆಯೆ ಇತರರ ಸ್ವಭಾವಗಳು ಕಾರ್ಯ ಪ್ರವೃತ್ತಿಗಳು ಮತ್ತು ಅವೆಲ್ಲವುಗಳ ಪರಿಣಾಮಗಳು, ಎಲ್ಲವೂ ಹಾಸುಹೊಕ್ಕಾಗಿ ತೊಡಕಿಕೊಂಡಿರುವುದರಿಂದ ಯಾವುದು ಹೇಗೆ ಪರಿಣಮಿಸುತ್ತದೆ ಎನ್ನುವುದನ್ನು ನಾವು ತರ್ಕಬದ್ಧವಾಗಿ ವಿಶ್ಲೇಷಿಸಲಾಗುವುದಿಲ್ಲ.

ಹೀಗೆ ತಿಳಿಯಲಾಗದ ಪ್ರಭಾವಾಂಶಗಳ ಸಂಕೀರ್ಣವನ್ನೇ ನಾವು ಅದೃಷ್ಟ, ದೈವ ಎಂಬಂಥ ಹೆಸರುಗಳಿಂದ ಸಂಕೇತಿಸುತ್ತೇವೆ. ಹಾಗೆಯೆ ಮಾನವ ಸಮುದಾಯದ ಹಿತದ ದೃಷ್ಟಿಯಿಂದ ಧರ್ಮ, ನೀತಿ ಎಂಬ ಹೆಸರಿನಲ್ಲಿ ಮನುಷ್ಯ ಕೆಲವೊಂದು ವಿಧಿನಿಯಮ ಗಳನ್ನು ಏರ್ಪಡಿಸಿಕೊಂಡಿರುತ್ತಾನೆ. ಈ ಎರಡೂ ಮನುಷ್ಯನ ಕ್ರಿಯಾಸ್ವಾತಂತ್ರ್ಯಕ್ಕೆ ಮಿತಿಗಳನ್ನು ತಂದೊಡ್ಡುತ್ತವೆ. ತಿಳಿಯಲಾಗದ ಅದೃಷ್ಟದ ಬಗೆಯಲ್ಲಿ ವಿನೀತಭಾವ ವನ್ನು, ತಿಳಿಯಬಹುದಾದ ಧರ್ಮನೀತಿಗಳ ವಿಷಯದಲ್ಲಿ ವಿವೇಕದ ತಿಳಿವನ್ನು ಬೆಳೆಯಿಸಿ ಕೊಳ್ಳದಾಗ, ಅಥವಾ ಅಹಂಕಾರಪ್ರಮತ್ತನಾಗಿ ಅವನ್ನು ಧಿಕ್ಕರಿಸಿದಾಗ ಬದುಕು ತೊಡಕಿ ನಲ್ಲಿ ಸಿಕ್ಕುಬೀಳುತ್ತದೆ, ದುರಂತಕ್ಕೂ ಈಡಾಗುತ್ತದೆ. ಮಿತಿಯರಿತು ನಡೆಯುವವರನ್ನು ದೇವರು ಮೆಚ್ಚುತ್ತಾನೆ ಎಂಬ ನಾಟಕದಲ್ಲಿಯ ಮಾತು ಇದನ್ನೇ ಒತ್ತಿ ಹೇಳುತ್ತದೆ. ಎರಡನೆಯದಾಗಿ, ಈ ಎರಡೂ ಮನುಷ್ಯನ ಮೇಲೆ ಆಧಿಪತ್ಯ ನಡೆಸುವ ಹೊರಗಿನ ಶಕ್ತಿ ಗಳಾಗಿರದೆ ಒಳಗಿನಿಂದಲೇ ಮನುಷ್ಯನ ಸ್ವಭಾವ, ಕಾರ್ಯ ಪ್ರವೃತ್ತಿ, ಆಕಾಂಕ್ಷೆ, ಎಲ್ಲ ವನ್ನೂ ನಿರ್ಧರಿಸುವುದರಿಂದ ಆತನ ನಡತೆ, ನಡತೆಯ ಹಿಂದಿನ ಪ್ರೇರಣೆ, ಆತನ ಸುಖ ದುಃಖಗಳಿಗೆ ಕಾರಣವಾಗುತ್ತವೆ, ಕಾರಕ ಶಕ್ತಿಗಳಾಗುತ್ತವೆ. ಸಾಮಾನ್ಯನ ಬದುಕಿನಲ್ಲಿ ಇವು ಸಾಮಾನ್ಯ ಪ್ರಮಾಣದಲ್ಲಿ ಗೋಚರಿಸುತ್ತವಾದರೆ ಅಶ್ವತ್ಥಾಮನಂಥ ಅಸಾಮಾನ್ಯ ವ್ಯಕ್ತಿತ್ವ ಉಳ್ಳವರಲ್ಲಿ ಕಣ್ಕೊತ್ತುವ ರೀತಿಯಲ್ಲಿ ಗೋಚರಿಸುತ್ತವೆ. ಭೂತಗನ್ನಡಿಯಲ್ಲಿ ಕಂಡಂತೆ ಯಾವುದು ಹೇಗೆ, ಏಕೆ ನಡೆಯಿತು; ಶೀಲ, ಶಕ್ತಿ, ಸನ್ನಿವೇಶ, ಧರ್ಮ, ದೈವ, ಎಲ್ಲವೂ ಹೇಗೆ ಸೇರಿಕೊಂಡು ವ್ಯಕ್ತಿಯ ಬಾಳನ್ನು ನಡಸುತ್ತವೆ ಎನ್ನುವ ಜೀವನ ಸ್ವರೂಪದ ದರ್ಶನವನ್ನು ಒದಗಿಸುತ್ತವೆ. ಇದೆಲ್ಲವನ್ನು ಮನಸ್ಸಿನಲ್ಲಿ ಇರಿಸಿಕೊಂಡಾ ಗಲಿ, ನಿದರ್ಶನವೆಂದಾಗಲಿ ನಾಟಕದ ರಚನೆಯಾಗಲಿಲ್ಲ. ನಾಟಕಕ್ರಿಯೆಯ ವಿವಿಧ ಹಂತ ಗಳಲ್ಲಿ ಇಂಥ ಆಲೋಚನೆಗಳು ತಾವಾಗಿಯೇ ಎಂಬಂತೆ ಧ್ವನಿತವಾಗುತ್ತವೆ. ಬರವಣಿಗೆ ಯನ್ನು ಕಲಾಕೃತಿಯಾಗಿಸುತ್ತವೆ.

ನಾಟಕ ಪೂರ್ತಿ ಪದ್ಯರೂಪದಲ್ಲಿದೆ. ಬಳಸಲಾದ ಛಂದೋರೂಪಗಳ ವೈವಿಧ್ಯ ವಿಲಾಸಗಳನ್ನು, ಭಾಷೆಯ ಸೊಗಸು ಸಾಮರ್ಥ್ಯಗಳನ್ನು ನೆನೆಯದೆ ಇಲ್ಲಿಯ ಕೃತಿಯ ಹಿರಿಮೆಯನ್ನು ಪೂರ್ತಿಯಾಗಿ ತಿಳಿಯಲಾಗುವುದಿಲ್ಲ. ಈ ಎರಡೂ ಮೊದಲಿಂದ ಕೊನೆಯ ವರೆಗೆ ನಾಟಕದ ಆವರಣವನ್ನು, ಘಟನೆಗಳನ್ನು, ಒಂದು ಎತ್ತರದ ಮಟ್ಟದಲ್ಲಿ ವ್ಯಕ್ತ ಪಡಿಸುತ್ತವೆ. ಸಂಭಾಷಣೆಗೆ, ವಿವರಣೆಗೆ, ಸ್ವಗತಭಾಷಣಕ್ಕೆ, ಆಯಾಯ ಸನ್ನಿವೇಶ ದಲ್ಲಿಯ ಭಾವಕ್ಕೆ ತಕ್ಕಂತೆ ಭಾಷೆ ನುಡಿಯುತ್ತದೆ. ಆ ಭಾವಕ್ಕೆ ಪೋಷಕವಾಗಿ ಛಂದಸ್ಸು ನಡೆಯುತ್ತದೆ. ಯಾವ ಸನ್ನಿವೇಶದಲ್ಲಿಯೂ ಅದದರ ಭಾವ ಸಂಪನ್ನತೆಗೆ ಊನ ಬಾರ ದಂತೆ ಅಲ್ಲಲ್ಲಿನ ಛಂದಸ್ಸು, ನುಡಿಯ ನಡೆ, ಅದರ ಕಾರ್ಯಕ್ಕೆ ಹೊಂದಿಕೊಂಡು ತನ್ನ ಕೆಲಸವನ್ನು ಪೂರೈಸುತ್ತದೆ. ಅಳಲು, ಆತಂಕ, ಆವೇಶ, ಆತ್ಮಾನುಕಂಪ, ಅಭಿಮಾನ—

ಭಾವ ಯಾವುದಾದರೂ ಸರಿ, ಅದಕ್ಕೆ ಸಮರ್ಪಕವಾದ ವಿನ್ಯಾಸವನ್ನು, ವ್ಯಂಜಕ ಸಾಮರ್ಥ್ಯವನ್ನು ತಂದುಕೊಡುವ ಪದಯೋಜನೆ, ಛಂದಸ್ಸಿನ ಅಚ್ಚು, ಬಂಧ, ಒಂದು ಸಂಯುಕ್ತ ಸಂಕೀರ್ಣಶಿಲ್ಪವನ್ನು ರಚಿಸುತ್ತವೆ. ಇಂಥ ಛಂದಶ್ಶಿಲ್ಪ ಕನ್ನಡದಲ್ಲಿ ಬೇರೊಂದಿಲ್ಲ ಎಂದು ಹೇಳಲಾಗಿದೆ. ಮೇಳಗೀತಗಳು ಭಾವಗೀತೆಗಳ ಕಳೆಯನ್ನು ಪಡೆದು ಒಟ್ಟಿನಲ್ಲಿ ನೋಡಿದಾಗ ಪ್ರಗಾಥಗಳ ರೂಪವನ್ನು ತಾಳುತ್ತವೆ. ಇಂಗ್ಲಿಷ್ ಗೀತಗಳಲ್ಲಿ ಬೇರೆ ಯಾವುದರ ಬೆರಕೆ ಇಲ್ಲದ ಹೊಸಗನ್ನಡ ಬಳಕೆಯಾದಂತೆ ಇಲ್ಲಿ ಹಳಗನ್ನಡ ಬಳಕೆಯಾಗಿದೆ. ಸಂಸ್ಕೃತದ ಆಡಂಬರದ ಬೆರಕೆ ಇಲ್ಲದೆ ಎಷ್ಟು ಬಗೆಯ ಲಯದ ನಡಿಗೆಯನ್ನು, ಎಂಥ ಓಜಸ್ಸನ್ನು, ಶಕ್ತಿಯನ್ನು, ಸಾಧಿಸಬಹುದು ಎನ್ನುವುದಕ್ಕೆ ಇಲ್ಲಿಯ ಪದಸಂಪತ್ತು, ಬಂಧ, ಪ್ರಯೋಗ ಒಂದು ಮಹಾನಿದರ್ಶನವಾಗಬಹುದು. ಇಲ್ಲಿ ಬಳಸಲಾದ ಭಾಷೆಯ ರಸಸಾಧಕ ಸಾಮರ್ಥ್ಯ ಅಚ್ಚರಿಗೊಳಿಸುತ್ತದೆ. ಗಟ್ಟಿಯಾಗಿ ಓದಿಯೇ ಅದರ ಸೊಗಸನ್ನು ಅನುಭವಿಸಬೇಕು. ಇಂಥ ಗುಣ ವಿಶೇಷಗಳಿಂದ "ಅಶ್ವತ್ಥಾಮನ್" ಆಚಾರ್ಯ ಶ್ರೀಯವರ ಆಚಾರ್ಯಕೃತಿಯಾಗಿದೆ. ಒಂದು ಹೆಮ್ಮೆಯ ಸಾಧನೆಯಾಗಿದೆ.

೧೩

ಶ್ರೀಕಂಠಯ್ಯನವರು ಬರೆದ ಮೂರನೆಯ ನಾಟಕ "ಪಾರಸಿಕರು" ೧೯೩೫ರಲ್ಲಿ ಪ್ರಕಟವಾಯಿತು. ಗ್ರೀಕ್ ರುದ್ರ ನಾಟಕದ ಮಹೋನ್ನತಿಯನ್ನು ಮನಸಾರೆ ಮೆಚ್ಚಿದ್ದ ಅವರು ಇಲ್ಲಿ ಆ ನಾಟಕ ಪರಂಪರೆಯಲ್ಲಿ ಮಹೋನ್ನತನೆನಿಸಿದ ಈಸ್ಕಿಲಸ್ಸನ ಒಂದು ನಾಟಕವನ್ನು ಅನುವಾದಿಸಿದ್ದಾರೆ. ಗ್ರೀಕ್ ರುದ್ರ ನಾಟಕಕಾರರಲ್ಲಿ ಈಸ್ಕಿಲಸ್ ಮೊದಲಿಗ. ಆತನನ್ನು ದುರಂತ ನಾಟಕದ ಸೃಷ್ಟಿಕರ್ತನೆಂದು ಹೇಳಲಾಗಿದೆ. ದೇವತೆಯ ಸ್ತುತಿಪರವಾದ ಮೇಳಗೀತೆಯಿಂದ ಉದಯಿಸಿದ ಆ ನಾಟಕಪ್ರಕಾರ ನಾಟಕದ ರೂಪವನ್ನು ಸ್ಪಷ್ಟವಾಗಿ ತಾಳಿದ್ದು ಈಸ್ಕಿಲಸ್‌ನಲ್ಲಿ. ಮೇಳದಿಂದ ಬೇರ್ಪಟ್ಟು ನಿಂತ ಮೇಳನಾಯಕನ ಜೊತೆಗೆ ಮತ್ತೊಂದು ಪಾತ್ರವನ್ನು ಸೇರಿಸಿ, ಸಂಭಾಷಣೆಗೆ ಅವಕಾಶವನ್ನು ಒದಗಿಸಿದ ನಂತರ ಮತ್ತೂ ಒಂದು ಪಾತ್ರವನ್ನು ಸೇರಿಸಿ ಮೇಳಗೀತಕ್ಕೆ ಒಂದು ಕಾಲಕ್ಕಿದ್ದ ಪ್ರಾಧಾನ್ಯವನ್ನು ತಗ್ಗಿಸಿ ನಾಟಕದ ಶ್ರವ್ಯಭಾಗಕ್ಕೆ ಸರಿಸಮನಾಗಿ ದೃಶ್ಯ ಭಾಗವನ್ನು ಹೆಚ್ಚಿಸಿ ನಾಟಕಪ್ರಕಾರವನ್ನು ಬೆಳೆಯಿಸಿದವ ಆತ. ಇದೊಂದಲ್ಲದೆ ನಾಟಕದಲ್ಲಿ ಕ್ರಿಯಾ ಭಾಗಕ್ಕೆ ಹೆಚ್ಚಿನ ಮಹತ್ವವನ್ನು ಕೊಡದೆ ಆ ಕ್ರಿಯೆಯಿಂದ ನಿಷ್ಪನ್ನವಾಗುವ ಜೀವನ

ಧರ್ಮದ ವಿಚಾರಕ್ಕೆ, ಅಲ್ಲಿ ಸೂಚಿತವಾಗುವ ಧರ್ಮದೃಷ್ಟಿಗೆ ಹೆಚ್ಚಿನ ಮಹತ್ವವನ್ನು ಕೊಡುವುದು ಆತನ ವಿಶೇಷ. ಇಷ್ಟಲ್ಲದೆ ಈಸ್ಕಿಲಸ್ ದೊಡ್ಡ ಕವಿ. ಹೀಗೆ ನಾಟಕ ಕ್ರಿಯೆಯ ದೃಷ್ಟಿಯಿಂದ ಆತನ ನಾಟಕಗಳು ಬಡವಾಗಿ ಕಂಡರೂ ಅಲ್ಲಿಯ ಕಾವ್ಯ ಸಾಮರ್ಥ್ಯ ಮತ್ತು ಚಿತ್ರಿಸಿದ ಸನ್ನಿವೇಶದಲ್ಲಿಯೇ ಒಡಮೂಡಿ ನಿಲ್ಲುವ ಸ್ಪಷ್ಟವಾದ ಧರ್ಮತತ್ವ ಆತನ ನಾಟಕಗಳಿಗೆ ವಿಶಿಷ್ಟವಾದ ಶಕ್ತಿಯನ್ನು ತಂದು ಕೊಡುತ್ತವೆ. ಆತನ ನಾಟಕಗಳನ್ನು ಗ್ರೀಕ್ ರುದ್ರ ನಾಟಕದ ಪ್ರಾರಂಭದೆಸೆಯ ಪ್ರತಿನಿಧಿಗಳೆಂದರೂ ಅವುಗಳಲ್ಲಿಯ ಕಾವ್ಯ ಸಂಪತ್ತು ಮತ್ತು ಆಳವಾದ ಜೀವನ ದರ್ಶನ ಇಂದಿಗೂ ಅವನ್ನು ಆ ನಾಟಕ ಪರಂಪರೆಯ ಉದಾತ್ತ ನಿದರ್ಶನಗಳಾಗಿ ಉಳಿಯುವಂತೆ ಮಾಡಿವೆ. ಇಲ್ಲಿ ಅನುವಾದಿತವಾದ ನಾಟಕದ ಗುಣವಿಶೇಷಗಳನ್ನು ಗುರುತಿಸುವುದರಲ್ಲಿ ಈಸ್ಕಿಲಸ್‌ನನ್ನು ಕುರಿತಂತೆ ಮೇಲಿನ ಮಾತುಗಳನ್ನು ನೆನೆಯಬೇಕಾಗುತ್ತದೆ.

ರನ್ನನ ಗದಾಯುದ್ಧದಲ್ಲಿ ದುರ್ಯೋಧನನನ್ನು ಒಂದು ದುರಂತ ಪಾತ್ರವಾಗಿ ಕಾಣುವ ಸಾಧ್ಯತೆಯನ್ನು ಶ್ರೀಕಂಠಯ್ಯನವರು ಗುರುತಿಸಿದ್ದನ್ನು ಆಗಲೆ ನೋಡಿಯಾಗಿದೆ. ಆದರ ನಂತರ ಸೊಫೊಕ್ಲೀಸನ ನಾಟಕದ ರೂಪಾಂತರವೆಂದರೂ ಒಂದು ಸ್ವತಂತ್ರ ದುರಂತ ನಾಟಕವಾಗಿ ನಿಲ್ಲುವಂತೆ "ಅಶ್ವತ್ಥಾಮನ್"ನಲ್ಲಿ ಒಂದು ಅಪೂರ್ವ ಸಾಧನೆಯನ್ನು ತಮ್ಮದಾಗಿಸಿಕೊಂಡರು. ಅಷ್ಟಾದ ಮೇಲೆ ಈಸ್ಕಿಲಸ್ಸನ ಉಪಲಬ್ಧ ನಾಟಕಗಳಲ್ಲಿ ಅಷ್ಟೇನೂ ಶ್ರೇಷ್ಠವಲ್ಲದ ಇದನ್ನು ಅನುವಾದಕ್ಕೆಂದು ಯಾಕೆ ಎತ್ತಿಕೊಂಡರು ಎನ್ನು ವುದು ಕೇಳಬೇಕಾದ ಪ್ರಶ್ನೆಯಲ್ಲ. ಕನ್ನಡ ಓದುಗರು ತಿಳಿದಿರಬೇಕು ಎಂದು ಅವರು ಅಂದುಕೊಂಡ ಕೆಲವು ಅಂಶಗಳನ್ನು ಅವರು ಈ ನಾಟಕದಲ್ಲಿ ಕಂಡಿರಬೇಕು. ಆ ದೃಷ್ಟಿ ಯಿಂದ ಎರಡು ವಿಧದಲ್ಲಿ ಅವರ ಉದ್ದೇಶವನ್ನು ಕುರಿತು ಊಹಿಸುವುದು ಸಾಧ್ಯವಿದೆ, ಒಂದು, ಈ ನಾಟಕದಲ್ಲಿ ಉದ್ದಕ್ಕೂ ಮೇಳದವರು ಒಂದು ಪ್ರಧಾನ ಪಾತ್ರದ ರೀತಿಯಲ್ಲಿ ಕೆಲಸ ಮಾಡುತ್ತಾರೆ. ನಾಟಕವನ್ನು ಭಾವೋತ್ಕಟವಾಗುವಂತೆ ಮಾಡುತ್ತಾರೆ. ಮೇಳದವ ರಾಗಲಿ ಅವರು ಹೇಳುವ ಗೀತಗಳಾಗಲಿ ನಮ್ಮ ನಾಟಕಪರಂಪರೆಗೆ ಹೊಸದು. ಅವನ್ನು ಎಷ್ಟು ವಿಧವಾಗಿ, ಎಷ್ಟು ಪರಿಣಾಮಕಾರಿಯಾಗಿ, ರಸಸಾಧಕವಾಗಿ ಬಳಸಬಹುದು ಎನ್ನುವುದನ್ನು ಈ ನಾಟಕ ತೋರಿಸುತ್ತದೆ. ಎರಡನೆಯದಾಗಿ, ಮೊದಲಿನ ತಮ್ಮ ಎರಡು ನಾಟಕಗಳು ಸೂಚಿಸಿದ ಜೀವನದರ್ಶನವನ್ನೇ ಈ ನಾಟಕ ಇನ್ನೂ ಸ್ಪಷ್ಟವಾಗಿ— ಒಂದು ವ್ಯಕ್ತಿಯ ಜೀವನದಲ್ಲಿ ಮಾತ್ರವಲ್ಲ, ಒಂದು ಸಾಮ್ರಾಜ್ಯದ ಚರಿತ್ರೆಯಲ್ಲಿ— ವಿಶೇಷವಾದ ಯಾವ ನಾಟಕಕ್ರಿಯೆಯ ವಿಸ್ತರಣವಿಲ್ಲದೆ ಹೇಗೆ ಒತ್ತಿಹೇಳುತ್ತದೆ, ವಿಶದ ಪಡಿಸುತ್ತದೆ, ಎನ್ನುವುದು. ಅಥವಾ ಈಸ್ಕಿಲಸ್‌ನ ಒಂದು ನಾಟಕ ಕನ್ನಡದಲ್ಲಿ ಬರಲಿ ಎಂದುಕೊಂಡಿರಬಹುದು. (ಹಾಗಿದ್ದರೆ ಆತನ ಶ್ರೇಷ್ಠತಮವಾದ "ಅಗೆಮೆಮ್ನಾನ್" ನಾಟಕವನ್ನು ಅನುವಾದಿಸಿದ್ದರೆ ಚೆನ್ನಾಗಿತ್ತು ಎಂದು ಹೇಳಬಹುದು.) ಆದರೆ ಇದೆಲ್ಲ

ಬಹುದುಗಳ ಮಾತು. ನಮ್ಮೆದುರಿಗಿರುವುದು "ಪಾರಸಿಕರು" ಎಂಬ ಕನ್ನಡ ಅನುವಾದ. ಈಸ್ಕಿಲಸ್‌ನ "ಪರ್ಸಿ" ಅದಕ್ಕೆ ಮೂಲ.

ಕ್ರಿ.ಪೂ. ೪೮೦ರಲ್ಲಿ ಪಾರಸಿಕರು ತಮ್ಮ ದೊರೆಯಾಗಿದ್ದ ಕ್ಷಯಾರ್ಷನ ನೇತೃತ್ವ ದಲ್ಲಿ ಗ್ರೀಕರ ಮೇಲೆ ದಂಡೆತ್ತಿ ಬಂದಾಗ ನಡೆದ ಯುದ್ಧದ ಕಥೆಯನ್ನು ನಾಟಕ ಹೇಳುತ್ತದೆ. ಗ್ರೀಕರು ಪಾರಸಿಕರ ಹಡಗುಪಡೆಯನ್ನು ಕಾಲಾಳುಗಳನ್ನು ಪೂರ್ತಿಯಾಗಿ ಧ್ವಂಸಮಾಡಿ ಚಕ್ರವರ್ತಿಯಾಗಿದ್ದ ಕ್ಷಯಾರ್ಷ ಸೋತು ಹೇಗೋ ಬದುಕಿಕೊಂಡು ಹರಕುಬಟ್ಟೆಯನ್ನು ಹಾಕಿಕೊಂಡು ಮೈಗಾಪಿನವನೂ ಇಲ್ಲದೆ ಹಿಂದಿರುಗುವಂತೆ ಮಾಡುತ್ತಾರೆ. ಸಾಲಾಮಿಸ್ ನಲ್ಲಿ ನಡೆದ ಈ ಯುದ್ಧದಲ್ಲಿ ಈಸ್ಕಿಲಸ್ ಭಾಗವಹಿಸಿದ್ದನಾದರೂ ಅದನ್ನು ಕುರಿತು ಬರೆದ ನಾಟಕವನ್ನು ಗ್ರೀಕರ ಜಯಗೀತೆಯನ್ನಾಗಿಸದೆ ಪಾರಸಿಕರ ಶೋಕಗೀತೆಯನ್ನಾಗಿ ಸುತ್ತಾನೆ ಎನ್ನುವುದು ಈ ನಾಟಕದ ವಿಶೇಷವಾಗಿದೆ. ತನ್ನ ನಾಡಿನ ಗೆಲವು ಅಭಿಮಾನ ವನ್ನು ಉಕ್ಕಿಸಬಲ್ಲದ್ದಾಗಿದ್ದರೂ ನಾಟಕವನ್ನು ಬರೆಯಬೇಕೆಂದಾಗ ಕಲೆಯ ದೃಷ್ಟಿಯಿಂದ ಆತನಿಗೆ ಪಾರಸಿಕರ ಸೋಲಿನ ದುರಂತವೇ ಹೆಚ್ಚು ಅರ್ಥಪೂರ್ಣವಾಗಿ ಕಂಡಿರಬೇಕು. ಪಾರಸಿಕರು ಯುದ್ಧದಲ್ಲಿ ಸೋತದ್ದು ತಮ್ಮ ದೊರೆಯ ಅಹಂಕಾರಮದ (ಹ್ಯೂಬ್ರಿಸ್)ದ ಫಲವಾಗಿ. ಕ್ಷಯಾರ್ಷನ ತಂದೆ ಹಿಂದೊಮ್ಮೆ ಗ್ರೀಕರ ಮೇಲೆ ಬಿದ್ದು ಮರಾಥಾನ್‌ನಲ್ಲಿ ಸೋಲಿನ ಕಹಿಯನ್ನು ಉಂಡಿದ್ದ. ಅದರ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಎಂದೋ ತನ್ನ ಚಕ್ರಾಧಿಪತ್ಯದ ಮದದಿಂದ ಕೊಬ್ಬಿಯೋ ಅಂತೂ ತನಗೆ ಅಧೀನರಾಗಿದ್ದ ಹತ್ತಾರು ಮಾಂಡಲಿಕರ ಸಹಾಯ ಸಹಕಾರದಿಂದ ನಾವಿಕರ ಒಂದು ದೊಡ್ಡ ಪಡೆಯನ್ನೂ ಕಾಲಾಳು ಗಳ ಒಂದು ದೊಡ್ಡ ಸೈನ್ಯವನ್ನೂ ಕೂಡಿಸಿಕೊಂಡು ಗ್ರೀಕರ ಮೇಲೆ ಬಿದ್ದು ಪೂರ್ತಿ ಯಾಗಿ ಸೋತು ಹೋಗುತ್ತಾನೆ. ಈ ಸೋಲಿನ ಕಥೆಯೇ ಇಲ್ಲಿಯ ನಾಟಕಕ್ಕೆ ವಿಷಯ. ಆದರೆ ಆ ಸೋಲನ್ನು ಪ್ರದರ್ಶಿಸುವುದಕ್ಕಿಂತ ಅದರಿಂದ ನಿಷ್ಪನ್ನವಾಗುವ ಧರ್ಮ ತತ್ವವನ್ನು ವಿಶದಪಡಿಸುವುದು ನಾಟಕದ ಉದ್ದೇಶವಾಗಿದೆ.

ನಾಟಕ ಪ್ರಾರಂಭವಾಗುವಾಗ ಪಾರಸಿಕರ ಚಕ್ರವರ್ತಿ ಕ್ಷಯಾರ್ಷ ಗ್ರೀಕರೊಡನೆ ಯುದ್ಧದಲ್ಲಿ ತೊಡಗಿ ಕೆಲ ಕಾಲವಾಗಿದೆ. ಹಿಂದುಳಿದ ಹಿರಿಯರು, ಮಂತ್ರಿಗಳು,—ಅವರೇ ನಾಟಕದಲ್ಲಿಯ ಮೇಳದವರು—ಅದನ್ನು ಕುರಿತೇ ಚಿಂತಿಸುತ್ತಿದ್ದಾರೆ. ತಮ್ಮ ಸೈನ್ಯದ ವಿಷಯದಲ್ಲಿ ವಿಶ್ವಾಸವಿದ್ದರೂ ದೈವ ಮೋಸ ಮಾಡಿದರೆ ಹೇಗೆ ಎಂದು ಆತಂಕ ಪಡುತ್ತಿದ್ದಾರೆ. ಹೋದ ವೀರರು ಹಿಂದಿರುಗುತ್ತಾರೆಯೋ ಇಲ್ಲವೋ ಎಂಬ ಭಯ ಅವರ ಹೃದಯವನ್ನು ಇರಿಯುತ್ತಿದೆ. ಅಂಥದೇ ಆತಂಕಕ್ಕೆ ಸಿಲುಕಿದ್ದ ಚಕ್ರವರ್ತಿಯ ತಾಯಿ, ಹುತೌಷ, ಪ್ರವೇಶಿಸಿ ತನ್ನ ಎದೆಯಲ್ಲಿಯ ಹೆದರಿಕೆಯನ್ನು ಹೇಳಿಕೊಳ್ಳುತ್ತಾಳೆ. ದರ್ಯವುಷನ ಕಾಲದಲ್ಲಿಯ ಸಾಮ್ರಾಜ್ಯವೈಭವ ತನ್ನ ಮಗನ ದುಡುಕಿನಿಂದಾಗಿ ಎಲ್ಲಿ ಅಳಿಯುತ್ತದೆಯೋ ಎಂಬ ಭೀತಿ ಆಕೆಯನ್ನು ಆವರಿಸಿದೆ. ಅದಕ್ಕೆ ಸರಿಯಾಗಿ

ಅಶುಭ ಸೂಚಕವಾದ ಕನಸನ್ನು ಕಂಡಿದ್ದಾಳೆ. ಕನಸಿನಲ್ಲಿ ಇಬ್ಬರು ಚೆಲುವೆಯರನ್ನು ಕಂಡಿರುತ್ತಾಳೆ. ಒಬ್ಬಳು ಏಷ್ಯದವಳು, ಇನ್ನೊಬ್ಬಳು ಡೋರಿಕಳು (ಹೆಲಾಸಿನವಳು). ಅವರಿಬ್ಬರೂ ಜಗಳಕ್ಕೆ ತೊಡಗಿದಾಗ ಕ್ಷಯಾರ್ಷ ಅವರನ್ನು ರಥಕ್ಕೆ ಹೂಡುತ್ತಾನೆ. ಏಷ್ಯದವಳು ಹಿಗ್ಗಿ ನಿಂದಿರುತ್ತಾಳೆ. ಇನ್ನೊಬ್ಬಳು ಹೇರಿದ ನೊಗವನ್ನು ಸಹಿಸದೆ, ಜಗ್ಗಿ ಒದೆದಾಡಿ, ಕಡಿವಾಣವನ್ನು ಹರಿದು, ಮೂಕಿಯನ್ನು ಮುರಿದು ಕ್ಷಯಾರ್ಷ ರಥದಿಂದ ಕೆಳಕ್ಕುರುಳುವಂತೆ ಮಾಡುತ್ತಾಳೆ. ಇದಿಷ್ಟು ಸಾಲದೆಂಬಂತೆ ಹುತೌಷ ಬೆಳಗಿನಲ್ಲಿ ಮಿಥ್ರ (ಸೂರ್ಯ) ದೇವನ ಪೂಜೆಗೆಂದು ಹೋದಾಗ ಗರುಡಪಕ್ಷಿಯೊಂದು ವೇದಿಕೆಯ ಮೇಲೆ ಬೀಳುತ್ತದೆ. ಸಣ್ಣ ಗಿಡುಗವೊಂದು ಅದನ್ನು ಬೆನ್ನಟ್ಟಿ ಬಂದು ಗರುಡನನ್ನು ಕುಕ್ಕುತ್ತದೆ. ರಾತ್ರಿಯ ಕನಸು ಮತ್ತು ಬೆಳಗಿನ ಈ ಉತ್ಪಾತ ಆಕೆಗೆ ಮುಂಬರುವ ಸೋಲಿನ ಸೂಚನೆಗಳಾಗಿ ಕಂಡದ್ದರಿಂದ ಆಕೆ ಮತ್ತೂ ಹೆದರಿಕೊಂಡಿರುತ್ತಾಳೆ. ಎಲ್ಲಿದೆ ಈ ಅಥೆನ್ಸ್? ಯಾರವರು?' ಅವರಿಗೆ ದೊರೆ ಯಾರು? ಎಂದು ಮುಂತಾಗಿ ಮೇಳದವರನ್ನು ತಿರಸ್ಕಾರದಿಂದಲೇ ಕೇಳುತ್ತಾಳೆ. ಮೇಳದವರಿಗೆ ವಿಷಯ ಗೊತ್ತು. ಒಬ್ಬ ದೊರೆಗೆ ಆಳುಗಳಾಗಿ ಇರುವವರು ಅವರಲ್ಲ, ತಮ್ಮನ್ನು ತಾವೇ ಆಳುವವರು, ಎಂದು ತಿಳಿಸುತ್ತಾರೆ. ಅಂಥವರು ಕ್ಷಯಾರ್ಷನಂಥ ದೊರೆಯನ್ನು ಹೇಗೆ ಎದುರಿಸ ಬಲ್ಲರು ? ಎಂದುದಕ್ಕೆ ಮೇಳದವರು "ದರ್ಯವುಷನೆ ಬಲ್ಲನದನು" ಎಂದು ಹೇಳಿ ಹಿಂದೆ ಅನುಭವಿಸಿದ ಸೋಲಿನ ನೆನಪನ್ನು ತಂದುಕೊಡುತ್ತಾರೆ.

ಕಂಗಾಲಾದ ದೂತನೊಬ್ಬ ಪ್ರವೇಶಿಸಿ ಕ್ಷಯಾರ್ಷನ ಸೋಲಿನ ಸಮಾಚಾರವನ್ನು ತಿಳಿಸುತ್ತಾನೆ. ಗ್ರೀಕರ ಹೂಟವನ್ನು ತಿಳಿಯದೆ, ಅವರು ಹೇಡಿಗಳೆಂದು ಅವರ ಮೇಲೆ ಬಿದ್ದ ತಮ್ಮ ಹಡಗುಪಡೆ ಪುಡಿಪುಡಿಯಾಯಿತೆಂದೂ, ವೀರರೆಲ್ಲರೂ ಮಡಿದರೆಂದೂ ಅಳಿದುಳಿದ ಸೈನ್ಯ ದಿಕ್ಕುಕೆಟ್ಟು ಹಿಮ್ಮೆಟ್ಟಿದಾಗ ಎದುರಿಸಿಬೇಕಾಗಿಬಂದ ವಿಪತ್ತುಗಳಿಗೆ ಈಡಾಗಿ ನಾಶವಾಯಿತೆಂದೂ ಕ್ಷಯಾರ್ಷನೊಬ್ಬ ಬದುಕಿಕೊಂಡು ದುಃಖಾರ್ತನಾಗಿ ಹಿಂದಿರುಗುವನೆಂದೂ ಯುದ್ಧದ ವಿವರಗಳನ್ನು ಸಾದ್ಯಂತವಾಗಿ ತಿಳಿಸುತ್ತಾನೆ. ಶೋಕಾ ಕುಲರಾದ ಮೇಳದವರು ಮತ್ತು ಹುತೌಷ ಹಿಂದೆ ದೊರೆಯಾಗಿದ್ದ ದರ್ಯವುಷನ ಪ್ರೇತ ವನ್ನು ಆಹ್ವಾನಿಸಿ ಆತನ ಸಲಹೆ ಪಡೆಯುವುದೆಂದು ಆತನಿಗೆ ಪೂಜೆ ಸಲ್ಲಿಸಿ ಬರಮಾಡಿ ಕೊಂಡು ಕೇಳುತ್ತಾರೆ. ದರ್ಯವುಷ ಸಮಾಧಿಯಿಂದೆದ್ದು ಮಗನ ದುಡುಕಿನಿಂದ ಸೋಲುಂಟಾಯಿತೆಂದು ಹೇಳುತ್ತಾನಲ್ಲದೆ ಸಾಲಾಮಿಸ್‌ನಲ್ಲಿ ಅನುಭವಿಸಿದ ಆ ಸೋಲು ಕೊನೆಯದಲ್ಲ ಎಂದೂ ಎಚ್ಚರಿಸುತ್ತಾನೆ.

ದರ್ಯವುಷನ ಪ್ರೇತ ಹೊರಟುಹೋದ ಮೇಲೆ ಮೇಳದವರು ಮುಂದಿನ ಗತಿ ಯನ್ನು ಕುರಿತು ಚಿಂತಿಸಿ ಆತಂಕ ಪಡುತ್ತಿದ್ದಾಗ ಹರಕು ಚಿಂದಿ ಬಟ್ಟೆಗಳನ್ನುಟ್ಟುಕೊಂಡು ಶೋಕಾರ್ತನಾದ ಕ್ಷಯಾರ್ಷ ಪ್ರವೇಶಿಸುತ್ತಾನೆ. ಆತನನ್ನು ಸಹಾನುಭೂತಿಯಿಂದ

ಬರಮಾಡಿಕೊಳ್ಳಬೇಕೆಂದು ತಾಯಿತಂದೆಗಳಿಬ್ಬರೂ ಹೇಳಿದ್ದರೂ ನಾಡಿನ ವೀರರೆಲ್ಲರನ್ನೂ
ಕಳೆದುಕೊಂಡು ಶೋಕತಪ್ತರಾಗಿದ್ದ ಮೇಳದವರು ಸಹಾನುಭೂತಿ ಇದ್ದರೂ ಆತನನ್ನು
ಮೂದಲಿಸುವಂತೆ ಅವನೇನಾದ, ಇವನೇನಾದ, ಎಂದು ವಿಚಾರಿಸುತ್ತಿದ್ದಾಗ ಆತ ಅದೆಲ್ಲ
ವನ್ನು ಕೇಳುವುದಕ್ಕಿಂತ ತನ್ನ ಕೊರಲನ್ನು ಕೊಯ್ಯಬಾರದೇ ಎಂದು ಹಲುಬುತ್ತಾನೆ.
ಇಬ್ಬರೂ ಬಗೆಬಗೆಯಾಗಿ ಮಡಿದ ವೀರರಿಗಾಗಿ ಶೋಕವನ್ನು ತೋಡಿಕೊಳ್ಳುತ್ತಾರೆ.
ಮತ್ತೆ ರಾಜ್ಯ ಮೆರೆಯುವುದೆ, ಬೆಳೆಯುವುದೆ, ಎಂದು ಕ್ಷಯಾರ್ಷ ಕೇಳಿದ್ದಕ್ಕೆ
ಮೆರೆಯಲಿ, ಬೆಳೆಯಲಿ, ಎಂದು ಮೇಳದವರು ತಮ್ಮ ಆಕಾಂಕ್ಷೆಯನ್ನು ಹೇಳುತ್ತಾರಲ್ಲದೆ,
ಯಾವ ಭರವಸೆಯನ್ನೂ ಹೇಳುವುದಿಲ್ಲ. ಸಾಮ್ರಾಜ್ಯಕ್ಕೆ ಗತಿ ದೇವರು, ಅದನ್ನು
ಕಾಯುವುದು ಧರ್ಮ, ಎಂದು ಶ್ರೀಯವರು ಅವರ ಬಾಯಿಂದ ಹೇಳಿಸಿದ ಮಾತುಗ
ಳೊಂದಿಗೆ ನಾಟಕ ಮುಗಿಯುತ್ತದೆ.

***

ರಂಗಸ್ಥಳದ ಮೇಲೆ ಕುತೂಹಲಕಾರಿಯಾದ ಸನ್ನಿವೇಶಗಳನ್ನು ಬೆಳೆಯಿಸಿಕೊಂಡು
ನಾಟಕವನ್ನು ರಚಿಸುವ ವಿಧಾನ ಈಸ್ಕಿಲಸ್‌ನದಲ್ಲ. ಸಾಮಾನ್ಯವಾಗಿ ಯಾವುದೋ
ಒಂದು ಘಟನೆಯ ಸುತ್ತ ಆತನ ನಾಟಕ ಬೆಳೆಯುತ್ತದೆ. ಆ ಘಟನೆ ಒಂದು ಅಪಕೃತ್ಯ
ವಾಗಿರುತ್ತದೆ. ಅದು ಕೂಡ ನಾಟಕ ಪ್ರಾರಂಭವಾಗುವ ಮೊದಲೇ ನಡೆದುಹೋಗಿರು
ತ್ತದೆ. ನಾಟಕ ತೋರಿಸುವುದು ಆದರ ಪರಿಣಾಮ ಪರಂಪರೆಯನ್ನು, ಅದರಿಂದಾಗಿ
ರೂಪುಗೊಳ್ಳುವ ದುರಂತವನ್ನು. ಆತನ ಅತ್ಯುತ್ತಮ ನಾಟಕವಾದ "ಅಗೆಮೆಮ್ನಾನ್"
ನಲ್ಲಿಯಂತೆ ಇಲ್ಲಿಯಾದರೂ ದುರಂತಕಾರಕವಾದ ಘಟನೆ ಆಗಲೆ ನಡೆದುಹೋಗಿದೆ.
ತೊಡಗಿದ ಯುದ್ಧ ಮುಗಿದುಹೋಗಿದೆ. ಅದರ ಪರಿಣಾಮವನ್ನು ತಿಳಿಯುವುದಕ್ಕಾಗಿ
ಕಾತರದಿಂದ ಕಾಯುತ್ತಿದ್ದ ಮೇಳದವರೊಂದಿಗೆ ನಾಟಕ ಮೊದಲಾಗುತ್ತದೆ. ನಾಟಕದಲ್ಲಿ
ಹೆಚ್ಚಿನದೇನೂ ನಡೆಯುವುದಿಲ್ಲ. ಯುದ್ಧಕ್ಕೆ ಹೋದವರ ಗತಿಯೇನಾಯಿತು, ಅವರು
ಹಿಂದಿರುಗುವರೋ ಇಲ್ಲವೊ ಎಂದು ಮೇಳದವರು ಮತ್ತು ಹುತೌಷ ಶಂಕಾತುರಗಳಿಂದ
ಕಾಯುತ್ತಿರುವಾಗ ದೂತ ಪ್ರವೇಶಿಸಿ ತಮ್ಮ ಪಾಲಿಗೆ ಬಂದ ಘೋರ ಅಪಜಯದ ಕಥೆ
ಯನ್ನು ಸಾದ್ಯಂತವಾಗಿ ಹೇಳುತ್ತಾನೆ. ಈ ಸಂತಪ್ತರ ಆರಾಧನೆ ಆಹ್ವಾನಗಳಿಗೆ ಉತ್ತರ
ವಾಗಿ ಹಿಂದಿನ ದೊರೆ ದರ್ಯಾವುಷನು ಸಮಾಧಿಯಿಂದ ಮೇಲೆದ್ದು ಸೋಲುಂಟಾದ
ಕಾರಣವನ್ನು ವಿವರಿಸುತ್ತಾನೆ. ಅದರ ನಂತರ ಪ್ರವೇಶಿಸುವ ಕ್ಷಯಾರ್ಷ ಮೇಳದವರನ್ನು
ಸೇರಿಕೊಂಡು ತಾನು ತಂದುಕೊಂಡ ಪರಾಭವಕ್ಕಾಗಿ ಪರಿತಪಿಸುತ್ತಾನೆ. ಒಟ್ಟು ನಾಟಕ
ದಲ್ಲಿ ನಡೆಯುವುದು ಇಷ್ಟು ಮಾತ್ರ. ಇದ್ದಷ್ಟು ನಾಟಕಕ್ರಿಯೆಯನ್ನು (ಅಂದರೆ ರಂಗ
ಸ್ಥಳದ ಮೇಲಿನ ಬೆಳವಣಿಗೆಗಳನ್ನು) ನಾಲ್ಕು ಹಂತಗಳಲ್ಲಿ ಕಾಣಬಹುದು. ಮೊದಲನೆಯ

ಹಂತದಲ್ಲಿ ಹಿಂದುಳಿದ ಹಿರಿಯರ ಮತ್ತು ಚಕ್ರವರ್ತಿಯ ತಾಯಿಯ (ತಮ್ಮ ಸೈನ್ಯದವರ ಬಗೆಯಲ್ಲಿಯ ಅಭಿಮಾನಧೈರ್ಯಗಳನ್ನೂ ತಗ್ಗಿಸುವ) ಆತಂಕ, ಭಯ ; ಎರಡನೆಯದರಲ್ಲಿ ದೂತನಿಂದ ಸೋಲಿನ ಸಮಗ್ರವಾದ ವಿವರಣೆ ; ಮೂರನೆಯದರಲ್ಲಿ ದರ್ಯಾವುಷನ ಪುನರುತ್ಥಾನ ಮತ್ತು ಸೋಲಿನ ಕಾರಣ ಮೀಮಾಂಸೆ ; ಕೊನೆಯದರಲ್ಲಿ ಮೇಳದವರಿಂದ ಮತ್ತು ಕ್ಷಯಾರ್ಷನಿಂದ ತಮ್ಮ ಸೋಲಿಗಾಗಿ ಪರಿತಾಪ, ಶೋಕ. ಇಡೀ ನಾಟಕದಲ್ಲಿ ಕೆಲಮಟ್ಟಿಗಾದರೂ ನಾಟಕ ಸತ್ವವನ್ನು ಒಳಗೊಂಡ ಒಂದೇ ಒಂದು ಸನ್ನಿವೇಶವೆಂದರೆ ಕ್ರಿಯೆಯ ಮೂರನೆಯ ಹಂತದಲ್ಲಿ ದರ್ಯಾವುಷನು ಸಮಾಧಿಯಿಂದ ಮೇಲೆದ್ದು ಬಂದು ನಡೆದದ್ದು ನಡೆದುದೇಕೆ ಎಂದು ವಿವರಿಸಿ ಆಶಾದಾಯಕವಲ್ಲದ ಭವಿಷ್ಯವನ್ನು ಸೂಚಿಸಿ ಮತ್ತೆ ಮರೆಯಾಗುವುದು. ಮೊದಲಿನಿಂದ ಕೊನೆಯವರೆಗೆ ಪ್ರಭಾವಶಾಲಿಯಾಗಿ ನಾಟಕ ಕ್ರಿಯೆಯನ್ನು ಮುನ್ನಡೆಸಿಕೊಂಡು ಹೋಗುವ ಕೇಂದ್ರ ವ್ಯಕ್ತಿ ಇಲ್ಲ. ಯಾವೊಂದು ಬಗೆಯ ನೈತಿಕ ಸಂಘರ್ಷವಾಗಲಿ, ಕೈಕೊಳ್ಳಬೇಕಾದ ನಿರ್ಣಯವನ್ನು ಅವಲಂಬಿಸುವ ಪರಿಣಾಮ ಪರಂಪರೆಯಾಗಲಿ ನಾಟಕದ ಸನ್ನಿವೇಶದಲ್ಲಿ ಹುಟ್ಟಿಕೊಳ್ಳುವುದಿಲ್ಲ. ಯುದ್ಧದ ನಿರ್ಣಯವನ್ನು ಆಗಲೆ ಕೈಕೊಂಡು ಯುದ್ಧವನ್ನು ತೊಡಗಿಯಾಗಿದೆ. ನಾಟಕ ಪ್ರಾರಂಭವಾಗುವಷ್ಟರಲ್ಲಿ (ನಾಟಕದಲ್ಲಿಯ ಪಾತ್ರಗಳಿಗೆ ಆ ವಿಷಯ ತಿಳಿದಿರದಿದ್ದರೂ) ಯುದ್ಧ ಮುಗಿದೂ ಹೋಗಿದೆ. ಮುಗಿದ ಯುದ್ಧದ ವರ್ತಮಾನ ತಿಳಿಯದ ಸನ್ನಿವೇಶವೇ ಆತಂಕಕ್ಕೆ ಕಾರಣವಾಗಿ ನಾಟಕದಲ್ಲಿ ಕುತೂಹಲವನ್ನು ಉಂಟುಮಾಡುವ ಅಂಶವಾಗಿದೆ. ಎಲ್ಲವೂ ಆಗಲೇ ನಡೆದು ಹೋಗಿದ್ದು. ನಡೆದು ಹೋದದ್ದನ್ನು ತಿಳಿಯಬೇಕೆಂದ ಕಾತರದಿರಿದ ಪ್ರಾರಂಭವಾದ ನಾಟಕ ಅದು ತಿಳಿದಾಗ ಉಂಟಾಗುವ ಶೋಕ ಪರಿತಾಪಗಳಲ್ಲಿ ಮುಕ್ತಾಯವಾಗುತ್ತದೆ. ಹೀಗಿದ್ದರೂ, ನಾಟಕಕ್ರಿಯೆ ಇಷ್ಟರಮಟ್ಟಿಗೆ ಪರಿಮಿತವಾಗಿದ್ದರೂ ಸನ್ನಿವೇಶ ನಾಟಕೀಯವಾಗಿ ಬೆಳೆಯುತ್ತದೆ, ಕುತೂಹಲವನ್ನು ಉಳಿಸಿಕೊಂಡು ನೋಟಕರನ್ನು ಸೆರೆಹಿಡಿಯುತ್ತದೆ.

ಮೊದಲ ಹಂತದಲ್ಲಿಯ ಮೇಳದವರ ಗೀತಗಳಲ್ಲಿ ಮತ್ತು ನಂತರ ಪ್ರವೇಶಿಸುವ ಹುತೌಷಳ ಮಾತುಗಳಲ್ಲಿ ಎದ್ದುಕಾಣುವುದು ಭಯದ ಆತಂಕ ಮತ್ತು ಅನಿಶ್ಚಿತತೆ. ಮೇಳದವರಲ್ಲಿ ತಮ್ಮ ದೊರೆಯ ಬಗೆಯಲ್ಲಿ ಅಭಿಮಾನವಿದೆ. ತಮ್ಮ ಸೈನ್ಯದ ವಿಷಯದಲ್ಲಿ ವಿಶ್ವಾಸವಿದೆ. ''ಏಷ್ಯದ ತಿರುಳೆಲ್ಲ ಪೋಯ್ತು,'' ''ಪೋದವನಾ ಪೋರಾಣ್ಮನ್, ಪೋದವರಾ ಪೊನ್ನಾಳ್ಗಳ್, ಬಾರದೆ ಬಗೆ ಬೆದರುತಿಹುದು'' ಎಂದು ಆತಂಕ ಪಡುತ್ತಿದ್ದ ತಮ್ಮ ಹೃದಯಗಳಿಗೆ ತಾವೇ ಸಮಾಧಾನ ಹೇಳಿಕೊಳ್ಳುತ್ತಿರುವಂತೆ ಮೇಳದವರು ತಮ್ಮ ಸೈನ್ಯದ ಹಿರಿಮೆಯನ್ನು ಕುರಿತು ಹೆಮ್ಮೆ ಪಡುತ್ತಾರೆ. ಎಷ್ಟೆಲ್ಲ ಕಡೆಯಿಂದ ತಮ್ಮ ದೊರೆಯ ಕರೆಗೆ ಸರಿಯಾಗಿ ಬಂದವರು, ಎಷ್ಟೊಂದು ಬಗೆಯ ಶಕ್ತಿ ಸಾಮರ್ಥ್ಯಗಳನ್ನುಳ್ಳವರು—ಎಲ್ಲರೂ ಸೇರಿದ ಪಾರಸಿಕರ ಬಲ ಅಜೇಯವಾಗಿದೆ, ಅದರ ಬಲ ಅಕ್ಷಯ ಸಾಮ್ರಾಜ್ಯ ಬಲ.

"ಪರ್ಸಿದೆಪೆ ವಜ್ರವೆದ." ಇಂಥ ಸೈನ್ಯ ಕಡಲ ತೆರೆಯಂತೆ ಯವನರ ಉಕ್ಕನ್ನು ಮುರಿಯಲು "ಸಾಸಿರ ಸತ್ರಪರ ಪೊರೆ" ಯಾಗಿದ್ದ "ಏಷ್ಯದ ಸಮ್ರಾಜ, ಸಾರ್ವಭೌಮನ" ನಾಯಕತ್ವದಲ್ಲಿ ಮುನ್ನುಗ್ಗಿದಾಗ ಜಯ ಸಹಜವಾಗಿಯೇ ಬರಬೇಕಾದದ್ದು ಎಂಬ ಆತ್ಮ ವಿಶ್ವಾಸವಿದ್ದರೂ ದೈವ ವಂಚಿಸಬಹುದು ; ದೈವ ಪ್ರತಿಕೂಲವಾದರೆ ಮನುಷ್ಯ ಏನು ಮಾಡಬಲ್ಲ ಎಂಬ ಭಯವ ಇರಿತ ಅಳುಕಿಗೆ ಕಾರಣವಾಗಿದೆ.

"ದೈವ ವಂಚಿಸಲು
ಬುದ್ಧಿ ಬಲದಿಂದಾರು ಬದುಕಬಹುದು?
ಒಡ್ಡಿದಾ ಹೆಬ್ಬಲೆಯ ಹಾರಬಹುದು?"

ಮಾನುಷ ವ್ಯಾಪಾರಗಳ ಮೇಲೆ ಸದಾಕಾಲವೂ ನಡೆಯುತ್ತಿರುವ ದೈವದ ಆಧಿಪತ್ಯ ಗ್ರೀಕ್ ದುರಂತನಾಟಕಗಳಲ್ಲಿಯ ಒಂದು ಅತ್ಯಂತ ಪ್ರಮುಖವಾದ ವಿಚಾರವಾಗಿದೆ. ಈ ವಿಚಾರ ಮೇಳದವರ ಹೃದಯಗಳನ್ನು ತಲ್ಲಣಿಸುವಂತೆ ಮಾಡಿದೆ. ಅವರ ಭಯವನ್ನು ಹುತೌಷಳು ಕಂಡ ಕನಸು, ನೋಡಿದ ಉತ್ಪಾತ, ಬಲಪಡಿಸುತ್ತವೆ. ಹೆದರಿದ ಆಕೆಗೆ ಅವರು ಧೈರ್ಯ ಹೇಳಬೇಕು. ಆದರೆ ಯಾವ ಭರವಸೆಯ ಮಾತನ್ನು ಹೇಳಬಹುದು? "ಬೇಡ ಹೆಚ್ಚು ಹೆದರಿಕೆ, ಹೆಚ್ಚು ನೆಚ್ಚಿಕೆಯೂ ಬೇಡ ; ಪೋಗು ಬೇಡು ದೇವರನ್–" ಎಂದು ಮಾತ್ರ ಹೇಳಬಲ್ಲವರಾಗುತ್ತಾರೆ. ಯೋಚನೆ ಮಾಡಿದ ಹಾಗೆ ಅವರಲ್ಲಿ ಹೆದರಿಕೆ ಬೆಳೆಯುತ್ತಿದ್ದ ಹಾಗೆ ಕಾಣುತ್ತದೆ. ಪ್ರಾರ್ಥನೆಯೊಂದೇ ಪರಿಹಾರವಾಗಿ ಕಾಣುತ್ತದೆ. ಪರಿಸ್ಥಿತಿಯಲ್ಲಿಯ ಈ ಸಂದಿಗ್ಧವೇ ಸನ್ನಿವೇಶವನ್ನು ಕುತೂಹಲಕಾರಿಯಾಗಿಸುತ್ತದೆ. ಮೇಳದವರಂತೆ, ಹುತೌಷಳಂತೆ, ಪ್ರೇಕ್ಷಕನಾದರೂ ಮುಂದೇನು ಎಂದು ಕಾತರದಿಂದ ಕಾಯುವಂತಾಗುತ್ತದೆ.

ಕುತೂಹಲವನ್ನು ಬೆಳೆಯಿಸಿ ಉಸಿರುಕಟ್ಟುವಂತೆ ಸನ್ನಿವೇಶವನ್ನು ರೂಪಿಸುವುದು ಈಸ್ಕಿಲಸ್ಸನ ನಾಟಕದ ರೀತಿಯಲ್ಲ. ಮುಂದೇನು ಎಂದು ಕುತೂಹಲವೆನಿಸುತ್ತಿದ್ದಂತೆಯೇ ದೂತ ಪ್ರವೇಶಿಸಿ ಮೊದಲ ಮಾತಿನಲ್ಲಿಯೇ ಬಂದ ಸೋಲಿನ ಸಮಾಚಾರವನ್ನು ತಿಳಿಸುತ್ತಾನೆ. ಹುತೌಷಳ ಪ್ರಶ್ನೆಗಳಿಗೆ ಉತ್ತರವಾಗಿ ದೂತ ಉಂಟಾದ ಸೋಲಿನ ವಿವರಗಳನ್ನು ತಿಳಿಸುತ್ತಾನೆ. ಆತನ ವಿವರಣೆ ಎಲ್ಲವೂ ಕಣ್ಣೆದುರು ನಡೆದಂತೆ ಚಿತ್ರವನ್ನು ಕಟ್ಟುತ್ತದೆ. ಆಕೆಯ ಪ್ರತಿಕ್ರಿಯೆಯನ್ನು ನೆನೆಯುತ್ತಿದ್ದಂತೆ ಮೊದಲಿನಿಂದ ಆಕೆ ಅಷ್ಟನ್ನು ನಿರೀಕ್ಷಿಸಿಯೇ ಇರಬೇಕೆಂದು ಎನ್ನಿಸುತ್ತದೆ. ತನ್ನ ದುಡುಕಿನಿಂದ ಎಲ್ಲಿ ತನ್ನ ಮಗ ಸಾಮ್ರಾಜ್ಯದ ಸಿರಿಯನ್ನು ದೂಳುಗೆಯ್ಯುತ್ತಾನೆಯೊ ಎಂಬ ಹೆದರಿಕೆ ಆಕೆಯಲ್ಲಿ ಮೊದಲಿನಿಂದಲೂ ಇದೆ. ಆಕೆಗೆ ಆಶ್ಚರ್ಯವೆನಿಸುವುದು ಸೋಲಿಗಿಂತ ಹೆಚ್ಚಾಗಿ ಇಂಥ ದೊಡ್ಡ ಸೈನ್ಯಕ್ಕೆ ಇಂಥ ಭಯಂಕರವಾದ ಸೋಲು ಹೇಗಾಯಿತು, ಅಂಥದು ಆಗಲಾರದ ಮಾತು,

ಎನ್ನುವುದು. ದೂತ ಹೇಳುವ ಉತ್ತರ ಮತ್ತೆ ದೈವದ ಆಧಿಪತ್ಯವನ್ನೇ ಹೇಳುತ್ತದೆ.

> "ಆಳ್ ಮಾಳ್ಪುದೆಲ್ಲವುಂ ಮಾಡಿದೆವು. ದೈವಂ
> ಕೆಡಿಸಿದುದು ಸರಿಯಾಗಿ ತೂಗದೆಯೆ ತೊಲೆಯನ್."

ಯುದ್ಧದ ಬಗೆಯಲ್ಲಿಯ ಕುತೂಹಲ ಈ ರೀತಿ ಬಯಲಾದರೂ ನಾಯಕನಾಗಿ ಹೋಗಿದ್ದ ಕ್ಷಯಾರ್ಷ ಬದುಕಿದ್ದಾನೆ, ಎಂಬ ವರ್ತಮಾನ ನೋಟಕನ ಕುತೂಹಲವನ್ನು ಆತನತ್ತ ತಿರುಗಿಸುತ್ತದೆ—ಸಾರ್ವಭೌಮ ಅರಸು ಆತ, ಆತನ ಗತಿ ಏನಾಯಿತು ಎಂದು. ತನ್ನ ವಿವರಣೆಯ ಕೊನೆಯ ಭಾಗದಲ್ಲಿ ರಾಜಕುವರರ ದುರಂತವನ್ನು, ಹಿಮ್ಮೆಟ್ಟುತ್ತಿದ್ದ ಸೈನ್ಯ ನಾಶವಾದದ್ದನ್ನು ತಿಳಿಸುತ್ತಿರುವಾಗಲೂ ದೂತ ಕ್ಷಯಾರ್ಷನ ವಿಚಾರವನ್ನು ವಿಶದ ಪಡಿಸುವುದಿಲ್ಲ. "ನಮ್ಮಳವೆ ಆ ದೈವಚಿತ್ತಂ?" ಎಂದು ಸೋಲಿನ ಕಥೆಯನ್ನು ಮುಗಿಸಿದಾಗ ಕನಸು ತನಗೆ ತೋರಿಸಿದ ಮುಂಗಾಣ್ಕೆ ನಿಜವಾಯಿತು, ಆ ಸಂದರ್ಭದಲ್ಲಿ ನಾಡಿನ ಹಿರಿಯರು ಮಾಡಬೇಕಾದ ಮುಖ್ಯ ಕೆಲಸವೆಂದರೆ ಜನಗಳ ನಂಬುಗೆಯನ್ನು ಉಳಿಸಿಕೊಳ್ಳುವುದು, ಅಷ್ಟರಲ್ಲಿ ಮಗ ಹಿಂದಿರುಗಿದರೆ ಆತನನ್ನು ಮೆಲ್ನುಡಿಗಳಿಂದ ಸಂತಯಿಸಿ ಕರೆತರುವುದು, ಎಂದು ಹೇಳಿ ಹುತೌಷ ಹೊರಟು ಹೋಗುತ್ತಾಳೆ. ಆದರೂ ಆಕೆಯ, ಅಂತೆಯೆ, ಮೇಳದವರ ಮೊದಲ ಯೋಚನೆ ಸಾಮ್ರಾಜ್ಯದ ಗತಿ ಏನು ಎನ್ನುವುದರತ್ತ ಹರಿಯುತ್ತದೆ. "ನೀನ್ ಮುರಿದೆ ಪಾರಸಿಕರುಕ್ಕನ್, ಮೊದಲೆತ್ತಿ ಸಾಮ್ರಾಜ್ಯ ಸುಖವಿತ್ತು, ಮುನಿದೀಗ ನೀನ್ ಮುರಿದೆ ಸೊಕ್ಕನ್" ಎಂದು ಹೇಳಿಕೊಳ್ಳುವ ಮೇಳದವರಿಗೆ ತಮ್ಮ ದೊರೆಯ ಗತಿ ಏನಾಯಿತು ಎಂಬ ಯೋಚನೆಗಿಂತ ಯುದ್ಧದಲ್ಲಿ ಮಡಿದ ವೀರರ ನೆನಹೇ ಹೃದಯವನ್ನು ಕೊರೆಯುತ್ತದೆ. "ಪರ್ಸಕಿನ್ನಾರ್ ಪೂಜೆ ಸಲಿಪರು? ಪೆರ್ಮೆಮುಗಿಯಿತ್ತು." ಹೀಗೆ ಹುತೌಷ ಮತ್ತೆ ಪ್ರವೇಶಿಸುವವರೆಗೆ ಅವರ ಹಾಡೆಲ್ಲವೂ ಸಮ್ರಾಜ್ಯಕ್ಕೆ ಒದಗಿದ ದುರಂತವನ್ನು ಕುರಿತದ್ದು, ಸತ್ತು ಹೋದ ವೀರರು ಹಿಂದೆ ಬಿಟ್ಟು ಹೋದ ದುಃಖಪರಂಪರೆಯನ್ನು ಕುರಿತದ್ದಾಗುತ್ತದೆ. ಒಂದು ಕಡೆ ಮುಂದೇನು ಎಂದು ತಿಳಿಯದ ಕುತೂಹಲವಾದರೆ, ಇನ್ನೊಂದು ಕಡೆ ಕ್ಷಯಾರ್ಷನನ್ನು ಕುರಿತ ಯೋಚನೆ ಮುಂದಿನ ಬೆಳವಣಿಗೆಗಾಗಿ ನೋಟಕನನ್ನು ಕಾಯುತ್ತಿರುವಂತೆ ಮಾಡುತ್ತದೆ.

ನಾಟಕಕ್ರಿಯೆಯ ಮೂರನೆಯ ಹಂತವಾದ ದರ್ಯುವುಷನ ಪುನರುತ್ಥಾನ ಎಲ್ಲ ದೃಷ್ಟಿಯಿಂದಲೂ ನಾಟಕದ ಕೇಂದ್ರ ಸನ್ನಿವೇಶ. ಸಮಾಧಿಯ ಎದುರಿನಲ್ಲಿ ಮೇಳದವರು ಸಲ್ಲಿಸುವ ಪ್ರಾರ್ಥನೆ, ದರ್ಯುವುಷನ ಬರವಿಗಾಗಿ ಅವರು ಮಾಡುವ ಆವಾಹನೆ, ಕಾತರದಿಂದ ಕಾಯುತ್ತಿದ್ದ ಆತನ ಮಡದಿ ಹುತೌಷ, ಹಿಂದೆ ದೊರೆಯಾಗಿ ಸಾಮ್ರಾಜ್ಯದ ವೈಭವವನ್ನು ಮೆರೆದಿದ್ದ ದರ್ಯುವುಷನ ಪ್ರೇತ ಸಮಾಧಿಯಿಂದ ನಿಧಾನವಾಗಿ ಮೇಲಕ್ಕೆ ಬರುವುದು, ಈ ಎಲ್ಲವೂ ಸೇರಿ ನಾಟಕದ ದೃಶ್ಯಭಾಗ ಕುತೂಹಲಕಾರಿಯಾಗಿ ಕಳೆಗಟ್ಟು

ವಂತೆ ಮಾಡುತ್ತವೆ. ಆದರೆ ಈಸ್ಕಿಲಸ್ ಈ ದೃಶ್ಯದ ಯೋಜನೆಯನ್ನು ಅಷ್ಟಕ್ಕಾಗಿಮಾತ್ರ ಮಾಡಲಿಲ್ಲ. ಅಂಥ ಭಯಂಕರ ಸೋಲು ಏಕೆ ಮತ್ತು ಹೇಗೆ ಸಂಭವಿಸಿತು ಎನ್ನುವುದನ್ನು ಸಾಮ್ರಾಜ್ಯದ ಪ್ರತಿನಿಧಿಗಳಾಗಿದ್ದ ಮೇಳದವರಿಗೆ, ಹಿರಿಯಳಾಗಿ ಉಳಿದಿದ್ದ ಹುತೌಷಳಿಗೆ ತಿಳಿಯಬೇಕಾಗಿದೆ. ಮುಂದೆ ಸಾಮ್ರಾಜ್ಯದ ಗತಿ ಏನು ಎನ್ನುವುದನ್ನಲ್ಲದೆ ಅವರ ಒಳಿತಿನ ಭರವಸೆಯನ್ನು ಪಡೆಯಬೇಕಾಗಿದೆ. ಹಿಂದಿನ ದೊರೆಯನ್ನು ಅವರು ಆಹ್ವಾನಿಸಿದ್ದು ಅಷ್ಟಕ್ಕಾಗಿ. ಅದನ್ನು ಹೇಳಬಲ್ಲವನೆಂದರೆ ಎಲ್ಲರನ್ನು ಸುತ್ತುವರಿದ ರಾಗದ್ವೇಷಾದಿಗಳಿಂದ, ಕೋಪತಾಪಗಳಿಂದ, ದೂರವಾಗಿದ್ದ ದರ್ಯಾವುಷ ಒಬ್ಬನೇ. ಸೋಲನ್ನು ಚಿತ್ರಿಸುವುದಕ್ಕಿಂತ ಅದರ ಕಾರಣವನ್ನು ವಿವರಿಸುವುದೇ ಈಸ್ಕಿಲಸ್‌ನ ಉದ್ದೇಶವಾಗಿರುವುದರಿಂದ ಮುಂಬರುವ ಸನ್ನಿವೇಶ ನಾಟಕದ ಆಶಯವನ್ನು ವಿಶದ ಪಡಿಸಲು ಅನುಕೂಲವಾಗುತ್ತದೆ. ದರ್ಯಾವುಷನ ಮಾತುಗಳಲ್ಲಿ ಈಸ್ಕಿಲಸ್ ನಾಟಕದ ಅರ್ಥಗರ್ಭವನ್ನು ಅಡಗಿಸಿದ್ದಾನೆ. ಯುದ್ಧದಲ್ಲಿ ಮಗ ಸೋತುಹೋದ ಸಮಾಚಾರ ವನ್ನು ಕೇಳಿ "ಕೇಡಿಗೋಡಲೆಳಸಲೊಬ್ಬ/ದೈವವವನ ತಳ್ವುದು" ಎಂದು ಸೋಲಿನ ಕಾರಣವನ್ನು ವಿವರಿಸುತ್ತಾನೆ.

" ಅರಿಯದ ಮಗ, ಸಾಹಸಕ್ಕೆ, ಯೌವನಮದ ಸೊಕ್ಕಿಸೆ,
ಕೆಯ್ಯನಿಟ್ಟು, ದಿವ್ಯ ಹೆಲೆಸ್ಪಾಂಟನೊತ್ತಿ ಕಟ್ಟುವೆ
ದಾಸನಂತೆ ತೊಡರ್ಗಳಿಂದ. ಬಾಸ್ಫೊರಸಿನ ಶಕ್ತಿಯನ್
ತೆರೆಯ ತಡೆದು ಕುಗ್ಗಿಸುವೆ, ಪಿರಿಯ ಪಡೆಗೆ ತೆರಪುಮಾಡಿ
ಸೃಷ್ಟಿಸಹಜ ಭೂತಬಲವ ಮೆಟ್ಟಿ ನಾನು ಮೀರಿಸುವೆ
ಎಂದು ಪೂಣ್ದು, ಸಾವ ಮರ್ತ್ಯನಾ ಅಮರ್ತ್ಯರೆಲ್ಲರೊಡನೆ...
ಸೆಣಸಿ ತಾನೆ ಕೆಟ್ಟನು."

" ಅಳವು ಮೀರಿ ಆತ್ಮಗೆಟ್ಟ" ಮಗ ಮಾಡಿದ ಅಕೃತ್ಯ ಅದು. ಅಷ್ಟು ಮಾತ್ರವಲ್ಲ. ಅವನ ಜೊತೆಯಲ್ಲಿ ಹೋದವರು ಮಾಡಿದ ಅಕೃತ್ಯಗಳಿಗಾಗಿಯೂ ಶಿಕ್ಷೆಯಾಗಬೇಕಿತ್ತು.

" ಹೆಲಸಿಂಗೆ ಹೋದವರು ಭಯ ಮರೆತು ಕೊಬ್ಬಿನಲಿ
ದೇವಾಲಯಂಗಳ್ಗೆ ಕಿಚ್ಚಿಕ್ಕಿ ಸೂರೆಗೆಯ್ದರ್.
ಭಕ್ತಿಯೆಂಬುದ ಕಾಣೆ—ಬಲಿಪೀಠಗಳನೊಡೆದು
ಪ್ರತಿಮೆಗಳ ಕಿತ್ತೆಸೆದು, ಪೂಜೆ ಸಾಮಗ್ರಿಗಳ—
ನಿಟ್ಟಾಡಿ, ಹೊಲೆಗೆಯ್ದರೆಲ್ಲಮನ್. ಮಾಡಿದೀ
ಪಾಪಂಗಳುಣ್ಣದೇ ಪೋಕುಮೆ ? ಉಣುತಿರ್ಪರ್
ಇನ್ನುಮುಣುವರ್, ಕಟ್ಟಿದಾ ಬುತ್ತಿ ಸಮೆಯದೆಯೆ.

ಅಷ್ಟಲ್ಲದೆ, ಪಾರಸಿಕರು ಮತ್ತೆ ಹೆಲಾಸಿನ ಮೇಲೆ ದಾಳಿ ಮಾಡಿದ್ದಾದರೆ ಡೋರಿಕರ ಕೈಯಿಟಿಗಳ ಇರಿತಕ್ಕೆ ಈಡಾಗುವವರ ಹೆಣಗಳು ಮರೆಯಲಾಗದ ಪಾಠವನ್ನು ಹೇಳಿ

ಕೊಡುತ್ತವೆ—"ಅಳ್ಗಲ್ಲ, ಮರ್ತ್ಯರಿಗೆ, ಹೆಮ್ಮೆ ಬಗೆ, ಎಚ್ಚರಿಕೆ ಎಂದು." ದೇವತೆಗಳಿಗೆ ಅಧೀನರಾಗಿ, ಅವರು ಕೊಟ್ಟದ್ದರಿಂದ ತೃಪ್ತರಾಗಿ, ಅವರಿಗೆ ಇದಿರು ನಿಲ್ಲದಿರುವುದೇ ವಿವೇಕವಲ್ಲದೆ ಧರ್ಮ ಎಂಬ ಮಾತನ್ನು ಇಡೀ ನಾಟಕದ ಆಶಯವಾಗಿ ಈಸ್ಕಿಲಸ್ ದರ್ಯವುಷನ ಬಾಯಿಂದ ಹೇಳಿಸುತ್ತಾನೆ.

"ಆವೊನುಂ ಹೆಬ್ಬಯಕೆಗಲವತ್ತು, ಮಿತಿ ಮೀರಿ,
ಕಯ್ಗೆ ಬಾರದ ಗುರಿಗೆ ಕಟ್ಟೊಲ್ಮೆಯನ್ ತೆತ್ತು,
ಕಳೆಯಬಾರದು ದೇವರಿತ್ತೊಂದು ಭಾಗ್ಯವನ್.
ಗಗನಕ್ಕೆ ನೆಗೆದಡರುವರ ಹಮ್ಮುಗಳ ಮೆಟ್ಟಿ
ತಕ್ಕ ಕಾಲದೆ ಕೊಬ್ಬನಿಳಿಸದಿರನ್ ಆ ಸ್ಯೂಸ್..."

ದರ್ಯವುಷನ ಮಾತುಗಳು ಪಾರಸಿಕರನ್ನು ಎರಗಿದ ಕೇಡನ್ನು ಅರ್ಥವಿಸಿ ಹೇಳುತ್ತವೆ. ಆ ಮಾತುಗಳನ್ನಲ್ಲದೆ ಈಗ ಬಂದ ಕೇಡು ಕೊನೆಯದಲ್ಲ ಎಂಬ ಮುಂದಿನ ಅನಿಷ್ಟ ಸೂಚನೆಯನ್ನು ಕೇಳಿದ ಮೇಳದವರು ಹಿಂದಿನ ಸಾಮ್ರಾಜ್ಯ ವೈಭವವನ್ನು ನೆನೆದುಕೊಳ್ಳುವಂತಾಗುತ್ತದೆ. ದರ್ಯವುಷ ಆಳುತ್ತಿದ್ದಾಗ ರಾಜ್ಯ ವಿಸ್ತರಿಸಿತು. ಜನರು ನೆಮ್ಮದಿಯಿಂದಿದ್ದರು. ದೊರೆ ದೇವ ಸಮನಾಗಿದ್ದ. "ಆಳಿದನು ಧರ್ಮದಲಿ, ನ್ಯಾಯದಲಿ, ನೀತಿಯಲಿ/ಬಾಳಿದರು ಪ್ರಜೆಯೆಲ್ಲ ಭಕ್ತಿಯಲಿ, ಭೀತಿಯಲಿ." ಆದರೆ ಈಗ

"ಇನ್ನೆಲ್ಲ ಮಾಯವಾಯ್ತು, ಹೆಬ್ಬಯಕೆ ಮಿಂಚಿ ಹೋಯ್ತು,
ಏರುಗಡಲಿಳಿತವಾಯ್ತು, ಮತ್ತೆ ತಲೆಯೆತ್ತದಾಯ್ತು."

ಇದಾದ ನಂತರ ನಾಟಕ ಕ್ರಿಯೆಯಲ್ಲಿ ಆಳಿದುಳಿದ ಕುತೂಹಲ ಕ್ಷಯಾರ್ಷನಿಗೆ ಸಂಬಂಧಿಸಿದ್ದು. ಕೊನೆಯ ಹಂತದಲ್ಲಿ ಚಿಂದಿಬಟ್ಟೆಗಳನ್ನು ತೊಟ್ಟ ಚಕ್ರವರ್ತಿ ಪ್ರವೇಶಿಸಿದಾಗ ಸೋಲಿನ ದುರಂತ ಪೂರ್ತಿಯಾಗಿ ನೋಟಕನ ಕಣ್ಣು ಹೃದಯಗಳೆರಡನ್ನೂ ತಟ್ಟುತ್ತದೆ. ದುಃಖವನ್ನು ತಡೆಯಲಾಗದ ಮೇಳದವರು ನಾಡಿಗುಂಟಾದ ನಷ್ಟವನ್ನೇ ನೆನೆನೆನೆಯುತ್ತ ಮತ್ತೆ ಮತ್ತೆ ಆದ ಸೋಲುಸಾವುಗಳ ವಿವರಗಳನ್ನು ಕೇಳುತ್ತಾರೆ. "ಇರಿಯಲ್ ಪೋದಾ ಪಡೆಯೇನಾಯ್ತುಯ್/ಪರ್ಸದ ಪೂಜ್ಯತೆ ಬಯಲಾಯ್ತೆ? " ಎಂದು ಅರ್ಧ ದುಃಖದಲ್ಲಿ, ಅರ್ಧ ಅಸಹಾನುಭೂತಿಯಲ್ಲಿ ಕೇಳಿದ್ದಕ್ಕೆ ಆತ "ನಾನೇ ನಾನೇ ರಾಜ್ಯವವಳಿದೋನ್/ಲಜ್ಜೆ ಕುಲಕ್ಕೆ, ನಾಡಿಗೆ ಕೊಡಲಿ/ಆಳಿ ನನಗಾಗಿ ಅರ್ಹತೆಗೆಟ್ಟೋನ್ " ಎಂದು ಪರಿತಪಿಸುತ್ತಾನೆ. ಕೊನೆಯವರೆಗೆ ಈ ಪರಿತಾಪವೇ ಬಗೆಬಗೆಯಾಗಿ ಇಬ್ಬರಲ್ಲಿಯೂ ಬಾಯ್ಬಿಡುತ್ತದೆ. ತನ್ನ ನಾಡಿಗೇ ತಾನು ಬೇಡದವನೆಂಬ ದುಃಖಭರದಲ್ಲಿ ಕಾಲೆಳೆಯುತ್ತಿದ್ದ ಕ್ಷಯಾರ್ಷನನ್ನು ತಾಯಿಯ ಕಡೆಗೆ ಮೇಳದವರು ಕರೆದೊಯ್ಯುತ್ತಿದ್ದಂತೆ ನಾಟಕ ಮುಗಿಯುತ್ತದೆ. ಮೇಳದವರ ಗೀತದ ಕೊನೆಯ ಭಾಗದಲ್ಲಿ

" ದೈವ ಕಾವ ಧರ್ಮವೇ " ಸಾಮ್ರಾಜ್ಯವನ್ನು ಕಾಯಬೇಕು ಎಂದು ನಾಟಕದ ಆಶಯವನ್ನು ಸಂಕ್ಷೇಪವಾಗಿ ಶ್ರೀಕಂಠಯ್ಯನವರು ಸೇರಿಸಿ ಒತ್ತಿ ಹೇಳುತ್ತಾರೆ.

ಸೋತು ನಿರ್ವಿಣ್ಣನಾಗಿ, ಶೋಕತಪ್ತನಾಗಿ, ಗತಿಗೆಟ್ಟವನಾಗಿ ನಾಟಕದ ಕೊನೆಯಲ್ಲಿ ಮೊದಲಬಾರಿಗೆ ಯುದ್ಧರಂಗದಿಂದ ಹಿಂದಿರುಗಿ ಬಂದು ಪರಿತಪಿಸುವ ಕ್ಷಯಾರ್ಷನನ್ನು ಈ ದುರಂತ ನಾಟಕದ ನಾಯಕನೆನ್ನಬಹುದೆ ಎಂದು ಕೇಳುವಂತಾಗುತ್ತದೆ. ಆತ ಈ ನಾಟಕದ ನಾಯಕನೆ ಎಂಬ ಪ್ರಶ್ನೆಯನ್ನೇ ಕೇಳಬಹುದು. ಆತ ಶೂರನಾಗಿದ್ದಿರಬಹುದು. ಆದರೆ ಅದು ನಾಟಕದಲ್ಲಿಯಾಗಲಿ (ದೂತ ಕೊಡುವ ಯುದ್ಧದ ವಿವರಣೆಯಲ್ಲಾಗಲಿ) ಕಾಣಸಿಗುವುದಿಲ್ಲ. ಶೌರ್ಯಕ್ಕಿಂತ ಹೆಚ್ಚಾಗಿ, ಮಹತ್ವಾಕಾಂಕ್ಷೆ, ದುಡುಕು, ಆತನಲ್ಲಿ ಎದ್ದು ಕಾಣುತ್ತದೆ. ಹಿಂದಿನವರು ಸಾಮ್ರಾಜ್ಯವನ್ನು ಕಟ್ಟಿದರು, ಸಂಪತ್ತನ್ನು ತಂದರು, ನೀನೇನು ಮಾಡಿದೆ, ಎಂಬ ಕೆಲವರ ಮೂದಲಿಕೆಯ ಮಾತು ಆತನ ದುಡುಕಿಗೊಂದು ಪ್ರೇರಣೆಯಾಗುತ್ತದೆ. ಮಿತಿಯರಿಯದ ಆತನ ಕೊಬ್ಬು ದೇವತೆಗಳ ಕೋಪವನ್ನು ಕೆರಳಿಸುತ್ತದೆ. ನಾಟಕದಲ್ಲಿ ನಾಯಕಪಾತ್ರಕ್ಕೆ ಅರ್ಹತೆಯನ್ನು ತಂದುಕೊಡುವ ಯಾವ ವಿಶೇಷ ಯೋಗ್ಯತೆಯನ್ನೂ ಆತ ತೋರಿಸುವುದಿಲ್ಲ. ಮಾತ್ರವಲ್ಲ, ಸೋಲು ಬಂದಾಗ, ಅದನ್ನು ಎದುರಿಸುವ ಚೈತನ್ಯ ಎಷ್ಟು ಮಾತ್ರವೂ ಆತನಲ್ಲಿ ಇಲ್ಲವೆನ್ನುವುದನ್ನು ಆತ್ಮಾನುಕಂಪ ತುಂಬಿದ ಆತನ ಪರಿತಾಪದ ರೋದನ ಒತ್ತಿ ಒತ್ತಿ ಹೇಳುತ್ತದೆ. ಸೋತರೂ ದೊಡ್ಡವನಾಗಿ ಕಾಣುವ ದುರಂತ ನಾಯಕನಲ್ಲಿಯ ಹಿರಿಯ ಸತ್ವದ ಯಾವ ಲಕ್ಷಣವೂ ಆತನಲ್ಲಿ ಕಾಣಸಿಗುವುದಿಲ್ಲ. ದರ್ಯವುಷನ ಮಗನಾಗಿದ್ದರಿಂದ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿದ್ದ ಆತನಿಗೆ ಸೋಲಿಗೆ ಮೊದಲು ಸಲ್ಲುತ್ತಿದ್ದ ಗೌರವ ಆತನ ಸ್ಥಾನಕ್ಕೆ ಸೇರಿದ್ದೇ ಎಂದುಕೊಳ್ಳುವಂತಾಗುತ್ತದೆ. ಸೋಲಿನ ನಂತರವಂತೂ ಆತನ ತಂದೆತಾಯಿಗಳ ಹೊರತು ಯಾರೂ ಆತನ ಬಗೆಯಲ್ಲಿ ಹೆಚ್ಚಿನ ಸಹಾನುಭೂತಿಯನ್ನು ತೋರಿಸಿದಂತೆ ಕಾಣುವುದಿಲ್ಲ. ಮೇಳದವರು ಚುಚ್ಚಿ ಚುಚ್ಚಿ ಪ್ರಶ್ನೆಗಳನ್ನು ಕೇಳುತ್ತಾರೆ. ತಾಯಿ ಹುತೌಷ ಆತನನ್ನು ಎದುರುಗೊಳ್ಳುವುದಕ್ಕೂ ಬರುವುದಿಲ್ಲ.

ಹಾಗಾದರೆ ನಾಟಕದಲ್ಲಿ ಕ್ಷಯಾರ್ಷನ ಸ್ಥಾನ ಯಾವುದು? ಎಂಬ ಪ್ರಶ್ನೆಗೆ ಒಂದೇ ಉತ್ತರ ಸಾಧ್ಯ. ಈಸ್ಕಿಲಸ್ ಇಲ್ಲಿ ಚಿತ್ರಿಸಬೇಕೆಂದದ್ದು ಕ್ಷಯಾರ್ಷನ ದುರಂತವನ್ನಲ್ಲ. ಆತ ಚಿತ್ರಿಸಿರುವುದು ಪಾರಸಿಕರ ಸಾಮ್ರಾಜ್ಯದ ದುರಂತವನ್ನು. ಆ ದುರಂತಕ್ಕೆ ಕ್ಷಯಾರ್ಷ ಒಂದು ನಿಮಿತ್ತಮಾತ್ರವಾಗುತ್ತಾನೆ. ಅವನ ದುಡುಕು ಹೆಮ್ಮೆ ಆತನನ್ನು ಗ್ರೀಕರೊಡನೆ ಯುದ್ಧಕ್ಕೆ ತಳ್ಳುತ್ತದೆ. ಸೈನ್ಯವನ್ನು ನಡೆಸಿಕೊಂಡು ಹೋಗುತ್ತಾನೆ. ಆದರೆ ನಿಜವಾದ ನಾಯಕತ್ವವನ್ನು ವಹಿಸಿ ಅದನ್ನು ವಿಜಯದತ್ತ ನಡೆಸಬಲ್ಲ ನಾಯಕ ಸತ್ವ ಆತನಲ್ಲಿರಲಿಲ್ಲವಾದ್ದರಿಂದಲೇ ಗ್ರೀಕರ ಹೂಟಕ್ಕೆ ಬಲಿಯಾಗುತ್ತಾನೆ, ಸೈನ್ಯವನ್ನು ಅಪಾಯಕ್ಕೀಡುಮಾಡಿ ಸೋಲನ್ನು ತಂದುಕೊಳ್ಳುತ್ತಾನೆ. ಆತನ ಮೂಲಕ ಪಾರಸಿಕರ ಸಾಮ್ರಾಜ್ಯ

ವಿನಾಶಕ್ಕೀಡಾಗುತ್ತದೆ. ಸೋಲಿನ ವರ್ತಮಾನ ಬಂದ ನಂತರ ಮೇಳದವರು ಶೋಕಿಸುವುದು ಕಣ್ಮರೆಯಾದ ನಾಡವೀರರಿಗಾಗಿ, ಅಳಿದುಹೋದ ಸಾಮ್ರಾಜ್ಯಕ್ಕಾಗಿ. ಕ್ಷಯಾರ್ಷನಿಗಾಗಿ ಯಾರೂ ದುಃಖಿಸುವುದಿಲ್ಲ. "ಆ ಪೋದ ವೀರರನ್ ನೆನೆನೆನೆದು ಪಾಡುವೆನು ಕಟ್ಟಳಲ ಕೂರಳಲ ಪಾಡನ್" ಎಂದಲ್ಲದೆ "ಪರ್ಸಕಿನ್ನಾರ್ ಪೂಜೆ ಸಲಿಪರು ? ಪೆರ್ಮೆ ಮುಗಿಯಿತ್ತು" ಎಂದು ಮೇಳನಾಯಕ ಪರಿತಪಿಸುತ್ತಾನೆ. ಈ ಮೇಳದವರು ನಾಡಿನ ಹಿರಿಯರು, ಮಂತ್ರಿಗಳು. ಮೊದಲು ಹೋದ ಸೈನ್ಯಕ್ಕಾಗಿ ಭಯ ಆತಂಕಗಳನ್ನು ಅನುಭವಿಸುವವರು, ಸೋಲನ್ನು ತಿಳಿದಾಗ ದುಃಖಪಟ್ಟು ಸಾಮ್ರಾಜ್ಯದ ಗತವೈಭವವನ್ನು ನೆನೆದುಕೊಳ್ಳುವವರು, ಮುಂದೆ ಗತಿ ಏನು ಎಂದು ಚಿಂತೆಗೊಳಗಾಗಿ ದರ್ಯಾವುಷನ ಸಲಹೆಯನ್ನು ಪಡೆಯ ಬಯಸಿ ಆತನನ್ನು ಪ್ರೇತರಾಜ್ಯದಿಂದ ಆಹ್ವಾನಿಸಿದವರು, ಮೊದಲಿನಿಂದ ಕೊನೆಯವರೆಗೆ ರಂಗಸ್ಥಳದ ಮೇಲಿದ್ದ ಮೇಳದವರೇ ಸಾಮ್ರಾಜ್ಯದ ಪ್ರತಿನಿಧಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಮಾನಸಿಕವಾಗಿ ಅವರೊಡನೆ ಹೊಂದಿ ಕೊಂಡಿದ್ದ ಹುತೌಷಳಿಗಾದರೂ ಮೊದಲ ಯೋಚನೆ ಮಗನಿಗಿಂತ ಹೆಚ್ಚಾಗಿ ಸಾಮ್ರಾಜ್ಯದ ವೈಭವದ್ದು. ಆಕೆಗೆ ಮಗನ ದುಡುಕು ಗೊತ್ತಿದೆ. "ಬಾಳದು ಆಳಿಲ್ಲದ ಸಿರಿ" ಎನ್ನುವುದನ್ನೂ ಆಕೆ ತಿಳಿದಿದ್ದಾಳೆ. ಹೀಗೆ ಎಲ್ಲ ಕಡೆಯಿಂದಲೂ ಒತ್ತು ಬೀಳುವುದು ಪಾರಸಿಕರ ಸಾಮ್ರಾಜ್ಯ ವೈಭವದ ಮೇಲೆ. ಅದು ಅಳಿದುಹೋಯಿತು ಎನ್ನುವುದು ಇಲ್ಲಿಯ ದುರಂತ—ಒಂದು ವ್ಯಕ್ತಿಯ ಸ್ವಭಾವ ದೋಷದಿಂದಾಗಿ ಒಂದು ಸಾಮ್ರಾಜ್ಯವೇ ಅಳಿಯಿತು ಎನ್ನುವ ದುರಂತ. ಇಲ್ಲಿರುವುದು ಪಾರಸಿಕರ ಕಥೆ, ಅವರ ಸಾಮ್ರಾಜ್ಯದ ಕಥೆ, ಕ್ಷಯಾರ್ಷನದಲ್ಲ, ಎನ್ನುವುದನ್ನು ನಾಟಕದ ಹೆಸರೇ ತಿಳಿಸುತ್ತದೆ.

ಸಾಲ್‌ಮಿಸ್‌ನಲ್ಲಿಯ ವಿಜಯ ಗ್ರೀಕರಿಗೆ ಹೆಮ್ಮೆ ತರುವಂಥದಾಗಿದ್ದರೂ ಗ್ರೀಕನೇ ಆಗಿದ್ದು ಆ ಯುದ್ಧದಲ್ಲಿ ಭಾಗವನ್ನೂ ವಹಿಸಿದ್ದ ಈಸ್ಕಿಲಸ್ ಹೆಮ್ಮೆಗೆ ಅವಕಾಶಕೊಡದ ರೀತಿಯಲ್ಲಿ ಯುದ್ಧವನ್ನು ಪಾರಸಿಕರ ದೃಷ್ಟಿಯಿಂದ ಕಂಡು ನಾಟಕವನ್ನು ಬರೆದಿದ್ದಾನೆ. ದುರಂತ ಪಾರಸಿಕರ ದೃಷ್ಟಿಯಿಂದ. ಆದ್ದರಿಂದ ಯುದ್ಧದಲ್ಲಿಯ ಸೋಲನ್ನು ಅವರ ದೃಷ್ಟಿಯಿಂದ ಕಂಡು ನಾಟಕವನ್ನು ಬರೆಯಬೇಕಾದದ್ದು ಅನಿವಾರ್ಯವೇ. ಆದರೆ ಹಾಗೆ ಮಾಡುವುದರಲ್ಲಿ ಸಾಧಿಸಬೇಕೆಂದ ಪರಿಣಾಮವನ್ನು ಹೆಚ್ಚು ಕಲಾತ್ಮಕವಾಗಿ ಸಾಧಿಸಬಹುದೆನ್ನುವ ಯೋಚನೆ ಮತ್ತೂ ಮಹತ್ವದ ಕಾರಣ. ಗ್ರೀಕರ ವಿಜಯ ದೊಡ್ಡದೇ ಆಗಿದ್ದರೂ ಈಸ್ಕಿಲಸನ ದೃಷ್ಟಿಯಲ್ಲಿ ಪಾರಸಿಕರು ತಮ್ಮ ಸೋಲಿನಿಂದ ಕಲಿತ ಅಥವಾ ಕಲಿಯಬೇಕಾದ ಪಾಠ ಮತ್ತೂ ದೊಡ್ಡದಾಗಿ ಕಂಡಿತು. ಸೋತವರು ಮಾತ್ರವಲ್ಲದೆ ಗೆದ್ದವರೂ ಅರಿತಿರಬೇಕಾದ ಪಾಠ ಅದು. ಸೊಕ್ಕು ಸಲ್ಲದು ; ದುಡುಕು ಸಲ್ಲದು ; ಹೆಬ್ಬಲದ ಹೆಮ್ಮೆ ಸಲ್ಲದು; ದೇವತೆಗಳ ಕೋಪವನ್ನು ಕೆರಳಿಸುವ ಯಾವುದೂ ಸಲ್ಲದು. "ಅಳ್ಗಲ್ಲ, ಮರ್ತ್ಯರಿಗೆ ಹೆಮ್ಮೆ ಬಗೆ" ಎನ್ನುವುದೇ ಆ ಪಾಠ. ತನ್ನ ನಾಡಿನ ವಿಜಯವನ್ನೇ

ನಾಟಕಕ್ಕೆ ವಿಷಯವನ್ನಾಗಿಸಿಕೊಂಡಿದ್ದರೆ ತಿಳಿಸಬೇಕೆಂದ ಈ ಧರ್ಮತತ್ತ್ವವನ್ನು ತಿಳಿಸುವುದು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ ಸೋತವರ ಸೋಲಿನ ಕಥೆಯಲ್ಲಿ ಗೆದ್ದವರ ಗೆಲವು ಪರೋಕ್ಷವಾಗಿ ವ್ಯಕ್ತವಾಗಿಯೇ ಆಗುತ್ತದೆ ಎನ್ನುವ ಸೂಕ್ಷ್ಮವನ್ನು ತಿಳಿದಿದ್ದ ಈಸ್ಕಿಲಸ್ ತನ್ನ ನಾಟಕದಲ್ಲಿ ಸಂದರ್ಭ ಸಿಕ್ಕಾಗ ಸೋತವರ ಬಾಯಿಂದಲೇ ಗೆದ್ದವರ ಪ್ರಶಂಸೆಯನ್ನು ಒಂದಿಲ್ಲೊಂದು ರೀತಿಯಲ್ಲಿ ಹೇಳಿಸಿ ತನ್ನ ನಾಡಿನವರ ಗುಣಗೌರವವನ್ನು ಹೆಚ್ಚು ಕಲಾತ್ಮಕವಾಗಿ ವ್ಯಕ್ತಪಡಿಸಿದ್ದಾನೆ. ಆದರೆ ಆತನ ದೃಷ್ಟಿಯಲ್ಲಿ ಅದು ಮುಖ್ಯವಲ್ಲದ ವಿಚಾರ. ಮುಖ್ಯ ವಿಚಾರ ದುರಂತದ ಮೂಲಕ ಮನಗಾಣಬೇಕಾದ ಧರ್ಮತತ್ತ್ವ. ತಪ್ಪಿಗೆ ಶಿಕ್ಷೆ ತಪ್ಪಿದ್ದಲ್ಲ, ವಿಧಿಯನ್ನು ಮೀರಿದವರಿಲ್ಲ, ಎಂಬ ಎರಡು ವಿಚಾರಗಳನ್ನು ಆಧರಿಸಿಯೇ ಗ್ರೀಕ್ ರುದ್ರ ನಾಟಕ ಪರಂಪರೆ ಬೆಳೆದಿದೆ. ಈ ಎರಡೂ ವಿಚಾರಗಳನ್ನು ಈ ನಾಟಕದಲ್ಲಿ ಕಾಣುತ್ತೇವೆ. ಕ್ಷಯಾರ್ಷ ತನ್ನ ಸಾಮ್ರಾಜ್ಯವನ್ನು ಕಳೆದುಕೊಂಡ ಎನ್ನುವುದಕ್ಕಿಂತ ಅವನ ಮೂಲಕ ಒಂದು ಮಹಾಸಾಮ್ರಾಜ್ಯವೇ ಅಳಿಯಿತು ಎನ್ನುವುದು ಮತ್ತೂ ಹೆಚ್ಚಿನ ಅರ್ಥವ್ಯಾಪ್ತಿಯನ್ನುಳ್ಳ ದುರಂತವಾಗುತ್ತದೆ. "ಮಿತಿಯರಿದು ನೆಗಳ್ವರ್ಗೆ ದೇವರ್ಕಳ್ ಒಸೆದಪರ್, ಮುರಿದಪರ್ ಮಿಕ್ಕರನ್" ಎಂದು "ಅಶ್ವತ್ಥಾಮನ್" ನಾಟಕದಲ್ಲಿ ರುದ್ರ ಹೇಳಿದ ಮಾತು ನೆನಪಿಗೆ ಬರುತ್ತದೆ. "ದೈವದ ಮುಂದೆ ನಾವಲ್ತು" ಎಂದು "ಗದಾಯುದ್ಧ" ದಲ್ಲಿ ದುರ್ಯೋಧನ ಹೇಳಿದ ಕೊನೆಯ ಮಾತು ನೆನಪಾಗುತ್ತದೆ. ಈ ನಾಟಕವಾದರೂ ತತ್ಸಮನಾದ ಜೀವನ ದರ್ಶನವನ್ನು ಒಳಗೊಂಡಿದೆ ಎಂಬ ಕಾರಣಕ್ಕಾಗಿಯೇ ಶ್ರೀಕಂಠಯ್ಯನವರು ಇದನ್ನು ಅನುವಾದಕ್ಕಾಗಿ ಆಯ್ದುಕೊಂಡಿರುವುದು ಸಾಧ್ಯವಿದೆ.

ಒಟ್ಟು ನಾಟಕದ ಪರಿಣಾಮದ ದೃಷ್ಟಿಯಿಂದ ನೋಡಿದಾಗ ಈ ನಾಟಕದಲ್ಲಿಯ ಮೇಳಗೀತಗಳಿಗೆ ಒಂದು ಪ್ರಧಾನವಾದ ಸ್ಥಾನವಿದೆ ಎನ್ನುವುದು ಸಹಜವಾಗಿಯೇ ಗಮನಿಸಬಹುದಾದ ಅಂಶವಾಗಿದೆ. ಮೇಳದವರು ಮೊದಲಿಂದ ಕೊನೆಯವರೆಗೆ ರಂಗಸ್ಥಳದ ಮೇಲಿರುತ್ತಾರೆ ಎನ್ನುವುದು ಒಂದು ವಿಶೇಷ. ಮೊದಲು ಬರೀ ಮೇಳಗೀತವೇ ಆಗಿದ್ದು ನಾಟಕದ ರೂಪವನ್ನು ತಳೆದದ್ದು ಮೇಳನಾಯಕನನ್ನು ಬೇರ್ಪಡಿಸಿ ಆತನನ್ನು ಹೊಸದಾಗಿ ಸೇರಿಸಲಾದ ಇನ್ನೊಂದು ಪಾತ್ರದೊಡನೆ ಸಂಭಾಷಣೆಯಲ್ಲಿ ತೊಡಗಿಸಿದ್ದರಿಂದ. ಈ ಬದಲಾವಣೆಯನ್ನು ಮಾಡಿದವ ಈಸ್ಕಿಲಸ್ ಎನ್ನುವುದನ್ನು ಮತ್ತು ಈ ನಾಟಕ ಆತನ ಮೊದಲ ರಚನೆಗಳಲ್ಲಿಯ ಒಂದು ಎನ್ನುವುದನ್ನು ನೆನೆದಾಗ ಈ ನಾಟಕ ಗ್ರೀಕ್ ರುದ್ರ ನಾಟಕದ ಪ್ರಾರಂಭದ ಅವಸ್ಥೆಯನ್ನು ಕೆಲಮಟ್ಟಿಗೆ ಸೂಚಿಸುವಂಥದಾಗಿದೆ ಎನ್ನುವುದನ್ನು ತಿಳಿಯಬಹುದು. ದರ್ಯವುಷನನ್ನು ಸಮಾಧಿಯಿಂದ ಆಹ್ವಾನಿಸುವ ಒಂದು ಸನ್ನಿವೇಶದಲ್ಲಿಯಲ್ಲದೆ ಮೇಳದವರು ನಾಟಕಕ್ರಿಯೆಯ ಮುಂದುವರಿಕೆಯಲ್ಲಿ ನೇರವಾಗಿ ಭಾಗ ವಹಿಸುವುದಿಲ್ಲ. ವಹಿಸುವುದಕ್ಕೆ ಅವಕಾಶವೂ ಇಲ್ಲ. ಕ್ರಿಯೆಯಿಂದ ಉದ್ಭಕ್ಕೂ

ದೂರವಾಗಿಯೇ ನಿಲ್ಲುತ್ತಾರೆ. ಆದರೆ ಪಾರಸಿಕ ಜನಾಂಗವನ್ನು ಪ್ರತಿನಿಧಿಸುವ ಒಂದು ಸಮುದಾಯ ಪಾತ್ರವಾಗಿ ಹಿಂದಿನದರ ಬಗೆಯಲ್ಲಿ ಅಭಿಮಾನವನ್ನು, ಇಂದಿನದರ ಬಗೆಯಲ್ಲಿ ಶೋಕಪರಿತಾಪಗಳನ್ನು, ಮುಂದಿನದರ ಬಗೆಯಲ್ಲಿ ಆತಂಕವನ್ನು ವ್ಯಕ್ತಪಡಿಸುವ ಕೆಲಸವನ್ನು ಮಾಡುತ್ತಾರೆ. ಇಡೀ ನಾಟಕದಲ್ಲಿಯ ಅರ್ಧದಷ್ಟು ಪದ್ಯಪಂಕ್ತಿಗಳನ್ನು ಮೇಳದವರೇ ಹೇಳುತ್ತಾರೆ. ಅದರಲ್ಲಿಯು ಅರ್ಧದಷ್ಟು ಆಯಾಯ ಸನ್ನಿವೇಶಗಳಿಗೆ ತಕ್ಕಂತೆ ಹಾಡುಗಳಾಗಿ, ಭಾವಗೀತೆಗಳಾಗಿ, ಹೊಮ್ಮುತ್ತದೆ. ಮೇಳದವರು ಹಾಡುವ ಈ ಗೀತಭಾಗ, ಅವರಲ್ಲಿಯೂ ವಿಶೇಷವಾಗಿ ಅವರು ಎರಡು ಭಾಗವಾಗಿ ನಿಂತು ಒಂದೊಂದು ಭಾವದ ಬೇರೆಬೇರೆ ಪರಿಗಳನ್ನು ಹಾಡುಗಳಾಗಿ ಹೇಳಿಕೊಳ್ಳುವ ಭಾಗ, ನಾಟಕಕ್ರಿಯೆಯ ಅಭಾವವನ್ನು ತುಂಬಿಕೊಳ್ಳುವುದರಲ್ಲಿ ಸಹಾಯಕವಾಗುತ್ತದೆ. ಗೀತದ ಮೂಲಕ ನೋಟಕರ ಭಾವಾನುಭವವನ್ನು ವಿಸ್ತರಿಸಿ ಆಳವಾಗಿಸುತ್ತದೆ. ಕ್ರಿಯೆಯ ಅಭಾವವನ್ನು ಮರೆಯುವಂತೆ ಮಾಡುತ್ತದೆ. ಈ ಹಾಡುಗಳಲ್ಲಿಯ ಪದಯೋಜನೆ, ಭಾವದ ಮಿಡಿತಕ್ಕೆ ಸಂವಾದಿಯಾಗಿ ಅದು ನುಡಿಯುವ ಬಗೆ, ದ್ರುತವಾಗಿಯೋ ವಿಲಂಬಿತವಾಗಿಯೋ ಅದು ಮುನ್ನಡೆಯುವ ರೀತಿ, ಭಾವಕ್ಕೆ ಪೋಷಕವಾಗಿ ಕೆಲಸಮಾಡುತ್ತದೆ. ತೀವ್ರತೆಯನ್ನು ಹೆಚ್ಚಿಸುತ್ತದೆ. ಇಲ್ಲಿಯ ಅನೇಕ ಭಾವಗೀತೆಗಳು ಅನುವಾದಗಳೆಂದು ಗುರುತಿಸಲಾಗದ ಮಟ್ಟಿಗಿನ ಸ್ವಂತಿಕೆಯನ್ನು ಸಾಧಿಸಿವೆ. ಗದ್ಯ ಮಾತ್ರದಿಂದ ಸಾಧಿಸಲಾಗದ, ಸನ್ನಿವೇಶದ ರೂಪಣದಿಂದ ಮಾತ್ರ ಸಿದ್ಧಿಸದ ಬೇರೊಂದು ಬಗೆಯ ಭಾವಾವರಣವನ್ನು ಗೀತಭಾಗ ನಾಟಕದಲ್ಲಿ ಸೃಷ್ಟಿಸಬಲ್ಲದು, ನಾಟಕದ ಅನುಭವಕ್ಕೆ ಕಾವ್ಯದ ಶ್ರೀಮಂತಿಕೆಯನ್ನು ತಂದುಕೊಡಬಲ್ಲದು ಎನ್ನುವುದಕ್ಕೆ ಈ ನಾಟಕದಲ್ಲಿ ಮೇಳಗೀತಗಳು ಮಾಡುವ ಕೆಲಸ ಒಂದು ಒಳ್ಳೆಯ ನಿದರ್ಶನವಾಗಬಲ್ಲದು. ಶ್ರೀಕಂಠಯ್ಯನವರಿಗೆ ಈ ನಾಟಕವನ್ನು ಎತ್ತಿಕೊಳ್ಳುವುದಕ್ಕೆ ಇದೂ ಒಂದು ಆಕರ್ಷಣೆಯಾಗಿರಬಹುದು. ಮೇಳಗಾನ ಗ್ರೀಕ್ ನಾಟಕ ಪರಂಪರೆಯ ಒಂದು ವಿಶಿಷ್ಟವಾದ ಸಂಪ್ರದಾಯ. "ಅಶ್ವತ್ಥಾಮನ್" ನಾಟಕದ ಕ್ರಿಯೆಯ ವಿನ್ಯಾಸದಲ್ಲಿ ಅದಕ್ಕೆ ಈಗ ಒದಗಿಸಿದ್ದಕ್ಕಿಂತ ಹೆಚ್ಚಿನ ಸ್ಥಾನವನ್ನು ಒದಗಿಸುವುದು ಸಾಧ್ಯವಿರಲಿಲ್ಲ. ಹೆಚ್ಚಿನ ಸ್ಥಾನವಿರಬಹುದಾದರೆ ಅದರ ಮೂಲಕ ಕ್ರಿಯೆಗೆ ಹೊರತಾಗಿ ಬೇರೊಂದು ಬಗೆಯ ಪರಿಣಾಮವನ್ನು ಸಾಧಿಸಬಹುದು ಎನ್ನುವುದನ್ನು ಈ ನಾಟಕದಲ್ಲಿಯ ಮೇಳ ತೋರಿಸಿಕೊಡುತ್ತದೆ.

೧೪

ಶ್ರೀಕಂಠಯ್ಯನವರು ಬದುಕಿರುವಾಗ ಪ್ರಕಟವಾದ ಅವರ ಕೊನೆಯ ಪುಸ್ತಕ "ಹೊಂಗನಸುಗಳು." ಬೇರೆಬೇರೆ ಸಂದರ್ಭಗಳಲ್ಲಿ ಅವರು ಬರೆದ ಹದಿನಾಲ್ಕು ಕವನಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಇವರಲ್ಲಿಯ ಮೂರು ಮೊದಲೇ "ಇಂಗ್ಲಿಷ್ ಗೀತಗಳಲ್ಲಿ" ಬಂದಿವೆ. ಮೈಸೂರು ಅರಮನೆಗೆ ಸಂಬಂಧಿಸಿದಂತೆ ನಾಲ್ಕು, ಕನ್ನಡ ನಾಡುನುಡಿಗಳ ಅಭಿಮಾನವನ್ನು ಹೊಮ್ಮಿಸುವಂಥವು ನಾಲ್ಕು, ಇನ್ನುಳಿದ ಎರಡು ಮೂರು ರಚನೆಗಳನ್ನು ಒಳಗೊಂಡ ಈ ಕವನಸಂಗ್ರಹ ಅವರು ಇರಿಸಿಕೊಂಡಿದ್ದ ಧ್ಯೇಯಾದರ್ಶಗಳನ್ನು, ಮೈಸೂರು ಅರಸರ ವಿಷಯದಲ್ಲಿ ಬೆಳೆಯಿಸಿಕೊಂಡಿದ್ದ ಗೌರವನಿಷ್ಠೆಗಳನ್ನು, ಸಮರ್ಥವಾದ ಕಾವ್ಯರೂಪಗಳಲ್ಲಿ ವ್ಯಕ್ತಪಡಿಸುತ್ತದೆ. ಶ್ರೀಕಂಠಯ್ಯನವರ ಕನ್ನಡದ ಪ್ರೀತಿಯಾಗಲಿ, ಅವರ ರಾಜನಿಷ್ಠೆಯಾಗಲಿ, ಹೊಸ ವಿಷಯಗಳಾಗಿರಲಿಲ್ಲ. ಆದರೆ ಅವೆರಡನ್ನು ವ್ಯಕ್ತಪಡಿಸುವಾಗ ಇಲ್ಲಿಯ ರಚನೆಗಳಲ್ಲಿ ಎದ್ದು ಕಾಣುವ ಭಾಷೆಯ ವೈಭವ, ಪದಗಳ ಲಾಲಿತ್ಯ ಹಾಗೂ ಛಂದೋರೂಪಗಳ ವೈವಿಧ್ಯ ಅಚ್ಚರಿಗೊಳಿಸುವಂಥವಾಗಿವೆ. ಉದ್ದಕ್ಕೂ ಅವರು ಹೊಸ ಕಾವ್ಯಪದ್ಧತಿಯ ಪುರಸ್ಕರ್ತರಾಗಿದ್ದರೂ ಹಳೆಯ ರೀತಿಗಳನ್ನೂ ಅವರು ಸಮರ್ಥವಾಗಿ ಬಳಸಬಲ್ಲವರಾಗಿದ್ದರೆನ್ನುವುದನ್ನು, ಹಳೆಯುದರ ವಿರೋಧಿ ತಾವಲ್ಲ ಎನ್ನುವುದನ್ನು, ಈ ಸಂಗ್ರಹದಲ್ಲಿಯ ಎರಡು ರಚನೆಗಳು ತೋರಿಸಿಕೊಡುತ್ತವೆ. ಅವರು ಮೊದಲು ಬರೆದಿರಬಹುದಾದ "ಭರತಮಾತೆಯ ನುಡಿ" ಆದಿಪ್ರಾಸವನ್ನು ಬಳಸುತ್ತದೆ. ಅವರು ಬರೆದ ಕೊನೆಯ ಕವನ "ಧರ್ಮಯುದ್ಧ" ಷಟ್ಪದಿಯ ರೂಪದಲ್ಲಿದೆ.

ಈ ಎರಡರಲ್ಲಿ ಮೊದಲನೆಯದು ಶ್ರೀಕಂಠಯ್ಯನವರ ವಿಶಿಷ್ಟ ಮನೋಧರ್ಮದ ಒಂದೆರಡು ಬಗೆಗಳಿಗೆ ಕನ್ನಡಿಯಂತಿದೆ. ಪೆರರ ಆಳ್ವಿಕೆಗೆ ಒಳಗಾಗಿದ್ದ ಭಾರತ ತಲೆಯೆತ್ತಬೇಕು, ಮತ್ತೆ ದೊಡ್ಡದಾಗಿ ಬೆಳೆಯಬೇಕು ಎಂಬ ಅವರ ಪ್ರಶ್ನಾತೀತವಾದ ಅಭಿಲಾಷೆಯ ಹಂಬಲದ ಜೊತೆಗೆ ನಮ್ಮ ಹಿಂದಿನ ಹಿರಿಮೆಯೇ ಸಮಗೊಂದು ಹೊರೆಯಾಗಿ ಪ್ರಗತಿಗೆ ಪ್ರತಿಬಂಧಕವಾಗಿದೆ ಎಂಬ ವಿಚಾರ ಇಲ್ಲಿ ವ್ಯಕ್ತವಾಗುತ್ತದೆ. ಹಿಂದಿನವರು ತೋರಿದ ಸತ್ಯವನ್ನು ಕಡೆಗಣಿಸಿ ಜಾತಿಮತ ಪಂಥಗಳನ್ನು ಬೆಳೆಯಿಸಿಕೊಂಡು, ಹೊರಗಿನವರು ದಾಳಿಯಿಟ್ಟಾಗ ಆಗಾಗ ಎಚ್ಚೆತ್ತುಕೊಂಡರೂ ಮತ್ತೆ ಮುಸುಕೆಳೆದು ಮಲಗುವ ಜಡತೆಯನ್ನು ಪರಿಹರಿಸುವುದಕ್ಕೆ ಭಾರತಾಂಬೆ ಬ್ರಿಟಾನಿಯುಪ ತಂಗಿಯ ನೆರವನ್ನು ಪಡೆಯಬೇಕಾಯಿತು. ಆಕೆ "ನಾಡನು ಬೆಸೆದಳು, ನೆಲದೊಲುಮೆ ಕಟ್ಟನು ಹೊಸೆದಳು. ಸಕಲ ಜ್ಞಾನವ ತೆರೆದಳು." ಆದ್ದರಿಂದ ಅವಳ ಕೊರತೆಯನ್ನು ಮರೆತು ಅವಳ ಗುಣಗಳನ್ನು ಮೆರೆಯಬೇಕೆಂಬ ಸಂದೇಶವನ್ನು ಭಾರತಮಾತೆ ಬೀರುತ್ತಾಳೆ. ನಮ್ಮ ಹಿರಿಯರು ಹಿಂದೆ

ಹೇಳಿದ ಧರ್ಮ, ಶಾಂತಿ, ಸ್ವತಂತ್ರಗಳನ್ನೇ "ಇನಿಯ ತಂಗಿ"ಯೂ ಹೇಳುತ್ತಾಳೆ. ಈ ಹಳೆ ಹೊಸತುಗಳ ಸಮನ್ವಯದ ಮೂಲಕ ಒಂದು ಕಾಲದ ಭಾಗ್ಯವನ್ನು ಮತ್ತೆ ಪಡೆಯುವ ಸಂಕಲ್ಪದೊಂದಿಗೆ ಕವನ ಕೊನೆಗೊಳ್ಳುತ್ತದೆ.

ಈ ಕವನದಲ್ಲಿ ಇಂಗ್ಲೆಂಡನ್ನು ಕುರಿತು ಬರುವ ಮಾತುಗಳು, ಇಂಗ್ಲಿಷ್ ಗೀತಗಳಲ್ಲಿಯ ಆಳೌ ಬ್ರಿಟಾನಿಯಾ ಮುಂತಾದ ಮೂರು ನಾಲ್ಕು ಕವನಗಳು, ಕೃಷ್ಣರಾಜ ಪ್ರಗಾಥದಲ್ಲಿಯೂ ಬರುವ ಒಂದೆರಡು ಮಾತುಗಳು, ಆ ದೇಶದ ಬಗೆಯಲ್ಲಿ ಶ್ರೀಕಂಠಯ್ಯನವರಲ್ಲಿದ್ದ ಗೌರವಭಾವನೆಯನ್ನು ವ್ಯಕ್ತಪಡಿಸುತ್ತವೆ. ಅವರಿಗೆ ನಮ್ಮ ನಾಡಿಗಿಂತಲೂ ಹೆಚ್ಚಾಗಿ ಇಂಗ್ಲೆಂಡ್ ವಿಷಯದಲ್ಲಿ ಹೆಚ್ಚಿನ ಅಭಿಮಾನವಿದ್ದಿತು ಎಂಬ ಅನ್ಯಾಯವಾದ ಟೀಕೆಗೆ ಇದು ಅವರನ್ನು ಗುರಿಯಾಗಿಸಿವೆ. ಇಂಗ್ಲೆಂಡ್ ವಿಷಯದಲ್ಲಿ ಅವರು ತುಂಬ ಗೌರವ ಭಾವನೆಯನ್ನು ಬೆಳೆಯಿಸಿಕೊಂಡಿದ್ದರು ಎನ್ನುವುದನ್ನು ಯಾರೂ ಅಲ್ಲಗಳೆಯುವಹಾಗಿಲ್ಲ. ಅದಕ್ಕೆ ಸಮರ್ಥವಾದ ಕಾರಣಗಳೂ ಇದ್ದವು. ಆಧಿಪತ್ಯವನ್ನು ನಡೆಸುತ್ತಿದ್ದ ಇಂಗ್ಲೀಷಿನವರು ನಮ್ಮ ನಾಡಿನ ಒಳಿತನ್ನು ಬಯಸಿದರು ಎಂದಾಗಲಿ, ಒಲುಮೆಯನ್ನು ಬೆಳೆಸಿದರು ಎಂದಾಗಲಿ ಹೇಳುವುದು ಸಾಧ್ಯವಿಲ್ಲ. ಅವರ ಧೋರಣೆ ಅಪೇಕ್ಷೆಗಳು ಏನೇ ಇದ್ದರೂ ಅವರ ಸಂಪರ್ಕದಿಂದ ಒಳ್ಳೆಯ ಪರಿಣಾಮಗಳುಂಟಾದವು ಎನ್ನುವುದನ್ನು ಮಾತ್ರ ಮರೆಯಲಾಗುವುದಿಲ್ಲ. ಒಕ್ಕಟ್ಟಿನ ಭಾವನೆ, ಸ್ವಾತಂತ್ರ್ಯಾಪೇಕ್ಷೆ, ಮಾನವ್ಯ ದೃಷ್ಟಿಯ ಉದಾರ ಮನೋಧರ್ಮ ಅವರು ಒದಗಿಸಿದ ವಿದ್ಯಾಭ್ಯಾಸದ ಮೂಲಕ ಬೆಳೆದವು; ಅವರ ಸಾಹಿತ್ಯದ ಸಂಪರ್ಕದಿಂದ ನಮ್ಮ ಸಾಹಿತ್ಯ ಹೊಸ ಜೀವಕಳೆಯನ್ನು ಪಡೆಯಿತು ಎನ್ನುವುದೆಲ್ಲವನ್ನು ನಾವು ಅಲ್ಲಗಳೆಯಮಾದರೆ ಶ್ರೀಕಂಠಯ್ಯನವರ ಮನೋಧರ್ಮವನ್ನು ಸರಿಯಾಗಿ ಅರ್ಥವಿಸಿಕೊಳ್ಳುವುದು ಸಾಧ್ಯವಾದೀತು. ಭಾರತದ ಮುನ್ನಡೆಯ ಬಗೆಯಲ್ಲಿಯ ಅವರ ಹಂಬಲಕ್ಕೆ ಈ ಕವನವೇ ಸಾಕ್ಷಿಯಾಗುತ್ತದೆ. ತನ್ನ ಮಟ್ಟಿಗೆ ತಾನಾಗಿ ನಿಂತರೆ ಮುನ್ನಡೆ ಕಷ್ಟವಾಗುತ್ತದೆ. ಅದಕ್ಕೆ ಹಳೆಹೊಸತುಗಳ, ಪೂರ್ವ ಪಶ್ಚಿಮಗಳ ಸಮನ್ವಯ ಅಗತ್ಯವಾಗಿದೆ ಎನ್ನುವುದು ಶ್ರೀಕಂಠಯ್ಯನವರ ದೃಢವಾದ ನಂಬಿಕೆಯಾಗಿತ್ತು. ಈ ಬಗೆಯಲ್ಲಿ ವಿ.ಸೀ. ಯವರು ಹೇಳಿದ ಮಾತುಗಳು ಸಮರ್ಪಕವಾದ ವಿವರಣೆಯನ್ನು ಕೊಡುತ್ತವೆ. ಅವರು ಹೇಳುವುದು ಹೀಗೆ:—" ಶ್ರೀಯವರಿಗೆ ಮನಸ್ಸಿನಲ್ಲಿ ಒಂದು ಭಾವನೆ ಎಲ್ಲಕ್ಕಿಂತ ದೊಡ್ಡದಾಗಿತ್ತು. ಚಾರಿತ್ರಿಕವಾದ ಯಾವುದೋ ಕಾರಣದಿಂದ ಇಂಗ್ಲಿಷರಿಗೂ ಇಂಡಿಯಕ್ಕೂ ಒಂದು ಸಂಬಂಧ ಉಂಟಾಗಿದೆ; ಅಲ್ಲಿನ ಸಾಹಿತ್ಯ, ತತ್ವ, ಚರಿತ್ರೆ, ರಾಜಕೀಯಗಳಿಂದ ಇಲ್ಲಿನ ಮಾರ್ಗವನ್ನೂ, ತೌಲನಿಕ ದೃಷ್ಟಿಯನ್ನೂ ಬೆಳಸಿಕೊಳ್ಳಬೇಕು. ಅದಿಲ್ಲವಾದರೆ ಎಷ್ಟು ಪ್ರಗಲ್ಭವಾದ ಪಾಂಡಿತ್ಯ—ಪಾಶ್ಚಿಮಾತ್ಯ ಆಗಲಿ, ಪೌರ್ವಾತ್ಯ ಆಗಲಿ —ನಾವು ಯಾರೂ ಒಂದು ಹೆಜ್ಜೆ ಮುಂದೆ ಇಡಲಾಗುವುದಿಲ್ಲ ಎಂದಿದ್ದರು. ಇದು ಸರ್ವಥಾ ನಿಜ. ವಿಮರ್ಶೆ ನಡೆಯಲಿ; ಸತ್ಯಾನ್ವೇಷಣೆಗೆ ತೊಡಗಿರುವವರಿಗೆ ಈ

ಪೂರ್ವ ಪಶ್ಚಿಮ ಎರಡು ದೃಷ್ಟಿಗಳೂ ಅರ್ಥವಾಗಿ, ಒಂದನ್ನೊಂದಕ್ಕೆ ಹೋಲಿಸಿ, ತಾಳಿಕೆ, ಅಸಾಮಂಜಸ್ಯ ನೋಡಿ, ದೃಷ್ಟಿರೀತಿಗಳು ಬೆಳೆಯದಿದ್ದರೆ ನಮ್ಮ ದೃಷ್ಟಿ ಅರ್ಧ ಮರ್ಧವಾಗುತ್ತದೆ.''

ಮೈಸೂರು ಅರಸರಿಗೆ ಸಂಬಂಧಿಸಿದ ಕವನಗಳಲ್ಲಿ ರಜತೋತ್ಸವದ ಪ್ರಗಾಥ ಮತ್ತು ಬಾನ್‌ಕೊಂಡ ಕೃಷ್ಣ ಮುಖ್ಯವಾದುವು. ಮೊದಲನೆಯದು ಕೃಷ್ಣರಾಜರು ಪಟ್ಟಕ್ಕೆ ಬಂದು ಇಪ್ಪತ್ತೈದು ವರ್ಷಗಳಾದಾಗಿನ ಉತ್ಸವದ ಹರ್ಷಗೀತ. ಒಂದು ಮಹತ್ವದ ಸನ್ನಿವೇಶವನ್ನು ಕುರಿತಂತೆ ಗಂಭೀರವಾಗಿ ಬೆಳೆಯುವ ಈ ಪ್ರಗಾಥ (ಓಡ್) ಎಂಬ ಕಾವ್ಯ ಪ್ರಕಾರವನ್ನು ಶ್ರೀಕಂಠಯ್ಯನವರು ಇಲ್ಲಿ ಹೊಸದಾಗಿ ಕನ್ನಡಕ್ಕೆ ತಂದಿದ್ದಾರೆ. ಒಂದು ಸಂದರ್ಭಕ್ಕಾಗಿ ಪದ್ಯವನ್ನು ಬರೆಯಬೇಕಾದಾಗ ಅಗತ್ಯವಾದ ಕಾವ್ಯೋತ್ಸಾಹವನ್ನು ತಂದುಕೊಳ್ಳುವುದು ಕವಿಗೆ ಸಾಮಾನ್ಯವಾಗಿ ಕಷ್ಟವಾಗುತ್ತದೆ. ಆದರೆ ಶ್ರೀಕಂಠಯ್ಯನವರ ಆಳವಾದ ಸ್ವಾಮಿಭಕ್ತಿ ಅವರ ನೆರವಿಗೆ ಬಂದು ಉತ್ಸವದ ಸಂಭ್ರಮವನ್ನು, ದೊರೆಗಳು ಗಳಿಸಿದ್ದ ಪ್ರಜೆಗಳ ಮೆಚ್ಚಿಗೆಯನ್ನು, ಪ್ರಜೆಗಳ ಕಲ್ಯಾಣೊತ್ಕರ್ಷಗಳಿಗಾಗಿ ಅವರು ಮಾಡಿದ ಅನೇಕ ಕಾರ್ಯಗಳನ್ನು, ಸಂದರ್ಭೋಚಿತವಾಗಿ, ಮುಕ್ತಕಂಠವಾಗಿ ಹಾಡಿದ್ದಾರೆ. ಪ್ರಕೃತಿದೇವಿಯನ್ನು ಮೊದಲ್ಗೊಂಡು ಎಲ್ಲೆಡೆಯಲ್ಲಿಯೂ ಸಿಂಗಾರ, ಸಡಗರ, ಸಂಭ್ರಮ. ಪ್ರಜೆಗಳ ಉತ್ಸಾಹ ಒಂದು ಕಡೆಯಾಗಿ ಧರ್ಮ,ಸತ್ಯ, ಮೈತ್ರಿ ಬೆಳೆದು ನಿಲ್ಲಲೆಂಬ ಅರಸರ ಆಕಾಂಕ್ಷೆ ಇನ್ನೊಂದು ಕಡೆಯಾಗಿ ಉತ್ಸವವನ್ನು ಸಾರ್ಥಕಗೊಳಿಸುತ್ತವೆ. ಪದ್ಯದ ಗತಿ ರಾಜವೈಭವದ ಮೆರವಣಿಗೆಯಂತೆ ಮುಂದುವರಿಯುತ್ತದೆ. ಎರಡನೆಯ ಕವನ ಅದೇ ಕೃಷ್ಣರಾಜರು ನಿಧನವಾದಾಗ ಬರೆದ ಶೋಕಗೀತೆ. ಅಲ್ಲಿಯೂ ಶ್ರೀಕಂಠಯ್ಯನವರು ನಮ್ಮಲ್ಲಿಲ್ಲದ ಒಂದು ಪದ್ಯಪ್ರಕಾರವನ್ನು ಬಳಕೆಗೆ ತಂದರು. ಅಳಿದವನ ಕೀರ್ತಿಯನ್ನು ಹಾಡುವುದೆಂದು ಕಾವ್ಯದೇವಿಯ ಆವಾಹನೆಯಿಂದ ತೊಡಗುವ ಈ ಪದ್ಯಪ್ರಕಾರ ಚರಾ ಚರ ಪ್ರಪಂಚವೆಲ್ಲವೂ ಶೋಕದಲ್ಲಿ ಮುಳುಗಿದಂತೆ ವರ್ಣಿಸಿ ಕೊನೆಯಲ್ಲಿ ಆಳಿದವ ಅಳಿದಿಲ್ಲ, ಕೀರ್ತಿಶೇಷನಾಗಿ ಅಮರನಾಗಿದ್ದಾನೆ, ಎಂಬ ಭಾವನೆಯೊಂದಿಗೆ ಮುಕ್ತಾಯ ವಾಗುತ್ತದೆ. ಇಲ್ಲಿಯಾದರೂ '' ಶ್ರೀಕೃಷ್ಣನಳಿಯನ್—ಧೀರಧರ್ಮಾತ್ಮರಲ್ಲಿರ್ಪನ್ '' ಎಂದು ಕವಿಯಂತೆ ಲೋಕವಾದರೂ ಸಮಾಧಾನವನ್ನು ತಂದುಕೊಳ್ಳುವಂತಾಗುತ್ತದೆ.

ಶ್ರೀಕಂಠಯ್ಯನವರ ಇಂಗ್ಲೆಂಡ್ ಅಭಿಮಾನದಂತೆ ಅವರ ರಾಜನಿಷ್ಠೆಯೂ ಕೆಲ ಮಟ್ಟಿಗೆ ಟೀಕೆಗೆ ಗುರಿಯಾಗಿದೆ. ಹೊಸ ತಲೆಮಾರಿನವರಿಗೆ ಅಷ್ಟರಮಟ್ಟಿಗಿನ ರಾಜ ಭಕ್ತಿಯನ್ನೂ, ವ್ಯಕ್ತಿ ಪೂಜೆಯನ್ನೂ ಒಪ್ಪುವುದು ಕಷ್ಟವಾಗುತ್ತದೆ. ಆದರೂ ಎರಡು ರೀತಿಯ ವಿವರಣೆಯನ್ನು ಹೇಳಬಹುದಾಗಿದೆ. ಅಂದಿನ ಕಾಲಮಾನ ಪರಿಸ್ಥಿತಿ ಅಂಥ ದಾಗಿತ್ತು ಎನ್ನುವುದು ಒಂದು ; ಶ್ರೀಕಂಠಯ್ಯನವರು ತೋರಿದ ಭಕ್ತಿಗೆ ಅಂದಿನ ಮಹಾ ರಾಜರು ನಿಸ್ಸಂಶಯವಾಗಿ ಅರ್ಹರಾಗಿದ್ದರು ಎನ್ನುವುದು ಇನ್ನೊಂದು. ಸಮರ್ಥನೆ

ಇರಲಿ, ಇರದಿರಲಿ, ಅದು ಶ್ರೀಕಂಠಯ್ಯನವರ ಮನೋಧರ್ಮವಾಗಿತ್ತು. ಊಳಿಗಮಾನ್ಯ ಪದ್ಧತಿಯ ವಿಚಾರಗಳ ಕೆಲವೊಂದು ಎಳೆಗಳು ಅವರ ಸ್ವಭಾವದಲ್ಲಿದ್ದವು. ಕರ್ನಾಟಕದ ಏಕೀಕರಣಕ್ಕಾಗಿ ಬೇಕಷ್ಟು ಶ್ರಮಿಸಿದ ಅವರು ಕನ್ನಡ ನಾಡು ಒಂದಾದಾಗ ಅದಕ್ಕೆ ಮಹಾರಾಜರೇ ಮಹಾರಾಜರೆಂದೋ ರಾಜಪ್ರಮುಖರೆಂದೊ ಮುಖ್ಯಸ್ಥರಾಗಿರಬೇಕೆಂಬ ಅಭಿಲಾಷೆ ಅವರದಾಗಿತ್ತು. ಅದಾಗದು ಎಂದು ಮನವರಿಕೆಯಾದಾಗ ತಮ್ಮ ಯೋಚನೆಯನ್ನು ಬಿಟ್ಟುಕೊಟ್ಟರು ಎನ್ನುವುದು ಬೇರೆ ವಿಷಯ. ಅದು ಹೇಗಿದ್ದರೂ ರಾಜರನ್ನು ಕುರಿತಂತೆ, ರಾಜ್ಯಾಧಿಕಾರವನ್ನು ನಡಸುವವರನ್ನು ಕುರಿತಂತೆ, ಅವರು ಸ್ವಂತದ ಹಿರಿಮೆ ಯೋಗ್ಯತೆಗಳನ್ನು ಮರೆತು ಅನಗತ್ಯ ಎನ್ನಬೇಕಾದ ಮಟ್ಟಿಗೆ ತಗ್ಗಿ ನಡೆಯುತ್ತಿದ್ದರೆನ್ನುವುದು ಮೇಲೆ ಹೇಳಿದ ಅವರ ಮನೋಧರ್ಮದ ಒಂದು ಬಗೆ ಎನ್ನಬೇಕು. ಅದನ್ನು ಆಕ್ಷೇಪಿಸುವ ಹೊಸ ತಲೆಮಾರಿನವರು ಇಂದು ಪ್ರಜಾಪ್ರಭುತ್ವದ ಹೆಸರಿನಲ್ಲಿ ಇನ್ನೂ ಹೆಚ್ಚು ನಿರಭಿಮಾನದ ವ್ಯಕ್ತಿಪೂಜೆಯ ಮನೋಧರ್ಮ ಎಷ್ಟು ಸಾಮಾನ್ಯವಾಗಿ, ಸಾರ್ವತ್ರಿಕವಾಗಿ, ಬೆಳೆಯುತ್ತಿದೆ ಎನ್ನುವುದನ್ನು ಯೋಚನೆ ಮಾಡಬೇಕು. ಅದನ್ನು ಇದಾಗಲಿ, ಇದನ್ನು ಅದಾಗಲಿ ಸಮರ್ಥಿಸಲಾರದು. ಎರಡೂ ಅಸಮರ್ಥನೀಯವೇ. ಆದರೆ ಅಂದಿನ ಸನ್ನಿವೇಶದಲ್ಲಿ, ಶ್ರೀಕಂಠಯ್ಯನವರು ಬೆಳೆದ ಪರಿಸರದಲ್ಲಿ, ಅಂಥ ಮನೋಧರ್ಮ ಸ್ವಾಭಾವಿಕವಾಗಿಯೇ ಬೆಳೆಯಬಹುದಾದದ್ದು ಎನ್ನುವುದನ್ನು ನೆನೆಯಬೇಕಾಗುತ್ತದೆ. ಅಂದು ರಾಜ್ಯ ನೇರವಾಗಿ ಒಂದು ವ್ಯಕ್ತಿಯ ಆಧಿಪತ್ಯಕ್ಕೆ ಒಳಪಟ್ಟಿತ್ತು ಎನ್ನುವುದನ್ನೂ ಮರೆಯಲಾಗುವುದಿಲ್ಲ. ಒಂದೊಂದು ಬಗೆಯ ರಾಜ್ಯಾಡಳಿತದ ಕ್ರಮ ಪ್ರಜೆಗಳಲ್ಲಿ ಒಂದೊಂದು ಬಗೆಯ ಮನೋಧರ್ಮ ಬೆಳೆಯುವಂತೆ ಮಾಡುತ್ತದೆ, ಅಷ್ಟೇ.

ನಾಡುನುಡಿಗಳ ವಿಷಯದಲ್ಲಿ ಶ್ರೀಕಂಠಯ್ಯನವರು ಬೆಳೆಸಿಕೊಂಡಿದ್ದ ಪ್ರೀತ್ಯಭಿಮಾನಗಳನ್ನು ಕುರಿತು ಎರಡು ಮಾತಿಲ್ಲ. ಕನ್ನಡ ನುಡಿಯ ಏಳ್ಗೆ ಅವರ ಜೀವದುಸಿರಾಗಿತ್ತು. ಕನ್ನಡ ನಾಡು ಒಂದಾಗಬೇಕೆನ್ನುವುದು ಅವರ ಕನಸಾಗಿತ್ತು. ಕನ್ನಡ ಮತ್ತೆ ತಲೆಯೆತ್ತುತ್ತದೆ ಎನ್ನುವ ಆತ್ಮವಿಶ್ವಾಸ ಅವರದಾಗಿತ್ತು. ಈ ಅಭಿಮಾನದ ಉಕ್ಕು "ಕನ್ನಡವ ಬಾವುಟ" ದಲ್ಲಿ ಒಂದು ತರಹದಲ್ಲಾದರೆ "ಕನ್ನಡ ತಾಯ ನೋಟ" ದಲ್ಲಿ ಇನ್ನೊಂದು ತರಹದಲ್ಲಿ ಪ್ರಕಟವಾಗುತ್ತದೆ. ಈ ಎರಡನೆಯದು ಶ್ರೀಯವರ ಉತ್ತಮ ರಚನೆಗಳಲ್ಲೊಂದು. ವಿಜಯನಗರ ಸಾಮ್ರಾಜ್ಯದ ಆರುನೂರನೆಯ ವರ್ಷದ ಉತ್ಸವದ ಸಂದರ್ಭದಲ್ಲಿ ಇದನ್ನು ಬರೆಯಲಾಯಿತು. ಕನ್ನಡ ನಾಡನ್ನು ಸುತ್ತುತ್ತಿದ್ದ ಹಾಗೆ, ಅದರ ಸಿರಿಸೌಭಾಗ್ಯಗಳನ್ನು ನೆನೆದು, ನೋಡಿ, ಹಿಗ್ಗುತ್ತಿದ್ದ ಹಾಗೆ, ತುಂಗಭದ್ರೆಯ ತೀರದಲ್ಲಿ ಒಂದು ಕಲ್ಲುಹಾಸಿನ ಮೇಲೆ ತನ್ನ ಮಕ್ಕಳಿಗಾಗಿ ಕೊರಗಿ ಸೊರಗಿ ಕುಳಿತಿದ್ದ ಕನ್ನಡ ತಾಯಿಯನ್ನು ಕವಿ ಕಾಣುತ್ತಾನೆ. ಆಕೆಯಿಂದ ಕೊರಗಿನ ಕಾರಣವನ್ನು ತಿಳಿದುಕೊಳ್ಳುತ್ತಾನೆ. ಆಕೆಯ ಹರಕೆಯೊಂದಿದ್ದರೆ ಯಾವುದೂ ಆದೀತು ಎಂಬ ಭರವಸೆಯನ್ನು ಹೇಳಿ

ದೇವಿಯನ್ನು ರಥದಲ್ಲಿ ಕುಳ್ಳಿರಿಸಿ ಮಾಡುವ ಜಯಘೋಷದೊಂದಿಗೆ ಕವನ ಮುಗಿಯು ತ್ತದೆ. ಅಭಿಮಾನ ಉಕ್ಕಿದಾಗ (ಕನ್ನಡದ ಬಾವುಟದಲ್ಲಿಯಂತೆ) ಭಾವಕ್ಕಿಂತ ಮಾತು ಭಾರವಾಗುವ ಸಾಧ್ಯತೆ ಇರುತ್ತದೆ. ಆದರೆ ಇಲ್ಲಿ ಶ್ರೀಕಂಠಯ್ಯನವರು ಭಾವಕ್ಕೆ ತಕ್ಕ ಭಾಷೆಯಲ್ಲಿ ಕಣ್ಣೆದುರು ಚಿತ್ರ ಕಟ್ಟಿ ನಿಲ್ಲುವಂತೆ ಪದ್ಯವನ್ನು ಗಂಭೀರವಾಗಿ ಭಾವೋಜ್ವಲ ವಾಗಿಸಿಕೊಂಡು ಹೋಗಿದ್ದಾರೆ. ಉತ್ಸವದ ಸಂದರ್ಭದಲ್ಲಿ ನಿರೀಕ್ಷೆ ಮೀರಿ ಜನ ಬಂದಿದ್ದ ರಿಂದ ಕುಸಿದ ಏರ್ಪಾಡುಗಳ ಮಧ್ಯದಲ್ಲಿ ಯಾವುದೋ ಒಂದು ಮೆರವಣಿಗೆಯಲ್ಲಿ ಸಿಲುಕಿ ಕೊಂಡು ಮಧ್ಯಾಹ್ನದ ಹೊತ್ತಿಗೆ ವಸತಿಗೆ ಹಿಂದಿರುಗಿದಾಗ ಸೀತಾರಾಮಯ್ಯನವರ ಮೂಲಕ ಕಾರ್ಯಕರ್ತರ ಕಚೇರಿಯಿಂದ ಎರಡು ಫೂಲ್ಸ್‌ಕೇಪ್ ಹಾಳೆಗಳನ್ನು ತರಿಸಿ ಕೊಂಡು ಸುರುಳಿ ಸುತ್ತಿದ ಹಾಸಿಗೆಯನ್ನು ಬೆನ್ನಿಗೆ ಆಸರೆಯಾಗಿರಿಸಿಕೊಂಡು ಕುಳಿತು ಇಟ್ಟ ಒಂದು ಪದವನ್ನೂ ಹೊಡೆಯದೆ "ಭುವನೇಶ್ವರೀದೇವಿ ರಥವನೇರಿದಳು" ಎಂಬ ಪಂಕ್ತಿಯವರೆಗೆ (ಅಂದರೆ ಕೊನೆಯ ಹದಿನಾಲ್ಕು ಪಂಕ್ತಿಗಳನ್ನು ಮಾತ್ರ ಉಳಿದು) ಉದ್ದಕ್ಕೂ ಒಂದು ಮೆಟ್ಟಿಲಿನಲ್ಲಿ ಈ ದೀರ್ಘ ಕವನವನ್ನು ಶ್ರೀಕಂಠಯ್ಯನವರು ಬರೆದ ರಂತೆ. ಪಂಕ್ತಿಪಂಕ್ತಿಯೂ ಪೂರ್ತಿಯಾಗಿ ಎಲ್ಲವೂ ಮನಸ್ಸಿನಲ್ಲಿ ಸಿದ್ಧವಾದ ಮೇಲೆಯೇ ಬಹುಶಃ ಅವರು ಬರಹಕ್ಕೆ ತೊಡಗುತ್ತಿದ್ದರೆಂದು ಕಾಣುತ್ತದೆ.

ಈ ಸಂಗ್ರಹದಲ್ಲಿಯ ಅತ್ಯುತ್ತಮ ಕವನವೆಂದರೆ "ಶುಕ್ರಗೀತೆ." ಮೈಸೂರು ವಿಶ್ವ ವಿದ್ಯಾನಿಲಯದ ರಜತಮಹೋತ್ಸವಕ್ಕಾಗಿ ಬರೆದದ್ದು. ರಾಜ, ರಾಜಕೀಯ, ದೇಶ, ಭಾಷೆ, ಎಂಬ ಯಾವ ಅಭಿಮಾನ ನಿಷ್ಠೆಗಳಿಗೂ ಅವಕಾಶ ಕೊಡದೆ ಅವೆಲ್ಲವುಗಳಾಚೆ ಯಲ್ಲಿಯ ಜ್ಞಾನವನ್ನು, ಸತ್ಯವನ್ನು; ವಿದ್ಯೆ-ಅವಿದ್ಯೆ, ಋತಾನೃತ, ದೇವ-ದಾನವ ಎಂಬ ನಿತ್ಯ ಸಂಘರ್ಷವನ್ನು, ಈ ಕವನ ತನ್ನ ವಿಷಯವನ್ನಾಗಿಸಿಕೊಂಡಿದೆ. ವಿಶ್ವವಿದ್ಯಾ ನಿಲಯದ ಧ್ಯೇಯವಾಕ್ಯಕ್ಕೆ ಅನುಗುಣವಾದ ವಿಷಯ ಇದಾಗಿದೆ. ಉಪನಿಷತ್ತಿನಲ್ಲಿಯ ಗುರುಶಿಷ್ಯರ ಪ್ರಾರ್ಥನೆ (ಸಹನಾವವತು) ಯೊಂದಿಗೆ ಪ್ರಾರಂಭವಾಗಿ ಪ್ರಪಂಚದ ಆದಿ ಯಲ್ಲಿ ಸೂರ್ಯಚಂದ್ರರು ಸೃಷ್ಟಿಯಾಗುತ್ತಿದ್ದಾಗ ಭೂವ್ಯೋಮಗಳು ಬೆಳಗುತ್ತಿದ್ದಂತೆ ದಿವಿಜರು, ಋಷಿಗಳು, ಆ ದಿವ್ಯದರ್ಶನವನ್ನು ಕಂಡು ಗಾಯತ್ರೀ ಮಂತ್ರವನ್ನು, ಉಪನಿಷನ್ಮಂತ್ರಗಳನ್ನು ಹಾಡಿದರು. ಸತ್ಯ, ಜ್ಯೋತಿ, ಅಮೃತತ್ವವನ್ನು ಬಯಸಿ ಪ್ರಾರ್ಥಿಸಿದರು. ಇಂದಿಗೂ ಮಾನವ ಪ್ರಾರ್ಥಿಸುವುದು ಅವಕ್ಕಾಗಿಯೇ. ಇಂದಿಗೂ ಅವನ ದರ್ಶನ ಅದೇ ಆಗಿದೆ. ಆದರೆ ಎಂದಿನಿಂದಲೂ ಆ ದರ್ಶನವನ್ನು ಒಲ್ಲದವರೂ ಇದ್ದಾರೆ. ಅಂಥ ಮಾಯಾವಿಗಳು ಮನುಷ್ಯನ ಮನಸ್ಸನ್ನು ಮರುಳುಗೊಳಿಸಿದ್ದಾರೆ, "ನಲ್ಲದಂ ಪೊಲೆಯೆಂದು ಪೊಲೆ ನಲ್ಲದೆಂದು" ವಿಪರೀತ ಬುದ್ಧಿಯನ್ನು ಬೆಳೆಯಿಸಿದ್ದಾರೆ. ಪತ್ತಾರು ಹೆಸರುಗಳನ್ನಿರಿಸಿಕೊಂಡ ಈ ಮನೋಧರ್ಮ ಬೆಳೆದಂದಿನಿಂದಲೇ ದೇವಾಸುರ ಯುದ್ಧ ಪ್ರಾರಂಭವಾಗಿದೆ. ಎಂದು ಮುಗಿದೀತು ಈ ಯುದ್ಧ ಎಂಬ ಕಾತರದ

ಜೊತೆಗೆ ಈ ಮಥನದಲ್ಲಿ ಹುಟ್ಟಿಬರುವ ಅಮೃತವಿಷಗಳು ಬೇರೆಬೇರೆಯಲ್ಲ ಎಂಬ ಅರಿವು ಮೂಡಿದಾಗ ದೇವದಾನವರಿಬ್ಬರೂ ವಿಷದಿಂದ ಅಮೃತವನ್ನು ಪಡೆಯುತ್ತಾರೆ. ಆಗ ರುದ್ರರೂಪಗಳು ರಮ್ಯವಾಗುತ್ತವೆ. ವಕ್ರವಾಗಿದ್ದದ್ದು ಋಜುವಾಗುತ್ತದೆ. ಪುರುಷ ನಲ್ಲಿಯು ಅಗ್ನಿಯನ್ನು ಕಾಯುವ ದೇವರುಗಳೇ ಧರ್ಮಾಮೃತವನ್ನು, ''ಋತವೊಂದೆ ಗೆಲ್ಲುವುದು, ಅನೃತಮಲ್ತು'' ಎಂಬ ಸಂದೇಶವನ್ನು ಬೀರುತ್ತಾರೆ. ಈ ಎತ್ತರದ ಮಟ್ಟ ದಲ್ಲಿಯೇ ಕೊನೆಗೊಳ್ಳಬಹುದಾಗಿದ್ದ ಕವನ ಕೊನೆಯ ಆರು ಪಂಕ್ತಿಗಳಿಂದಾಗಿ ಇದ್ದಕ್ಕಿದ್ದ ಹಾಗೆ ನೆಲಕ್ಕಿಳಿಯುತ್ತದೆ. ಅವನ್ನು ಬದಿಗಿರಿಸಿದರೆ ಇಡೀ ರಚನೆ ಒಂದು ಧೀರ ಗಂಭೀರವಾದ ಭಾವದ ನೆಲೆಯಲ್ಲಿ ಜ್ಞಾನೋಪಾಸನೆಯಾಗುತ್ತದೆ. ಮಾನವನ ಹೃದಯ ದಾಳದ ಒಂದು ನಿರಂತರ ಆಕಾಂಕ್ಷೆಯಾಗುತ್ತದೆ. ನಿತ್ಯ ಪ್ರಾರ್ಥನೆಯಾಗುತ್ತದೆ.

೧೫

ಶ್ರೀಯವರ ನಿಧನದ ನಂತರ ಅವರ ಕೆಲವು ಭಾಷಣಗಳನ್ನು, ಪ್ರಾಸಂಗಿಕವಾಗಿ ಬರೆದ ಕೆಲವು ಲೇಖನಗಳನ್ನು ಮತ್ತು ಕೆಲವು ಮುನ್ನುಡಿ ವಿಮರ್ಶೆಗಳನ್ನು ಸಂಗ್ರಹಿಸಿ ೧೯೪೮ರಲ್ಲಿ '' ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ '' ಎಂಬ ಹೆಸರಿನಲ್ಲಿ ಎರಡು ಭಾಗಗಳಾಗಿ ಪ್ರಕಟಿಸಲಾಯಿತು. ಕನ್ನಡಿಗರು ಒಳ್ಳೆಯ ಸಾಹಿತ್ಯವನ್ನು ಪಡೆಯಬೇಕು, ಹೊಸಕಾಲದ ಅಗತ್ಯಗಳಿಗೆ ಸರಿಯಾಗಿ ಅವರು ತಮ್ಮ ಸಾಹಿತ್ಯವನ್ನು ಒಳ್ಳೆಯದಾಗಿ ಹೊಸದಾಗಿಸಿ ಕೊಳ್ಳಬೇಕು ಎಂಬ ಆಕಾಂಕ್ಷೆಗೆ ತಮ್ಮನ್ನು ಅರ್ಪಿಸಿಕೊಂಡ ಶ್ರೀಕಂಠಯ್ಯನವರ ಇಲ್ಲಿಯ ಬರಹಗಳಿಗೆ ಇದಕ್ಕೂ ಹೆಚ್ಚು ಔಚಿತ್ಯಪೂರ್ಣವಾದ ತಲೆಬರಹವನ್ನು ಕಲ್ಪಿಸುವುದು ಕಷ್ಟ. ಇಲ್ಲಿಯ ಭಾಷಣಗಳು ಮತ್ತು ಲೇಖನಗಳು ಕನ್ನಡದ ಪುನರುಜ್ಜೀವನವನ್ನು ಕುರಿತು ಅವರು ಎಷ್ಟು ಬಗೆಯಲ್ಲಿ ಚಿಂತಿಸುತ್ತಿದ್ದರೆನ್ನುವುದನ್ನು ತೋರಿಸುತ್ತವೆ. '' ಕನ್ನಡ ಮಾತು ತಲೆಯೆತ್ತುವ ಬಗೆ '' ಭಾಷಣದಲ್ಲಿ ಕೈಕೊಳ್ಳಬೇಕಾಗಿದ್ದ ಕಾರ್ಯಯೋಜನೆಯ ಒಂದು ನಿಶ್ಚಿತವಾದ ನೀಲನಕ್ಷೆ ಇದ್ದುದನ್ನು ವಿಶ್ಲೇಷಿಸಿ ನೋಡಿಯಾಗಿದೆ. ಹಾಗೆಯೆ ಕಲಬುರ್ಗಿಯ ಅಧ್ಯಕ್ಷಭಾಷಣ ಬೆಳೆಯಬೇಕಾದ ಹೊಸ ಸಾಹಿತ್ಯದ ರೂಪರೇಷೆಗಳನ್ನು, ಆಕಾಂಕ್ಷೆ ಆಶೋತ್ತರಗಳನ್ನು ಸ್ಪಷ್ಟವಾಗಿ ವಿವರಿಸುತ್ತದೆ. ಅವನ್ನೂ ಆಗಲೆ ನೋಡಿ ಯಾಗಿದೆಯಾದ್ದರಿಂದ ಆ ಎರಡು ಭಾಷಣಗಳಲ್ಲಿಯ ವಿಷಯುವನ್ನು ಮತ್ತೆ ವಿಸ್ತರಿಸ ಬೇಕಿಲ್ಲ. ಆ ಎರಡು ಭಾಷಣಗಳು ಸರ್ವೋದಯ ಸಾಹಿತ್ಯದ ಉದ್ದೇಶಘೋಷಣೆಗಳು ಮಾತ್ರವಾಗಿರದೆ ಆ ಉದ್ದೇಶಗಳನ್ನು ಸಾಧಿಸುವ ಮಾರ್ಗದರ್ಶಿಗಳೂ ಆಗಿವೆ. '' ಕನ್ನಡದ

ಪುನರುಜ್ಜೀವನ ” ಎಂಬ ಭಾಷಣ ಮೊದಲಿನ ಎರಡು ಭಾಷಣಗಳ ಸಾರ ಸಂಗ್ರಹವನ್ನು ಅಂದಿನ ಸನ್ನಿವೇಶಕ್ಕೆ ಹೊಂದುವಂತೆ ವಿಶದಪಡಿಸುತ್ತದೆ.

ನಿರ್ಮಾಣವಾಗಬೇಕಾದ ಹೊಸ ಸಾಹಿತ್ಯಕ್ಕೆ ಯೋಗ್ಯವಾದ ಹೊಸ ಭಾಷಾ ಮಾಧ್ಯಮ ಮೊದಲ ಆಗತ್ಯವಾದ್ದರಿಂದ “ ಕನ್ನಡಕ್ಕೆ ಒಂದು ಕಟ್ಟು ” ಎಂಬ ಲೇಖನ ದಲ್ಲಿ ಈ ಹೊಸ ಮಾಧ್ಯಮದ ಅಗತ್ಯಗಳನ್ನು ಮತ್ತು ಅವನ್ನು ಪೂರೈಸಿಕೊಳ್ಳುವ ವಿಧಾನ ಗಳನ್ನು ಕೂಲಂಕಷವಾಗಿ ಪರಾಮರ್ಶಿಸಿ ಹೊಸ ನಿಯಮಗಳನ್ನು ವಿಧಿಸುತ್ತಾರೆ. ಹೊಸ ಸಾಹಿತ್ಯ ಪಂಡಿತರಿಗಾಗಿರದೆ ಸಾಮಾನ್ಯ ಜನರಿಗಾಗಿ ಅದು ಬೆಳೆಯಬೇಕಾಗಿರುವುದರಿಂದ “ ಹೊಸಗನ್ನಡದಲ್ಲಿ ವಚನ ಗ್ರಂಥವನ್ನು ಬರೆಯುವುದಕ್ಕೆ, ಸತ್ತ ಕವಿಗಳೂ ಶಾಸನ ಕಾರರೂ ಬಲವಾಗಿ ಹಿಡಿದಿರುವ ಮುಷ್ಟಿಯಿಂದ ಭಾಷೆಯನ್ನು ಸಡಿಲಿಸಿ, ಬದುಕಿರತಕ್ಕ ವರ ಬಾಯಿಯಲ್ಲಿ ಸ್ವತಂತ್ರವಾಗಿ ಉಸಿರಾಡಿ ಜೀವ ಕಳೆ ತುಂಬಿಕೊಳ್ಳುವಂತೆ ಮಾಡ ಬೇಕು. ಆದರೆ ಭಾಷೆಯನ್ನು ಸುಲಭ ಮಾಡುತ್ತೇನೆಂದು, ಅಬದ್ಧ ಮಾಡಬಾರದು ; ಗ್ರಾಮ್ಯವನ್ನು ದೂರವೇ ನಿಲ್ಲಿಸಿ, ಭಾಷೆ ಶುದ್ಧವಾಗಿ, ಬಿಗಿಯೂ ಕಟ್ಟೂ ಇರುವಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.” ಈ ಮಧ್ಯಮ ರೂಪವನ್ನು ಸಾಧಿಸಬೇಕಾದಾಗ ರೂಢಿಯನ್ನು ಆಧಾರವಾಗಿರಿಸಿಕೊಂಡು ಅರ್ಥಸ್ಪಷ್ಟತೆಯನ್ನು ಗುರಿಯಾಗಿಸಿಕೊಂಡು ಪದರೂಪಗಳನ್ನು ಮತ್ತು ವಾಕ್ಯರಚನೆಯ ರೀತಿಗಳನ್ನು ನಿರ್ಧರಿಸಿಕೊಳ್ಳಬೇಕಾಗುತ್ತದೆ. ಈ ಎಲ್ಲ ವಿವರಗಳನ್ನು ಶ್ರೀಯವರ ಇಲ್ಲಿಯ ವಿಚಾರಗಳು ಅನ್ಯಾದೃಶವಾಗಿ ಸ್ಪಷ್ಟ ಪಡಿಸುತ್ತವೆ.

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ರುದ್ರ ನಾಟಕಕ್ಕೆ ಸ್ಥಾನವಿಲ್ಲದಿರುವುದು ಶ್ರೀಕಂಠಯ್ಯನವರ ದೃಷ್ಟಿಯಲ್ಲಿ ಒಂದು ದೊಡ್ಡ ಕೊರತೆಯಾಗಿ ಕಾಣುತ್ತಿತ್ತು. ಈ ವಿಷಯದಲ್ಲಿ ನಮ್ಮ ಲಾಕ್ಷಣಿಕರು ವಿಧಿಸಿದ ನಿರ್ಬಂಧ ಅವರಿಗೆ ಅನಗತ್ಯ ಮಾತ್ರವಲ್ಲದೆ ಅರ್ಥವಿಲ್ಲದ್ದಾಗಿ ಕಾಣುತ್ತದೆ. 'ರುದ್ರ ನಾಟಕ'ವನ್ನು ಕುರಿತ ಪ್ರಬಂಧದಲ್ಲಿ ಶ್ರೀಯವರು ಈ ವಿಷಯವನ್ನು ಚರ್ಚಿಸುತ್ತಾರೆ. ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ “ ನಮ್ಮಲ್ಲಿ ದುಃಖಾ ನುಭವವಾಗಲಿ, ಮೃತ್ಯುವಿನಲ್ಲಿ ಅಮೃತತ್ವವೂ ದುಃಖಿ ಮಾನವನಲ್ಲಿ ಆನಂದಮಯ ದೇವತಾಂಶವೂ ಇರುವುದೆಂಬ ಜ್ಞಾನವಾಗಲಿ ಇಲ್ಲವೆಂದಲ್ಲ. ಬೇಕಾದ ಹಾಗೆ, ಪ್ರಪಂಚಕ್ಕೆ ಸಾಲ ಕೊಡುವಷ್ಟು ಇವೆ. ಕವಿಗಳೂ ಕಾವ್ಯದಲ್ಲಿ ಈ ದುಃಖರಹಸ್ಯವನ್ನು ಪ್ರತಿಬಿಂಬಿ ಸಿಯೇ ಇದ್ದಾರೆ.” ಆದರೂ ದುಃಖಾಂತವಾಗಬಹುದಾದದ್ದನ್ನು ಸುಖಾಂತವಾಗಿಸು ತ್ತಾರೆ. ರಂಗಸ್ಥಳದ ಮೇಲೆ ಸಾವು ನೋವುಗಳಿರಬಾರದೆಂದು ವಿಧಿಸುತ್ತಾರೆ. ರಂಗ ಸ್ಥಳದ ಮೇಲೆ ನೋಡದೆ ದೂತನ ಮುಖಾಂತರ ಅದನ್ನು ಕೇಳಿದರೆ ಅದು ಅಮಂಗಳಕರ ಅಲ್ಲವೆ ? “ ಸಾವನ್ನೂ, ಅಳಲನ್ನೂ, ಆಖ್ಯಾನಕಾವ್ಯದಲ್ಲಿ ಓದಿ ಮರುಗುವಂತೆಯೇ ಕಣ್ಣೆದುರಿಗೆ ಕಟ್ಟಿದ್ದನ್ನು ನೋಡಿ ಮರುಗಿ ಧೀರರಾಗಬೇಕು. ಸಾಹಿತ್ಯವೆಲ್ಲಾ ಮಿಠಾಯಿ

ಯಲ್ಲ ; ಕಹಿ ಔಷಧವೂ ಉಂಟು. ರುದ್ರ ನಾಟಕದ ಭಯ ಮಕ್ಕಳ ಭಯ : ಅವು ಕತ್ತಲೆಗೆ ಹೆದರಿದಂತೆ—ಮೇಲೆ ಮಿನುಗುವುವು ಧ್ರುವತಾರೆಗಳು. ಕತ್ತಲೆಯಲ್ಲೇ ಅವನ್ನು ದೃಷ್ಟಿಸಬೇಕು.'' ಈ ಮಾತುಗಳಿಗೆ ಸಮರ್ಥನೆ ಎಂಬಂತೆ ತಾವು ಬರೆದ ಮೂರು ನಾಟಕಗಳಲ್ಲಿಯೂ ದುರಂತಾನುಭವವನ್ನೇ ಚಿತ್ರಿಸಿದ್ದಾರೆ. ಅವರ ಬಗೆಯಲ್ಲಿ ತಮ್ಮಲ್ಲಿ ಮೊದಲಿನಿಂದಲೂ ಬೆಳೆದಿದ್ದ ಒಲವನ್ನು ಸಪ್ರಮಾಣವಾಗಿ, ಸಮರ್ಥವಾಗಿ, ತಾವು ರೂಪಿಸಿದ ರುದ್ರ ನಾಟಕಗಳಲ್ಲಿ ದೃಷ್ಟಾಂತಗಳೆಂಬಂತೆ ವ್ಯಕ್ತಪಡಿಸಿದ್ದಾರೆ.

ಕನ್ನಡ ಹಾಗೂ ತಮಿಳು ಭಾಷೆಗಳ ನಡುವಿನ ಸಂಬಂಧ ಪ್ರಾಚೀನವಾಗಿದ್ದಷ್ಟೂ ಮಹತ್ವಾದ್ದಾಗಿದೆ. ಅವೆರಡರ ತುಲನಾತ್ಮಕ ಅಧ್ಯಯನ ಪದರೂಪನಿಷ್ಪತ್ತಿಗಳ ಮೇಲೆ ಬೆಳಕನ್ನು ಬೀರಬಲ್ಲದಲ್ಲದೆ ಎರಡೂ ಭಾಷೆಗಳು ಬೆಳೆದ ರೀತಿಯನ್ನು ತಿಳಿಸಬಲ್ಲದು. ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ ಕನ್ನಡ ಶಾಖೆಯಲ್ಲಿ ಶ್ರೀಕಂಠಯ್ಯನವರು ೧೯೪೦ರಲ್ಲಿ ತಿರುಪತಿಯಲ್ಲಿ ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷಣದಲ್ಲಿ ಪೂರ್ವದ ಹಳಗನ್ನಡ ಮತ್ತು ತಮಿಳಿನ ನಡುವಿನ ನಿಕಟ ಬಾಂಧವ್ಯವನ್ನು ಕುರಿತು ಚರ್ಚಿಸುತ್ತ ಯಾವುದು ಮೊದಲು, ಕನ್ನಡವೊ, ತಮಿಳೋ, ಎಂಬ ಪ್ರಶ್ನೆಗೆ ಉತ್ತರವನ್ನು ಸೂಚಿಸಿದರು. ಕನ್ನಡ, ತಮಿಳು, ತೆಲಗು ಮೂರಕ್ಕೂ ಒಂದು ಮೂಲ ದ್ರಾವಿಡ ಭಾಷೆ ಉಗಮಸ್ಥಾನವಾಗಿದ್ದು ಮೊದಲು ತೆಲುಗು ಬೇರೆಯಾಗಿ ನಂತರ ಉಳಿದೆರಡು ಬೇರೆ ಬೇರೆಯಾಗಿ ಬೆಳೆದು ಸ್ವತಂತ್ರವಾಗಿ ಪದರೂಪಗಳನ್ನು ಮತ್ತು ತಮ್ಮ ತಮ್ಮ ವ್ಯಾಕಣಗಳ ನಿಯಮಗಳನ್ನು ಏರ್ಪಡಿಸಿಕೊಂಡವು. ಕನ್ನಡದಲ್ಲಿಯಂತೆ ತಮಿಳಿನಲ್ಲಿಯೂ ಹಳೆ, ನಡುವಣ, ಇಂದಿನ ಎಂಬ ಭಾಷೆಯ ಅವಸ್ಥಾಂತರಗಳು ಇವೆ. ''ಯಾವಾಗಲೂ, ಆಗ್ಗೂ ತಮಿಳೇ ಕನ್ನಡಕ್ಕಿಂತ ಹಳೆಯ ಸ್ವರೂಪವನ್ನು ತೋರುವುದೆಂದು ಹೇಳುವುದು ಸಾಧ್ಯವಿಲ್ಲ. ಪೂರ್ವದ ಹಳಗನ್ನಡದಿಂದ ಮೊದಲ ಕನ್ನಡವನ್ನು ಬಿಂಬಿಸಿಕೊಂಡು—ಸುಮಾರು ಕ್ರಿ.ಪೂ. ೬–೫ನೇ ಶತಮಾನದಲ್ಲಿ ತೆಲುಗಿಗೆ ತೀರ ಹತ್ತಿರ ಇದ್ದು ಒಂದು ನುಡಿಯಾದ ತಮಿಳು—ಕನ್ನಡದಿಂದ ಎರಡಾಗಿ ಒಡೆಯುವ ಮುಂಚೆ ಅದರ ಸ್ಥಿತಿಯನ್ನು ಕಲ್ಪನೆ ಮಾಡಿಕೊಳ್ಳಬಹುದು. ಆಗ ಕನ್ನಡದ ನುಡಿಗಳೂ, ವ್ಯಾಕರಣದ ನಿರಿಗಳೂ, ಭಾಷಾಶಾಸ್ತ್ರ ದೃಷ್ಟಿಯಿಂದ ಕನ್ನಡದಲ್ಲೇ ಪೂರ್ವರೂಪಗಳಾಗಿಯೂ, ತಮಿಳಿನವು ಅನಂತರದ ರೂಪಗಳಾಗಿಯೂ ಸ್ಪಷ್ಟವಾಗಿ ಕಾಣ್ಬುತ್ತವೆ.'' ಇಲ್ಲಿಯ ಪ್ರತಿಪಾದನೆಗಳನ್ನು ಅವರ ಭಾಷಣ ಸೋದಾಹರಣವಾಗಿ ಸಮರ್ಥಿಸಿಕೊಂಡು ಹೋಗುತ್ತದೆ ಎನ್ನುವುದು ತಮಿಳು ಭಾಷೆಯ ಅವರ ವ್ಯಾಸಂಗ ಎಷ್ಟು ಆಳವಾಗಿದ್ದಿತೆನ್ನುವುದಕ್ಕೆ ಒಂದು ನಿದರ್ಶನದಂತಿದೆ. ಮದರಾಸಿನಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಓದುತ್ತಿರುವಾಗಲೇ ತಮಿಳು ಭಾಷೆಯ ಆಳವಾದ ವ್ಯಾಸಂಗವನ್ನು ಮಾಡಿ ಅದಕ್ಕೂ ಕನ್ನಡಕ್ಕೂ ಸಮಾನವಾದ ಒಂದು ವ್ಯಾಕರಣವನ್ನು ರೂಪಿಸುವ ಯೋಜನೆಯನ್ನು ಮಾಡಿಕೊಂಡಿದ್ದರು. ಆ ಕೆಲಸ ಪೂರ್ತಿಯಾಗಿದ್ದರೆ ಈ ಎರಡು ಸೋದರ ಭಾಷೆಗಳ

ತೌಲನಿಕ ಅಧ್ಯಯನಕ್ಕೆ ತುಂಬಾ ಅನುಕೂಲವಾಗುತ್ತಿತ್ತು. ಅವರು ಬರೆದಿಟ್ಟುಕೊಂಡಿದ್ದ ಟಿಪ್ಪಣಿಗಳ ಗತಿಯಾದರೂ ಏನಾಯಿತು ಗೊತ್ತಾಗುವುದಿಲ್ಲ.

ಮೊದಲ ಭಾಗದಲ್ಲಿಯ ಉಳಿದ ಭಾಷಣ-ಲೇಖನಗಳು ಹೆಚ್ಚಾಗಿ ಸಾಹಿತ್ಯ ಪರಿಷತ್ತಿನ ಧ್ಯೇಯೋದ್ದೇಶ ಹಾಗೂ ಕಾರ್ಯಯೋಜನೆಗಳಿಗೆ ಸಂಬಂಧಿಸಿದುವಾಗಿದ್ದು ಆ ಸಂಸ್ಥೆ ಕನ್ನಡದ ಬೆಳವಣಿಗೆಗಾಗಿ ಎಷ್ಟು ಬಗೆಯಲ್ಲಿ ಕೆಲಸ ಮಾಡಬಹುದು ಎಂದು ಅವರು ಇರಿಸಿಕೊಂಡಿದ್ದ ಆಲೋಚನೆಗಳನ್ನು ಮತ್ತು ಅವರು ಉಪಾಧ್ಯಕ್ಷರಾಗಿದ್ದ ಅವಧಿಯಲ್ಲಿ ಅವನ್ನು ಕಾರ್ಯಗತವಾಗಿಸುವುದರಲ್ಲಿ ಅವರು ತೋರುತ್ತಿದ್ದ ಆಸಕ್ತಿ ಉತ್ಸಾಹಗಳನ್ನು ವ್ಯಕ್ತಪಡಿಸುತ್ತವೆ. ಕನ್ನಡಿಗರ ಪುನರುಜ್ಜೀವನವೇ ಪರಿಷತ್ತಿನ ಗುರಿ. ಅದು ಕನ್ನಡಿಗರ ಸಾರ್ವಜನಿಕ ವಿದ್ಯಾಪೀಠ. ಅದು ಮಹಾಜನರ ವಿಶ್ವವಿದ್ಯಾನಿಲಯವಾಗಬೇಕಾಗಿದೆ, ಕನ್ನಡದ ಬಗೆಯಲ್ಲಿಯ ಅಭಿಮಾನದ ಕೇಂದ್ರವಾಗಬೇಕಾಗಿದೆ. ಈ ಎಲ್ಲ ಭಾಷಣಗಳಲ್ಲಿಯೂ ಸ್ಪಷ್ಟವಾಗಿ ಎದ್ದು ಕಾಣುವುದು ಕನ್ನಡದ ಮುನ್ನಡೆಯ ಬಗೆಯಲ್ಲಿಯ ಅವರ ನಿಷ್ಠೆ, ಅದಿಲ್ಲದೆ ಗತಿಯೇ ಇಲ್ಲ ಎನ್ನುವ ಮಟ್ಟಿಗಿನ ಹೃದಯದಾಳದ ಹಂಬಲ, ಇವೆರಡರ ಪ್ರೇರಣೆಯಿಂದ ಹೊಮ್ಮಿದ ಉತ್ಸಾಹ, ಪ್ರಯತ್ನ, ಸತತ ಪರಿಶ್ರಮ, ಪ್ರಚಾರ. ಕನ್ನಡದ ಕೈಂಕರ್ಯ ಎನ್ನುವ ಮಾತು ಅವರ ಜೀವನದ ಧ್ಯೇಯೋದ್ದೇಶವನ್ನೂ ಸಾಧನೆಯನ್ನೂ ಒಂದೇ ಮಾತಿನಲ್ಲಿ ಹೇಳುತ್ತದೆ. ಕನ್ನಡದ ಮುನ್ನಡೆಯನ್ನು ಕುರಿತ ಇಲ್ಲಿಯ ಭಾಷಣಗಳಲ್ಲಿ ಅಂಥ ಏಕಾಗ್ರ ನಿಷ್ಠೆ ಅವರ ಜೀವನಮಂತ್ರವಾಗಿ, ಬದುಕಿನುಸಿರಾಗಿ, ನಡೆನುಡಿಗಳ ಹಿಂದಿನ ಏಕಮೇವ ಪ್ರೇರಣೆಯಾಗಿ, ಬದುಕನ್ನು ರೂಪಿಸಿದ ಶಕ್ತಿಯಾಗಿ, ಕಾಣಿಸಿಕೊಳ್ಳುತ್ತದೆ. ಕನ್ನಡ ಎನ್ನುವ ಮಾತು ಅವರ ಪಾಲಿಗೆ ಒಂದು ದಿವ್ಯ ಮಂತ್ರವಾಗಿತ್ತು. ''ಕನ್ನಡದ ಪುಲ್ಲೆನಗೆ ಪಾವನ, ಕನ್ನಡದ ಶಬ್ದ ಮೆನಗೋಂಕಾರ'' ಎಂದು ಕವಿಯೊಬ್ಬರು ಹೇಳಿದ ಮಾತು ಅವರದೂ ಆಗಿದ್ದಿತು.

ಸಂಗ್ರಹದ ಮೊದಲನೆಯ ಭಾಗದಲ್ಲಿ ಬಹು ಮಟ್ಟಿಗೆ ಕನ್ನಡದ ಸಮಸ್ಯೆಗಳಿಗೆ ಸಂಬಂಧಿಸಿದ ಭಾಷಣ-ಲೇಖನಗಳು ಬಂದಿವೆಯಾದರೆ ಎರಡನೆಯ ಭಾಗದಲ್ಲಿ ಕವಿಕಾವ್ಯಗಳನ್ನು ಕುರಿತ ವಿಮರ್ಶಾತ್ಮಕವಾದ ಮುನ್ನುಡಿಗಳು ಮತ್ತು ಅದೇ ಬಗೆಯ ಒಂದೆರಡು ಲೇಖನಗಳು ಸೇರಿವೆ. ಒಂದೆರಡನ್ನು ಹೊರತುಪಡಿಸಿದರೆ ಇಲ್ಲಿಯ ಮುನ್ನುಡಿಗಳು ಹ್ರಸ್ವವಾಗಿವೆ. ಅನಗತ್ಯವಾದ ವ್ಯಕ್ತಿಪ್ರಶಂಸೆಗೆ ತೊಡಗದೆ ಪ್ರಸ್ತುತದ ವಿಷಯಕ್ಕೆ ಸಂಬಂಧಿಸಿದಂತೆ, ಅದರಲ್ಲಿ ತೊಡಕಿಕೊಂಡ ಸಮಸ್ಯೆಗಳ ಕಡೆಗೆ ಗಮನ ಹರಿಯುವಂತೆ, ಆ ಸಮಸ್ಯೆಗಳಿಗೂ ಕನ್ನಡ ಜನಜೀವನದ ಸಂಸ್ಕರಣಕ್ಕೂ ಇರಬಹುದಾದ ಸಂಬಂಧಗಳನ್ನು ವಿಶದಪಡಿಸುವಂತೆ, ಅವರು ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದರು. ವಿಷಯ ಯಾವುದಾದರೂ ಆಗಲಿ, ಶಿಶುಗೀತಗಳಾಗಲಿ, ವಚನಧರ್ಮಸಾರವಾಗಲಿ, ನಾಡ ಪದಗಳಾಗಲಿ, ಸಂಸ್ಕೃತ ನಾಟಕವಾಗಲಿ, ಅದನ್ನು ಅವರು ಜನಜೀವನದ ಸಂಸ್ಕಾರ ಸಾಧನ ಎಂಬ ದೃಷ್ಟಿ

ಯಿಂದ ಕಾಣುತ್ತಿದ್ದರು. ಈ ಮಾತು ಅವರು ಬರೆದ ಎಲ್ಲ ಮುನ್ನುಡಿ ವಿಮರ್ಶೆಗಳಿಗೆ ಅನ್ವಯಿಸುತ್ತದೆ. ಎರಡನೆಯ ಭಾಗದಲ್ಲಿಯ ಎರಡು ಮುನ್ನುಡಿಗಳನ್ನು ವಿಶೇಷವಾಗಿ ನಿರ್ದೇಶಿಸಬೇಕು. ಒಂದು ರನ್ನ ಕವಿ ಪ್ರಶಸ್ತಿಗೆ ಬರೆದದ್ದು ; ಇನ್ನೊಂದು ನಾಗಚಂದ್ರ ನನ್ನು ಕುರಿತದ್ದು. ರನ್ನನ ಕವಿತಾಸಾಮರ್ಥ್ಯದ ವಿಷಯದಲ್ಲಿ ಶ್ರೀಕಂಠಯ್ಯನವರಲ್ಲಿ ಅಪರಿಮಿತ ಗೌರವ ಭಾವವಿದ್ದರೂ ನಮ್ಮ ಮೆಚ್ಚಿಕೆ ವಿಮರ್ಶೆಯ ವಿವೇಕವನ್ನು ಮಸು ಕಾಗಿಸಬಾರದು ಎನ್ನುವ ಎಚ್ಚರವೂ ಅವರಲ್ಲಿದ್ದಿತು ಎನ್ನುವುದನ್ನು ಈ ಮುನ್ನುಡಿ ತೋರಿಸಿಕೊಡುತ್ತದೆ. ಕನ್ನಡ ಸಾಹಿತ್ಯವನ್ನು ಮುನ್ನಡೆಸಬೇಕೆಂದವರು "ಕನ್ನಡದ ಪೂರ್ವದ ಸಾಹಿತ್ಯವನ್ನು ಪರಿಶೀಲನೆ ಮಾಡಿ ಬೆಲೆ ಕಟ್ಟಬೇಕು. ನಮ್ಮ ಕವಿಗಳಲ್ಲಿ ನಿಜ ವಾದ ಕವಿಗಳು ಯಾರು ? ಬರಿಯ ಗುಹಾಧ್ವನಿಗಳು ಯಾರು ?' ಅಂತಹ ನಿಜವಾದ ಕವಿಗಳಲ್ಲಿ ಪ್ರಧಾನರು ಯಾರು ? ಅವರ ಕವಿತ್ವದ ಸತ್ವವೇನು ? (ಅವರ ಕಾವ್ಯಗಳು) ಈ ಕಾಲದ ನಮಗೆ ಎಷ್ಟು ಮಟ್ಟಿಗೆ ಆನಂದವನ್ನು, ಸುಪ್ರೇರಣೆಯನ್ನು, ಕಾವ್ಯಫಲ ವನ್ನು ಕೊಡಬಲ್ಲವು ?" ಎಂದು ಮುಂತಾದ ಪ್ರಶ್ನೆಗಳನ್ನು ಕೇಳಿಕೊಂಡು ನಿಷ್ಪಕ್ಷವಾದ ಉತ್ತರಗಳನ್ನು ಕಂಡುಕೊಳ್ಳುವುದು ಆತ್ಯಗತ್ಯವಾಗಿದೆ ಎನ್ನುತ್ತಾರೆ. ಗದಾಯುದ್ಧ ದಲ್ಲಿಯ ದುರ್ಯೋಧನನ ಪ್ರಲಾಪವನ್ನು, ಅಂತೆಯೇ ಅಜಿತಪುರಾಣದಲ್ಲಿ ತೀರ್ಥಕರನು ಪೂರ್ವಜನ್ಮದಲ್ಲಿ ತನ್ನ ಜೀವಕ್ಕೆ ಮಾಡಿದ ವೈರಾಗ್ಯ ಬೋಧನೆಯನ್ನು ಅವರು ಅತೀವ ವಾಗಿ ಮೆಚ್ಚಿಕೊಂಡಿದ್ದರೂ ಅವೆರಡನ್ನು ವ್ಯಕ್ತಪಡಿಸಿದ ಕವಿತಾಶಕ್ತಿಗೆ ಮನಸೋತವ ರಾಗಿದ್ದರೂ ಅವೆರಡರಿಂದ ದೂರ ನಿಂತು ದುರ್ಯೋಧನನ ವೀರ, ಸ್ನೇಹಪರತೆಗಳನ್ನು ನಿಕೃಷ್ಟವೆನ್ನಬೇಕಿಲ್ಲ ; ವೈರಾಗ್ಯವೊಂದೇ ಸಾರವಲ್ಲ ; ರನ್ನನ ದರ್ಶನವೇ ಕಡೆಯ ದರ್ಶನ ವಾಗಬೇಕಿಲ್ಲ ; ಎಂದು ಮನಸ್ಸನ್ನು ತೆರೆದಿರಿಸಿಕೊಳ್ಳಬೇಕಾದ ಅಗತ್ಯವನ್ನು ಮರೆಯ್ಯ ಕೂಡದು ಎನ್ನುತ್ತಾರೆ. ಅವರ ಜೀವನನಿಷ್ಠೆ, ವಿಮರ್ಶನ ಪ್ರಜ್ಞೆ ಆಂಥ ಎಚ್ಚರವನ್ನು ಹೇಳುತ್ತದೆ.

"ಅಭಿನವ ಪಂಪ" ಕೃತಿಗೆ ಮುನ್ನುಡಿಯಾಗಿ ಬರೆಯಲಾದ ನಾಗಚಂದ್ರನನ್ನು ಕುರಿತ ಶ್ರೀಕಂಠಯ್ಯನವರ ಪ್ರಬಂಧ ಕಾವ್ಯರಸಾಸ್ವಾದದ ದೃಷ್ಟಿಯಿಂದ ಮಾತ್ರವಲ್ಲದೆ ತೀಕ್ಷ್ಣವಾದ ವಿಮರ್ಶನ ದೃಷ್ಟಿಯಿಂದಲೂ ಒಂದು ಆತ್ಯಂತ ಶ್ರೇಷ್ಠ ಬರವಣಿಗೆಯಾಗಿದೆ. "ಹತ್ತೆಂಟು ಎಸಳಿನ ಹೂವು ಅರಳಿದಂತಿರುವ" ಮಲ್ಲಿನಾಥಪುರಾಣ ಹಾಗೂ "ಸಾವಿರ ಕಂಬದ ಬಸ್ತಿಯನ್ನು ಕಟ್ಟಿದಂತೆ" ಇರುವ ರಾಮಚಂದ್ರಚರಿತಪುರಾಣ, ಈ ಎರಡು ಕೃತಿಗಳ ಗುಣವಿಶೇಷಗಳನ್ನು ಸಂಗ್ರಹವಾಗಿ ತಿಳಿಸಿ ಶ್ರೀಕಂಠಯ್ಯನವರು ಈ ಪ್ರಬಂಧದಲ್ಲಿ ನಾಗಚಂದ್ರನ ಚರಿತ್ರದೃಷ್ಟಿಯನ್ನು ವಿವರಿಸುತ್ತಾರೆ. ಆತನ ಪಾತ್ರಸೃಷ್ಟಿಯ ಉದಾತ್ತ ಭಾವವನ್ನು ತೋರಿಸುವುದಕ್ಕೆ ಆತ ಚಿತ್ರಿಸಿದ ರಾವಣನ ಪಾತ್ರವನ್ನು ವಿಶ್ಲೇಷಿಸುತ್ತಾರೆ. ಜಿನೋಪಾಸಕನಂತೆ ಕಲೋಪಾಸಕನೂ ಆಗಿದ್ದ ನಾಗಚಂದ್ರನು ಲೌಕಿಕ ವೈಭವವನ್ನಲ್ಲದೆ

ಚಕ್ರಾಧಿಪತ್ಯದ ಏಳುಬೀಳುಗಳನ್ನು, ಕರ್ಮವಶರಾಗಿ ಮಹಾಪುರುಷರೂ ಉರುಳಿಬಿದ್ದು ಹೋಗಿರುವುದನ್ನು ಕಂಡವನು. ಹಾಗೆಂದು ಧರ್ಮಪುರುಷನಾದ ಶ್ರೀರಾಮನನ್ನು ರಾಮ ಜಿನನನ್ನಾಗಿ ಸ್ತೋತ್ರ ಮಾಡುವ ಪುರಾಣದಲ್ಲಿ ಪ್ರತಿವಾಸುದೇವನಾಗಿ, ಶಲಾಕಾಪುರುಷ ನಾಗಿ, ಮುಂದೆ ಮೋಕ್ಷಕ್ಕೆ ಅರ್ಹವಾಗುವ ರಾವಣನ ವ್ಯಕ್ತಿತ್ವವನ್ನು ನಿಷ್ಪಕ್ಷಪಾತವಾಗಿ ಕಾರುಣ್ಯದ ದೃಷ್ಟಿಯಿಂದ ಚಿತ್ರಿಸಿದ್ದನ್ನು ವಿವರಿಸಿದ್ದಾರೆ. "ಪಂಪನ ದುರ್ಯೋಧನ, ರನ್ನನ ದುರ್ಯೋಧನ, ಅಭಿನವ ಪಂಪನ ರಾವಣ ಇವರು ಮೂವರು ಉಗ್ರಪ್ರಕೃತಿಗಳು, ರುದ್ರನಾಟಕದ ನಾಯಕರು, ಕನ್ನಡ ಕಾವ್ಯಗಳಲ್ಲಿ ಕಲಾದೃಷ್ಟಿಯಿಂದ ಅತ್ಯುನ್ನತ ಪಾತ್ರ ಗಳು" ಎಂಬ ತೀರ್ಮಾನಕ್ಕೆ ಬರುತ್ತಾರೆ. ನಾಗಚಂದ್ರ ಚಿತ್ರಿಸಿದ ರಾವಣನ ಪಾತ್ರವನ್ನು ಕುರಿತಂತೆ ಶ್ರೀಕಂಠಯ್ಯನವರು ಇಂಗ್ಲಿಷ್‌ನಲ್ಲಿಯೂ ಒಂದು ಸುದೀರ್ಘವಾದ ಲೇಖನ ವನ್ನು ಬರೆದು ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಮುಖ್ಯ ವಾಗಿ ದುರಂತ ಪಾತ್ರ ಚಿತ್ರಣದ ಸಾಧ್ಯತೆಗಳನ್ನು ಎತ್ತಿತೋರಿಸುವುದರಲ್ಲಿಯ ಅವರ ಆಸಕ್ತಿ ಇದರಿಂದ ವ್ಯಕ್ತವಾಗುತ್ತದೆ. ಕನ್ನಡದ ಪುರೋಭಿವೃದ್ಧಿಗಾಗಿ ಶ್ರೀಯವರು ತಮ್ಮ ಬದುಕಿನುದ್ದಕ್ಕೂ ಪ್ರಚುರ ಪಡಿಸಿದ ಮುಖ್ಯ ಭಾವನೆಗಳನ್ನೆಲ್ಲ ಈ ಪುಸ್ತಕದಲ್ಲಿ ಸಂಕಲಿತ ವಾದ ಬರಹ ಭಾಷಣಗಳು ಒಂದು ರೀತಿಯಲ್ಲಿ ಪ್ರತಿನಿಧಿಸುತ್ತವೆ.

***

ಶ್ರೀಕಂಠಯ್ಯನವರು ಬರೆದ ಇನ್ನೆರಡು ಸುದೀರ್ಘ ಲೇಖನಗಳೆಂದರೆ ಕನ್ನಡ ಕೈಪಿಡಿಗಾಗಿ ಬರೆದವು. ಒಂದು ಕನ್ನಡ ಛಂದಸ್ಸಿನ ಚರಿತ್ರೆಗೆ ಸಂಬಂಧಿಸಿದ್ದು. ಇನ್ನೊಂದು ಕನ್ನಡ ಸಾಹಿತ್ಯದ ಚರಿತ್ರೆಯೆಂದು ಪ್ರಾರಂಭವಾಗಿ ಭಾಗಶಃ ಬರೆಯಲಾದದ್ದು. ದ್ರಾವಿಡ ಛಂದೋರೂಪಗಳಲ್ಲಿ ಶ್ರೀಕಂಠಯ್ಯನವರು ಆಳವಾದ ಆಸಕ್ತಿಯನ್ನೂ ಪರಿಶ್ರಮವನ್ನೂ ಪಡೆದಿದ್ದರು. ಆ ಬಗೆಯಲ್ಲಿ ಕೆಲವೊಂದು ವಿಚಾರಗಳನ್ನು ಈ ಮೊದಲೇ ವಿವರಿಸಲಾಗಿದೆ. ಅವರ ಈ ಪರಿಶ್ರಮದ ಮೂಲಕವೇ " ಇಂಗ್ಲಿಷ್ ಗೀತಗಳು " ಸಂಗ್ರಹವಲ್ಲಿ ವ್ಯಕ್ತ ಪಡಿಸಬೇಕಾದ ಭಾವಕ್ಕೆ ತಕ್ಕಂತೆ ಹೊಸ ಬಂಧಗಳನ್ನು ಏರ್ಪಡಿಸಿಕೊಳ್ಳುವುದು ಯಶಸ್ವಿ ಯಾಗಿ ಸಾಧ್ಯವಾಯಿತು. ಪ್ರಸ್ತುತ ಪ್ರಬಂಧ ಕನ್ನಡದಲ್ಲಿ ಛಂದೋರೂಪಗಳು ಬೆಳೆದು ಬದಲಾಗುತ್ತ ಬಂದ ಕ್ರಮವನ್ನು ವಿಶ್ಲೇಷಿಸಿ ತೋರಿಸುತ್ತದೆ. ಸಂಸ್ಕೃತ ವೃತ್ತಗಳಿಗೆಯೆ ಪ್ರಾಧಾನ್ಯವಿದ್ದ ಚಂಪೂ ಕಾವ್ಯಗಳ ಯುಗದ ನಂತರದಲ್ಲಿ ಭಾಷೆಯ ಸ್ವರೂಪ ಬದಲಾ ದಂತೆ ವೃತ್ತಗಳ ಬಳಕೆ ಹೆಚ್ಚು ಹೆಚ್ಚು ಕಷ್ಟವಾಗತೊಡಗಿದ್ದರಿಂದ ಕನ್ನಡ ಕವಿಗಳು ದ್ರಾವಿಡ ಮೂಲವಾದ ದೇಶೀಯ ಛಂದಸ್ಸುಗಳನ್ನು ಬಳಸಿಕೊಳ್ಳುವುದು ಅನಿವಾರ್ಯ ವಾಯಿತು. ಭಾಷೆಯ ಬೆಳವಣಿಗೆಯ ಜೊತೆಯಲ್ಲಿ ಕಾಲಕ್ಕೆ ತಕ್ಕಂತೆ ವ್ಯಕ್ತಪಡಿಸಬೇಕಾದ ಭಾವಗಳ ವೈವಿಧ್ಯವೂ ಬೆಳೆದಂತೆ ಹೊಸ ಛಂದೋರೂಪಗಳನ್ನು ಏರ್ಪಡಿಸಿಕೊಳ್ಳ

ಬೇಕಾಯಿತು. ಸಂಸ್ಕೃತದ ವೃತ್ತ ಕಂದಗಳಿಂದ ಹೊರಟು ಇಂದಿನ ಹಾಡುಗಳ ಹೊಸ ಮಟ್ಟುಗಳವರೆಗೆ ಈ ಬದಲಾವಣೆಯು ದಾರಿ ಕ್ರಮಿಸಿದ್ದನ್ನು ಕಾಣಬಹುದು. ಈ ಬದಲಾವಣೆಗಳನ್ನು ಗುರುತಿಸುವುದರಲ್ಲಿ ಶ್ರೀಕಂಠಯ್ಯನವರು ಅಂಶ, ಗಣ, ಮಾತ್ರೆ, ಪಾದ, ಪ್ರಾಸ, ವಡಿ, ಪದ್ಯದ ಕಟ್ಟು, ತ್ರಿಪದಿ, ಸಾಂಗತ್ಯ, ಷಟ್ಪದಿ, ರಗಳೆ, ಹಾಡುಗಳು, ಎಂಬೆಲ್ಲ ಲಯವಿನ್ಯಾಸಗಳು ಹೇಗೆ ರೂಪುಗೊಂಡು ಹೇಗೆ ವಿವಿಧ ಪ್ರಯೋಜನಗಳನ್ನು ಈಡೇರಿಸಬಲ್ಲವಾದವು ಎನ್ನುವುದನ್ನು ಈ ಪ್ರಬಂಧದಲ್ಲಿ ಕೂಲಂಕಷವಾಗಿ ಚರ್ಚಿಸಿದ್ದಾರೆ. ಈ ವಿಷಯದಲ್ಲಿಯ ತಜ್ಞರ ಅಭಿಪ್ರಾಯದ ಪ್ರಕಾರ ಶ್ರೀಯವರ ಈ ಪ್ರಬಂಧ ಕನ್ನಡ ಛಂದಸ್ಸುಗಳಿಗೆ ಸಂಬಂಧಿಸಿದಂತೆ ಮೂಲಭೂತವಾದ ವಿಶ್ಲೇಷಣೆಯನ್ನು ತಲಸ್ಪರ್ಶಿಯಾಗಿ ಮಾಡುತ್ತದೆ. ಇಂಥ ಬರವಣಿಗೆ ಬೇರೊಂದಿಲ್ಲ ಎನ್ನಲಾಗಿದೆ. ಇದರ ನಂತರ ಇಲ್ಲಿಯ ವಿಚಾರಗಳನ್ನು ಬೇರೆಯವರು ಮುಂದುವರಿಸಿಕೊಂಡು ಹೋಗಲಾಗಿಲ್ಲ ಎಂದೂ ಹೇಳಲಾಗಿದೆ.

ಭಾಗಶಃ ಬರೆಯಲಾದ ಕನ್ನಡ ಸಾಹಿತ್ಯ ಚರಿತ್ರೆ ಹತ್ತನೆಯ ಶತಮಾನದವರೆಗಿನ ಪ್ರಾರಂಭದ ಬೆಳವಣಿಗೆಗಳನ್ನು ಒಂದು ಸ್ಥೂಲವಾದ ಹಿನ್ನೆಲೆಯಾಗಿಸಿಕೊಂಡು ಪಂಪನಿಂದ ಹಿಡಿದು ನಾಗಚಂದ್ರನವರೆಗಿನ ಪ್ರಮುಖ ಕವಿಗಳ ಕಾರ್ಯವನ್ನು, ಅವರವರ ಗುಣವಿಶೇಷಗಳನ್ನು, ವಿಶದ ಪಡಿಸುವಂತೆ ಸೋದಾಹರಣವಾಗಿ ವಿವರಿಸುತ್ತದೆ. ಸಾಹಿತ್ಯ ಚರಿತ್ರೆಯೊಂದರಲ್ಲಿ ಇರಬೇಕಾದ ವಿಮರ್ಶೆಗಿಂತ ಹೆಚ್ಚಾಗಿ ವಿವರಣೆ, ಕವಿಕೃತಿಗಳ ಬೆಲೆಗಾಣ್ಕೆಗಿಂತ ರಸಗ್ರಹಣದ ದೃಷ್ಟಿಯೇ ಇಲ್ಲಿ ಪ್ರಧಾನವಾಗಿದೆ ಎಂದು ಹೇಳಬಹುದಾಗಿದೆ. ಬಹುಮಟ್ಟಿಗೆ ಈ ಮಾತು ನಿಜ. ಆದಕ್ಕೆ ಸಮರ್ಥನೆಯನ್ನು ಶ್ರೀಯವರೇ ಹೇಳಿದ್ದಾರೆ. ''ಕಾವ್ಯ, ಸಾಹಿತ್ಯ ಎಂಬ ಶಬ್ದಗಳ ಶ್ಲಾಘ್ಯವಾದ ಅರ್ಥದ ಮೇಲೆ ದೃಷ್ಟಿ ಇಟ್ಟು ವಿದ್ಯಾರ್ಥಿಗಳ ಪ್ರಥಮ ಪರಿಚಯಕ್ಕಾಗಿ'' ಪ್ರಸಿದ್ಧರಾದ ಹಾಗೂ ಗಣ್ಯರಾದ ಕವಿಗಳನ್ನು ಆಯ್ದುಕೊಳ್ಳಲಾಗಿದೆ ಎಂದಿದ್ದಾರೆ. ಒಟ್ಟಿನ ಮೇಲೆ ಕನ್ನಡ ಸಾಹಿತ್ಯದ ಬೆಳವಣಿಗೆ, ವಿಭಾಗಗಳು, ಸ್ವರೂಪ, ಇವುಗಳನ್ನು ಸ್ಪಷ್ಟವಾಗಿಸಬೇಕೆನ್ನುವುದು ಇಲ್ಲಿಯ ಮುಖ್ಯ ಉದ್ದೇಶವಾಗಿದೆ. ವಿಮರ್ಶನ ಭಾಗ ಕಡಿಮೆಯಾಗಿರುವುದಕ್ಕೆ ಕಾರಣ ಹೇಳುತ್ತ '' ಎಲ್ಲರೂ ಒಪ್ಪಬಹುದಾದ ಅಭಿಪ್ರಾಯಗಳು ಪ್ರಚಾರದಲ್ಲಿಲ್ಲವಾದ್ದರಿಂದಲೂ '' '' ಪೂರ್ವದ ಸಂಪ್ರದಾಯವಾದ ಸಂಸ್ಕೃತ ಕಾವ್ಯಲಕ್ಷಣ ರುಚಿಗೂ ಈ ಕಾಲದ ಇಂಗ್ಲಿಷ್ ಕಾವ್ಯಾಭ್ಯಾಸ ಬಲದಿಂದ ಉಂಟಾಗಿರುವ ಹೊಸ ರುಚಿಗೂ ಬಹಳ ತಾರತಮ್ಯವಿರುವುದರಿಂದಲೂ ಆ ಭಾಗಕ್ಕೆ ಇಲ್ಲಿ ಹೆಚ್ಚಾಗಿ ಪ್ರವೇಶ ಮಾಡುವುದು ಸೂಕ್ತವಾಗಿ ಕಾಣಿಸಲಿಲ್ಲ'' ಎಂದಿದ್ದಾರೆ. ಈ ಮಾತುಗಳನ್ನು ಬರೆದು ಆಗಲೆ ನಲವತ್ತು ವರ್ಷಗಳ ಮೇಲಾಯಿತು. ಸಂಸ್ಕೃತ ಕಾವ್ಯ ಲಕ್ಷಣಗಳಿಂದ ರೂಪಿತವಾದ ರುಚಿಯಾಗಲಿ, ಆ ಲಕ್ಷಣಗಳನ್ನು ಅನ್ವಯಿಸಿಕೊಂಡು ಕಾವ್ಯ ವಿಮರ್ಶೆಗೆ ತೊಡಗುವ ಮನೋವೃತ್ತಿಯಾಗಲಿ ಇಂದು ಉಳಿದು

ಕೊಂಡಿವೆ ಎಂದು ಹೇಳಲಾಗುವುದಿಲ್ಲ. ಕಾವ್ಯ ಹಳೆಯದೇ ಆಯಿತು, ಹೊಸದೇ ಆಯಿತು, ಅದನ್ನು ಇಂದು ನಾವು ವಿಮರ್ಶಿಸುವುದು ಹೊಸ ದೃಷ್ಟಿಯಿಂದಲೇ ಆದ್ದರಿಂದ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಬರೆಯುವುದಕ್ಕೆ ಒಂದು ಕಾಲಕ್ಕಿದ್ದ ಆತಂಕಗಳಾಗಲಿ, ಪರಿಮಿತಿಗಳಾಗಲಿ, ಇಂದು ಎಷ್ಟೂ ಉಳಿದಿಲ್ಲ. ಅದನ್ನು ಗಮನಿಸಿಯೇ ಮೈಸೂರು ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯಗಳು ಬೇರೆಬೇರೆಯಾಗಿ ಸಮಗ್ರ ಚರಿತ್ರೆಯನ್ನು ಸಿದ್ಧಪಡಿಸುವ ಯೋಜನೆಗಳನ್ನು ಕೈಕೊಂಡಿವೆ. ಶ್ರೀಕಂಠಯ್ಯನವರು ಇಲ್ಲಿ ಮಾಡಿದ್ದು ಒಂದು ಮೊದಲ ಪ್ರಯತ್ನ. ಅದರಲ್ಲಿ ನೇರವಾಗಿ ಕವಿ ಅಥವಾ ಕೃತಿ ವಿಮರ್ಶೆ ಕಾಣಿಸಿಕೊಳ್ಳದಿದ್ದರೂ ಅವರವರ ಹಿರಿಮೆಯನ್ನೋ ಗಣ್ಯತೆಯನ್ನೋ ಎತ್ತಿ ವಿಶದ ಪಡಿಸುವುದರಲ್ಲಿ ವಿಮರ್ಶೆ ಪರೋಕ್ಷವಾಗಿ ವ್ಯಕ್ತವಾಗುತ್ತಲೇ ಇರುತ್ತದೆ. ಶ್ರೀಕಂಠಯ್ಯನವರು ಆಯ್ದುಕೊಂಡು ಕವಿಕೃತಿಯಲ್ಲಿಯ ವಿಶೇಷ ಭಾಗಗಳನ್ನು ವಿವರಿಸುವುದರಲ್ಲಿ ಎದ್ದು ಕಾಣುವ ರಸಾಭಿಜ್ಞತೆಯ ದೃಷ್ಟಿಯೇ ಒಂದು ಬಗೆಯ ವಿಮರ್ಶೆ ಎಂದು ಹೇಳಬಹುದಾಗಿದೆ.

೧೬

ಶ್ರೀಕಂಠಯ್ಯನವರು ಬಿಟ್ಟುಹೋದ ಬರವಣಿಗೆಯ ಮೊತ್ತ ದೊಡ್ಡದಲ್ಲ. ಅವರ ವಿದ್ವತ್ತನ್ನು, ರಸಾಭಿಜ್ಞತೆಯನ್ನು, ಕೃತಿ ಸೃಷ್ಟಿ ಸಾಮರ್ಥ್ಯವನ್ನು ನೆನೆದಾಗ ಸಹಜವಾಗಿ ಇನ್ನೂ ಹತ್ತಾರು ಕೃತಿಗಳನ್ನು ಅವರು ಬರೆಯಬೇಕಾಗಿತ್ತು, ಕನ್ನಡ ಸಾಹಿತ್ಯಕ್ಕೆ ಅಂಥ ಕೃತಿಗಳು ಅತ್ಯಮೂಲ್ಯವಾದ ಕಾಣಿಕೆಗಳಾಗುತ್ತಿದ್ದವು ಎನ್ನುವುದರಲ್ಲಿ ಸಂದೇಹವಿಲ್ಲ. ತಮ್ಮ ಜೀವನದ ಕೊನೆಯ ಹದಿನೈದು ಇಪ್ಪತ್ತು ವರ್ಷಗಳಲ್ಲಿ ಅವರು ಕೈಕೊಂಡ ಸಂಚಾರಗಳನ್ನು, ಮಾಡಿದ ಭಾಷಣಗಳನ್ನು, ಕಡಿಮೆಯಾಗಿಸಿ ಸ್ವಂತದ ಕೃತಿರಚನೆಗೆ ಅದೇ ಸಮಯವನ್ನು ಅವರು ವ್ಯಯಿಸಿದ್ದರೆ ಚೆನ್ನಾಗಿತ್ತು ಎಂದು ವ್ಯಥೆಯನ್ನು ವ್ಯಕ್ತ ಪಡಿಸಿದವರಿದ್ದಾರೆ. ಮತ್ತೆ ನಾಲ್ಕು ಕೃತಿಗಳನ್ನು ಅವರು ಕನ್ನಡಕ್ಕೆ ಕೊಟ್ಟಿದ್ದರೆ ಚೆನ್ನಾಗಿತ್ತು ಎನ್ನುವ ಮಾತು ಸರಿಯೇ. ಆದರೆ ಅವರು ತಮ್ಮ ಸಂಚಾರಪ್ರಚಾರಕಾರ್ಯವನ್ನು ಕಡಿಮೆಯಾಗಿಸಬೇಕಿತ್ತು ಎಂದು ಹೇಳುವುದೆಂದರೆ ಅವುಗಳಿಂದಾದ ಪ್ರಯೋಜನ ಕೃತಿ ರಚನೆಗಿಂತ ಕಡಿಮೆಯದು ಎಂದು ಹೇಳಿದಂತಾಗುತ್ತದೆ. ಹಾಗೆ ಹೇಳುವುದೆಂದರೆ ಅವರ ಜೀವನದಲ್ಲಿಯ ಅತಿ ಮುಖ್ಯವಾಗಿದ್ದ ಒಂದು ಆಕಾಂಕ್ಷೆಯನ್ನೇ ಅಲ್ಲಗಳೆದಂತಾಗುತ್ತದೆ. ಕನ್ನಡ ಬೆಳೆಯಬೇಕಾದರೆ ಕನ್ನಡ ಜನ ಒಂದಾಗಬೇಕು, ಹೆಚ್ಚಿನ ಸಂಪರ್ಕಗಳು ಏರ್ಪಟ್ಟು

ರಾಜಕೀಯವಾಗಿ ಏಕೀಕರಣವಾಗುವುದಕ್ಕೆ ಒಂದು ಸ್ಥಿರವಾದ ಅಡಿಪಾಯವಾಗುವಂತೆ ಮೊದಲು ಮಾನಸಿಕವಾಗಿ ಏಕೀಕರಣವಾಗಬೇಕು ಎಂಬ ದೃಷ್ಟಿಯಿಂದ ಅವರು ಕನ್ನಡ ನಾಡನ್ನು ಸುತ್ತಿದರು. ಜನಗಳ ಮನಸ್ಸನ್ನು ತಟ್ಟಿದರು, ಕಟ್ಟಿದರು. ಕನ್ನಡದ ಬಗೆಯಲ್ಲಿ ಜಾಗೃತಿಯನ್ನುಂಟು ಮಾಡಿದರು. ಆ ದೃಷ್ಟಿಯಿಂದ ಅವರು ಕನ್ನಡಕ್ಕಾಗಿ, ಯಾವ ಆಡಳಿತಕ್ಕೆ ಒಳಪಟ್ಟಿದ್ದರೂ ಕನ್ನಡ ಜನ ಒಂದು ಎಂಬ ಭಾವನೆಯನ್ನು ಬಿತ್ತಿ ಬೆಳೆಯಿಸುವುದಕ್ಕಾಗಿ. ಮಾಡಿದ ಕಾರ್ಯ ಹೊಸ ಸಾಹಿತ್ಯದ ನಿರ್ಮಾಣಕ್ಕೆ ಅವರು ಪ್ರೇರಣೆಯನ್ನು ಒದಗಿಸಿದ ಕಾರ್ಯಕ್ಕಿಂತ ಕಡಿಮೆ ಮಹತ್ವದ್ದು ಎಂದು ಸರ್ವಥಾ ಹೇಳಲಾಗುವುದಿಲ್ಲ. ಹೊಸ ಸಾಹಿತ್ಯದ ನಿರ್ಮಾಣಕ್ಕೆ ಅವರು ಪ್ರೇರಣೆಯನ್ನು ಒದಗಿಸಿದರಲ್ಲದೆ ಅಂಥ ಸಾಹಿತ್ಯ ನಿರ್ಮಾಣವಾಗುವುದಕ್ಕೆ ಮೊದಲ ಅಗತ್ಯವಾದ ಮಾನಸಿಕ ವಾತಾವರಣವನ್ನು ಸೃಷ್ಟಿಸುವುದರಲ್ಲಿ ನಿರತರಾದರು ಎನ್ನುವುದು ಮತ್ತೂ ಹೆಚ್ಚಿನ ಮಹತ್ವದ ಸಂಗತಿಯಾಗುತ್ತದೆ. ಸ್ವತಃ ಕೃತಿರಚನೆಗೆ ತೊಡಗುವುದಕ್ಕಿಂತ ಹೆಚ್ಚಾಗಿ ಉಳಿದವರು ಬರವಣಿಗೆಗೆ ತೊಡಗುವಂತೆ ಮಾಡಿದರು. ಬರೆಯುವವರ ಒಂದು ಪಡೆಯನ್ನೇ ಅವರು ತಯಾರಿಸಿದರೆಂದರೆ ಯಾವ ಅತ್ಯುಕ್ತಿಯೂ ಅಲ್ಲ.

ಈ ಮಾತು ನಿಜವಾದರೂ ಕೆಲವೊಂದು ಕೃತಿಗಳನ್ನು ಅವರೇ ಬರೆಯಬಹುದಾಗಿತ್ತು. ಗ್ರೀಕ್ ನಾಟಕಗಳನ್ನು ಮೂಲದಲ್ಲಿಯೇ ಅರ್ಥವಿಸಿಕೊಂಡು ಒಂದೊಂದು ಮಾತಿನಲ್ಲಿಯೂ ಅಡಗಿರಬಹುದಾದ ಭಾವಸೂಕ್ಷ್ಮಗಳನ್ನು ಗ್ರಹಿಸಿ ಅವೆಲ್ಲವನ್ನು ಸಮರ್ಥವಾಗಿ ಅವರಂತೆ ಹಳಗನ್ನಡದಲ್ಲಿ ಹೇಳಬಲ್ಲ ವಾಕ್‌ಸಾಮರ್ಥ್ಯವುಳ್ಳವರಲ್ಲದೆ ಬೇರೆ ಯಾರು ಗ್ರೀಕ್ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಬಹುದಿತ್ತು? ಅವರು ತಮ್ಮದಾಗಿಸಿಕೊಂಡಿದ್ದ ಉಭಯ ಭಾಷಾ ಪ್ರಭುತ್ವವಿಲ್ಲದೆ ಷೇಕ್ಸಪಿಯರನ ದುರಂತ ನಾಟಕಗಳನ್ನು ಮೂಲಕ್ಕೆ ಹತ್ತಿರವಾಗಿ—ಎಷ್ಟು ಹತ್ತಿರವಾಗಿ ಅವರು ಅನುವಾದಿಸಬಲ್ಲವರಾಗಿದ್ದರು ಎನ್ನುವುದನ್ನು ಅವರ ಇಂಗ್ಲಿಷ್ ಗೀತಗಳು ತೋರಿಸಿಕೊಟ್ಟಿವೆ—ಕನ್ನಡಕ್ಕೆ ತಂದುಕೊಡುವುದು ಸಾಧ್ಯವಿರಲಿಲ್ಲ. ಷೇಕ್ಸಪಿಯರನನ್ನು ಕುರಿತು ಕನ್ನಡದಲ್ಲಿ ಮಾತನಾಡುವಾಗ ಅವರು ಅನೇಕ ನಾಟಕಗಳಿಂದ ನೂರಾರು ಪಂಕ್ತಿಗಳನ್ನು ಉದ್ದಕ್ಕೂ ಅನುವಾದಿಸಿಕೊಂಡು ಹೋಗುತ್ತಿದ್ದುದನ್ನು ನೆನೆದರೆ ಸಹಜವಾಗಿಯೇ ಷೇಕ್ಸಪಿಯರನ ಕೆಲವಾದರೂ ಶ್ರೇಷ್ಠ ನಾಟಕಗಳನ್ನು ಅವರು ಕನ್ನಡಕ್ಕೆ ತರಬಹುದಾಗಿತ್ತು ಎಂದೆನಿಸುತ್ತದೆ. ಅವರಷ್ಟು ಸಮರ್ಥವಾಗಿ ಬೇರೆಯವರು ಮಾಡಿರಲಾರರು ಎನ್ನುವುದಕ್ಕೆ ಈ ಮಾತನ್ನು ಹೇಳಬೇಕಾಗಿದೆ. ಹಾಗೆಯೇ ತಮಿಳಿನಿಂದಲೂ. ಕುರಳನ್ನು ಪೂರ್ತಿಯಾಗಿ ಭಾಷಾಂತರ ಮಾಡಿದ್ದರಂತೆ. ಆದರೆ ರಾ. ನರಸಿಂಹಾಚಾರ್ಯರು ಕೆಲವನ್ನು ತಾವು ಅನುವಾದಿಸಿ ''ನೀತಿಮಂಜರಿ''ಯಲ್ಲಿ ಪ್ರಕಟಿಸಿದ್ದರಿಂದ ತಮ್ಮ ಅನುವಾದವನ್ನು ಅಚ್ಚು ಮಾಡಿಸಿದರೆ ಅದು ಅವರಿಗೆ ಅಗೌರವವೆಂದು ಅದನ್ನು ಹಾಗೆಯೇ ಉಳಿಸಿಕೊಂಡರು.

ಮಣಿಮೇಖಲೈ, ಶಿಲಪ್ಪದಿಕಾರಂಗಳಿಂದ ಭಾಗಗಳನ್ನು ಅನುವಾದಿಸಿದ್ದರು. ಎಲ್ಲಕ್ಕೂ ಮುಖ್ಯವಾಗಿ ತಮಿಳು-ಕನ್ನಡಗಳಿಗೆ ಸಂಬಂಧಿಸಿದಂತೆ ತೌಲನಿಕವಾಗಿ ಒಂದು ವ್ಯಾಕರಣವನ್ನು ರಚಿಸಬೇಕೆಂಬ ಅವರ ಬಹುಕಾಲದ ಅಪೇಕ್ಷೆ ಈಡೇರದೆ ಉಳಿಯಿತು. ಅರ್ಧಮರ್ಧ ಬರೆದಾಗಿದ್ದ, ಬರೆಯಬೇಕೆಂದು ಯೋಜನೆಗಳನ್ನು ಮಾಡಿಕೊಂಡಿದ್ದ ಟಿಪ್ಪಣಿಗಳನ್ನು ಒಳಗೊಂಡ ಅವರ ಅನೇಕ ಬರಹಗಳು ಗೆದ್ದಲು ತಿಂದೊ, ಒಲೆಗೆ ಆಹುತಿಯಾಗಿಯೋ ನಷ್ಟವಾಗಿ ಹೋದದ್ದು ಕನ್ನಡದ ದುರದೃಷ್ಟ. ಇಂದು ಲಭ್ಯವಿರುವ ಧ್ವನಿಮುದ್ರಣದ ಸೌಲಭ್ಯಗಳು ಅವರು ಬದುಕಿದ್ದಾಗ ಇದ್ದಿದ್ದರೆ ಅವರ ವಾಗ್ವೈಭವವನ್ನು ಉಳಿಸಿಕೊಳ್ಳಬಹುದಾಗಿತ್ತಲ್ಲದೆ ಅವರ ಭಾಷಣಗಳೇ ಸಾಹಿತ್ಯ ಸಂಪುಟಗಳಾಗಬಹುದಿತ್ತು. ಅವರ ವಿಖ್ಯಾತವಾದ 'ಬರ್ಡನ್ ಆಫ್ ದಿ ಪ್ರೊಫೆಟ್ಸ್'' (ಪ್ರವಾದಿಗಳ ಸಂದೇಶ ಪಲ್ಲವಿ) ಅಂಥ ಅದ್ವಿತೀಯ ಭಾಷಣವಲ್ಲದೆ ಧರ್ಮಸಮನ್ವಯದ ದೃಷ್ಟಿಯನ್ನು ಬಿತ್ತರಿಸುವ ಅವರ ಜೀವನದರ್ಶನದ ಒಂದು ನೋಟವೂ ಉಳಿದುಕೊಳ್ಳಬಹುದಾಗಿತ್ತು.

ಅವರಿಂದ ಪಡೆಯಬಹುದಾಗಿದ್ದಕ್ಕಾಗಿ ನಾವು ವ್ಯಥೆ ಪಡಬಹುದಾಗಿದ್ದರೂ ಅವರಿಂದ ಪಡೆದು ಕೃತಜ್ಞರಾಗಿರಬೇಕಾದದ್ದೇನೂ ಕಡಿಮೆ ಇಲ್ಲ. ಅವರು ರಚಿಸಿದ ಮತ್ತು ರಚಿಸಬಹುದಾಗಿದ್ದ ಕೃತಿಗಳ ಮಾತು ಹಾಗಿರಲಿ. ರಚಿಸಿದ ಕೃತಿಗಳಿಗಿಂತಲೂ ದೊಡ್ಡವರಾಗಿ ಅವರು ಬಾಳಿದರು. ರಚಿಸಬಹುದಾಗಿದ್ದ ಕೃತಿಗಳಿಗಿಂತಲೂ ದೊಡ್ಡದಕ್ಕಾಗಿ ಬಾಳಿದರು. ಒಂದು ನಾಡಜನರ ನುಡಿ, ಸಾಹಿತ್ಯ, ಸಂಸ್ಕೃತಿಯ ಮೇಲ್ಮೆಯನ್ನು, ಪುನರುಜ್ಜೀವನವನ್ನು, ತಮ್ಮ ಜೀವನದ ಧ್ಯೇಯವನ್ನಾಗಿಸಿಕೊಂಡು ಅದನ್ನು ಸಾಧಿಸುವುದಕ್ಕೆ ಬದುಕನ್ನು ಪೂರ್ತಿಯಾಗಿ ಸಮರ್ಪಿಸಿಕೊಂಡು ಬಾಳಿದರು. ಶ್ರೀಕಂಠಯ್ಯನವರ ಮನೋಧರ್ಮವನ್ನು, ಅವರ ಜೀವನದೃಷ್ಟಿಯನ್ನು, ಕೆಲವೇ ಮಾತುಗಳಲ್ಲಿ ಮಾಸ್ತಿಯವರು ಹೀಗೆ ವರ್ಣಿಸಿದ್ದಾರೆ :—

> "ವಾರ್ಧಕ್ಯವನ್ನು ಕಾಣದೆ ತೀರಿಕೊಂಡರಾದರೂ ಶ್ರೀಕಂಠಯ್ಯನವರು ನಾಡ ಜೀವನದಲ್ಲಿ ತಾವು ಮಾಡಬೇಕಾಗಿದ್ದ ಕಾರ್ಯವನ್ನು ಸಮಗ್ರವಾಗಿ ಮಾಡಿ ಮುಗಿಸಿದ್ದರು. ಆ ಪಾಂಡಿತ್ಯಕ್ಕೆ, ಆ ಅನುಭವಕ್ಕೆ, ಆ ಪ್ರಾಜ್ಞತೆಗೆ ತಕ್ಕಷ್ಟು ಕೃತಿಯನ್ನು ಅವರು ರಚಿಸಲಿಲ್ಲ. ಆದರೆ ರಚಿಸಿದಷ್ಟರಲ್ಲಿ ತಮ್ಮ ವ್ಯಕ್ತಿತ್ವವನ್ನು ಪೂರ್ಣವಾಗಿ ಪ್ರಕಟಿಸಿದ್ದಾರೆ. ಹಳೆಯದರಲ್ಲಿ ಬೆಲೆಯುಳ್ಳ ಸೊಗಸಾದ ಅಂಶವೇನು, ಹೊಸದರಲ್ಲಿ ಲಾಭಕರವಾದ ಕ್ಷೇಮಕರವಾದ ಅಂಶವೇನು, ಎಂದು ಸಾವಧಾನದಿಂದ ವಿವೇಚಿಸಿ ಇವರು ತಮ್ಮ ಮನಸ್ಸನ್ನು ಕಟ್ಟಿಕೊಂಡರು. ಜೀವನ ವಾಡಿಕೆಯ ಸುಖದೊಂದಿಗೆ ಇವರಿಗೆ ಬಹು ವಾಡಿಕೆಯಲ್ಲದ ಕೆಲವು ಬೇನೆಗಳನ್ನು ತಂದಿತು. ಅದನ್ನು ಇವರು ತಮ್ಮ ವಿದ್ವತ್ತಿನ ಅನುಭವದ ವಿವೇಚನೆಯ ಬಲದಿಂದ ಸಹಿಸಿಕೊಂಡರು ; ಮನಸ್ಸನ್ನು ಹಗುರವಾಗಿ ಉಳಿಸಿಕೊಂಡರು ; ಧೀರವಾಗಿ ಬೆಳೆಸಿಕೊಂಡರು. ಹಾಗೆ ಬೆಳೆದ ಮನಸ್ಸು ಇವರ ಕೃತಿಗಳಲ್ಲಿ ಪ್ರಕಟವಾಗಿದೆ. ಇವರ

ಕಾವ್ಯದಲ್ಲಿ ಕನ್ನಡ ನಾಡ ಪ್ರೇಮ ಇದೆ, ಭಾರತ ವರ್ಷದ ಪ್ರೇಮ ಇದೆ, ಸಜ್ಜನರಾದ ಆಂಗ್ಲರನ್ನು ಕುರಿತು ವಿಶ್ವಾಸವಿದೆ, ವಿಶ್ವವನ್ನು ಒಳಗೊಳ್ಳುವ ವೈಶಾಲ್ಯವಿದೆ. ಇವರು ವೇದಕ್ಕೆ ಶರಣು ಹೋದರು ; ಬೈಬಲನ್ನು ಮೆಚ್ಚಿಕೊಂಡರು ; ಖೊರಾನನ್ನು, ಜೆಂದ್ ಅವೆಸ್ತವನ್ನು ಒಪ್ಪಿ ಅರಿತರು. ಷೇಕ್ಸಪಿಯರನ್ನು, ಕಾರ್ಲೈಲನ್ನು, ಗಯಟೆಯನ್ನು ಗುರು ಎಂದರು ; ಕಾಳಿದಾಸ ಪಂಪ ನಾರಣಪ್ಪ ಬಸವಣ್ಣರಲ್ಲಿ ತಮ್ಮ ಹಿರಿಯರನ್ನು ಕಂಡರು. ಮಾನವನ ಪಾಲಿಗೆ, ಬಾಹ್ಯ ಪ್ರಪಂಚಕ್ಕೆ ಒಬ್ಬ ಸೂರ್ಯನಿರುವಂತೆ, ಅಂತರ್ಲೋಕಕ್ಕೆ ಒಂದು ಜ್ಯೋತಿ ಇರುವುದನ್ನು ಅನುಭವಿಸಿದರು. ನಮ್ಮ ಕಾಲಕ್ಕೆ ಒಬ್ಬ ಋಷಿಯಂತೆ ಆದರು ; ಋಷಿಯಂತೆ ನುಡಿದರು.''

ಸಾಮಾಜಿಕ ಸಂಬಂಧಗಳಲ್ಲಿ ಶ್ರೀಕಂಠಯ್ಯನವರು ತುಂಬಾ ಬಿಗುಮಾನದ ವ್ಯಕ್ತಿ. ಸಲಿಗೆಯ ಮಾತುಕಥೆಗಳಿಗೆ ಬಹಳ ದೂರವಾಗಿರುತ್ತಿದ್ದರು ಎಂಬ ಮಾತನ್ನು ಹೇಳ ಲಾಗುತ್ತದೆ. ಇದರಲ್ಲಿ ಆಕ್ಷೇಪಣೆಯ ದನಿ ಇದ್ದಷ್ಟು ಅವರ ನಡವಳಿಕೆಯ ಒಂದು ಮುಖವನ್ನು ತೋರಿಸುವ ಅಂಶವೂ ಇದೆ. ಪ್ರಾಧ್ಯಾಪಕರಾಗಿದ್ದಾಗ, ತರಗತಿಗಳ ಲ್ಲಂತೂ ಅವರ ಬಿಗುಮಾನ ಇನ್ನೂ ಹೆಚ್ಚಾಗಿರುತ್ತಿತ್ತೆಂದು ಹೇಳುತ್ತಾರೆ. ''ಅವರು ಬಿಗಿಯೇ ; ಕೋಟು ಬಿಗಿ, ರುಮಾಲೆ ಬಿಗಿ, ಕುತ್ತಿಗೆ ಬಿಗಿ, ಕೋಟ್ ಕತ್ತು ಪಟ್ಟಿ ಬಿಗಿ, ಮಾತೂ ನಡವಳಿಕೆಯೂ ಹಾಗೆಯೇ'' ಎಂದು ಅವರ ಪ್ರಿಯ ಶಿಷ್ಯರಾಗಿದ್ದ ವಿ. ಸೀತಾ ರಾಮಯ್ಯನವರು ನೆನೆದುಕೊಂಡಿದ್ದಾರೆ. ಇದೊಂದಲ್ಲದೆ ಅವರಿಗೆ ಯಾರೂ ಎಂದೂ ಯಾವ ವಿಷಯದಲ್ಲಿಯೂ ಎದುರು ಮಾತು ಹೇಳುವುದು ಸಾಧ್ಯವಿರಲಿಲ್ಲವೆಂದೂ ತಮ್ಮನ್ನು ಕುರಿತ ವಿಮರ್ಶೆಯನ್ನಾಗಲಿ ಟೀಕೆಯನ್ನಾಗಲಿ ಎಷ್ಟು ಮಾತ್ರವೂ ಅವರಿಂದ ಸಹಿಸುವುದಕ್ಕಾಗುತ್ತಿರಲಿಲ್ಲವೆಂದೂ ಹೇಳಲಾಗಿದೆ. ಕೆಲಮಟ್ಟಿಗೆ ಇದನ್ನು ಒಪ್ಪಬೇಕಾ ಗುತ್ತದೆ. ಅಧಿಕಾರ ಸ್ಥಾನದಲ್ಲಿದ್ದವರ ಸಂಖ್ಯೆ ಆ ಕಾಲದಲ್ಲಿ ಚಿಕ್ಕದಾಗಿರುತ್ತಿತ್ತು. ಅಧಿಕಾರದಲ್ಲಿದ್ದವರು ಸಾಮಾನ್ಯರಿಂದ ಒಂದಿಷ್ಟು ದೂರವಾಗಿದ್ದರೆ ಮಾತ್ರ ಕೆಲಸಗಳು ಸುಗಮವಾಗಿ ನಡೆಯುತ್ತವೆ ಎಂಬ ಮನೋಧರ್ಮ ಬಹುಶಃ ಪರಕೀಯರ ಆಳ್ವಿಕೆಯ ಪರಿಣಾಮವಾಗಿ ಬೆಳೆದು ನಿಂತಿದ್ದ ಕಾಲವೂ ಅದಾಗಿತ್ತು. ಅಷ್ಟಲ್ಲದೆ ಕೆಲಸ ಮಾಡು ವಲ್ಲಿನ ನಿಷ್ಠುರ ನಿಯಮ ನಿಷ್ಠೆಗಳು, ಅಚ್ಚುಕಟ್ಟು, ಉಳಿದವರಲ್ಲಿಯೂ ಹಾಗೆಯೇ ಇರಬೇಕು, ಅವರೂ ಹಾಗೆಯೇ ನಡೆಯಬೇಕು, ಎಂಬ ನಿಖರವಾದ ನಿರೀಕ್ಷೆ ಮೇಲಿನವ ಎಂಥ ಸೌಹಾರ್ದವುಳ್ಳವನಾದರೂ ಅವನೊಬ್ಬ ದರ್ಪದವ ಎಂಬ ಭಾವನೆಗೆ ಅವಕಾಶ ವನ್ನುಂಟುಮಾಡುತ್ತವೆ. ಅಂದಿನ ಕಾಲಮಾನದ ಸನ್ನಿವೇಶಕ್ಕೆ ಸರಿಯಾಗಿ ಶ್ರೀಕಂಠಯ್ಯ ನವರು ಉಳಿದವರ ದೃಷ್ಟಿಯಲ್ಲಿ ಒಂದಿಷ್ಟು ಜಬರ್ದಸ್ತಿನವರಾಗಿ ಕಂಡಿರಬಹುದು. ಆದರೆ ಅವರ ಹೃದಯಮಾರ್ದವವನ್ನು ತಿಳಿದವರು, ಅದನ್ನು ಅನುಭವಿಸಿದವರು, ಆ ಬಿಗು ಮಾನವೆಲ್ಲವೂ ಹೊರನೋಟದ್ದು ಎಂದು ಸಹಜವಾಗಿಯೇ ಹೇಳಿಯಾರು. ತಮ್ಮ ವಿದ್ವತ್ತಿನ ವಿಷಯದಲ್ಲಿ ಅವರು ಸಾಕಷ್ಟು ಆತ್ಮವಿಶ್ವಾಸವುಳ್ಳವರಾಗಿದ್ದರು. ಕೆಲಸಕೆ

ಸೇರಿ ಐದು ವರ್ಷಗಳಾಗುವುದರಲ್ಲಿ ಉಪಪ್ರಾಧ್ಯಾಪಕರೆಂದು, ಮುಂದೆ ಆರು ವರ್ಷ ವರ್ಷಗಳಲ್ಲಿಯೇ ಪ್ರಾಧ್ಯಾಪಕರೆಂದು ನೇಮಕವಾದರು. ಅಂದಿನ ಸನ್ನಿವೇಶದಲ್ಲಿ ಇದು ಸಾಮಾನ್ಯ ಸಾಧನೆಯಾಗಿರಲಿಲ್ಲ. ಸ್ವಪರಿಶ್ರಮದಿಂದ ಅಷ್ಟನ್ನು ಸಾಧಿಸಿದ್ದರು. ವಯಸ್ಸಿಗೆ ತಕ್ಕ ಸ್ವಾಭಿಮಾನದಿಂದಾಗಿ ಇನ್ನೊಬ್ಬರ ಟೀಕೆ ವಿಮರ್ಶೆಗಳನ್ನು ಅವರಿಗೆ ಸಹಿಸಲಾಗುತ್ತಿರಲಿಲ್ಲವಾದರೆ ಅದೂ ಸಹಜವೇ ಎನ್ನಬೇಕಾಗುತ್ತದೆ. ಆದರೆ ತಾವು ಅಂದುಕೊಂಡದ್ದು ಸರಿಯಲ್ಲ, ತಮ್ಮ ಅಭಿಪ್ರಾಯದ ಪರಿಣಾಮವಾಗಿ ಇನ್ನೊಬ್ಬರು ನೊಂದುಕೊಳ್ಳುವಂತಾಯಿತು ಎನ್ನುವುದು ತಿಳಿದಾಗ ಅವರು ಬಿಚ್ಚು ಮನಸ್ಸಿನಿಂದ ತಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿದ್ದರು ಎನ್ನುವುದನ್ನೂ ಕೆ. ವಿ. ರಾಘವಾಚಾರ್ಯರು, ಕೆ. ವೆಂಕಟರಾಮಪ್ಪನವರು ಸಂದರ್ಭಸಹಿತವಾಗಿ ನನಗೆ ತಿಳಿಸಿದ್ದಾರೆ. ಇದಾದರೂ ನೆನೆಯಬೇಕಾದ ಸಂಗತಿಯೇ. ತೋರಿಕೆಯ ಬಿಗುಮಾನದ ಹಿಂದೆ ಅವರ ಹೃದಯ ಆರ್ದ್ರವಾಗಿ, ಉದಾರವಾಗಿ ಮಿಡಿಯುತ್ತಿತ್ತು.

ಎರಡು ಸಂಗತಿಗಳು ಅವರ ಜೀವನಕಾರ್ಯವನ್ನು ನಿರ್ಧರಿಸಿದ್ದವು. ಒಂದು; ಪೌರ್ವಾತ್ಯ ಪಾಶ್ಚಾತ್ಯ ದೃಷ್ಟಿಗಳೂ ಅನ್ವೇಷಣ ಮಾರ್ಗಗಳೂ ಸ್ವತಂತ್ರ ಕಲ್ಪನಾ ಸಾಮರ್ಥ್ಯವೂ ಸೇರಿ ಬೆಳೆದ ಹೊರತು ಸಾಹಿತ್ಯಕೃತಿ ದೊಡ್ಡದಾಗಲಾರದು, ಲೋಕ ಸಂಸ್ಕೃತಿ ಹಿಗ್ಗಲಾರದು, ಎನ್ನುವುದು. ಈ ವಿಚಾರವನ್ನು ಅವರು ತಮ್ಮ ಜೀವನ ದುದ್ದಕ್ಕೂ ಪ್ರಚಾರ ಮಾಡಿದರು. ಒಂದು ಸಂದರ್ಭದಲ್ಲಿ ಅವರು ಈ ಮಾತುಗಳನ್ನು ಹೇಳಿದರು :

> " ನಮ್ಮ ದಿನದಲ್ಲಿ ನಮ್ಮ ಜನಾಂಗ ಎರಡು ಶಕ್ತಿಗಳ ಹೋರಾಟಕ್ಕೊಳಗಾಗಿದೆ. ಒಂದು, ಪಶ್ಚಿಮದಿಂದ ಬಂದ ಇಂಗ್ಲಿಷ್ ವಿದ್ಯೆಯ ಸೆಳೆತ ; ಇನ್ನೊಂದು, ನಮ್ಮ ಹಿರಿಯರ ಪುಣ್ಯಾರ್ಜನೆಯಾದ ಭಾರತ ವಿದ್ಯೆಯ ಹೆಮ್ಮೆ. ಈ ಹೋರಾಟದಲ್ಲಿ ಹೊರಗಿನದನ್ನು ಹೊರಕ್ಕೆ ತಳ್ಳಿ, ನಮ್ಮದನ್ನೇ ನಾವು ಮುಂದಕ್ಕೆ ಬೆಳಸಿಕೊಳ್ಳಬೇಕೆಂಬವರು ಇದ್ದಾರೆ ; ಹೆಚ್ಚುತ್ತಿದ್ದಾರೆ. ಚಿಕ್ಕಂದಿನಿಂದಲೂ ನನಗೆ ಬೇರೊಂದು ನೋಟ, ದರ್ಶನ, ಧ್ಯೇಯ. ಅದೇನೆಂದರೆ ಎರಡನ್ನೂ ಕೂಡಿಸಿಕೊಳ್ಳುವುದು ; ಎರಡು ವಿದ್ಯೆಗಳೂ, ಸಂಸ್ಕಾರಗಳೂ, ಶಕ್ತಿಗಳೂ ಒಂದಾಗಿ ಸಾಮರಸ್ಯಕ್ಕೆ ಬರಬೇಕೆನ್ನುವುದು. ಇಂಗ್ಲಿಷ್ ವಿದ್ಯೆ, ಸಾಹಿತ್ಯ ನನ್ನ ಜೀವಕ್ಕೆ ರಸವನ್ನು ತುಂಬಿದೆ; ಕಡೆಗೆ ಭಾರತದಲ್ಲಿ, ಕರ್ನಾಟಕದಲ್ಲಿ ಪೂಜ್ಯ ಬುದ್ಧಿಗೆ ಅದೇ ಕಣ್ಣು ತೆರೆದುಕೊಟ್ಟದ್ದಾಗಿದೆ...ಕಿಟಕಿಗಳಿಲ್ಲದೆ ಉಸಿರು ಕಟ್ಟಿ ಕೆಟ್ಟದ್ದಾಯಿತು ; ಕಿಟಕಿಗಳನ್ನು ವಿಶ್ವದ ಎಲ್ಲಾ ದಿಕ್ಕುಗಳಲ್ಲಿಯೂ ತೆರೆದು ಹೊಸ ಗಾಳಿ, ಹೊಸ ಬೆಳಕು ತುಂಬಿ ಹೊಸ ಉಸಿರು ಹೊಮ್ಮಲಿ. ಪೂರ್ವ ಪಶ್ಚಿಮ ಎರಡು ಬೇರುಗಳೂ ಹೆಣೆದು ಕೊಂಡು ಒಂದು ತಾಯಿ ಬೇರಾಗಿ ಭಾರತ ಮಹಾವೃಕ್ಷ ಆಕಾಶಕ್ಕೆ ಚಿಮ್ಮಲಿ."

ಇನ್ನೊಂದು ಸಂಗತಿ ಕನ್ನಡ ನಾಡಿನ ಏಕೀಕರಣ. ಒಂದು ಭಾಷೆಯನ್ನಾಡುವ ವರು, ಒಂದು ಸಂಸ್ಕೃತಿಯ ಪರಂಪರೆಯನ್ನುಳ್ಳವರು ಒಂದುಗೂಡದೆ ಕನ್ನಡ ಜನಪದದ

8

ಮುನ್ನಡೆ ಸಾಧ್ಯವಿಲ್ಲ ಎಂದು ಮನಗಂಡಿದ್ದ ಅವರು ಕನ್ನಡ ನಾಡಿನ ದಕ್ಷಿಣೋತ್ತರಗಳನ್ನು ಒಂದಾಗಿ ಹೊಂದಿಸುವ ಯತ್ನದಲ್ಲಿ ಮುಂದಾಳಾದರು. ವಿವಿಧ ಭಾಗಗಳು ರಾಜಕೀಯವಾಗಿ ಒಂದು ಆಡಳಿತಕ್ಕೆ ಒಳಪಡುವ ಮೊದಲು ಅದಕ್ಕೆ ಆಗತ್ಯವಾದ ಮೊದಲ ಸಿದ್ಧತೆಯಾಗಿ ಮಾನಸಿಕವಾಗಿ ಒಂದಾಗುವಂತೆ ಸಂಪರ್ಕಗಳನ್ನು ಏರ್ಪಡಿಸಿದರು. ಅನ್ಯೋನ್ಯವಾಗಿ ಬಳಕೆ ಬೆಳೆಯುವಂತೆ ಮಾಡಿದರು. ತುಂಗಭದ್ರೆಯ ಆಚೆ ಈಚೆಗಳನ್ನು ಜೋಡಿಸುವ ಜೀವಂತ ಸೇತುವೆಗಳಾಗೋಣ ಎಂದು ಅವರು ಹೇಳುತ್ತಿದ್ದರು. ಸೀತಾರಾಮಯ್ಯನವರಿಗೆ ಅವರು ಹೇಳಿದ ಕೊನೆಯ ಮಾತು ಅದು. ಅಂಥ ಒಂದು ಜೀವಂತ ಸೇತುವೆ ಅವರಾಗಿದ್ದರು. ಬರೀ ಕರ್ನಾಟಕದ ಉತ್ತರ ದಕ್ಷಿಣಗಳನ್ನು ಹೊಂದಿಸುವ ಸೇತುವೆ ಅವರಾಗಿರಲಿಲ್ಲ. ಸಾಂಸ್ಕೃತಿಕವಾಗಿ ಪೂರ್ವ ಪಶ್ಚಿಮಗಳನ್ನು ಹೊಂದಿಸುವ, ಒಂದಾಗಿಸುವ, ಒಂದು ಜೀವಂತ ಸೇತುವೆ, ಒಂದು ಶ್ರೀಮಂತ ಸಮನ್ವಯ ಅವರಾಗಿದ್ದರು. ಅವರ ೫೦ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರಿಗೆ ಅಭಿನಂದನ ಪರವಾಗಿ "ಸಂಭಾವನೆ" ಎಂಬ ಗ್ರಂಥವನ್ನು ಅರ್ಪಿಸಿದಾಗ ಉತ್ತರ ರೂಪವಾಗಿ ಅವರು ಹೇಳಿದ ಮಾತುಗಳು ಅವರ ಒಳಮನಸ್ಸಿನ ದಿಗ್ದರ್ಶನವನ್ನು ಮಾಡಿಸುತ್ತವೆ. ಅಲ್ಲಿಯ ಅವರ ವಿಚಾರಗಳನ್ನು ಅವರ ಮಾತುಗಳನ್ನೇ ಬಳಸಿ ಹೀಗೆ ಸಂಗ್ರಹಿಸಬಹುದು:

"ಕನ್ನಡ ಒಂದು ಪ್ರಾಂತದ ಭಾಷೆಯಾದರೂ ಅದು ನಮಗೆ ಹೆತ್ತ ತಾಯಿ. ವೈಭವದಿಂದ ಬಾಳಿದ ಜನತೆಯ ಉಸಿರು. ಅದು ಇಂದಿನ ಅಗತ್ಯಗಳಿಗೆಲ್ಲ ಒದಗಿ ಕನ್ನಡಿಗರ ಆತ್ಮವಿಕಾಸಕ್ಕೆ ಆಧಾರವಾಗಬೇಕು. ತನ್ನ ಶಕ್ತಿಯನ್ನು ಬೆಳಸಿಕೊಂಡು ಬ್ರಹ್ಮಾನುಭವಕ್ಕೆ ಒದಗಬೇಕೆಂಬುದೇ ನನ್ನ ಬಯಕೆ. ಕನ್ನಡ ಹೀಗೆ ಏಳಿಗೆ ಹೊಂದಬೇಕೆಂಬುದೇ ನನ್ನ ದೀಕ್ಷೆ. ಕಲಿಯುವುದೇ ನನ್ನ ಜೀವನದ ಕರೆ, ಕಲಿಯುವುದು; ಕಲಿತದ್ದನ್ನು ತಿಳಿಯದವರಿಗೆ ಕಲಿಸುವುದು. ಕನ್ನಡ ಪ್ರಪಂಚ ಚಿಕ್ಕದೆಂದು ನಾವು ನಮ್ಮ ಆವರಣವನ್ನು ಕೊಂಪೆಯಂತೆ ನಿರ್ಮಿಸಿಕೊಂಡು ಕುಳಿತುಕೊಳ್ಳಬಾರದು. ದೊಡ್ಡದೆಂದು ಮತ್ತೊಂದರ ಅಂಧಾನುಕರಣದಲ್ಲೇ ಸಿಕ್ಕಿಕೊಳ್ಳಬಾರದು. ಕನ್ನಡದ ದೃಷ್ಟಿ ವಿಶಾಲವಾಗಬೇಕು. ಬೆಳಕು ಗಾಳಿ ಎಲ್ಲೆಲ್ಲಿಂದ ಬರುವುವೋ ಅಲ್ಲಿಂದೆಲ್ಲಾ ಅವನ್ನು ಸ್ವಾಗತಿಸಿ ಸಂಸ್ಕೃತಿಯನ್ನೂ ತೇಜಸ್ಸನ್ನೂ ಬೆಳೆಸಿಕೊಳ್ಳಬೇಕು. ಮನಸ್ಸು ಬೆಳೆದು, ಅಂಧ ಶ್ರದ್ಧೆಯನ್ನು ತೊಡೆದು, ಗಟ್ಟಿ ಯಾವುದು, ಜಳ್ಳು ಯಾವುದು, ಎಂಬುದನ್ನು ಅರಿತು ಶಾಶ್ವತವಾದ ಸತ್ಯವನ್ನು ಹುಡುಕುವುದು ನಮ್ಮ ಪರಮ ಧರ್ಮವಾಗಬೇಕು. ಎಲ್ಲಾ ಸಂಸ್ಕೃತಿಯಲ್ಲಿಯೂ, ಎಲ್ಲಾ ಮತಗಳಲ್ಲಿಯೂ, ಎಲ್ಲಾ ಸಾಹಿತ್ಯಗಳಲ್ಲಿಯೂ ಚಿನ್ನವೂ ಉಂಟು ; ಹಿತ್ತಾಳೆಯೂ ಉಂಟು. ವಿಮರ್ಶೆಯ ಬೆಂಕಿಯಲ್ಲಿ ಶುದ್ಧಿಯಾದರೆ ಚಿನ್ನವೆಲ್ಲಾ ಕೂಡಿ ಒಂದಾಗುವುವು. ಹಿಂದಿನಿಂದ ಬಂದದ್ದರಲ್ಲಿ ಸಂಗ್ರಹಿಸಬೇಕಾದದ್ದು ಎಷ್ಟು, ತ್ಯಜಿಸಬೇಕಾದದ್ದು ಎಷ್ಟು ಎಂಬುದನ್ನು ವಿಮರ್ಶಕ ಬುದ್ಧಿಗೆ ಕಡಿವಾಣ

ಹಾಕದೆ ತಿಳಿದುಕೊಳ್ಳಬೇಕು. ಅಪ್ಪ ನೆಟ್ಟ ಮರವೆಂದು ನೇತು ಹಾಕಿಕೊಳ್ಳಬೇಕಾದದ್ದಿಲ್ಲ. " ಅಸತೋ ಮಾ ಸದ್ಗಮಯ " ಎಂಬ ಹೊನ್ನುಡಿಯಂತೆ ಭ್ರಮೆಯನ್ನು ತೊರೆದು ವಾಸ್ತವಿಕ ಲೋಕವನ್ನು ಆಶ್ರಯಿಸಬೇಕು. ಶ್ರೀಕೃಷ್ಣನು ಅರ್ಜುನನಿಗೆ ಕೊಟ್ಟ ಬುದ್ಧಿಸ್ವಾತಂತ್ರ್ಯವನ್ನು ನಮ್ಮ ಜೀವನದ ಮೂಲ ಸೂತ್ರವನ್ನಾಗಿಸಿಕೊಂಡು ನಾಡ ನುಡಿಯ ಸರ್ವತೋಮುಖವಾದ ಏಳಿಗೆಗಾಗಿ ಸಂಘಶಕ್ತಿಯನ್ನು ಬೆಳೆಸಿಕೊಂಡು ಇಲ್ಲಿಯೇ ಮುಕ್ತಿಯನ್ನು ಪಡೆಯಬೇಕು. ಮುಕ್ತಿಯೆಂದರೆ ಅಜ್ಞಾನದಿಂದ, ಅಸತ್ಯದಿಂದ, ಅಧರ್ಮದಿಂದ, ಪಾಪವಾಸನೆಯಿಂದ ಬಿಡುಗಡೆ. ಅಂಥ ಬಿಡುಗಡೆಯನ್ನು ಪಡೆದು ಸ್ವತಂತ್ರ ಸಂಯುಕ್ತ ಸುಖಮಯ ಭಾರತದಲ್ಲಿ ನಾವೆಲ್ಲ ಬಾಳಬೇಕೆಂಬುದೇ ನನ್ನ ಜೀವನದ ರಹಸ್ಯ, ನನ್ನ ಕನ್ನಡ ಕೆಲಸದ ಗುಟ್ಟು ; ನನ್ನ ಮಿಡಿತ, ಕುದಿತ."

ಕನ್ನಡ ಒಂದರಿಂದಲೇ ಕನ್ನಡ ಉದ್ಧಾರವಾಗುವುದಿಲ್ಲ ಎಂಬ ಮಾತನ್ನು ಶ್ರೀಯವರು ಹತ್ತಾರು ಬಾರಿ ಹೇಳಿದರು. ಎಲ್ಲ ಕಡೆಯಿಂದಲೂ ನಾವು ಪಡೆಯಬಹುದಾದ ಗಾಳಿ ಬೆಳಕುಗಳಿಲ್ಲದೆ ನಾವು ಬೆಳೆಯಲಾರೆವು ಎಂದು ಎಚ್ಚರಿಸಿದರು. ಇಂಗ್ಲಿಷಿನಿಂದ, ಸಂಸ್ಕೃತದಿಂದ ಕನ್ನಡಕ್ಕಾದ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸಿದರು. ಅವನ್ನು ಕಡೆಗಣಿಸಿ ನಾವು ಮುನ್ನಡೆಯುವಹಾಗಿಲ್ಲ ಎಂಬ ತಮ್ಮ ದೃಢವಾದ ನಂಬಿಕೆಯನ್ನು ನೂರು ಬಾರಿ ಹೇಳಿದರು. ಆದರೆ ಇಂದು ನಮಗೆ ಇಂಗ್ಲೀಷ್ ಬೇಡವಾಗಿದೆ. ಸಂಸ್ಕೃತ ಬೇಡವಾಗಿದೆ. ಶಾಲೆ ಕಾಲೇಜುಗಳಲ್ಲಿಯ ವ್ಯಾಸಂಗಕ್ರಮದಿಂದ ಅವೆರಡನ್ನೂ ಹೊರದೂಡಿ ಕನ್ನಡವನ್ನು ಬೆಳೆಯಿಸಬೇಕೆಂಬ ಹಟವೋ ಹವ್ಯಾಸವೋ, ಬಲಗೊಳ್ಳುತ್ತಿದೆ. ಇಂಗ್ಲಿಷ್ ಪ್ರಾಧ್ಯಾಪಕರಾಗಿಯೂ ಕನ್ನಡಕ್ಕಾಗಿ ದುಡಿದು, ಕನ್ನಡಕ್ಕಾಗಿಯೇ ಬಾಳಿದ ಅವರ ಜನ್ಮಶತಾಬ್ದಿಯ ಸಂದರ್ಭದಲ್ಲಿ ಅವರ ಸ್ಮರಣೆಗೆ ನಾವು ನಿಜವಾಗಿಯೂ ಗೌರವವನ್ನು ಅರ್ಪಿಸುವುದಾದರೆ ಅವರು ತೋರಿದ ದಾರಿಯಲ್ಲಿ ನಡೆಯಬೇಕಾಗಿದೆ. ಇಂಗ್ಲಿಷಿನ ವಿಷಯದಲ್ಲಿ; ಸಂಸ್ಕೃತದ ವಿಷಯದಲ್ಲಿ, ಅವರು ಹೇಳಿದ ಎಚ್ಚರದ ಮಾತುಗಳನ್ನು ಗಮನಿಸಬೇಕಾಗಿದೆ. ಕೊನೆಯಲ್ಲಿ ನಿಲ್ಲುವುದು ಅಭಿಮಾನವಲ್ಲ, ಸತ್ಯ, ಎಂಬ ಅವರ ಮಾತು ಕನ್ನಡದ ಮುನ್ನಡೆಯನ್ನು ಬಯಸುವವರಿಗೆ ಕೈಮರವಾಗಬೇಕಾಗಿದೆ. ಕನ್ನಡ ಕಿಟಿಕಿ ಬಾಗಿಲುಗಳಿಲ್ಲದ ಸೆರೆಮನೆಯಾಗದೆ ನೂರಾರು ಕಿಟಿಕಿ ಬಾಗಿಲುಗಳನ್ನುಳ್ಳ ಅರಮನೆಯಾಗಬೇಕಾಗಿದೆ.

ಉಷಾ ಪ್ರೆಸ್, ಮೈಸೂರು.

ವಿ. ಎಂ. ಇನಾಂದಾರ್

ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ವೆಂಕಟೇಶ್ ಮಧ್ವರಾವ್ ಇನಾಂದಾರ್ ಸಾಹಿತ್ಯಜ್ಞರು ಮತ್ತು ಸಮರ್ಥ ವಿಮರ್ಶಕರು. ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಇವರು ಸಂಸ್ಕೃತದಲ್ಲೂ ಸಾಕಷ್ಟು ಪರಿಶ್ರಮವುಳ್ಳವರಾಗಿ ಕನ್ನಡದಲ್ಲಿ ಸೃಜನಶೀಲ ಲೇಖಕರೆನಿಸಿದವರು. ವಿಮರ್ಶನ ಪ್ರಪಂಚದಲ್ಲಿ ಇನಾಂದಾರ್ ಅವರದು ದೊಡ್ಡ ಹೆಸರು. ಪಾಶ್ಚಾತ್ಯ ಹಾಗೂ ಪ್ರಾಚ್ಯ ರಸ ಸೃಷ್ಟಿ ರಹಸ್ಯವನ್ನು ಅನಾವರಣಗೊಳಿಸಬಲ್ಲ ವಿದ್ವತ್ತು, ನಿಷ್ಕೃಷ್ಟವಾದ ಶೈಲಿ, ಮತ್ತು ಅನುದ್ವೇಗಕರವಾದ ಮೌಲ್ಯಾಂಕನಗಳಿಗೆ ಇನಾಂದಾರ್ ಅವರ ವಿಮರ್ಶೆ ಸಾಕ್ಷಿ. ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರ ಬದುಕು ಬರೆಹಗಳನ್ನು ಕುರಿತು ಸಹೃದಯತೆಯಿಂದ ಗೌರವಭಾವನೆಯಿಂದ, ಪರಾಮರ್ಶಿಸಿ ಅವರ ಜೀವನ ಕಾರ್ಯವನ್ನೂ ಕನ್ನಡಕ್ಕಾಗಿ ಅವರು ಮಾಡಿದ ಮಹತ್ಸಾಧನೆಯನ್ನೂ ಇಲ್ಲಿ ಕೂಲಂಕಷವಾಗಿ ವಿವರಿಸಿದ್ದಾರೆ. ಮೊದಲು ಮುಂಬಯಿ ಆಮೇಲೆ ಕರ್ನಾಟಕ ರಾಜ್ಯದ ಶಿಕ್ಷಣ ಇಲಾಖೆಯ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲರಾಗಿ, ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದಲ್ಲಿ ಯುಜಿಸಿ ಪ್ರಾಧ್ಯಾಪಕರಾಗಿ ಕೆಲಸಮಾಡಿ ನಿವೃತ್ತರಾಗಿರುವ ಇನಾಂದಾರ್ ಕರ್ನಾಟಕದ ಒಬ್ಬ ಉತ್ತಮ ಶಿಕ್ಷಕರು, ಆಡಳಿತಗಾರರೆಂದೂ ಖ್ಯಾತರು.

ಇನಾಂದಾರ್ ಅವರ ಕೃತಿಗಳು

ಕಾದಂಬರಿ

ಎರಡು ಧ್ರುವ
ಮೂರಾಬಟ್ಟೆ
ಕನಸಿನ ಮನೆ
ವಿಜಯ ಯಾತ್ರೆ
ಶಾಪ
ಸ್ವರ್ಗದ ಬಾಗಿಲು
ಕಟ್ಟಿದ ಮನೆ
ಮುಗಿಯದ ಕಥೆ
ಈಪರಿಯ ಸೊಬಗು
ಚಿತ್ರಲೇಖಾ
ಮಂಜು ಮುಸುಕಿದ ದಾರಿ
ಊರ್ವಶಿ
ನವಿಲು ನೌಕೆ
ಬಾಡಿದ ಹೂವು
ಕತ್ತಲೆಯ ಕಡಲು
ಯಾತ್ರಿಕರು
ಯಯಾತಿ
ತ್ರಿಶಂಕು

ವಿಮರ್ಶೆ

ಉತ್ತರರಾಮ ಚರಿತ (ಇಂಗ್ಲಿಷ್‌ನಲ್ಲಿ)
ಶಿವರಾಮ ಕಾರಂತ (ಇಂಗ್ಲಿಷ್‌ನಲ್ಲಿ)
ಗೋವಿಂದ ಪೈ (ಇಂಗ್ಲಿಷ್‌ನಲ್ಲಿ)
ಗೋವಿಂದ ಪೈಗಳ ಕಾವ್ಯ
ಪಾಶ್ಚಾತ್ಯ ವಿಮರ್ಶೆಯ ಪ್ರಾಚೀನ ಪರಂಪರೆ
ಪಾಶ್ಚಾತ್ಯ ವಿಮರ್ಶೆಯ ಮಧ್ಯಯುಗ
ಪಾಶ್ಚಾತ್ಯ ವಿಮರ್ಶೆಯ ಸಂಪ್ರದಾಯ ಯುಗ
ಪಾಶ್ಚಾತ್ಯ ವಿಮರ್ಶೆಯ ರೊಮ್ಯಾಂಟಿಕ್ ಯುಗ
ಪಾಶ್ಚಾತ್ಯ ವಿಮರ್ಶೆಯ ಆಧುನಿಕ ಯುಗ
ಪಾಶ್ಚಾತ್ಯ ಕಾವ್ಯ ಮೀಮಾಂಸೆ
(ಅರಿಸ್ಟಾಟಲನಿಂದ ಆಧುನಿಕರವರೆಗೆ)
ಕಾಲಿದಾಸನ ಕಥಾನಕಗಳು
ಶರಚ್ಚಂದ್ರ—ವ್ಯಕ್ತಿ ಮತ್ತು ಕಲಾವಿದ
ಶಿವರಾಮ ಕಾರಂತ : ಬದುಕು, ಬರೆಹ
ಬಿ. ಎಂ. ಶ್ರೀ. : ಬದುಕು ಬರೆಹ
ಗೋವಿಂದ ಪೈ : ಬದುಕು ಬರೆಹ
ಕುವೆಂಪು ಕಾದಂಬರಿಗಳು (ಮೂರು ಉಪನ್ಯಾಸಗಳು)
ಶ್ರೀನಿವಾಸರ ಕಾದಂಬರಿಗಳಲ್ಲಿ ಜೀವನ ದರ್ಶನ
"ಶ್ರೀರಾಮಪಟ್ಟಾಭಿಷೇಕ"
—(ಒಂದು ಸಮಾಲೋಕನ)
ಆಲೋಕ

ಇತರ

ಬಿಡುಗಡೆ (ನಾಟಕ)
ಮಂಗಲ್ಯಾಂಡಿನಲ್ಲಿ ಮೂರು ವಾರಗಳು (ವಿಡಂಬನೆ)
ದಲಿತೋದ್ಧಾರಕ ಅಂಬೇಡ್ಕರ್

ಉಷಾ ಸಾಹಿತ್ಯ ಮಾಲೆ : ಮೈಸೂರು-೧